prajavani.net prajavani
ಸೋಮವಾರ, ನವೆಂಬರ್ 10, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 310 | ಪುಟ 14
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ನಮಾಮಿ ಗಂಗೆ

ಬೆಳಗಾವಿಯ ಲೋಕಮಾನ್ಯ ರಂಗಮಂದಿರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶಾಂತಲಾ ನಾಟ್ಯಾಲಯದ ವಿದ್ಯಾರ್ಥಿಗಳು 'ನಮಾಮಿ ಗಂಗೆ' ನೃತ್ಯ ರೂಪಕ ಪ್ರದರ್ಶಿಸಿದರು



ಶ್ರೇಯಸ್ ಆಲ್‌ರೌಂಡ್ ಆಟ

ಪುಣೆಯಲ್ಲಿ ನಡೆಯುತ್ತಿರುವ ಮಹಾರಾಷ್ಟ್ರ ತಂಡದ ಎದುರಿನ ರಣಜಿ ಟ್ರೋಫಿ ಕ್ರಿಕೆಟ್ ಪಂದ್ಯದಲ್ಲಿ, ಕರ್ನಾಟಕದ ಶ್ರೇಯಸ್ ಗೋಪಾಲ್ (71 ರನ್ ಮತ್ತು 46ಕ್ಕೆ4) ಆಲ್‌ರೌಂಡ್ ಆಟವಾಡಿದರು

ಕಳೆಯಲ್ಲಿ ಸಿಲುಕಿ ಎರಡು ಆನೆ ಸಾವು 8
ಬಿಹಾರ: ಕೊನೆಯ ಹಂತದ ಪ್ರಚಾರ ಅಂತ್ಯ 9

ಮೂವರು ಶಂಕಿತ ಉಗ್ರರ ಬಂಧನ

ಅಹಮದಾಬಾದ್ (ಪಿಟಿಐ): ದೇಶದ ವಿವಿಧೆಡೆ ವಿಧ್ವಂಸಕ ಕೃತ್ಯ ಎಸಗಲು ಸಂಚು ರೂಪಿಸಿದ ಆರೋಪದಲ್ಲಿ ಗುಜರಾತ್ ಭಯೋತ್ಪಾದನಾ ನಿಗ್ರಹ ದಳವು (ಎಟಿಎಸ್) ವೈದ್ಯ ಸೇರಿದಂತೆ ಮೂವರು ಶಂಕಿತ ಉಗ್ರರನ್ನು ಬಂಧಿಸಿದೆ.

ಬಂಧಿತರನ್ನು ಡಾ.ಅಹ್ಮದ್ ಮೊಹಿಯುದ್ದೀನ್ ಸೈಯದ್, ಆಜಾದ್ ಸುಲೆಮಾನ್ ಶೇಖ್ ಮತ್ತು ಮೊಹಮ್ಮದ್ ಸುಹೇಲ್ ಎಂದು ಗುರುತಿಸಲಾಗಿದೆ. ಇವರು ದಾಳಿಗೆ ಸಂಚು ರೂಪಿಸಲು ಲಖನೌ, ದೆಹಲಿ ಮತ್ತು ಅಹಮದಾಬಾದ್‌ನ ಹಲವು ಸ್ಥಳಗಳಿಗೆ ಭೇಟಿ ನೀಡಿದ್ದರು ಎಂದು ಎಟಿಎಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.



ಡಾ.ಸೈಯದ್ ತನ್ನ ಸಹಚರರೊಂದಿಗೆ ಸೇರಿಕೊಂಡು 'ರೈಸಿನ್' ಎಂಬ ವಿಷಕಾರಿ ರಾಸಾಯನಿಕ ಬಳಸಿ ವಿಧ್ವಂಸಕ ಕೃತ್ಯ ನಡೆಸಲು ಸಂಚು ರೂಪಿಸಿದ್ದ ಎಂದು ಗುಜರಾತ್ ಎಟಿಎಸ್ ಡಿಐಜಿ ಸುನಿಲ್ ಜೋಶಿ ಸುದ್ದಿಗಾರರಿಗೆ ತಿಳಿಸಿದರು. ಇವರಿಗೆ ಸೂಚನೆಗಳನ್ನು ನೀಡುತ್ತಿದ್ದ ಹ್ಯಾಂಡ್ಲರ್, 'ಇಸ್ಲಾಮಿಕ್ ಸ್ಟೇಟ್ ಖೊರಾಸಾನ್' ಜತೆ ನಂಟು ಹೊಂದಿದ್ದಾನೆ ಎಂದು ಹೇಳಲಾಗಿದೆ.

9

579 ಮದ್ಯದಂಗಡಿ ಇ– ಹರಾಜು

ಸರ್ಕಾರಕ್ಕೆ ಸುಮಾರು ₹1,500 ಕೋಟಿ ಸಂಪನ್ಮೂಲ ಕ್ರೋಡೀಕರಣದ ಅಂದಾಜು

• ರಾಜೇಶ್ ರೈ ಚಟ್ಲ

ಬೆಂಗಳೂರು: ದೀರ್ಘ ಅವಧಿಯಿಂದ ನವೀಕರಣವಾಗದೆ ಸ್ಥಗಿತಗೊಂಡಿರುವ ಮತ್ತು ಎಂಎಸ್‌ಐಎಲ್ ಸಂಸ್ಥೆ ಇನ್ನೂ ಆರಂಭಿಸದ ಚಿಲ್ಲರೆ ಮದ್ಯದಂಗಡಿಗಳು ಹಾಗೂ ಸ್ಥಗಿತಗೊಂಡಿರುವ ಬಾರ್ ಆ್ಯಂಡ್ ರೆಸ್ಟೋರೆಂಟ್‌ಗಳು ಸೇರಿ ಒಟ್ಟು 579 ಮದ್ಯದಂಗಡಿಗಳ ಪರವಾನಗಿಯನ್ನು (ಸನ್ನದು) ಇದೇ ಮೊದಲ ಬಾರಿಗೆ 'ಇ– ಹರಾಜು' ಮೂಲಕ ಬಿಡ್ಡಿಂಗ್ ಪ್ರಕ್ರಿಯೆ ನಡೆಸಿ ಹಂಚಿಕೆ ಮಾಡಲು ಅಬಕಾರಿ ಇಲಾಖೆ ತಯಾರಿ ನಡೆಸಿದೆ.

ಈ ಸಂಬಂಧ 'ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) (ಎರಡನೇ ತಿದ್ದುಪಡಿ) ನಿಯಮಗಳು– 2025' ಅನ್ನು ಆರ್ಥಿಕ ಇಲಾಖೆ (ಅಬಕಾರಿ) ರಾಜ್ಯಪತ್ರದಲ್ಲಿ ಪ್ರಕಟಿಸಿದೆ. ಹೊಸ ಪರವಾನಗಿಗಳನ್ನು 'ಸಿಎಲ್ 2ಎ' ಮತ್ತು 'ಸಿಎಲ್ 9ಎ' ಎಂದು ಎರಡು ಹೊಸ ವರ್ಗದಡಿ ಹಂಚಿಕೆ ಮಾಡಲು ನಿಯಮ ತಿದ್ದುಪಡಿ ಮಾಡಲಾಗಿದೆ.

ಮುಖ್ಯಾಂಶಗಳು

- ಮೊದಲ ಬಾರಿಗೆ ಇ– ಹರಾಜು, ಬಿಡ್ಡಿಂಗ್ ಪ್ರಕ್ರಿಯೆ
- 'ಸಿಎಲ್ 2ಎ', 'ಸಿಎಲ್ 9ಎ' ಅಡಿ ಹಂಚಿಕೆ
- ಪ್ರತ್ಯೇಕ ತಂತ್ರಾಂಶ ಅಭಿವೃದ್ಧಿ

ಈ ನಿಯಮಗಳ ಅಡಿ, ಅವಧಿ ಮುಗಿದ ಅಥವಾ ನವೀಕರಿಸದ ಮತ್ತು ಇ– ಹರಾಜಿಗೆ ಲಭ್ಯ ಇರುವ ಮತ್ತು ಲಭ್ಯ ಆಗುವಂತೆ ಮಾಡುವ ಪರವಾನಗಿಗಳ 'ಹರಾಜು ಪಟ್ಟಿ' ಸಿದ್ಧಪಡಿಸಲಾಗುವುದು. ನಂತರ ಆನ್‌ಲೈನ್ ಮೂಲಕ ಬಿಡ್ ಆಹ್ವಾನಿಸಿ, ಅರ್ಹ ಬಿಡ್ಡರ್ ಸಲ್ಲಿಸಿದ ಅತಿ ಹೆಚ್ಚಿನ ಮೊತ್ತಕ್ಕೆ ನಿರ್ದಿಷ್ಟ ಪ್ರದೇಶದಲ್ಲಿ, ನಿರ್ದಿಷ್ಟ ಅವಧಿಗೆ ಮದ್ಯದಂಗಡಿಯ ಪರವಾನಗಿಯನ್ನು ಹಂಚಿಕೆಮಾಡಲು ಇಲಾಖೆಯು ನಿರ್ಧರಿಸಿದೆ.



12

ಹರಾಜು ಪಟ್ಟಿ			
	483	96	579
	ಸಿಎಲ್ 2ಎ (ಚಿಲ್ಲರೆ ಮದ್ಯದಂಗಡಿ)	ಸಿಎಲ್ 9ಎ (ಬಾರ್ ಆ್ಯಂಡ್ ರೆಸ್ಟೋರೆಂಟ್)	ಒಟ್ಟು

ಹರಾಜಿಗೆ ಯಾವುದೆಲ್ಲ?

'ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) (ಎರಡನೇ ತಿದ್ದುಪಡಿ) ನಿಯಮಗಳು– 2025' ಅನ್ನು ನ. 3ರಂದು ಪ್ರಕಟಿಸಲಾಗಿದೆ. ಈ ದಿನದವರೆಗೆ ನವೀಕರಿಸದ ಯಾವುದೇ ಸಿಎಲ್ 2, ಸಿಎಲ್ 9 ಮತ್ತು ಸಿಎಲ್ 11ಸಿ ಪರವಾನಗಿಗಳನ್ನು ನವೀಕರಿಸದ ಮತ್ತು ಮುಟ್ಟುಗೋಲು ಹಾಕಿಕೊಂಡಿರುವ ಪರವಾನಗಿ ಎಂದು ಭಾವಿಸಿ 'ಹರಾಜು ಪಟ್ಟಿ'ಯಲ್ಲಿ ಸೇರಿಸಲಾಗುತ್ತದೆ. ಅಲ್ಲದೆ, ಅಬಕಾರಿ ಸನ್ನದು ವರ್ಷ ಆರಂಭವಾದ ದಿನದಿಂದ (ಜುಲೈ 1) ಆರು ತಿಂಗಳ ಒಳಗೆ ಅಥವಾ ಪರವಾನಗಿದಾರ ಮೃತಪಟ್ಟ ದಿನದಿಂದ ಆರು ತಿಂಗಳ ಒಳಗೆ ನವೀಕರಿಸದ ಯಾವುದೇ ಸಿಎಲ್ 2, ಸಿಎಲ್ 9, ಸಿಎಲ್ 11ಸಿ, ಸಿಎಲ್ 2ಎ ಮತ್ತು ಸಿಎಲ್ 9ಎ ಪರವಾನಗಿಗಳನ್ನು ಅವಧಿ ಮುಕ್ತಾಯಗೊಂಡವುಗಳೆಂದು ಪರಿಗಣಿಸಿ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಅಂತಹ ಸನ್ನದುಗಳು ಹರಾಜು ಮಾಡಲು ಪಟ್ಟಿಗೆ ಸೇರಲಿವೆ.

ಇ– ಹರಾಜಿನಲ್ಲಿ 'ಮೀಸಲಾತಿ'

ಇ– ಹರಾಜಿನಲ್ಲಿ ಯಶಸ್ವಿಯಾದ ಬಿಡ್‌ದಾರರಿಗೆ ಸಿಎಲ್ 2ಎ ಮತ್ತು ಸಿಎಲ್ 9ಎ ಪರವಾನಗಿಗಳನ್ನು ಸರ್ಕಾರ ನಿಗದಿಪಡಿಸಿದ 'ಮೀಸಲಾತಿ' ಮಾನದಂಡಗಳನ್ನು ಅನುಸರಿಸಿ ಮಂಜೂರು ಮಾಡಲು ಕೂಡಾ ನಿಯಮ ತಿದ್ದುಪಡಿ ಮಾಡಲಾಗಿದೆ. ಇ– ಹರಾಜು ಅಧಿಸೂಚನೆಯಲ್ಲಿ ಕಾಲ ಕಾಲಕ್ಕೆ ವಿಧಿಸುವ ಷರತ್ತುಗಳಿಗೆ ಒಳಪಟ್ಟು ಅಬಕಾರಿ ಆಯುಕ್ತರ ಪೂರ್ವಾನುಮೋದನೆ ಪಡೆದು ಈ ಪರವಾನಗಿಗಳನ್ನು ಆಯಾ ಜಿಲ್ಲೆಯ ಜಿಲ್ಲಾಧಿಕಾರಿ ಹಂಚಿಕೆ ಮಾಡಬೇಕು ಎಂದೂ ನಿಯಮದಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ.

ಶಾಂತಿಸಾಗರರ ಪ್ರತಿಮೆ...

ಪ್ರಜಾವಾಣಿ ಚಿತ್ರ



ಹಾಸನ ಜಿಲ್ಲೆ ಶ್ರವಣಬೆಳಗೊಳಗದ ಗೊಮ್ಮಟನಗರದ ಬಾಹುಬಲಿ ತಾಂತ್ರಿಕ ಕಾಲೇಜಿನ ಆವರಣದಲ್ಲಿ 'ಶಾಂತಿಸಾಗರ ಮಹಾರಾಜರ ಶ್ರವಣಬೆಳಗೊಳ ಭೇಟಿಯ ಶತಮಾನೋತ್ಸವ'ದ ಅಂಗವಾಗಿ ಶಾಂತಿಸಾಗರರ 10 ಅಡಿ ಎತ್ತರದ ಪ್ರತಿಮೆಯನ್ನು ಉಪ ರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಭಾನುವಾರ ಅನಾವರಣಗೊಳಿಸಿದರು. ಬೆಳಗಾವಿ ದಕ್ಷಿಣ ಕ್ಷೇತ್ರದ ಶಾಸಕ ಅಭಯ ಪಾಟೀಲ, ಸಂಸದ ಶ್ರೇಯಸ್ ಪಟೇಲ್, ಕಂದಾಯ ಸಚಿವ ಕೃಷ್ಣ ಬೈರೇಗೌಡ, ಕ್ಷೇತ್ರದ ಪೀಠಾಧಿಪತಿ ಅಭಿನವ ಚಾರುಕೀರ್ತಿ ಭಟ್ಟಾರಕರು, ರಾಜ್ಯಪಾಲ ಥಾವರಚಂದ್ ಗೆಹಲೋತ್, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಶಾಸಕರಾದ ಸಿ.ಎನ್.ಬಾಲಕೃಷ್ಣ ಹಾಗೂ ಸಚಿವ ಡಿ. ಸುಧಾಕರ್ ಪಾಲ್ಗೊಂಡಿದ್ದರು

ಮದ್ಯ ಕುಡಿದು ಕೈದಿಗಳ ನೃತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿರುವ ಸಜಾ ಬಂದಿಗಳು ಹಾಗೂ ವಿಚಾರಣಾಧೀನ ಕೈದಿಗಳಿಗೆ ವಿಶೇಷ ಆತಿಥ್ಯ ನೀಡಿರುವ ವಿಡಿಯೊ ಜಾಲತಾಣದಲ್ಲಿ ಹರಿದಾಡಿದ ಬೆನ್ನಲ್ಲೇ ಜೈಲು ಅಧಿಕಾರಿಗಳು ತನಿಖೆ ಚುರುಕುಗೊಳಿಸಿದ್ದಾರೆ.

ಈ ಘಟನೆ ಮಾಸುವ ಮುನ್ನವೇ ಮದ್ಯ ಸೇವಿಸಿ ಜೈಲಿನಲ್ಲಿ ವಿಚಾರಣಾ ಕೈದಿಗಳು ನೃತ್ಯ ಮಾಡುತ್ತಿರುವ ಮತ್ತೊಂದು ವಿಡಿಯೊ ಜಾಲತಾಣದಲ್ಲಿ ಹರಿದಾಡುತ್ತಿದೆ. ಇದು ಯಾವ ಜೈಲಿನವಿಡಿಯೊ ಎಂಬುದರ ಬಗ್ಗೆ ಅಧಿಕಾರಿಗಳು ತನಿಖೆ ಆರಂಭಿಸಿದ್ದಾರೆ. ಕಾರಾಗೃಹ ಹಾಗೂ ಸುಧಾರಣಾ ಸೇವೆಗಳ ಇಲಾಖೆಯ ಎಡಿಜಿಪಿ ಬಿ.ದಯಾನಂದ್ ಸೂಚನೆ ಮೇರೆಗೆ ಜೈಲು ಅಧಿಕಾರಿಗಳು ಮತ್ತು ಸಿಬ್ಬಂದಿ ಶನಿವಾರ ಹಾಗೂ ಭಾನುವಾರ ಪರಪ್ಪನ ಅಗ್ರಹಾರ ಜೈಲಿನ ಸಂಬಂಧಪಟ್ಟ ಕೈದಿಗಳ ಬ್ಯಾರಕ್‌ಗಳಲ್ಲಿ ಪೂರ್ಣ ತಪಾಸಣೆ ನಡೆಸಿದರು. ಸುಮಾರು ನೂರಕ್ಕೂ ಹೆಚ್ಚು ಬ್ಯಾರಕ್‌ಗಳಲ್ಲಿ ತಪಾಸಣೆ ನಡೆಸಿದ್ದು, ಈ ವೇಳೆ ಮೊಬೈಲ್ ಸೇರಿ ನಿಷೇಧಿಸುವ ಯಾವುದೇ ವಸ್ತು ಪತ್ತೆಯಾಗಿಲ್ಲ.

8



ಕಾರಾಗೃಹದಲ್ಲಿ ವಿಚಾರಣಾಧೀನ ಕೈದಿಗಳು ಮದ್ಯ ಕುಡಿದು ನೃತ್ಯ ಮಾಡಿದ ದೃಶ್ಯ

ವರದಿ ನೀಡಲು ಪರಮೇಶ್ವರ ಸೂಚನೆ

'ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಕೈದಿಗಳಿಗೆ ವಿಶೇಷ ಆತಿಥ್ಯ ನೀಡಿರುವುದರ ಬಗ್ಗೆ ಎಡಿಜಿಪಿ ಬಿ.ದಯಾನಂದ್ ಅವರಿಂದ ವರದಿ ಕೇಳಿದ್ದೇನೆ. ವರದಿ ಸಮಾಧಾನ ಆಗದಿದ್ದರೆ ಉನ್ನತ ಮಟ್ಟದ ಸಮಿತಿ ರಚಿಸಿ, ತನಿಖೆ ನಡೆಸಲಾಗುವುದು' ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದ್ದಾರೆ.

8

ವಿಡಿಯೊ ಅಸಲಿ: ಡಿಐಜಿ

ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿ ಕೈದಿಗಳಿಗೆ ವಿಶೇಷ ಆತಿಥ್ಯ ದೊರೆಯುತ್ತಿರುವ ದೃಶ್ಯಗಳು ಬಹಿರಂಗಗೊಂಡ ಬೆನ್ನಲ್ಲೇ ಕಾರಾಗೃಹಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಲಾಗಿದ್ದು, ವಿಡಿಯೊದಲ್ಲಿನ ದೃಶ್ಯಗಳು ಅಸಲಿಯೆಂದು ಮೇಲ್ನೋಟಕ್ಕೆ ಸಾಬೀತಾಗಿದೆ ಎಂದು ಕಾರಾಗೃಹ ಇಲಾಖೆ ಹೆಚ್ಚುವರಿ ಡಿಐಜಿ ಪಿ.ವಿ.ಆನಂದರೆಡ್ಡಿ ತಿಳಿಸಿದ್ದಾರೆ.

8

ಚಿನಕುರುಳಿ ಪ್ರಕಾಶ್ ಶೆಟ್ಟಿ



ಪ್ರತ್ಯೇಕತಾಭಾವ ಹೊರಗಿಟ್ಟು ಶಾಖೆಗೆ ಬರಬೇಕು: ಮೋಹನ್ ಭಾಗವತ್

'ಹಿಂದೂಗಳಿಗಷ್ಟೇ ಆರ್‌ಎಸ್‌ಎಸ್ ಪ್ರವೇಶ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಿಂದೂಗಳಿಗಷ್ಟೇ ಆರ್‌ಎಸ್‌ಎಸ್‌ಗೆ ಪ್ರವೇಶ' ಎಂದು ಆರ್‌ಎಸ್‌ಎಸ್ ಸರಸಂಘ ಚಾಲಕ ಮೋಹನ್ ಭಾಗವತ್ ಹೇಳಿದರು.

ನಗರದ ಪಿಇಎಸ್ ವಿಶ್ವವಿದ್ಯಾಲಯದಲ್ಲಿ 'ಸಂಘದ 100 ವರ್ಷದ ಪಯಣ: ನವ ಕ್ಷಿತಿಜ' ಕಾರ್ಯಕ್ರಮದ ಭಾಗವಾಗಿ ಭಾನುವಾರ ಆಯೋಜಿಸಲಾಗಿದ್ದ ಪ್ರಶ್ನೋತ್ತರದಲ್ಲಿ, 'ಮುಸ್ಲಿಮರು ಆರ್‌ಎಸ್‌ಎಸ್‌ಗೆ ಬಂದರೆ ಸೇರಿಸಿಕೊಳ್ಳುತ್ತೀರಾ' ಎಂಬ ಪ್ರಶ್ನೆಗೆ ಅವರು ಉತ್ತರಿಸಿದರು.

'ಹಿಂದೂಗಳಷ್ಟೇ ಆರ್‌ಎಸ್‌ಎಸ್‌ಗೆ ಬರಬೇಕು. 'ಭಾರತೀಯರೆಲ್ಲರೂ ಹಿಂದೂ' ಎಂದು ಭಾವಿಸುವವರನ್ನು ನಾವು ಹಿಂದೂ ಎಂದು ಪರಿಗಣಿಸುತ್ತೇವೆ.



> ಸನಾತನ ಧರ್ಮವೇ ಹಿಂದೂ ರಾಷ್ಟ್ರ. ಸನಾತನ ಧರ್ಮದ ಏಳಿಗೆ ಆಗುತ್ತಿದೆ ಅಂದರೆ, ಭಾರತವು ಏಳಿಗೆಯಾಗುತ್ತಿದೆ ಎಂದರ್ಥ
>
> **ಮೋಹನ್ ಭಾಗವತ್**
> ಆರ್‌ಎಸ್‌ಎಸ್ ಸರಸಂಘ ಚಾಲಕ

ಆದರೆ, ಮುಸ್ಲಿಮರು, ಕ್ರೈಸ್ತರು, ಬ್ರಾಹ್ಮಣರು, ಹಿಂದೂಗಳಲ್ಲಿನ ಇತರ ಜಾತಿಯವರೆಂದು ಬರುವವರಿಗೆ ಆರ್‌ಎಸ್‌ಎಸ್‌ಗೆ ಪ್ರವೇಶವಿಲ್ಲ. ಶಾಖೆಗೆ ಬರುವವರು ಈ ಎಲ್ಲ 'ಪ್ರತ್ಯೇಕತಾ ಭಾವ'ವನ್ನು ಹೊರಗಿಟ್ಟು ಬರಬೇಕು' ಎಂದರು.

9

'ನೋಂದಣಿ ಏಕೆ ಮಾಡಿಕೊಳ್ಳಬೇಕು?'

ಆರ್‌ಎಸ್‌ಎಸ್ ನೋಂದಣಿ ಆಗದೇ ಇರುವ ಬಗ್ಗೆ ಕೇಳಿದ ಪ್ರಶ್ನೆಗೆ, 'ಆರ್‌ಎಸ್‌ಎಸ್ ಸ್ಥಾಪನೆಯಾಗಿದ್ದು 1925ರಲ್ಲಿ. ಆಗ ಬ್ರಿಟಿಷರ ಬಳಿ ನೋಂದಣಿ ಮಾಡಿಸಬೇಕಿತ್ತೇ? ಸ್ವಾತಂತ್ರ್ಯ ಬಂದ ನಂತರ ನೋಂದಣಿ ಕಡ್ಡಾಯವಾಗಿರಲಿಲ್ಲ. ಆರ್‌ಎಸ್‌ಎಸ್‌ಗೆ ಈಗಲೂ ನೋಂದಣಿ ಬೇಕಿಲ್ಲ. ನೋಂದಣಿ ಏಕೆ ಮಾಡಿಕೊಳ್ಳಬೇಕು' ಎಂದು ಮೋಹನ್ ಭಾಗವತ್ ಪ್ರಶ್ನಿಸಿದರು.

9

ಹವಾಮಾನ ಮುನ್ಸೂಚನೆ: ನಗರದಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದೆ.

‘ಪ್ರತಿರೋಧದ ಧ್ವನಿಗಳು ಒಟ್ಟಾದರೆ ಶಕ್ತಿ’

ಸಮಾಜಮುಖಿ ಸಾಹಿತ್ಯ ಸಮ್ಮೇಳನ: ‘ಅಸಹನೆಯ ಯುಗದಲ್ಲಿ ಹೊಸಕಾವ್ಯದ ಧಾತುಗಳು’– ಗೋಷ್ಠಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಎಲ್ಲರೂ ಒಂದೇ, ವ್ಯಕ್ತಿಗೌರವ, ಸಂವಿಧಾನದ ಪರ ಎಂಬುದೆಲ್ಲ ಹೆಮ್ಮೆಯ ವಿಚಾರ. ಆದರೆ, ಅದನ್ನು ಹೇಳಲು ಮುಜುಗರಪಟ್ಟುಕೊಳ್ಳುವ ಕಾಲದಲ್ಲಿದ್ದೇವೆ. ಜಾತಿ ಶ್ರೇಷ್ಠತೆ, ಧರ್ಮ ಶ್ರೇಷ್ಠತೆ, ಆಹಾರ ಶ್ರೇಷ್ಠತೆಗಳನ್ನು ಹೇಳಿಕೊಳ್ಳಲು ಮುಜುಗರಪಟ್ಟುಕೊಳ್ಳಬೇಕಿತ್ತು. ಅದನ್ನು ಹೆಮ್ಮೆಯಿಂದ ಹೇಳಿಕೊಳ್ಳುತ್ತಿರುವುದು ವಿಪರ್ಯಾಸ’ ಎಂದು ಕವಿ ವಿಲ್ಸನ್ ಕಟೀಲ್ ಹೇಳಿದರು.

ಭಾನುವಾರ ನಡೆದ ‘ಸಮಾಜಮುಖಿ ಸಾಹಿತ್ಯ ಸಮ್ಮೇಳನ’ದ ‘ಅಸಹನೆಯ ಯುಗದಲ್ಲಿ ಹೊಸಕಾವ್ಯದ ಧಾತುಗಳು’ ಗೋಷ್ಠಿಯಲ್ಲಿ ಅವರು ಮಾತನಾಡಿದರು.

ಮೂರ್ಖತನ, ದ್ವೇಷ, ಅಸಹನೆ, ಸಲೀಸಾಗಿ ಹರಡುತ್ತಿವೆ. ಬುದ್ಧಿವಂತಿಕೆ, ಪ್ರೀತಿ, ವಿಚಾರಗಳು ಜನರನ್ನು ತಲುಪುವಲ್ಲಿ ಸೋಲುತ್ತಿವೆ. ಯಾಕೆ ಸೋಲುತ್ತಿವೆ. ಪ್ರತಿರೋಧದ ಧ್ವನಿಗಳು ಅಲ್ಲಲ್ಲಿ ಒಂಟಿಯಾಗಿವೆ. ಈ ಧ್ವನಿಗಳು ಒಟ್ಟಾದರೆ, ಒಂದು ಗುಂಪು ಆದರೆ ಶಕ್ತಿ ಬರುತ್ತದೆ. ಕೊರೊನಾ ಓಡಿಸಲು ತಟ್ಟೆ ಬಡಿಯಿರಿ ಎಂದರೆ ಎಲ್ಲರೂ ಸೌಟು, ತಟ್ಟೆ ಬಡಿದರು. ವಿಜ್ಞಾನ ತಲುಪಲಿಲ್ಲ. ಬರಹಗಾರರು ತಟ್ಟೆ, ಸೌಟುಗಳನ್ನೇ ಧಾತುವಾಗಿ ಇಟ್ಟುಕೊಂಡು ಜನರಿಗೆ ಸತ್ಯ ತಲುಪಿಸಬೇಕಿತ್ತು ಎಂದು ಹೇಳಿದರು.

ಕವಯಿತ್ರಿ ಮಂಜುಳಾ ಹುಲಿಕುಂಟೆ ಮಾತನಾಡಿ, ‘ಹಿಂದೆ ಕ್ರೌರ್ಯವಿತ್ತು. ಈಗ ಅದರ ಜಾಗಕ್ಕೆ ಅಸಹನೆ ಬಂದು ಕುಳಿತಿದೆ. ಭಾಷೆ, ಮುಖ ಇಲ್ಲದ ಅಸಹನೆಗಳಿಗೆ ದೊಡ್ಡ ಮಟ್ಟದಲ್ಲಿ ವೇದಿಕೆಗಳು ಸಿಗುತ್ತಿವೆ. ಸೃಜನಶೀಲತೆಯ ಹೆಸರಲ್ಲಿ ಅಸಮಾನತೆ, ಅಸಹನೆ, ಅಸಹಿಷ್ಣುತೆಗಳು ಕಾವ್ಯಗಳಾಗಿವೆ. ಕೋಮಲ ಭಾಷೆಯಲ್ಲಿ ಅವುಗಳನ್ನು ಸಮರ್ಥಿಸಿಕೊಳ್ಳಲಾಗುತ್ತಿದೆ’ ಎಂದು ಹೇಳಿದರು.

‘ಅಸಮಾನತೆಯ ಭಾರತೀಯ ಸಮಾಜದಲ್ಲಿ ಹಿಂದಿನಿಂದಲೂ ಅಸಹಿಷ್ಣುತೆ ಇತ್ತು. ಯಾವ ಕಾಲದಲ್ಲಿಯೂ ಪ್ರಭುತ್ವ ತನಗಾಗದ್ದನ್ನು ಸಹಿಸಿಕೊಂಡಿರಲಿಲ್ಲ. ಈಗ ಲಜ್ಜೆ ಇಲ್ಲದೇ ಹರಿದಾಡುತ್ತಿದೆ ಎಂಬುದಷ್ಟೇ ಹಿಂದಿನ ಕಾಲಕ್ಕೂ ಈಗಿನ ಕಾಲಕ್ಕೂ ಇರುವ ವ್ಯತ್ಯಾಸ’ ಎಂದು ಜಂಟಿ ಪೊಲೀಸ್ ಕಮಿಷನರ್ ಬಿ.ಆರ್. ರವಿಕಾಂತೇಗೌಡ ಪ್ರತಿಪಾದಿಸಿದರು.

ಕವಯಿತ್ರಿ ಪ್ರತಿಭಾ ನಂದಕುಮಾರ್, ಬರಹಗಾರ್ತಿ ಎಚ್.ಎಲ್. ಪುಷ್ಪಾ ವಿಚಾರ ಮಂಡಿಸಿದರು. ಶ್ವೇತಾಮಣಿ ಎಚ್.ಎಂ. ಸಮನ್ವಯಕಾರರಾಗಿದ್ದರು.



‘ಅಸಹನೆಯ ಯುಗದಲ್ಲಿ ಹೊಸಕಾವ್ಯದ ಧಾತುಗಳು’ ಗೋಷ್ಠಿಯಲ್ಲಿ ಮಂಜುಳಾ ಹುಲಿಕುಂಟೆ, ಎಚ್.ಎಲ್. ಪುಷ್ಪಾ, ಬಿ.ಆರ್. ರವಿಕಾಂತೇಗೌಡ, ಪ್ರತಿಭಾ ನಂದಕುಮಾರ್, ವಿಲ್ಸನ್ ಕಟೀಲ್ ಮತ್ತು ಶ್ವೇತಾ ಮಣಿ ಎಚ್.ಎಂ. ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರಗಳು

ರಾಮಾಯಣ, ಮಹಾಭಾರತಕ್ಕೆ ಜಾನಪದವೇ ಮೂಲ

ರಾಮಾಯಣ, ಮಹಾಭಾರತ ಸಹಿತ ಬಹುತೇಕ ಸಾಹಿತ್ಯದ ಮೂಲವೇ ಜಾನಪದ. ಅದೇ ಇಂದು ಲಿಪಿ ಸಾಹಿತ್ಯದಲ್ಲಿ ಬಿಟ್ಟುಹೋಗಿದೆ ಎಂದು ಜನಪದ ಸಾಹಿತಿ ಕೆ.ಆರ್. ಸಂಧ್ಯಾರೆಡ್ಡಿ ತಿಳಿಸಿದರು.

ಭಾನುವಾರ ‘ಸಮಾಜಮುಖಿ ಸಾಹಿತ್ಯ ಸಮ್ಮೇಳನ’ದ ‘ಸಾಹಿತ್ಯ ಚರಿತ್ರೆಯಲ್ಲಿ ಬಿಟ್ಟುಹೋದ ದನಿಗಳನರಸುತ್ತ’ ಗೋಷ್ಠಿಯಲ್ಲಿ ಅವರು ಮಾತನಾಡಿದರು.

ಮಾನವ ಜನಾಂಗದ ಭಾವನೆಗಳ ಧ್ವನಿ ಜನಪದವಾಗಿದೆ. ಮಹಿಳೆಯರೇ ಪದಕಟ್ಟಿದ್ದು, ಹಾಡಿದವರು. ಆದರೆ, ಶಿಷ್ಟ ಸಾಹಿತ್ಯ ಆರಂಭಗೊಂಡ ಬಳಿಕ ಪುರುಷರೇ ಬರೆದರು. ಮಹಿಳಾ ಸಾಹಿತ್ಯ ಎನ್ನುವುದು ಇಲ್ಲವೇ ಇಲ್ಲ ಎನ್ನುವಷ್ಟು ಕಡಿಮೆಯಾಯಿತು ಎಂದರು.

‘ವಾಲ್ಮೀಕಿ ರಾಮಾಯಣಕ್ಕೂ ಅದಕ್ಕಿಂತ ಹಿಂದೆ ಇದ್ದ ಜನಪದರ ರಾಮಾಯಣಕ್ಕೂ ಬಹಳ ವ್ಯತ್ಯಾಸವಿದೆ. ವಾಲ್ಮೀಕಿ ರಾಮಾಯಣದಲ್ಲಿ ಶೂರ್ಪನಖಿ ರಾಕ್ಷಸಿಯಾದರೆ, ಜನಪದರಲ್ಲಿ ನೊಂದ, ಬೆಂದ ಒಬ್ಬಳು ಹೆಣ್ಣು. ಹಾಗೆಯೇ ಸೀತೆಗೆ ರಾಮನಿಗಿಂತ ಲಕ್ಷ್ಮಣನ ಬಗ್ಗೆಯೇ ಹೆಚ್ಚು ನಂಬಿಕೆ, ವಿಶ್ವಾಸ ಇರುವುದು ಜಾನಪದದಲ್ಲಿ ಕಾಣುತ್ತೇವೆ. ಅಶೋಕವನದಲ್ಲಿ ಶೂರ್ಪನಖಿಯ ಅಪೇಕ್ಷೆಯಂತೆ ರಾವಣನ ಚಿತ್ರ ಬಿಡಿಸಿ ಅದಕ್ಕೆ ಜೀವ ತುಂಬಿದಳು ಎಂಬ ಕಾರಣಕ್ಕೆ ಸೀತೆಯನ್ನು ಕಾಡಿಗೆ ಅಟ್ಟಲಾಯಿತು ಎಂಬುದು ಜಾನಪದದ ಕಥೆ’ ಎಂದು ವಿವರಿಸಿದರು.

‘ಮಹಾಭಾರತ ಕೂಡ ಹಾಗೆ. ಶಿಷ್ಟ ಮಹಾಭಾರತದಲ್ಲಿ ಪಾಂಡವರು ಪಗಡೆ ಜೂಜಿನಲ್ಲಿ ಸೋಲುತ್ತಾರೆ. ಆದರೆ, ಜಾನಪದ ಮಹಾಭಾರತದಲ್ಲಿ ಸ್ವತಃ ದ್ರೌಪದಿಯೇ ದುರ್ಯೋಧನನೊಂದಿಗೆ ಜೂಜಾಡಿ ಅವನ ಗಮನ ಬೇರೆಡೆಗೆ ಸೆಳೆದು ಗೆದ್ದು, ರಾಜ್ಯ ಉಳಿಸಿಕೊಳ್ಳುತ್ತಾಳೆ’ ಎಂದರು.

ಜನಪದ ಸಾಹಿತಿಗಳಾದ ಎಚ್. ಶಶಿಕಲಾ, ಹಳೆಮನೆ ರಾಜಶೇಖರ್ ವಿಚಾರ ಮಂಡಿಸಿದರು. ರವಿಕುಮಾರ್ ಪಿ.ಜಿ. ಸಮನ್ವಯಕಾರರಾಗಿದ್ದರು.

‘ದಲಿತ, ರೈತ ಚಳವಳಿಯಲ್ಲಿ ಹೋರಾಟದ ಸಾಹಿತ್ಯ’

‘ದಲಿತ ಹಾಗೂ ರೈತ ಚಳವಳಿಗಳಲ್ಲಿ ಹೋರಾಟದ ಸಾಹಿತ್ಯವನ್ನು ಕಾಣಬಹುದು’ ಎಂದು ವಿದ್ವಾಂಸ ಹಿ.ಶಿ. ರಾಮಚಂದ್ರೇಗೌಡ ಹೇಳಿದರು.

ಸಮಾಜಮುಖಿ ಪತ್ರಿಕೆ ಆಯೋಜಿಸಿದ್ದ ಸಮಾಜಮುಖಿ ಸಾಹಿತ್ಯ ಸಮ್ಮೇಳನದಲ್ಲಿ ‘ಕನ್ನಡದಲ್ಲಿ ಹೋರಾಟದ ಸಾಹಿತ್ಯ ಏಕಿಲ್ಲ?’ ಎಂಬ ಗೋಷ್ಠಿಯಲ್ಲಿ ಅವರು ಮಾತನಾಡಿದರು.

ರೈತ ಚಳವಳಿಯಲ್ಲಿ ಜಾತ್ಯತೀತತೆ, ಕೃಷಿಯ ಸಮಗ್ರ ಚಿಂತನೆ, ನಾಯಕತ್ವ ಇತ್ತು. ಅಂತರ್ಜಾತಿ ವಿವಾಹಗಳನ್ನು ಮಾಡಲಾಗುತ್ತಿತ್ತು. ಎಲ್ಲ ಸಮುದಾಯದವರು ಇದರಲ್ಲಿ ಪಾಲ್ಗೊಳ್ಳಲು ಅವಕಾಶ ಇತ್ತು. ಎಂ.ಡಿ. ನಂಜುಂಡಸ್ವಾಮಿ ಅವರು ರೈತರಲ್ಲಿ ಸ್ವಾಭಿಮಾನ ಬೆಳೆಸಿದ್ದರು. ನೆಲ ಹಾಗೂ ಜನ ಸಂಸ್ಕೃತಿಯನ್ನು ಪ್ರತಿಪಾದಿಸುತ್ತಿದ್ದರು. ಆದರೆ, ಈಗ ರೈತ ಚಳವಳಿಗಳು ತುಂಡು ತುಂಡಾಗಿದ್ದು, ಬೇಡಿಕೆಗೆ ಸೀಮಿತವಾಗಿವೆ. ಇದಕ್ಕೆ ಕಾರಣ ಕಾರ್ಪೊರೇಟ್ ಪರವಾದ ನೀತಿಗಳು ಎಂದು ದೂರಿದರು.

‘ಹಿಂದೆ ರೈತ ಹಾಗೂ ದಲಿತ ಚಳವಳಿಗಳ ಮೇಲೆ ಸಾಹಿತ್ಯದ ಪ್ರಭಾವವಿತ್ತು. ಆದರೆ ಈಗ ಇಲ್ಲ. ಒಟ್ಟು ಜನರನ್ನು ಒಳಗೊಳ್ಳುವ ಸಾಹಿತ್ಯ ಬೇಕಿದೆ. ರೈತ ಮತ್ತು ದಲಿತ ಚಳವಳಿ ಪ್ರಬಲವಾಗಿಲ್ಲ’ ಎಂದರು.

ಜಾನಪದ ಗಾಯಕ ಪಿಚ್ಚಳ್ಳಿ ಶ್ರೀನಿವಾಸ್ ಮಾತನಾಡಿ, ‘ಹೋರಾಟದ ಹಾಡುಗಳಲ್ಲಿ ಬದುಕನ್ನು ಹಸನುಗೊಳಿಸುವ ಸಾಹಿತ್ಯ ಅಡಕವಾಗಿದೆ. ಆದರೆ ಸಾಹಿತ್ಯ ಲೋಕ ಈ ಹೋರಾಟದ ಹಾಡುಗಳನ್ನು ಸಾಹಿತ್ಯವೆಂದು ಪರಿಗಣಿಸುತ್ತಿಲ್ಲ. ಈ ನೆಲಕ್ಕೆ ಬೇಕಾದ ನಿಜವಾದ ಸಾಹಿತ್ಯವೇ ಹೋರಾಟದ ಹಾಡುಗಳಾಗಿವೆ. ಕರ್ನಾಟಕದಲ್ಲಿ ಹೋರಾಟದ ಭಾಗವಾಗಿ ಬಂದ ಎಲ್ಲ ಹಾಡುಗಳೂ ಹೋರಾಟದ ಸಾಹಿತ್ಯವೇ ಆಗಿದೆ’ ಎಂದು ತಿಳಿಸಿದರು.

ರೈತ ಪರ ಹೋರಾಟಗಾರ್ತಿ ಸುನಂದಾ ಜಯರಾಮ್ ಮಾತನಾಡಿ, ‘ಕನ್ನಡ ಸಾಹಿತ್ಯದಲ್ಲಿ ರೈತ ಹೋರಾಟ, ದಲಿತ ಹೋರಾಟ ಮತ್ತು ಮಹಿಳಾ ಹೋರಾಟವನ್ನು ಬೇರೆ ಬೇರೆ ಪ್ರಕಾರದಲ್ಲಿ ದಾಖಲಿಸಲಾಗಿದೆ. ಆದರೂ ರೈತನ ಸ್ಥಿತಿ ಗತಿಯ ಕುರಿತು ಹೆಚ್ಚು ಸಾಹಿತ್ಯ ಬರಬೇಕಿದೆ’ ಎಂದರು.

ಅಧ್ಯಾಪಕ ಲವಕುಮಾರ್ ಗೋಷ್ಠಿಯನ್ನು ನಿರ್ವಹಣೆ ಮಾಡಿದರು.



‘ಕನ್ನಡದಲ್ಲಿ ಹೋರಾಟದ ಸಾಹಿತ್ಯ ಏಕಿಲ್ಲ?’ ಗೋಷ್ಠಿಯಲ್ಲಿ ಸುನಂದಾ ಜಯರಾಮ್, ಹಿ.ಶಿ. ರಾಮಚಂದ್ರೇಗೌಡ, ಪಿಚ್ಚಳ್ಳಿ ಶ್ರೀನಿವಾಸ್ ಮತ್ತು ಟಿ.ಎಚ್. ಲವಕುಮಾರ್ ಪಾಲ್ಗೊಂಡಿದ್ದರು

ಸುದ್ದಿ 2 ನಿಮಿಷ

ಕೇಸರಿ ಕೃಷಿ: ಸರ್ಕಾರದ ಪ್ರೋತ್ಸಾಹ ಅಗತ್ಯ– ಆಗ್ರಹ

ಬೆಂಗಳೂರು: ‘ಕೇಸರಿ ಕೃಷಿಯು ಲಾಭದಾಯಕವಾಗಿದ್ದು, ಇದಕ್ಕೆ ಉತ್ತೇಜನ ನೀಡಲು ಸರ್ಕಾರವು ಕೃಷಿಕರಿಗೆ ಅಗತ್ಯ ಸೌಲಭ್ಯ ಹಾಗೂ ಪ್ರೋತ್ಸಾಹ ನೀಡಬೇಕು’ ಎಂದು ಕರ್ನಾಟಕ ಕೇಸರಿ ರೈತರ ಸಂಘ ಆಗ್ರಹಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಕಾರ್ಯದರ್ಶಿ ಲೋಕೇಶ್ ಆರ್., ‘ಕರ್ನಾಟಕದಲ್ಲಿ 40 ಮಂದಿ ಕೇಸರಿ ಬೆಳೆಯುತ್ತಿದ್ದಾರೆ. ಬೆಂಗಳೂರಿನಲ್ಲಿಯೇ 30 ಮಂದಿ ಬೆಳೆಗಾರರಿದ್ದಾರೆ. ಈ ಬೆಳೆಗೆ ಸಂಬಂಧಿಸಿದಂತೆ ಸರ್ಕಾರದ ಮಟ್ಟದಲ್ಲಿ ಯಾವುದೇ ಸೌಲಭ್ಯ ದೊರೆಯುತ್ತಿಲ್ಲ. ಸೂಕ್ತ ಮಾರ್ಗದರ್ಶನವೂ ಸಿಗದ ಪರಿಣಾಮ, ಕೆಲವರು ಈ ಕೃಷಿಯಲ್ಲಿ ಕೈ ಸುಟ್ಟುಕೊಳ್ಳುತ್ತಿದ್ದಾರೆ. ಇನ್ನೊಂದೆಡೆ ಕಳಪೆ ಗುಣಮಟ್ಟದ ಕೇಸರಿ ಮಾರುಕಟ್ಟೆ ಪ್ರವೇಶಿಸುತ್ತಿದೆ. ಗುಣಮಟ್ಟದ ಕೇಸರಿ ಬೆಲೆ ಪ್ರತಿ ಗ್ರಾಂಗೆ ₹2 ಸಾವಿರ ತಲುಪಿದ್ದು, ಈ ಸಂದರ್ಭದಲ್ಲಿ ಸ್ಥಳೀಯವಾಗಿ ಬೆಳೆಯಲು ಪ್ರೋತ್ಸಾಹ ಅಗತ್ಯ’ ಎಂದು ಹೇಳಿದರು.

‘ಕೇಸರಿಯು ಔಷಧ ಗುಣಗಳನ್ನು ಒಳಗೊಂಡಿದೆ. ನಾವು ಬೆಳೆಯುತ್ತಿರುವ ಕೇಸರಿಯನ್ನು ಸ್ಥಳೀಯವಾಗಿಯೇ ಮಾರುಕಟ್ಟೆ ಬೆಲೆಗೆ ಮಾರಾಟ ಮಾಡುತ್ತಿದ್ದೇವೆ. ಇದರ ಮೌಲ್ಯವರ್ಧನೆಯಿಂದ ಹೆಚ್ಚಿನ ಆದಾಯ ಗಳಿಸಲು ಸಾಧ್ಯ. ಆದರೆ, ಮಧ್ಯವರ್ತಿಗಳ ಹಾವಳಿ, ಕಳಪೆ ಗುಣಪಟ್ಟದ ಗಡ್ಡೆಯಿಂದಾಗಿ ಬೆಳೆಗಾರರು ಸಮಸ್ಯೆ ಎದುರಿಸುತ್ತಿದ್ದಾರೆ. ಈ ಬೆಳೆ ಹೆಚ್ಚಿನ ಶ್ರಮ ಬಯಸದ ಕಾರಣ, ಉಪ ಬೆಳೆಗಳಿಗೂ ಆದ್ಯತೆ ನೀಡಬೇಕು. ಈ ಬೆಳೆಯಲ್ಲಿ ಆಸಕ್ತಿ ಇರುವವರಿಗೆ ನಮ್ಮ ಸಂಘ ಅಗತ್ಯ ಮಾರ್ಗದರ್ಶನ ಒದಗಿಸಲಿದೆ’ ಎಂದರು. ಸಂಪರ್ಕಕ್ಕೆ: 9481916726

ಕೆಎಸ್‌ಆರ್‌ಟಿಸಿ ‘ಧ್ವನಿಸ್ಪಂದನ’ ಯೋಜನೆಗೆ ರಾಷ್ಟ್ರೀಯ ಪ್ರಶಸ್ತಿ



ಬೆಂಗಳೂರು: ದೃಷ್ಟಿ ಇಲ್ಲದ ಪ್ರಯಾಣಿಕರ ಅನುಕೂಲಕ್ಕಾಗಿ ಕೆಎಸ್‌ಆರ್‌ಟಿಸಿಯ ಮೈಸೂರು ನಗರ ಸಾರಿಗೆಯ 200 ಬಸ್‌ಗಳಲ್ಲಿ ಜಾರಿಗೆ ತಂದಿರುವ ‘ಧ್ವನಿ ಸ್ಪಂದನ– ಆನ್‌ಬೋರ್ಡ್ ಬಸ್ ಐಡೆಂಟಿಫಿಕೇಶನ್ ಮತ್ತು ನ್ಯಾವಿಗೇಶನ್ ಸಿಸ್ಟಮ್’ ಯೋಜನೆಗೆ ಭಾರತ ಸರ್ಕಾರದ ವಸತಿ ಮತ್ತು ನಗರಾಭಿವೃದ್ಧಿ ಸಚಿವಾಲಯವು ‘ಅವಾರ್ಡ್ ಆಫ್ ಎಕ್ಸಲೆನ್ಸ್ ಇನ್ ಅರ್ಬನ್ ಟ್ರಾನ್ಸ್‌ಪೋರ್ಟ್’ ರಾಷ್ಟ್ರೀಯ ಪ್ರಶಸ್ತಿ ನೀಡಿದೆ.

ಕೇಂದ್ರ ವಸತಿ ಮತ್ತು ನಗರಾಭಿವೃದ್ಧಿ ಸಚಿವ ಮನೋಹರ್ ಲಾಲ್, ಅದೇ ಖಾತೆಯ ರಾಜ್ಯ ಸಚಿವ ತೋಕನ್ ಸಾಹು ಪ್ರಶಸ್ತಿ ಪ್ರದಾನ ಮಾಡಿದರು. ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷ ಪ್ರಶಸ್ತಿ ಸ್ವೀಕರಿಸಿದರು.

ಐಐಟಿ ದೆಹಲಿಯ ರೈಸ್ಡ್ ಲೈನ್ಸ್ ಫೌಂಡೇಷನ್ ಅಭಿವೃದ್ಧಿಪಡಿಸಿದ ಆನ್‌ಬೋರ್ಡ್ ಬಸ್ ಐಡೆಂಟಿಫಿಕೇಶನ್ ಮತ್ತು ನ್ಯಾವಿಗೇಶನ್ ಸಿಸ್ಟಮ್ ತಂತ್ರಜ್ಞಾನವನ್ನು ಜರ್ಮನಿಯ ಜಿಐಝೆಡ್ ಸಂಸ್ಥೆಯ ಸಹಕಾರದೊಂದಿಗೆ ಅಳವಡಿಸಲಾಗಿತ್ತು. ಕಣ್ಣು ಕಾಣದ ಪ್ರಯಾಣಿಕರು ಬಸ್‌ಗಳನ್ನು ಗುರುತಿಸಲು ಹಾಗೂ ಧ್ವನಿ ಆಧಾರಿತ ಸೂಚನೆಗಳ ಮೂಲಕ ಬಸ್ ಪ್ರವೇಶದ ಸ್ಥಳವನ್ನು ಸುರಕ್ಷಿತವಾಗಿ ಕಂಡುಹಿಡಿಯಲು ಇದು ಸಹಾಯ ಮಾಡುತ್ತದೆ. 400ಕ್ಕೂ ಅಧಿಕ ಪ್ರಯಾಣಿಕರಿಗೆ ಇದರ ಬಳಕೆಯ ಬಗ್ಗೆ ತರಬೇತಿ ನೀಡಲಾಗಿದೆ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸರ್ಕಾರಕ್ಕೆ ವಕೀಲ ಅಶೋಕ್ ಹಾರನಹಳ್ಳಿ ಆಗ್ರಹ

‘ಅ.ನ.ಕೃ. ಸ್ಮಾರಕ ಭವನ: ಜಾಗ ನೀಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಮಹತ್ವದ ಕೊಡುಗೆ ನೀಡಿದ ಅ.ನ.ಕೃಷ್ಣರಾಯ ಅವರ ಹೆಸರಿನಲ್ಲಿ ಸ್ಮಾರಕ ಭವನ ನಿರ್ಮಿಸಲು ರಾಜ್ಯ ಸರ್ಕಾರ ಜಾಗ ಒದಗಿಸಬೇಕು’ ಎಂದು ವಕೀಲ ಅಶೋಕ್ ಹಾರನಹಳ್ಳಿ ಆಗ್ರಹಿಸಿದರು.

ಅ.ನ.ಕೃ. ಪ್ರತಿಷ್ಠಾನ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಲೇಖಕಿ ಎಲ್.ವಿ. ಶಾಂತಕುಮಾರಿ ಹಾಗೂ ವಿದ್ವಾಂಸ ಆರ್. ಗಣೇಶ್ ಅವರಿಗೆ ‘ಅನಕೃ ಪ್ರಶಸ್ತಿ’ ಪ್ರದಾನ ಮಾಡಲಾಯಿತು. ಈ ಪ್ರಶಸ್ತಿಯು ತಲಾ ₹50 ಸಾವಿರ ನಗದು ಒಳಗೊಂಡಿದೆ.

ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅಶೋಕ್ ಹಾರನಹಳ್ಳಿ, ‘ಅ.ನ.ಕೃ. ಅವರ ಹೆಸರಿನಲ್ಲಿ ಅ.ನ.ಕೃ. ಸ್ಮಾರಕ ಭವನ ನಿರ್ಮಾಣಕ್ಕೆ ಸರ್ಕಾರವು ಪ್ರತಿಷ್ಠಾನಕ್ಕೆ ಜಾಗವನ್ನು ನೀಡಿತ್ತು. ಈ ಜಾಗ ಹಂಚಿಕೆ ಪ್ರಕರಣ ಕಾರಣಾಂತರಗಳಿಂದ ಕೋರ್ಟ್‌ಗೆ ಹೋದ ಕಾರಣ, ಸ್ಮಾರಕ ಭವನ ನಿರ್ಮಾಣ ಸಾಧ್ಯವಾಗಿರಲಿಲ್ಲ. ಬೇರೆ ಜಾಗವನ್ನು ನೀಡುವಂತೆ ಕೋರ್ಟ್ ಸರ್ಕಾರಕ್ಕೆ ನಿರ್ದೇಶನ ನೀಡಿದ್ದರೂ ಆ ನಿಟ್ಟಿನಲ್ಲಿ ಸರ್ಕಾರ ಇನ್ನೂ ಕ್ರಮವಹಿಸಿಲ್ಲ. ಈಗಲಾದರೂ ಸ್ಮಾರಕ ಭವನ ನಿರ್ಮಾಣಕ್ಕೆ ಸರ್ಕಾರ ಜಾಗ ಒದಗಿಸಬೇಕು’ ಎಂದು ಹೇಳಿದರು.

ಆರ್. ಗಣೇಶ್, ‘ಅ.ನ.ಕೃ. ಅವರ ಜನ್ಮಶತಮಾನೋತ್ಸವದ ಅಂಗವಾಗಿ ಸರ್ಕಾರವು 2008ರಲ್ಲಿ ಅ.ನ.ಕೃ. ಅವರ ಸಮಗ್ರ ಸಾಹಿತ್ಯ ಪ್ರಕಟಣೆಯ ಯೋಜನೆಯನ್ನು ಹಮ್ಮಿಕೊಂಡಿತ್ತು. 15 ಸಂಪುಟಗಳು ಪ್ರಕಟಗೊಂಡಿದ್ದವು. ಇನ್ನೂ 15 ಸಂಪುಟಗಳು ಪ್ರಕಟವಾಗಬೇಕಿದೆ. ನಂತರ 13 ವರ್ಷಗಳಾದರೂ ಬಾಕಿ ಸಂಪುಟಗಳು ಬಂದಿಲ್ಲ. 12 ವರ್ಷಗಳ ವನವಾಸ, ಒಂದು ವರ್ಷದ ಅಜ್ಞಾತವಾಸವೂ ಕಳೆದಿದೆ. ರಾಮನ 14 ವರ್ಷಗಳ ವನವಾಸದಂತೆ ಆಮೇಲಾದರೂ ಪ್ರಕಟಿಸುತ್ತಾರೋ ಇಲ್ಲವೋ ಎನ್ನುವುದು ತಿಳಿಯದಾಗಿದೆ. ಈ ಬಗ್ಗೆ ಸರ್ಕಾರಕ್ಕೆ ಒತ್ತಾಯ ಮಾಡಬೇಕಿದೆ. ಅ.ನ.ಕೃ. ಅವರು ಕನ್ನಡ ಮರೆಯಬಾರದ ಲೇಖಕರಾಗಿದ್ದಾರೆ’ ಎಂದರು.

> ಬಾಲ್ಯದಲ್ಲಿಯೇ ಅ.ನ.ಕೃ. ಅವರ ಪುಸ್ತಕಗಳನ್ನು ಓದುತ್ತಿದ್ದೆ. ಅವರ ಪುಸ್ತಕಗಳು ಮೋಡಿ ಮಾಡುತ್ತಿದ್ದವು. ಅವರ ಪುಸ್ತಕಗಳ ಓದಿನಿಂದ ಕನ್ನಡ ಸಾಹಿತ್ಯದ ಬಗ್ಗೆ ಅಭಿಮಾನ ಬೆಳೆಯಿತು
> **ಎಲ್.ವಿ. ಶಾಂತಕುಮಾರಿ** ಲೇಖಕಿ

ರಾಷ್ಟ್ರೋತ್ಥಾನ ಸಾಹಿತ್ಯದ ಪ್ರಧಾನ ಸಂಪಾದಕ ಎಸ್.ಆರ್. ರಾಮಸ್ವಾಮಿ, ‘ಅ.ನ.ಕೃ ಅವರು ತಾವು ಶ್ರಮದಿಂದ ಗಳಿಸಿದ ಪಾಂಡಿತ್ಯವನ್ನು ಸಮಾಜಕ್ಕೆ ವಿನಿಯೋಗ ಮಾಡಲು ಹಗಲಿರುಳು ಶ್ರಮಿಸಿದರು. ಅವರು ಸಾಮಾಜಿಕ ಕಾದಂಬರಿಗಳ ಜತೆಗೆ ಐತಿಹಾಸಿಕ ಕಾದಂಬರಿಗಳನ್ನೂ ರಚಿಸಿದ್ದಾರೆ. ನಾಟಕ, ಜೀವನ ಚರಿತ್ರೆ, ವ್ಯಕ್ತಿಚಿತ್ರ ಸೇರಿ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಬರೆದಿದ್ದಾರೆ. ಅವರ ಕಾದಂಬರಿಗಳ ಜತೆಗೆ ಇತರ ಕೃತಿಗಳ ಬಗ್ಗೆಯೂ ಅಧ್ಯಯನ ಆಗಬೇಕು’ ಎಂದು ಹೇಳಿದರು.

ಲೇಖಕ ಶಶಿಕಿರಣ್ ಬಿ.ಎನ್. ಪ್ರಶಸ್ತಿ ಪುರಸ್ಕೃತರ ಬಗ್ಗೆ ಅಭಿನಂದನಾ ನುಡಿಗಳನ್ನಾಡಿದರು.



ಸಮಾರಂಭದಲ್ಲಿ ಲೇಖಕಿ ಎಲ್.ವಿ. ಶಾಂತಕುಮಾರಿ ಹಾಗೂ ವಿದ್ವಾಂಸ ಆರ್. ಗಣೇಶ್ ಅವರಿಗೆ ‘ಅನಕೃ ಪ್ರಶಸ್ತಿ’ ಪ್ರದಾನ ಮಾಡಲಾಯಿತು. ಎಸ್.ಆರ್. ರಾಮಸ್ವಾಮಿ, ರಂಗಕರ್ಮಿ ಬಿ.ವಿ. ರಾಜಾರಾಂ, ಅಶೋಕ್ ಹಾರನಹಳ್ಳಿ, ಶಶಿಕಿರಣ ಬಿ.ಎನ್., ಅ.ನ.ಕೃ. ಅವರ ಪುತ್ರ ಗೌತಮ್ ಹಾಗೂ ಕುಟುಂಬದ ಸದಸ್ಯರು ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಶಾಂತಿಗಿರಿ: ಮುನಿ ಮಹಾರಾಜರ ಪ್ರತಿಮೆ

ಪ್ರಜಾವಾಣಿ ವಾರ್ತೆ

ಶ್ರವಣಬೆಳಗೊಳ (ಹಾಸನ ಜಿಲ್ಲೆ): ಇಲ್ಲಿಯ ನೂತನ ಗಿರಿಯಾಗಿ ಶಾಂತಿಗಿರಿಯಲ್ಲಿ ಶಾಂತಿಸಾಗರ ಮಹಾರಾಜರ ಪ್ರತಿಮೆ ಪ್ರತಿಷ್ಠಾಪಿಸಲಾಯಿತು.

ಭಾನುವಾರ ಬೆಳಿಗ್ಗೆ ಉಪ ರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರು ವೇದಿಕೆ ಕಾರ್ಯಕ್ರಮದಲ್ಲಿ ಸಾಂಕೇತಿಕವಾಗಿ ಪ್ರತಿಮೆ ಅನಾವರಣ ಮಾಡಿದ್ದರು. ನಂತರ 4ನೇ ಬೆಟ್ಟದ ಶಾಂತಿಗಿರಿಯಲ್ಲಿ ಶಾಂತಿಸಾಗರ ಮಹಾರಾಜರ 10 ಅಡಿಯ ಲೋಹದ ಪ್ರತಿಮೆಯನ್ನು ಪೂರ್ವಾಭಿಮುಖವಾಗಿ ಪ್ರತಿಷ್ಠಾಪಿಸಲಾಯಿತು. 20ನೇ ಶತಮಾನದ ಪ್ರಥಮಾಚಾರ್ಯ ಶಾಂತಿಸಾಗರ ಮಹಾರಾಜರು ಬಲಗೈನಲ್ಲಿ ಪಿಂಛಿ, ಎಡಗೈನಲ್ಲಿ ಕಮಂಡಲ ಹಿಡಿದು ನೋಡುತ್ತಿರುವ ಅಪರೂಪದ ಪ್ರತಿಮೆ ಇದಾಗಿದೆ.

ಪೀಠಾಧಿಪತಿ ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಮಾರ್ಗದರ್ಶನದಲ್ಲಿ ಶಾಂತಿಸಾಗರ ಮಹಾರಾಜರ ಪ್ರತಿಮೆಗೆ ಮಹಾಶಾಂತಿ ಮಂತ್ರಗಳೊಂದಿಗೆ ಜಲಾಭಿಷೇಕ, ಕ್ಷೀರಾಭಿಷೇಕ, ಗಂಧಾಭಿಷೇಕದೊಂದಿಗೆ ಪುಷ್ಪವೃಷ್ಟಿ ಮಾಡಿ, ಅಷ್ಟವಿಧಾರ್ಚನೆಯೊಂದಿಗೆ ಮಹಾ ಶಾಂತಿಧಾರ, ಮಹಾಮಂಗಳಾರತಿ ಮಾಡಲಾಯಿತು.


ಸಾವಿರಾರು ಭಕ್ತರ ಹರ್ಷೋದ್ಗಾರಗಳ ಮಧ್ಯೆ ಆಚಾರ್ಯ ಶಾಂತಿಸಾಗರ ಮಹಾರಾಜರ ಪಾದುಕೆಗಳನ್ನು ಪ್ರತಿಷ್ಠಾಪಿಸಿ, ಸಕಲ ಧಾರ್ಮಿಕ ವಿಧಿಗಳನ್ನು ನೆರವೇರಿಸಲಾಯಿತು. ಅಲ್ಲದೇ ಶಾಂತಿಸಾಗರ ಮಹಾರಾಜರ ಸಂದೇಶ, ಜೀವನ ಚರಿತ್ರೆಯ ಶಿಲಾಶಾಸನವನ್ನು ಅನಾವರಣ ಮಾಡಲಾಯಿತು.

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ...

9606038256



‘ಕಸದ ರಾಶಿ ವಿಲೇವಾರಿ ಮಾಡಿ’

ಜ್ಞಾನಭಾರತಿಯ ಬಿಡಿಎ ಅಪಾರ್ಟ್‌ಮೆಂಟ್‌ನಿಂದ ಹರ್ಷ ಬಡಾವಣೆಗೆ ತೆರಳುವ ರಸ್ತೆ ಬದಿಯಲ್ಲಿ ಕಸದ ರಾಶಿ ಬಿದ್ದಿದೆ. ಈ ಭಾಗದ ಸಾರ್ವಜನಿಕರು ಮನೆಗಳಲ್ಲಿ ಉತ್ಪತ್ತಿ ಆಗುವ ಹಸಿ ಕಸ ಮತ್ತು ಒಣ ಕಸವನ್ನು ಪ್ಲಾಸ್ಟಿಕ್ ಚೀಲಗಳಲ್ಲಿ ತುಂಬಿಕೊಂಡು ಬಂದು ಎಸೆದು ಹೋಗುತ್ತಿದ್ದಾರೆ. ಇದರಿಂದಾಗಿ ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದ್ದು, ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಸಂಬಂಧಪಟ್ಟ ಪಾಲಿಕೆ ಅಧಿಕಾರಿಗಳು ಇಲ್ಲಿ ಹಾಕಿರುವ ಕಸದ ರಾಶಿ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಬೇಕು.

ಕೆ. ನಾಗಲಿಂಗಪ್ಪ, ಜ್ಞಾನಭಾರತಿ ಎನ್‌ಕ್ಲೇವ್



‘ರಸ್ತೆ ಗುಂಡಿ ಮುಚ್ಚಿ’

ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಸಾರಕ್ಕಿ ಕೆರೆ ಮುಂಭಾಗದ ಸಿದ್ದೇಶ್ವರ ಟಾಕೀಸ್‌ಗೆ ಹೋಗುವ ಎರಡನೇ ಮುಖ್ಯ ರಸ್ತೆಯಲ್ಲಿ ಗುಂಡಿ ಬಿದ್ದಿದೆ. ವಾಹನ ಸವಾರರ ಗಮನ ಸೆಳೆಯಲು ಈ ಗುಂಡಿಯಲ್ಲಿ ಕಲ್ಲು ಹಾಗೂ ತೆಂಗಿನ ಗಿಡದ ಗರಿಯನ್ನು ಇಡಲಾಗಿದೆ. ಇದರಿಂದ ವಾಹನ ಸಂಚಾರಕ್ಕೆ ತೊಂದರೆಯಾಗಿದೆ. ಗುಂಡಿ ಮುಚ್ಚುವಂತೆ ಮನವಿ ಮಾಡಿದರೂ ಪಾಲಿಕೆಯ ಅಧಿಕಾರಿಗಳು ಸ್ಪಂದಿಸುತ್ತಿಲ್ಲ.

ಪಿ.ಎನ್.ಎಂ. ಗುಪ್ತ, ಬೊಮ್ಮನಹಳ್ಳಿ

‘ಚಡಗ ಕಾದಂಬರಿ ಪ್ರಶಸ್ತಿ’ಗೆ ಆಯ್ಕೆ



ರಮ್ಯಾ ಎಸ್.

ಬೆಂಗಳೂರು: ಕಾದಂಬರಿಕಾರ ಪಾಂಡೇಶ್ವರ ಸೂರ್ಯನಾರಾಯಣ ಚಡಗರ ನೆನಪಿನಲ್ಲಿ ಕೋಟೇಶ್ವರದ ಎನ್.ಆರ್.ಎ.ಎಂ.ಎಚ್. ಪ್ರಕಾಶನ ಮತ್ತು ಸ್ಥಿತಿಗತಿ ತ್ರೈಮಾಸಿಕ ಪತ್ರಿಕೆ ನೀಡುವ 2025ನೇ ಸಾಲಿನ ‘ಚಡಗ ಕಾದಂಬರಿ ಪ್ರಶಸ್ತಿ’ಗೆ ರಮ್ಯಾ ಎಸ್. ಅವರ ‘ವರ್ಣತಂತು–ಜೀವಿಯ ಕೌತುಕ ಜೀವಸಾರ’ ಕಾದಂಬರಿಯನ್ನು ಆಯ್ಕೆ ಮಾಡಲಾಗಿದೆ. ₹10 ಸಾವಿರ ನಗದನ್ನು ಈ ಪ್ರಶಸ್ತಿ ಒಳಗೊಂಡಿದೆ. ಪ್ರಶಸ್ತಿ ಪ್ರದಾನ ಸಮಾರಂಭ ಡಿಸೆಂಬರ್‌ನಲ್ಲಿ ನಡೆಯಲಿದೆ ಎಂದು ಸ್ಪರ್ಧೆಯ ಸಂಚಾಲಕ ಉಪೇಂದ್ರ ಸೋಮಯಾಜಿ, ಪ್ರಶಸ್ತಿ ಸಮಿತಿಯ ಅಧ್ಯಕ್ಷ ಎನ್. ಭಾಸ್ಕರ ಆಚಾರ್ಯ ತಿಳಿಸಿದ್ದಾರೆ.

ಕ್ರಾಸ್ ಕಂಟ್ರಿ ಸ್ಪರ್ಧೆಗೆ ಶಿವಾಜಿ



ಶಿವಾಜಿ ಪರಶುರಾಮ ಮಾದಪ್ಪಗೌಡರ

ಪೀಣ್ಯ ದಾಸರಹಳ್ಳಿ: ಬೆಂಗಳೂರು ವಿಶ್ವವಿದ್ಯಾಲಯ ಆಯೋಜಿಸಿದ್ದ 10 ಕಿ.ಮೀ ದೂರದ ಗುಡ್ಡಗಾಡು ಓಟದ ಸ್ಪರ್ಧೆಯಲ್ಲಿ ಸೌಂದರ್ಯ ಕಲಾ ಮತ್ತು ವಾಣಿಜ್ಯ ಸಂಜೆ ಪದವಿ ಕಾಲೇಜಿನ ವಿದ್ಯಾರ್ಥಿ ಶಿವಾಜಿ ಪರಶುರಾಮ ಮಾದಪ್ಪಗೌಡರ ಪ್ರಥಮ ಸ್ಥಾನ ಗಳಿಸಿ ಅಖಿಲ ಭಾರತ ಗುಡ್ಡಗಾಡು ಓಟ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.

ಸೌಂದರ್ಯ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಸೌಂದರ್ಯ ಪಿ. ಮಂಜಪ್ಪ, ಸಿಇಒ ಎಂ. ಕೀರ್ತನ್ ಕುಮಾರ್, ನಿರ್ದೇಶಕ ವರುಣ್ ಕುಮಾರ್, ಕಾಲೇಜಿನ ಪ್ರಾಂಶುಪಾಲ ಸೋಮಶೇಖರಪ್ಪ ಬಿ.ಕೆ. ಅಭಿನಂದಿಸಿದ್ದಾರೆ.

ಚಾಲಕರ ದಿನಾಚರಣೆಯಲ್ಲಿ ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ

ಆಟೊ ಚಾಲಕರ ಮಕ್ಕಳ ನೆರವಿಗೆ ಸಿದ್ಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಟೊ ಚಾಲಕರ ಮಕ್ಕಳು ಶಿಕ್ಷಣ ಪಡೆಯಲು ಆರ್ಥಿಕ ಸಮಸ್ಯೆ ಎದುರಿಸುತ್ತಿದ್ದರೆ, ಅಂತಹ ಮಕ್ಕಳ ಶಿಕ್ಷಣದ ಜವಾಬ್ದಾರಿಯನ್ನು ಆದಿಚುಂಚನಗಿರಿ ಮಠ ವಹಿಸಿಕೊಳ್ಳಲು ಸಿದ್ಧವಿದೆ ಎಂದು ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ನಟ ‘ಶಂಕರ್‌ನಾಗ್’ ಅವರ ಜನ್ಮದಿನದ ಪ್ರಯುಕ್ತ ಪೀಸ್ ಆಟೊ ಮತ್ತು ಟ್ಯಾಕ್ಸಿ ಡ್ರೈವರ್ ಅಸೋಸಿಯೇಷನ್, ಆದರ್ಶ ಆಟೊ ಮತ್ತು ಟ್ಯಾಕ್ಸಿ ಚಾಲಕರ ಸಂಘ ಹಾಗೂ ವಿಷ್ಣು ಸೇನಾ ಸಮಿತಿ ಆಯೋಜಿಸಿದ್ದ 12ನೇ ವರ್ಷದ ಚಾಲಕರ ದಿನಾಚರಣೆ ಹಾಗೂ ಅತ್ಯುತ್ತಮ ಸೇವೆಗಾಗಿ ಚಾಲಕರಿಗೆ ಚಿನ್ನದ ಪದಕ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಇಂದು ನಾಲ್ಕನೇ ಕೈಗಾರಿಕಾ ಕ್ರಾಂತಿಯಲ್ಲಿ ನಾವೆಲ್ಲ ಬದುಕುತ್ತಿದ್ದೇವೆ. ಜಾಗತಿಕ ಮಟ್ಟದಲ್ಲಿ ತಂತ್ರಜ್ಞಾನ ದೊಡ್ಡಮಟ್ಟದಲ್ಲಿ ಬೆಳೆಯುತ್ತಿದ್ದು, ಆಟೊ ಚಾಲಕರು ಸಹ ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು. ಕನಿಷ್ಠ ಪಕ್ಷ ತಮ್ಮ ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಆದ್ಯತೆ ನೀಡಬೇಕು’ ಎಂದು ಅಭಿಪ್ರಾಯಪಟ್ಟರು.

ಶಾಸಕ ಸಿ.ಎನ್. ಅಶ್ವತ್ಥ ನಾರಾಯಣ ಮಾತನಾಡಿ, ‘ಆಟೊ ಚಾಲಕರ ಸರ್ವಾಂಗೀಣ ಅಭಿವೃದ್ಧಿಗಾಗಿ ಸರ್ಕಾರವು ಆಟೊ ಅಭಿವೃದ್ಧಿ ನಿಗಮ ರಚಿಸಲು ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿದರು.

ಶಾಸಕ ಸಿ.ಕೆ. ರಾಮಮೂರ್ತಿ ಮಾತನಾಡಿ, ‘ವೈಟ್ ಬೋರ್ಡ್ ವಾಹನಗಳಲ್ಲಿ ವಾಣಿಜ್ಯ ಸಂಚಾರವನ್ನು ನಿಷೇಧಿಸಲು ಮುಂದಿನ ಅಧಿವೇಶನದಲ್ಲಿ ನಾವು ಧ್ವನಿ ಎತ್ತುತ್ತೇವೆ. ಸರ್ಕಾರಕ್ಕೆ ತೆರಿಗೆ ಪಾವತಿಸದೇ ಅನಧಿಕೃತವಾಗಿ ವಾಣಿಜ್ಯ ಸಂಚಾರ ನಡೆಸುತ್ತಿದ್ದಾರೆ’ ಎಂದು ತಿಳಿಸಿದರು.

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ನಟಿ ರಚಿತಾ ರಾಮ್, ನಿರ್ದೇಶಕರಾದ ರಾಜೇಂದ್ರ ಸಿಂಗ್ ಬಾಬು, ನಟ ಡಾರ್ಲಿಂಗ್ ಕೃಷ್ಣ, ನಿರ್ದೇಶಕ ಶಶಾಂಕ್, ನಟ ವಿನೋದ್ ಪ್ರಭಾಕರ್, ಪೀಸ್ ಆಟೊ ಮತ್ತು ಟ್ಯಾಕ್ಸಿ ಡ್ರೈವರ್ ಅಸೋಸಿಯೇಷನ್ ಅಧ್ಯಕ್ಷ ರಘು ನಾರಾಯಣ ಗೌಡ, ವಿಷ್ಣು ಸೇನಾ ಸಮಿತಿ ಅಧ್ಯಕ್ಷ ವೀರಕಪುತ್ರ ಶ್ರೀನಿವಾಸ್ ಉಪಸ್ಥಿತರಿದ್ದರು.

ಸನ್ನಡತೆ ಹೊಂದಿರುವ ಏಳು ಆಟೊ ಚಾಲಕ ಹಾಗೂ ಚಾಲಕಿಯರಿಗೆ ಚಿನ್ನದ ಪದಕ ನೀಡಿ ಗೌರವಿಸಲಾಯಿತು. 4 ಸಾವಿರ ಆಟೊ ಚಾಲಕರಿಗೆ ಸಮವಸ್ತ್ರ ವಿತರಿಸಲಾಯಿತು.



ಅತ್ಯುತ್ತಮ ಸೇವೆಗಾಗಿ ಏಳು ಆಟೊ ಚಾಲಕ ಹಾಗೂ ಚಾಲಕಿಯರಿಗೆ ಚಿನ್ನದ ಪದಕ ನೀಡಿ ಗೌರವಿಸಲಾಯಿತು

ಚಿಟಿಕೆ ಸುದ್ದಿ

ಮಾರೇನಹಳ್ಳಿ ಗ್ರಾ.ಪಂ. ಸಂಧ್ಯಾ ಅಧ್ಯಕ್ಷೆ



ಯಲಹಂಕ: ಮಾರೇನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಸಂಧ್ಯಾ ಸುಂದರೇಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಪಿ.ರಾಜು ಅವರ ರಾಜೀನಾಮೆಯಿಂದ ಸಂಧ್ಯಾ ತೆರವಾಗಿದ್ದ ಸ್ಥಾನಕ್ಕೆ ಚುನಾವಣೆ ನಡೆಯಿತು. ಅಧ್ಯಕ್ಷ ಸ್ಥಾನಕ್ಕೆ ಸಂಧ್ಯಾ ಒಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಅವಿರೋಧ ಆಯ್ಕೆ ನಡೆಯಿತು.

ಸಂಧ್ಯಾ ಮಾತನಾಡಿ, 'ಸಾಮಾನ್ಯ ವರ್ಗಕ್ಕೆ ಮೀಸಲಾಗಿದ್ದ ಪಂಚಾಯಿತಿ ಅಧ್ಯಕ್ಷ ಸ್ಥಾನಕ್ಕೆ ಹಿಂದುಳಿದ ವರ್ಗದ ಮಹಿಳೆಯೊಬ್ಬರು ಆಯ್ಕೆಯಾಗಲು ಕಂದಾಯ ಸಚಿವ ಕೃಷ್ಣಬೈರೇಗೌಡ ಅವಕಾಶ ಕಲ್ಪಿಸಿದ್ದಾರೆ' ಎಂದರು.

ಭದ್ರಾ ನಾಲೆಗೆ ಉರುಳಿದ ಕಾರು ಇಬ್ಬರ ಸಾವು

ಸಂತೇಬೆನ್ನೂರು (ದಾವಣಗೆರೆ): ಚಾಲಕನ ನಿಯಂತ್ರಣ ತಪ್ಪಿದ ಕಾರು ಶನಿವಾರ ಹೊಸೂರು ಗ್ರಾಮದ ಬಳಿಯ ಭದ್ರಾ ನಾಲೆಗೆ ಉರುಳಿದ್ದು, ಇಬ್ಬರು ಮೃತಪಟ್ಟಿದ್ದಾರೆ. ಇತರ ನಾಲ್ವರು ಈಜಿ ದಡ ಸೇರಿದ್ದಾರೆ.

ದಾವಣಗೆರೆಯ ಮಲ್ಲಿಕಾರ್ಜುನ್ (29) ಹಾಗೂ ಸಿದ್ದೇಶ್ (38) ಮೃತರು. ಆರು ಜನ ಸ್ನೇಹಿತರು ಮಂಗಳೂರು ಬಳಿಯ ಕೊರಗಜ್ಜ ದೇಗುಲದ ದರ್ಶನ ಪಡೆದು ರಾತ್ರಿ ದಾವಣಗೆರೆಗೆ ಮರಳುತ್ತಿದ್ದಾಗ ಅವಘಡ ಸಂಭವಿಸಿದೆ. ಇದಕ್ಕೆ ಅತಿವೇಗ ಹಾಗೂ ನಿರ್ಲಕ್ಷ್ಯದ ಚಾಲನೆಯೇ ಕಾರಣ ಎನ್ನಲಾಗಿದೆ.

ದುರ್ಗಮ ರಸ್ತೆಯಲ್ಲಿ ವಾಹನ ಸಂಚಾರ

ಮಹದೇವಪುರ ಕ್ಷೇತ್ರದ ಪಣತ್ತೂರಿನಲ್ಲಿ ಪರ್ಯಾಯ ಮಾರ್ಗವಿಲ್ಲದ ತೊಂದರೆ

● ಶಿವರಾಜ್ ಮೌರ್ಯ

ಮುಖ್ಯಾಂಶಗಳು
- ವಾಹನ ಸವಾರರು, ಸ್ಥಳೀಯರಿಗೆ ಯಾತನೆ
- ರಸ್ತೆ ಕಾಮಗಾರಿ ವೇಳೆ ಪರ್ಯಾಯ ಮಾರ್ಗ ಕಲ್ಪಿಸಿಲ್ಲ: ಆರೋಪ
- ವೈಟ್ ಟಾಪಿಂಗ್ ಶೀಘ್ರ ಪೂರ್ಣಗೊಳಿಸಿ: ಆಗ್ರಹ

ಕೆ.ಆರ್.ಪುರ: ರಸ್ತೆ ತುಂಬ ಗುಂಡಿಗಳು, ದುರ್ಗಮ ರಸ್ತೆಯಲ್ಲಿ ಜೀವ ಪಣಕ್ಕಿಟ್ಟು ಸಾಗುವ ಸವಾರರು, ಪರ್ಯಾಯ ರಸ್ತೆಯಿಲ್ಲದೆ ಗೋಳಾಡುವ ಸ್ಥಳೀಯ ನಿವಾಸಿಗಳು... ಇದು ಮಹದೇವಪುರ ಕ್ಷೇತ್ರದ ಪಣತ್ತೂರಿನಲ್ಲಿ ಕಂಡು ಬಂದ ದೃಶ್ಯಗಳು.

ಪಣತ್ತೂರು ಬಳಗೆರೆ ರಸ್ತೆಯು ಗುಂಡಿಗಳಿಂದ ಕೂಡಿತ್ತು. ಈಗ ಪಣತ್ತೂರಿನಲ್ಲಿ ವೈಟ್ ಟಾಪಿಂಗ್ ಕಾಮಗಾರಿ ನಡೆಯುತ್ತಿದೆ. ಬಳಗೆರೆ ಮೂಲಕ ವರ್ತೂರಿಗೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆಯ ಪಣತ್ತೂರಿನಲ್ಲಿ ಹಲವು ದಿನಗಳಿಂದ ವೈಟ್ ಟಾಪಿಂಗ್ ನಡೆಯುತ್ತಿದೆ. ಪರ್ಯಾಯ ಮಾರ್ಗವೂ ಇಲ್ಲದೆ ಸಂಪರ್ಕ ಸಂಪೂರ್ಣ ಕಡಿತಗೊಂಡು ವಾಹನ ಸವಾರರು, ಸ್ಥಳೀಯರು, ಚಿಣ್ಣರು ನಿತ್ಯ ಯಾತನೆ ಅನುಭವಿಸುತ್ತಿದ್ದಾರೆ.

ಐಟಿ, ಬಿಟಿ ಹಬ್, ಸಿಲಿಕಾನ್ ವ್ಯಾಲಿ ಕಾರಿಡಾರ್ ಎನಿಸಿರುವ ಮಾರತ್ತಹಳ್ಳಿ ಸುತ್ತಮುತ್ತಲಿನ ಪ್ರದೇಶಗಳಲ್ಲಿನ ಐಟಿ ಸೇವೆ ಒದಗಿಸುವ ವಿವಿಧ ಕಂಪನಿಗಳಿಗೆ ಬಲುಬು ರಸ್ತೆ ಸಂಪರ್ಕ ಕಡಿತಗೊಂಡಿರುವ ಕಾರಣ ಸುಮಾರು 10–15 ಕಿ.ಮೀ ಸುತ್ತು ಹಾಕಬೇಕಿದೆ. ಇದರಿಂದಾಗಿ ಸ್ಥಳೀಯ ನಿವಾಸಿಗಳು, ಚಿಣ್ಣರು ಸಾಮಾಜಿಕ ಜಾಲತಾಣಗಳಲ್ಲಿ ಸರ್ಕಾರ, ಜಿಬಿಎ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ರಸ್ತೆ ಕಾಮಗಾರಿ ನಡೆಸುವ ವೇಳೆ ಪರ್ಯಾಯ ಮಾರ್ಗಕ್ಕೆ ಸೂಕ್ತ ವ್ಯವಸ್ಥೆ ಮಾಡದೇ ನಾಗರಿಕರ ಜೀವದೊಂದಿಗೆ ಅಧಿಕಾರಿಗಳು ಆಟವಾಡುತ್ತಿದ್ದಾರೆ ಎಂದು ಜನರು ಆರೋಪಿಸಿದರು.

ಪಣತ್ತೂರು ಬಳಗೆರೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನೂರಾರು ಖಾಸಗಿ ಶಾಲೆಗಳಿದ್ದು, ಇದೇ ರಸ್ತೆಯ ಮೂಲಕ ಸಾಗಬೇಕಾಗಿರುವುದರಿಂದ ಶಾಲಾ ಮಕ್ಕಳ ಭವಿಷ್ಯಕ್ಕೆ ಕುತ್ತು ಉಂಟಾಗುವ ಬಗ್ಗೆ ಪೋಷಕರು ಆತಂಕ ವ್ಯಕ್ತಪಡಿಸುತ್ತಿದ್ದಾರೆ.

ಬಳಗೆರೆ ಸುತ್ತಮುತ್ತಲಿನ ಪ್ರದೇಶಗಳ ವಾಸಿಗಳು ಸುಮಾರು 14 ಕಿ.ಮೀ ಸುತ್ತು ಹಾಕಿ ತಮ್ಮ ಕೆಲಸಗಳಿಗೆ ತೆರಳುತ್ತಿದ್ದಾರೆ. ಪಣತ್ತೂರು ರೈಲ್ವೆ ಕೆಳಸೇತುವೆ ಬಳಿ ಪರ್ಯಾಯ ರಸ್ತೆ ವ್ಯವಸ್ಥೆ ಮಾಡದೆ ಇರುವುದರಿಂದ ಸಮಸ್ಯೆ ಉಂಟಾಗಿದೆ. ಕೆಲಸಕ್ಕೆ ಹೋಗುವ ಧಾವಂತದಲ್ಲಿ ಕಾಲುವೆಗಾಗಿ ಅಗೆದಿರುವ ದಾರಿಯಲ್ಲಿ ಸವಾರರು ಸಾಗುತ್ತಿದ್ದಾರೆ.

'ಪಣತ್ತೂರು ಬಳಗೆರೆ ಮುಖ್ಯರಸ್ತೆಯ ವೈಟ್ ಟಾಪಿಂಗ್ ಕಾಮಗಾರಿಯಿಂದಾಗಿ ಸಂಚಾರ ದುಸ್ತರವಾಗಿದೆ. ಸೂಚನಾ ಫಲಕಗಳನ್ನು ಅಳವಡಿಸಿಲ್ಲ. ಪಕ್ಕದಲ್ಲಿಯೇ ಪಣತ್ತೂರು ರೈಲ್ವೆ ನಿಲ್ದಾಣದ ಕಾಮಗಾರಿ ನಡೆಯುತ್ತಿರುವ ಕಾರಣ ನಿಲ್ದಾಣ ಮುಂಭಾಗದ ಮೂಲಕ ಸಾಗಲು ಅವಕಾಶ ನೀಡುತ್ತಿಲ್ಲ. ದುರ್ಗಮ ದಾರಿಯಲ್ಲಿ ಸಾಗಬೇಕಾದ ಪರಿಸ್ಥಿತಿ ಬಂದಿದೆ' ಎಂದು ಬಳಗೆರೆ ನಿವಾಸಿ, ಖಾಸಗಿ ಕಂಪನಿಯ ಉದ್ಯೋಗಿ ಪವನ್ ಪಟೇಲ್ ಅಳಲು ತೋಡಿಕೊಂಡರು.

'ವೈಟ್ ಟಾಪಿಂಗ್ ನಡೆಯುತ್ತಿದ್ದು, ನಿತ್ಯ ಸವಾರರು, ವಿದ್ಯಾರ್ಥಿಗಳು ಇಲ್ಲೇ ಬಸ್‌ಗಳಲ್ಲಿ ಸಾಗಬೇಕಿದೆ. ಪರ್ಯಾಯ ಮಾರ್ಗವಿಲ್ಲದೆ ಸುಮಾರು 15 ಕಿ.ಮೀ ದೂರ ಕ್ರಮಿಸಿ ಶಾಲೆಗೆ ತೆರಳಬೇಕಿದೆ. ಇದರಿಂದ ಸಮಯ ವ್ಯರ್ಥವಾಗುತ್ತಿದೆ. ವಿದ್ಯಾಭ್ಯಾಸಕ್ಕೆ ತೊಡಕು ಉಂಟಾಗುತ್ತಿದೆ. ಆದಷ್ಟು ಬೇಗ ಸೂಕ್ತ ಪರಿಹಾರ ಸೂಚಿಸಬೇಕು' ಎಂದು ವಿದ್ಯಾರ್ಥಿಗಳು ಸರ್ಕಾರಕ್ಕೆ ಮನವಿ ಮಾಡಿದ್ದಾರೆ.



ಪಣತ್ತೂರಿನಲ್ಲಿ ಪರ್ಯಾಯ ಮಾರ್ಗವಿಲ್ಲದೆ ವಾಹನ ಸವಾರರು ತೊಂದರೆ ಅನುಭವಿಸಿದರು



ದ್ವಿಚಕ್ರ ವಾಹನ ಸವಾರರ ಪರದಾಟ

ಯೋಗ ಗುರು ವಿರುದ್ಧದ ಪ್ರಕರಣ

ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಯೋಗ ಕಲಿಸುವ ನೆಪದಲ್ಲಿ ಅತ್ಯಾಚಾರ ಎಸಗಿದ ಆರೋಪ
- ಪ್ರಕರಣದ ತನಿಖೆ ಪೂರ್ಣ

ಬೆಂಗಳೂರು: ಯೋಗ ಕಲಿಸುವ ನೆಪದಲ್ಲಿ ಬಾಲಕಿಯ ಮೇಲೆ ಅತ್ಯಾಚಾರ ಎಸಗಿದ ಆರೋಪದಡಿ ಬಂಧಿತರಾಗಿರುವ ಯೋಗ ಗುರು ಡಾ.ನಿರಂಜನಮೂರ್ತಿ ವಿರುದ್ಧ ರಾಜರಾಜೇಶ್ವರಿನಗರ ಠಾಣೆ ಪೊಲೀಸರು ಪೋಕ್ಸೊ ಪ್ರಕರಣಗಳ ವಿಶೇಷ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದ್ದಾರೆ.

19 ವರ್ಷದ ಸಂತ್ರಸ್ತೆ ನೀಡಿದ್ದ ದೂರು ಆಧರಿಸಿ ಪೊಲೀಸರು ಸೆಪ್ಟೆಂಬರ್ 18ರಂದು ನಿರಂಜನಮೂರ್ತಿಯನ್ನು ಬಂಧಿಸಿದ್ದರು. ಪ್ರಕರಣದ ತನಿಖೆಯನ್ನು ಪೊಲೀಸರು ಪೂರ್ಣಗೊಳಿಸಿದ್ದಾರೆ.

ಸಂತ್ರಸ್ತೆಯು 2021ರಿಂದ ನಿರಂಜನಮೂರ್ತಿ ನಡೆಸುತ್ತಿದ್ದ ಯೋಗ ತರಬೇತಿ ಸಂಸ್ಥೆಯಲ್ಲಿ ಯೋಗ ಕಲಿಕೆಗೆ ಹೋಗುತ್ತಿದ್ದರು. 2023ರಲ್ಲಿ ಯೋಗ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಥಾಯ್ಲೆಂಡ್‌ಗೆ ಹೋಗಿದ್ದಾಗ ನಿರಂಜನಮೂರ್ತಿ, ಸಂತ್ರಸ್ತೆಗೆ ಲೈಂಗಿಕ ಕಿರುಕುಳ ನೀಡಿದ್ದರು. 'ಯೋಗದಲ್ಲಿ ಅಂತರರಾಷ್ಟ್ರೀಯ ಮಟ್ಟಕ್ಕೆ ಕರೆದೊಯ್ದು ಹೆಸರು ಬರುವಂತೆ ಮಾಡುತ್ತೇನೆ. ಅದರಿಂದ ಸರ್ಕಾರಿ ಕೆಲಸವೂ ಸಿಗಬಹುದೆಂದು ನಂಬಿಸಿ, ಲೈಂಗಿಕ ದೌರ್ಜನ್ಯ ಎಸಗಿದ್ದಾರೆ' ಎಂದು ಆರೋಪಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

'ಆಗಸ್ಟ್‌ನಲ್ಲಿ ನಡೆದಿದ್ದ ರಾಷ್ಟ್ರ ಮಟ್ಟದ ಯೋಗ ಸ್ಪರ್ಧೆಯಲ್ಲಿ ಪದಕ ಕೊಡಿಸುವುದಾಗಿ ಸಂತ್ರಸ್ತೆಗೆ ಆಮಿಷ ವೊಡ್ಡಿ ತಮ್ಮ ಸಂಸ್ಥೆಯಲ್ಲೇ ಆಕೆಯ ಮೇಲೆ ಅತ್ಯಾಚಾರ ಎಸಗಿದ್ದಾರೆ. ನಂತರ ರಾಜ್ಯ ಮಟ್ಟದ ಯೋಗ ಸ್ಪರ್ಧೆಯಲ್ಲಿ ಪದಕ ಕೊಡಿಸುವುದಾಗಿ ಆಕೆಗೆ ನಂಬಿಸಿ ಮತ್ತೆ ದೈಹಿಕ ಸಂಪರ್ಕಕ್ಕೆ ಒತ್ತಾಯಿಸಿದ್ದರು. ಇವಕ್ಕೆ ಸಾಕ್ಷ್ಯಾಧಾರಗಳು ಲಭ್ಯವಾಗಿವೆ. ಕೆಲ ವಿಡಿಯೊಗಳು ಸಿಕ್ಕಿವೆ' ಎಂದು ಆರೋಪಪಟ್ಟಿಯಲ್ಲಿ ಹೇಳಲಾಗಿದೆ.

ಹಲವು ಮಹಿಳೆಯರ ಜತೆ ಲೈಂಗಿಕ ಸಂಪರ್ಕ: ತನಿಖೆಯಲ್ಲಿ ದೃಢ

ನಿರಂಜನಮೂರ್ತಿ, ಹಲವು ಮಹಿಳೆಯರ ಜತೆ ಲೈಂಗಿಕ ಸಂಪರ್ಕ ಹೊಂದಿರುವುದು ತನಿಖೆ ವೇಳೆ ದೃಢಪಟ್ಟಿದೆ. ತನಿಖೆಯ ಭಾಗವಾಗಿ ಆ ಮಹಿಳೆಯರನ್ನು ಸಂಪರ್ಕಿಸಲಾಗಿದ್ದು, ಅವರು ಹೇಳಿಕೆ ದಾಖಲಿಸಲು ಹಿಂದೇಟು ಹಾಕಿದ್ದಾರೆ. 19 ವರ್ಷದ ಸಂತ್ರಸ್ತೆಯನ್ನು ಹೊರತುಪಡಿಸಿ ಉಳಿದವರು ದೂರು ನೀಡಲು ನಿರಾಕರಿಸಿದ್ದಾರೆ. ವಿಧಿ ವಿಜ್ಞಾನ ಪ್ರಯೋಗಾಲಯದ ವರದಿ ಬರಬೇಕಿದೆ ಎಂದು ಆರೋಪಪಟ್ಟಿಯಲ್ಲಿ ಹೇಳಲಾಗಿದೆ.

ನಗರದಲ್ಲಿ ಇಂದು



ಸುರೇಶ್ ಹೆಬ್ಳೀಕರ್

'ದಕ್ಷಿಣ ಭಾರತದ ಪಶ್ಚಿಮ ಘಟ್ಟಗಳ ರಾಷ್ಟ್ರ ಮಟ್ಟದ ಪರಿಸರ ಸಮ್ಮೇಳನ' ಉದ್ಘಾಟನೆ: ಈಶ್ವರ ಖಂಡ್ರೆ, ಪ್ರಧಾನ ಭಾಷಣಕಾರರು: ಸುರೇಶ್ ಹೆಬ್ಳೀಕರ್, ಅತಿಥಿಗಳು: ಮೊಹಮ್ಮದ್ ತಬ್ರೇಜ್ ಆಲಂ ಷರೀಫ್, ಅವನಿ ಕುಮಾರ್ ವರ್ಮ, ಆಯೋಜನೆ: ಇಕೋ–ವಾಚ್, ಕರ್ನಾಟಕ ರಾಜ್ಯ ಪಶ್ಚಿಮ ಘಟ್ಟ ಸಂರಕ್ಷಣಾ ಸಮಿತಿ, ಸ್ಥಳ: ದೇವರಾಜ ಅರಸು ಭವನ, ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 9.30

'ಸಂತವಾಣಿ'– ಚಲನಚಿತ್ರಗಳು, ಪುಸ್ತಕಗಳು, ಉಪನ್ಯಾಸಗಳು, ಸಂಗೀತ, ನೃತ್ಯ, ನಾಟಕ ಮತ್ತು ವಿಚಾರಗೋಷ್ಠಿಗಳು: ಮಧ್ಯಾಹ್ನ 3ಕ್ಕೆ ಉದ್ಘಾಟನೆ: ಟಿ.ಎಸ್. ನಾಗಾಭರಣ, ನರಹಳ್ಳಿ ಬಾಲಸುಬ್ರಹ್ಮಣ್ಯ, ಸಂಜೆ 4ಕ್ಕೆ 'ಭಕ್ತ ಕನಕದಾಸ' ಚಲನಚಿತ್ರ ಪ್ರದರ್ಶನ, ಆಯೋಜನೆ: ಭಾರತೀಯ ವಿದ್ಯಾಭವನ, ಸ್ಥಳ: ಖಿಂಚಾ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ

'ನೃತ್ಯ ನೀರಾಜನ' ನೃತ್ಯೋತ್ಸವ: ಆರ್. ಅಮೂಲ್ಯ, ಎಂ. ಧರಣಿ, ಡಿ. ಮೌಲ್ಯ, ಎಸ್. ಶ್ರೀನಿಧಿ, ನಿರ್ದೇಶನ: ದರ್ಶಿನಿ ಮಂಜುನಾಥ್, ಅತಿಥಿಗಳು: ಪದ್ಮಾ ಎಂ.ಎಂ., ನಾಗಶ್ರೀ ಶ್ಲೋಕ, ವಂದನಾ ಎಸ್. ಪ್ರಭು, ಆಯೋಜನೆ: ನೃತ್ಯ ದಿಶಾ ಟ್ರಸ್ಟ್, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 5.30

37 ದಿನಗಳ ಸಾಹಿತ್ಯ–ಸಂಸ್ಕೃತಿ ಉತ್ಸವ: 'ಕಥಕ್' ನೃತ್ಯ ಪ್ರದರ್ಶನ: ಅದಿತಿ, 'ಪಾದುಕೆ ಕಿರೀಟ' ಏಕವ್ಯಕ್ತಿ ತಾಳಮದ್ದಲೆ ಪ್ರದರ್ಶನ: ದಿವಾಕರ ಹೆಗಡೆ, ಆಯೋಜನೆ: ರಾಷ್ಟ್ರೋತ್ಥಾನ ಸಾಹಿತ್ಯ, ಸ್ಥಳ: ಕೇಶವಶಿಲ್ಪ ಸಭಾಂಗಣ, ರಾಷ್ಟ್ರೋತ್ಥಾನ ಪರಿಷತ್ ಆವರಣ, ಕೆಂಪೇಗೌಡನಗರ, ಸಂಜೆ 6



'ಮಹಾಭಾರತ ವಿರಾಟಪರ್ವ' ಧಾರ್ಮಿಕ ಪ್ರವಚನ: ವ್ಯಾಸನಕೆರೆ ಪ್ರಭಂಜನಾಚಾರ್ಯ, ಆಯೋಜನೆ ಮತ್ತು ಸ್ಥಳ: ಪೂರ್ಣಪ್ರಜ್ಞ ವಿದ್ಯಾಪೀಠ, ಕತ್ರಿಗುಪ್ಪೆ ಮುಖ್ಯರಸ್ತೆ, ಸಂಜೆ 6.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in

ವೆಂಕಟಾಲ: ಕಡಲೆಕಾಯಿ ಪರಿಷೆ

ಪ್ರಜಾವಾಣಿ ವಾರ್ತೆ

ಯಲಹಂಕ: ವೆಂಕಟಾಲದಲ್ಲಿರುವ ಅಭಯ ಮಹಾಗಣಪತಿ ದೇವಾಲಯದ 13ನೇ ವಾರ್ಷಿಕೋತ್ಸವದ ಪ್ರಯುಕ್ತ ಎರಡು ದಿನಗಳ ಕಡಲೆಕಾಯಿ ಪರಿಷೆ ನಡೆಯಿತು.

ಚಿಕ್ಕಬಳ್ಳಾಪುರ, ದೇವನಹಳ್ಳಿ, ತುಮಕೂರು, ಜಾವಗಲ್, ಕದಿರಿ, ದೊಡ್ಡಬಳ್ಳಾಪುರ, ವಿಜಯಪುರ ಸೇರಿದಂತೆ ಸ್ಥಳೀಯ ಕಡಲೆಕಾಯಿ ವ್ಯಾಪಾರಿಗಳು ಪರಿಷೆಯಲ್ಲಿ ಪಾಲ್ಗೊಂಡು, ನಾಟಿ, ಕಾಬೂಲ್, ಸಾಮ್ರಾಟ್ ಮತ್ತಿತರ ತಳಿಯ ಹಸಿ, ಹುರಿದ ಮತ್ತು ಬೇಯಿಸಿದ ಕಡಲೆಕಾಯಿ ಮಾರಾಟ ಮಾಡಿದರು.

ಗ್ರಾಹಕರು ಉತ್ಸಾಹದಿಂದ ತಮಗಿಷ್ಟವಾದ ಕಡಲೆಕಾಯಿ ಖರೀದಿಸುತ್ತಿದ್ದ ದೃಶ್ಯ ಕಂಡುಬಂತು. ಪರಿಷೆಯಲ್ಲಿ ಕಡಲೆಕಾಯಿಯನ್ನು ರಾಶಿಹಾಕಿ ವ್ಯಾಪಾರ ಮಾಡುವ ಪ್ರತಿಯೊಬ್ಬರಿಗೂ ₹500 ಪ್ರೋತ್ಸಾಹ ಧನದ ಜೊತೆಗೆ ವ್ಯಾಪಾರಿಗಳಿಗೆ 2 ದಿನ ಕಾಫಿ, ಉಪಾಹಾರ ಹಾಗೂ ಊಟದ ವ್ಯವಸ್ಥೆ ಕಲ್ಪಿಸಿದ್ದು ವಿಶೇಷವಾಗಿತ್ತು.

ಪರಿಷೆಗೆ ಚಾಲನೆ ನೀಡಿ ಮಾತನಾಡಿದ ಶಾಸಕ ಎಸ್.ಆರ್. ವಿಶ್ವನಾಥ್, 'ಬಹಳ ವರ್ಷಗಳ ಹಿಂದಿನಿಂದಲೂ ಬಸವನಗುಡಿ ಕಡಲೆಕಾಯಿ ಪರಿಷೆ ಪ್ರಖ್ಯಾತಿ ಪಡೆದಿದೆ. ಒತ್ತಡದ ಜೀವನ ಮತ್ತು ಸಂಚಾರ ದಟ್ಟಣೆಯ ನಡುವೆ ಅಲ್ಲಿಗೆ ತೆರಳಿ, ಪರಿಷೆ ವೀಕ್ಷಿಸುವುದು ಅಸಾಧ್ಯ. ವೆಂಕಟಾಲದಲ್ಲಿ ಪರಿಷೆ ಆಯೋಜಿಸಿರುವುದರಿಂದ ಜನರು ಕುಟುಂಬ ಸಮೇತ ಭೇಟಿ ನೀಡಿ, ತಮಗಿಷ್ಟವಾದ ಕಡಲೆಕಾಯಿ ಖರೀದಿಸಲು ಒಳ್ಳೆಯ ಅವಕಾಶ ಕಲ್ಪಿಸಲಾಗಿದೆ' ಎಂದು ತಿಳಿಸಿದರು.

ದೇವಸ್ಥಾನದ ಆಡಳಿತ ಮಂಡಳಿ ಅಧ್ಯಕ್ಷ ಕೆಂಪೇಗೌಡ ಮಾತನಾಡಿ, 'ದಕ್ಷಿಣ ಭಾಗದಂತೆಯೇ ಬೆಂಗಳೂರು ಉತ್ತರ ಭಾಗದಲ್ಲಿ ಪ್ರತಿವರ್ಷ ಪರಿಷೆ ನಡೆಸಲಾಗುತ್ತಿದೆ. ನಿರೀಕ್ಷೆಗೂ ಮೀರಿ ಹಲವು ಜಿಲ್ಲೆ ಹಾಗೂ ತಾಲ್ಲೂಕುಗಳಿಂದ ಕಡಲೆಕಾಯಿ ವ್ಯಾಪಾರಿಗಳು ಪರಿಷೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಜನರ ಸ್ಪಂದನೆಯೂ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ' ಎಂದು ತಿಳಿಸಿದರು.

ಪರಿಷೆಯಲ್ಲಿ ಗೃಹಪಯೋಗಿ ವಸ್ತುಗಳು, ಮಕ್ಕಳ ಆಟಿಕೆಗಳು, ಬಟ್ಟೆ, ಪಾದರಕ್ಷೆ, ಮಡಿಕೆ-ಕುಡಿಕೆಗಳು, ಆಲಂಕಾರಿಕ ವಸ್ತುಗಳು, ತಿಂಡಿ-ತಿನಿಸುಗಳೂ ಸೇರಿ ವೈವಿಧ್ಯಮಯ ವಸ್ತುಗಳ ಮಾರಾಟದ ಭರಾಟೆ ಜೋರಾಗಿತ್ತು.



ವೆಂಕಟಾಲದಲ್ಲಿರುವ ಅಭಯ ಮಹಾಗಣಪತಿ ದೇವಾಲಯದ 13ನೇ ವಾರ್ಷಿಕೋತ್ಸವದ ಪ್ರಯುಕ್ತ ಆಯೋಜಿಸಿದ್ದ ಕಡಲೆಕಾಯಿ ಪರಿಷೆಯ ದೃಶ್ಯ

ಸಂಕ್ಷಿಪ್ತ ಸುದ್ದಿ

ಈಜಲು ಕೆರೆಗೆ ಇಳಿದ ಇಬ್ಬರು ಬಾಲಕರು ಸಾವು

ಆನೇಕಲ್: ತಾಲ್ಲೂಕಿನ ಬಳ್ಳೂರು ಕೆರೆಯಲ್ಲಿ ಶನಿವಾರ ಈಜಲು ಹೋದ ಇಬ್ಬರು ಬಾಲಕರು ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ.

ಬಳ್ಳೂರಿನಲ್ಲಿ ನೆಲೆಸಿರುವ ಬಿಹಾರ ಮತ್ತು ಆಂಧ್ರಪ್ರದೇಶದ ಕೂಲಿ ಕಾರ್ಮಿಕರ ಮಕ್ಕಳಾದ ಅನೀಕೇತ್ ಕುಮಾರ್ (8) ಹಾಗೂ ಕದ್ರಿಯ ರೆಹಮತ್ ಬಾಬಾ(11) ಮೃತರು.

ಮನೆಯ ಬಳಿ ಶನಿವಾರ ಸಂಜೆ ಆಟವಾಡುತ್ತಿದ್ದ ಇಬ್ಬರೂ ನಂತರ ಕೆರೆ ಬಳಿ ತೆರಳಿ ನೀರಿಗೆ ಇಳಿದ್ದಾರೆ. ಮಕ್ಕಳು ರಾತ್ರಿಯಾದರೂ ಮನೆಗೆ ಬಾರದ ಕಾರಣ ಪೋಷಕರು ಹುಡುಕಾಟ ನಡೆಸಿದ್ದಾರೆ. ಮಕ್ಕಳು ಪತ್ತೆಯಾಗದ ಕಾರಣ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದರು.

ಬಳ್ಳೂರು ಕೆರೆಯಲ್ಲಿ ಭಾನುವಾರ ಬೆಳಗ್ಗೆ ಬಾಲಕರ ಶವಗಳು ತೇಲುತ್ತಿದ್ದವು. ಇದನ್ನು ಗಮನಿಸಿದ ಸ್ಥಳೀಯರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಭೇಟಿ ನೀಡಿದ ಪೊಲೀಸರು ಈಜು ತಜ್ಞರನ್ನು ಕರೆಸಿ ಶವಗಳನ್ನು ಹೊರಗೆ ತೆಗೆಸಿದರು. ಅತ್ತಿಬೆಲೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಸ್ತೆ ವಿಭಜಕಕ್ಕೆ ಬೈಕ್ ಡಿಕ್ಕಿ ಇಬ್ಬರು ಯುವಕರು ಸಾವು

ಕುದೂರು: ರಾಷ್ಟ್ರೀಯ ಹೆದ್ದಾರಿ 75ರ ರಸ್ತೆಪಾಳ್ಯ ಸಮೀಪದ ಗಾಂಧಿ ಫಾರ್ಮ್ ಬಳಿ ಭಾನುವಾರ ಬೆಳಿಗ್ಗೆ ದ್ವಿಚಕ್ರ ವಾಹನವೊಂದು ರಸ್ತೆ ವಿಭಜಕಕ್ಕೆ ಡಿಕ್ಕಿಯಾಗಿ ಬೆಂಗಳೂರು ನಗರದ ಇಬ್ಬರು ಯುವಕರು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

ಹಾಸನ ಕಡೆಯಿಂದ ನೆಲಮಂಗಲ ಕಡೆಗೆ ವೇಗವಾಗಿ ಬಂದ ದ್ವಿಚಕ್ರ ವಾಹನ ನಿಯಂತ್ರಣ ತಪ್ಪಿ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದಿದೆ. ಬೈಕ್‌ನಲ್ಲಿ ಪ್ರಯಾಣಿಸುತ್ತಿದ್ದ ಬೆಂಗಳೂರು ನಗರದ ನಿವಾಸಿಗಳಾದ ಕೇಶವ ಪ್ರಸಾದ್ (21) ಮಯೂರ್ (20) ಮೃತಪಟ್ಟಿದ್ದಾರೆ.

ಮೃತದೇಹಗಳನ್ನು ನೆಲಮಂಗಲ ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ಸಾಗಿಸಲಾಗಿದೆ. ಕುದೂರು ಪೊಲೀಸರು ಸ್ಥಳ ಪರಿಶೀಲನೆ ನಡೆಸಿದ್ದು, ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು. ಕುದೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಲೆಕ್ಕಾಧಿಕಾರಿಯ ಪತ್ನಿ ಖಾತೆಗೆ ₹6.5 ಕೋಟಿ ವರ್ಗಾವಣೆ



ಬೆಂಗಳೂರು: ಎಂಪ್ಲಾಯೀಸ್ ಪ್ರಾವಿಡೆಂಟ್ ಫಂಡ್ (ಇಪಿಎಫ್) ಕೋ–ಆಪರೇಟಿವ್ ಸೊಸೈಟಿಯಲ್ಲಿ ನಡೆದ ₹70 ಕೋಟಿ ಮೊತ್ತದ ಅಕ್ರಮದಲ್ಲಿ, ₹6.5 ಕೋಟಿ ನಗದನ್ನು ಸೊಸೈಟಿಯ ಲೆಕ್ಕಾಧಿಕಾರಿ ಬಿ.ಎಲ್.ಜಗದೀಶ್ ಅವರ ಪತ್ನಿ ಲಕ್ಷ್ಮೀ ಅವರ ವಿವಿಧ ಬ್ಯಾಂಕ್‌ಗಳ ಖಾತೆಗಳಿಗೆ ವರ್ಗಾವಣೆ ಮಾಡಿರುವುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ.

ಜಗದೀಶ್ ಅವರ ಪತ್ನಿ ಲಕ್ಷ್ಮೀ ಹೆಸರಲ್ಲಿ ಹಲವು ಬ್ಯಾಂಕ್ ಖಾತೆಗಳನ್ನು ತೆರೆಯಲಾಗಿದ್ದು, 2009 ರಿಂದ 2024ರ ಅವಧಿಯಲ್ಲಿ ಒಟ್ಟು ₹6.5 ಕೋಟಿ ಸೊಸೈಟಿ ಖಾತೆಯಿಂದಲೇ ವರ್ಗಾವಣೆಯಾಗಿದೆ. ಈ ಹಣದಲ್ಲಿ ಲಕ್ಷ್ಮೀ ಅವರು ವಿಲಾಸಿ ಜೀವನ ನಡೆಸುತ್ತಿದ್ದರು. ದುಬಾರಿ ಕಾರು ಹಾಗೂ ಬೈಕ್‌ಗಳನ್ನು ಜಪ್ತಿ ಮಾಡಲಾಗಿದೆ. ಅವರ ಖಾತೆಯಲ್ಲಿದ್ದ ₹20 ಲಕ್ಷ ಜಪ್ತಿ ಮಾಡಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ವಂಚನೆಯಲ್ಲಿ ಸೊಸೈಟಿಯ ಸಿಇಒ ಜಿ.ಗೋಪಿನಾಥ್ ಪಾತ್ರ ಇರುವುದು ತನಿಖೆ ವೇಳೆ ಗೊತ್ತಾಗಿದ್ದು, ಲೆಕ್ಕಾಧಿಕಾರಿ ಜತೆ ಶಾಮೀಲಾಗಿ ಸೊಸೈಟಿಗೆ ಸೇರಿದ ₹15 ಕೋಟಿಯನ್ನು ಅಕ್ರಮವಾಗಿ ಬಳಸಿಕೊಂಡಿರುವುದು ಗೊತ್ತಾಗಿದೆ.

ಠೇವಣಿದಾರರಿಂದ ಲಕ್ಷಾಂತರ ರೂಪಾಯಿ ನಗದು ಪಡೆದಿರುವ ಗೋಪಿನಾಥ್ ಸ್ವಂತಕ್ಕೆ ಬಳಸಿಕೊಂಡಿದ್ದಾರೆ. ಗೋಪಿನಾಥ್ ಮತ್ತು ಲಕ್ಷ್ಮೀ ಅವರನ್ನು ನವೆಂಬರ್ 12ರವರೆಗೆ ಕಸ್ಟಡಿಗೆ ಪಡೆಯಲಾಗಿದೆ. ಇತರೆ ಆರೋಪಿಗಳಾದ ಜಗದೀಶ್ ಸೇರಿದಂತೆ ಹಲವರು ತಲೆಮರೆಸಿಕೊಂಡಿದ್ದು, ಬಂಧನಕ್ಕೆ ಶೋಧ ಮುಂದುವರಿದಿದೆ ಎಂದು ಮೂಲಗಳು ತಿಳಿಸಿವೆ.

ಜೋಡಿ ಕೊಲೆ ಆರೋಪಿ ಕಾಲಿಗೆ ಗುಂಡು



ರವಿ

ಬೆಂಗಳೂರು: ಸ್ಥಳ ಮಹಜರಿಗೆ ಕರೆದೊಯ್ದಿದ್ದ ವೇಳೆ ಪೊಲೀಸರ ಮೇಲೆ ದಾಳಿ ನಡೆಸಿ ಪರಾರಿಯಾಗಲು ಯತ್ನಿಸಿದ ಆರೋಪಿ ಕಾಲಿಗೆ ಗುಂಡು ಹಾರಿಸಿ ಬಂಧಿಸಿರುವ ಘಟನೆ ಆನೇಕಲ್ ತಾಲ್ಲೂಕಿನ ಬೊಮ್ಮಸಂದ್ರ ಸ್ಮಶಾನದ ಬಳಿ ಶನಿವಾರ ರಾತ್ರಿ ನಡೆದಿದೆ. ಅಪಹರಣ ಹಾಗೂ ಜೋಡಿ ಕೊಲೆ ಪ್ರಕರಣದ ಆರೋಪಿ ಆಂಧ್ರಪ್ರದೇಶದ ರವಿ ಪ್ರಸಾದ್ ರೆಡ್ಡಿ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಿಸಲಾಗಿದೆ.

ಉದ್ಯಮಿ ಬಾಲಪ್ಪ ರೆಡ್ಡಿ, ಮಾದೇಶ್ ಎಂಬುವರ ಕೊಲೆ ಪ್ರಕರಣ ಸಂಬಂಧ ರವಿ ಪ್ರಸಾದ್ ರೆಡ್ಡಿಯನ್ನು ಹೆಬ್ಬಗೋಡಿ ಪೊಲೀಸರು ಬಂಧಿಸಿದ್ದರು. ಪ್ರಕರಣ ಸಂಬಂಧ ಸ್ಥಳ ಮಹಜರಿಗೆ ಪೊಲೀಸರು ಕರೆದೊಯ್ದಿದ್ದ ವೇಳೆ ಆರೋಪಿ, ಹೆಡ್ ಕಾನ್‌ಸ್ಟೆಬಲ್ ಅಶೋಕ್ ಅವರ ಮೇಲೆ ಏಕಾಏಕಿ ದಾಳಿ ನಡೆಸಿದ್ದಾನೆ. ಈ ವೇಳೆ ಗಾಳಿಯಲ್ಲಿ ಎರಡು ಸುತ್ತು ಗುಂಡು ಹಾರಿಸಿ, ಶರಣಾಗತಿಗೆ ಎಚ್ಚರಿಕೆ ನೀಡಿದರೂ ಕೇಳದಿದ್ದಾಗ ಇನ್‌ಸ್ಪೆಕ್ಟರ್ ಸೋಮಶೇಖರ್, ಆರೋಪಿಯ ಕಾಲಿಗೆ ಗುಂಡು ಹೊಡೆದು ಬಂಧಿಸಿದ್ದಾರೆ.

ಸ್ಥಳಕ್ಕೆ ಎಲೆಕ್ಟ್ರಾನಿಕ್ ಸಿಟಿ ಡಿಸಿಪಿ ನಾರಾಯಣ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಹೆಬ್ಬಗೋಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ನವೆಂಬರ್ 6ರಂದು ಆರೋಪಿಯು ಹೆಬ್ಬಗೋಡಿ ಉದ್ಯಮಿ ಬಾಲಪ್ಪ ರೆಡ್ಡಿ ಅವರನ್ನು ಅಪಹರಿಸಿ ಹಣಕ್ಕಾಗಿ ಕುತ್ತಿಗೆ ಸೀಳಿ ಕೊಂದಿದ್ದ. ನವೆಂಬರ್ 4ರಂದು ಕಿತ್ತಗಾನಹಳ್ಳಿಯ ಮನೆಯಲ್ಲಿ ಮಾದೇಶ್ ಕೊಲೆ ನಡೆದಿತ್ತು.

'ತಳ ವರ್ಗದವರ ಸಾಂಸ್ಕೃತಿಕ ನಾಯಕರಾಗಿದ್ದ ರಾಜ್'

ಪ್ರಜಾವಾಣಿ ವಾರ್ತೆ



ಡಾ.ರಾಜ್‌ಕುಮಾರ್

> ರಾಜ್‌ಕುಮಾರ್ ಅವರು ಸಾವಿರಾರು ಹಾಡುಗಳನ್ನು ಹಾಡಿದ್ದಾರೆ. ಅದರ ಸಂಭಾವನೆಯನ್ನು ಅವರು ಸ್ವಂತಕ್ಕೆ ಬಳಸದೆ ಅನಾಥಾಶ್ರಮಕ್ಕೆ ನೀಡುತ್ತಿದ್ದ ಸಂಗತಿ ಬಹುತೇಕರಿಗೆ ತಿಳಿದಿಲ್ಲ
> **ಎಲ್.ಹನುಮಂತಯ್ಯ,** ರಾಜ್ಯಸಭೆಯ ಮಾಜಿ ಸದಸ್ಯ, ಕವಿ

ಯಲಹಂಕ: ಜನರು ಹಾಗೂ ಸರ್ಕಾರವನ್ನು ಪ್ರಭಾವಿಸುವಷ್ಟು ಎತ್ತರಕ್ಕೆ ಬೆಳೆದ ನಟ ಡಾ.ರಾಜ್‌ಕುಮಾರ್ ಅವರು ತಳವರ್ಗದ, ಕಾರ್ಮಿಕ ವರ್ಗದ ಸಾಂಸ್ಕೃತಿಕ ನಾಯಕರಾಗಿದ್ದರು ಎಂದು ನಾಟಕಕಾರ, ಕವಿ ಕೆ.ವೈ. ನಾರಾಯಣಸ್ವಾಮಿ ಹೇಳಿದರು.

ಹೆಸರಘಟ್ಟ ಸಾಹಿತ್ಯ ಸಹೃದಯ ವೇದಿಕೆ ಹಾಗೂ ಕೌದಿ ಪ್ರಕಾಶನದ ವತಿಯಿಂದ ಭಾನುವಾರ ಇಲ್ಲಿ ನಡೆದ ಪ್ರಗತಿಪರ ಚಿಂತಕ ಮಂಜುನಾಥ ಎಂ.ಅದ್ದೆ ಅವರ ಸಂಶೋಧನಾ ಕೃತಿ 'ಬಡವರ ರಾಜಕುಮಾರ' ಜನಾರ್ಪಣೆ ಸಮಾರಂಭದಲ್ಲಿ ಅವರು ಮಾತನಾಡಿದರು.

20ನೇ ಶತಮಾನದಲ್ಲಿ ಕರ್ನಾಟಕವನ್ನು ಭಾವನಾತ್ಮಕವಾಗಿ ಮತ್ತು ಅಖಂಡವಾಗಿ ಪ್ರಭಾವಿಸಿದ ವ್ಯಕ್ತಿತ್ವವನ್ನು ರಾಜ್‌ಕುಮಾರ್ ಹೊಂದಿದ್ದರು. ತಮ್ಮ ಚಿತ್ರಗಳ ಮೂಲಕ ಬಡವರಲ್ಲಿ ಆತ್ಮವಿಶ್ವಾಸ, ಸ್ವಾಭಿಮಾನ ಜಾಗೃತಗೊಳಿಸಿದ್ದರು. ಯಜಮಾನಿಕೆ, ಸಾಮಾಜಿಕ ಅನ್ಯಾಯದ ವಿರುದ್ಧ ಸೆಟೆದು ನಿಲ್ಲುವಂತೆ ಮಾಡಿರುವ ಅವರ ಚಿತ್ರಗಳನ್ನು ಮನರಂಜನೆಯಾಗಿಯಷ್ಟೇ ನೋಡದೆ ಪಠ್ಯವಾಗಿ ಅಧ್ಯಯನ ಮಾಡಿ ಬರೆದಿರುವ ಪುಸ್ತಕ 'ಬಡವರ ರಾಜಕುಮಾರ' ಎಂದರು.

ಲೇಖಕಿ ಡಾ.ವಸುಂಧರಾ ಭೂಪತಿ ಮಾತನಾಡಿ, 'ಕನ್ನಡ ರಂಗಭೂಮಿ, ಸಿನಿಮಾ ಎರಡನ್ನೂ ಸಂಗಮಿಸಿದ ಮಹಾನ್ ನಟ ರಾಜ್‌ಕುಮಾರ್. ಸಿನಿಮಾ ಜಗತ್ತಿನಲ್ಲಿ ನವರಸಗಳನ್ನು ತಮ್ಮ ಅಭಿನಯದ ಮೂಲಕ ಸಮರ್ಥವಾಗಿ ತೋರಿಸಿಕೊಟ್ಟ ಅವರ ಚಿತ್ರಗಳು ಕನ್ನಡಿಗರ ಮನಸ್ಸಿನಲ್ಲಿ ಇಂದಿಗೂ ಅಚ್ಚಳಿಯದೆ ಉಳಿದಿವೆ' ಎಂದರು.

ಪುಸ್ತಕ ಜನಾರ್ಪಣೆ ಮಾಡಿದ ರಾಜ್ಯಸಭೆಯ ಮಾಜಿ ಸದಸ್ಯ, ಕವಿ ಎಲ್. ಹನುಮಂತಯ್ಯ, 'ತಾವು ನಟಿಸುತ್ತಿದ್ದ ಸಿನಿಮಾಗಳಲ್ಲಿ ಸಾಮಾಜಿಕ ಮೌಲ್ಯ, ಆದರ್ಶಗಳು ಇರಬೇಕು ಎಂದು ಸದಾ ಭಾವಿಸುತ್ತಿದ್ದರು' ಎಂದು ಸ್ಮರಿಸಿದರು.

ಸಮಾರಂಭದಲ್ಲಿ ಮಂಜುನಾಥ ಎಂ.ಅದ್ದೆ, ಕಾಂಗ್ರೆಸ್ ಮುಖಂಡ ನಟರಾಜಗೌಡ, ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ವಾಜೀದ್, ಕೌದಿ ಪ್ರಕಾಶನದ ಕೆ.ಎನ್.ಮಮತಾ ಇದ್ದರು.

'ಒಕ್ಕಲಿಗ ಸಮಾಜದ ಬಗ್ಗೆ ಹಗುರವಾಗಿ ಮಾತನಾಡಿದರೆ ಪ್ರಶ್ನಿಸಬೇಕು'

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿ ನಗರ: 'ಒಕ್ಕಲಿಗ ಸಮಾಜದ ಕಸ ಸಂಗ್ರಹಿಸುವ ಗುತ್ತಿಗೆದಾರ ದುಡ್ಡು ಕೊಡಲಿಲ್ಲ ಎಂದು ಅವರ ಹೆಂಡತಿ-ಮಕ್ಕಳ ಬಗ್ಗೆ ಹೀನಾಯವಾಗಿ ಶಾಸಕ ಮುನಿರತ್ನ ಮಾತನಾಡಿದ್ದರು. ನಮ್ಮ ಸಮಾಜದ ಬಗ್ಗೆ ಹಗುರವಾಗಿ ಮಾತನಾಡಿದಾಗ ಸಮಾಜದ ಬಂಧುಗಳು ಪ್ರಶ್ನಿಸಬೇಕು' ಎಂದು ಬೆಂಗಳೂರು ಪಶ್ಚಿಮ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಹನುಮಂತರಾಯಪ್ಪ ತಿಳಿಸಿದರು.

ಜ್ಞಾನ ಜ್ಯೋತಿನಗರದಲ್ಲಿ ನೇಗಿಲ ಯೋಗಿ ಸೇವಾ ಟ್ರಸ್ಟ್‌ನ ನೂತನ ಕಟ್ಟಡವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ನಮ್ಮ ಸಮಾಜದ ಹೆಣ್ಣು ಮಗಳು ವಿಧಾನಸಭಾ ಚುನಾವಣೆ ವೇಳೆ ಆರ್.ಆರ್. ನಗರ ವಿಧಾನಸಭಾ ಕ್ಷೇತ್ರದ ಚುನಾವಣಾ ಅಧಿಕಾರಿಯಾಗಿದ್ದಾಗ ಅವರಿಗೆ ಬೆದರಿಕೆ ಹಾಕಿ ಗೂಂಡಾ ಪ್ರವೃತ್ತಿ ಪ್ರದರ್ಶಿಸಿದ್ದರಿಂದ ಮುನಿರತ್ನ ಅವರನ್ನು ಪೊಲೀಸರು ಬಂಧಿಸಿದ್ದರು' ಎಂದು ಹೇಳಿದರು.

'ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಎಚ್. ಕುಸುಮಾ ಮತ್ತು ಒಕ್ಕಲಿಗ ಹೆಣ್ಣು ಮಕ್ಕಳ ಬಗ್ಗೆ ಕೆಟ್ಟದ್ದಾಗಿ ಮಾತನಾಡಿರುವ ವಿಚಾರವನ್ನು ನಿರ್ಮಲಾನಂದ ಸ್ವಾಮೀಜಿಯವರ ಗಮನಕ್ಕೂ ತಂದಿದ್ದೆ. ಅವರು ಯಾಕೆ ಮೌನ ವಹಿಸಿದ್ದಾರೆ ಎಂಬುದು ಗೊತ್ತಿಲ್ಲ' ಎಂದರು.

'ನನ್ನ ಬಗ್ಗೆಯೂ ಅಪಪ್ರಚಾರ ಮಾಡುತ್ತಿದ್ದಾನೆ. ಈತನ ವಿಚಾರ ರಾಜ್ಯಕ್ಕೆ ಗೊತ್ತಿದೆ' ಎಂದು ಏಕವಚನದಲ್ಲಿ ಹೇಳಿದರು.

ಆದಿಚುಂಚನಗಿರಿಯ ವಿಜಯನಗರ ಶಾಖಾ ಮಠದ ಸೌಮ್ಯನಾಥ ಸ್ವಾಮೀಜಿ ಮಾತನಾಡಿ, 'ಮನುಷ್ಯ ತನ್ನ ಸ್ವಾರ್ಥಕ್ಕೋಸ್ಕರ ಮತ್ತೊಬ್ಬರಿಗೆ ಕೆಡುಕು, ಮೋಸ ಮಾಡಬಾರದು. ತನಗೆ ಸಿಕ್ಕಿರುವ ಅಧಿಕಾರ, ಸಂಪತ್ತು ಸಮಾಜಕ್ಕೆ ನೀಡಬೇಕು. ಮತ್ತೊಬ್ಬರಿಗೆ ಅನ್ಯಾಯ, ದ್ರೋಹ ಬಗೆಯಬಾರದು. ದ್ರೋಹ ಬಗೆಯುವವರ ಬಗ್ಗೆ ಸಮಾಜ ಜಾಗೃತವಾಗಿರಬೇಕು' ಎಂದು ಸಲಹೆ ನೀಡಿದರು.

ಜವಳಿ ಅಭಿವೃದ್ಧಿ ಆಯುಕ್ತೆ ಕೆ.ಜ್ಯೋತಿ, ಸ್ಪಟಿಕಪುರಿ ಸಂಸ್ಥಾನದ ನಂಜಾವಧೂತ ಸ್ವಾಮೀಜಿ, ವಿಶ್ವ ಒಕ್ಕಲಿಗ ಮಠದ ನಿಶ್ಚಲಾನಂದ ಸ್ವಾಮೀಜಿ, ಶಾಸಕ ಮುನಿರತ್ನ, ಸಮಾಜ ಸೇವಕ ಎಂ.ಸಿ. ಶಿವಕುಮಾರ್, ಫಸ್ಟ್ ಸರ್ಕಲ್ ಉದ್ಯಮಿ ಒಕ್ಕಲಿಗ ವೇದಿಕೆಯ ಡಿ.ಮುನಿರಾಜು, ಜಮೀನು ದಾನಿ ಮುನಿರತ್ನಪ್ಪ, ಅಧ್ಯಕ್ಷ ಜಯರಾಮಯ್ಯ ಮಾತನಾಡಿದರು.



ನೇಗಿಲಯೋಗಿ ಸೇವಾ ಟ್ರಸ್ಟ್ ನೂತನ ಕಟ್ಟಡವನ್ನು ಹನುಮಂತರಾಯಪ್ಪ ಉದ್ಘಾಟಿಸಿದರು

'ರಾಷ್ಟ್ರೀಯ ಮಾನಸಿಕ ಆರೋಗ್ಯ ಉತ್ಸವ- ಮನೋತ್ಸವ' ಸಂಪನ್ನ

'ಸಂಶೋಧನೆಗಳ ಫಲ ತಲುಪಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದಂತೆ ನಡೆಯುತ್ತಿರುವ ಸಂಶೋಧನೆಗಳ ಪ್ರಯೋಜನವನ್ನು ಜನಸಾಮಾನ್ಯರಿಗೆ ತಲುಪಿಸುವ ನಿಟ್ಟಿನಲ್ಲಿ ಪ್ರಯತ್ನಗಳು ಹೆಚ್ಚಬೇಕು' ಎಂದು ಮಾನಸಿಕ ಆರೋಗ್ಯ ತಜ್ಞರು ಸಲಹೆ ನೀಡಿದರು.

ನಗರದಲ್ಲಿ ರೋಹಿಣಿ ನಿಲೇಕಣಿ ಫಿಲಾಂತ್ರಪಿಸ್ ಫೌಂಡೇಷನ್, ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ (ನಿಮ್ಹಾನ್ಸ್) ಮತ್ತು ರಾಷ್ಟ್ರೀಯ ಜೈವಿಕ ವಿಜ್ಞಾನಗಳ ಸಂಸ್ಥೆ (ಎನ್‌ಸಿಬಿಎಸ್) ಜಂಟಿಯಾಗಿ ಆಯೋಜಿಸಿದ್ದ 'ರಾಷ್ಟ್ರೀಯ ಮಾನಸಿಕ ಆರೋಗ್ಯ ಉತ್ಸವ- ಮನೋತ್ಸವ'ದ ಎರಡನೇ ದಿನವಾದ ಭಾನುವಾರ ಚರ್ಚೆಗಳು ನಡೆದವು.

ಮಾನಸಿಕ ಆರೋಗ್ಯ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಶುಭ್ರಾ ಪ್ರಿಯದರ್ಶಿನಿ, ಡಾ. ಅಲೋಕ್ ಸರಿನ್, ಅದಿತಿ ತಂಡೊನ್ ಮತ್ತು ಕಾಜ್ ದೇ ಜೊಂಗ್ ಸಂವಾದದಲ್ಲಿ ಭಾಗಿಯಾಗಿ ಹಲವು ವಿಚಾರಗಳನ್ನು ಹಂಚಿಕೊಂಡರು.

'ಬದಲಾದ ಜೀವನಶೈಲಿಯಿಂದಾಗಿ ಮಾನಸಿಕ ಒತ್ತಡ ಹೆಚ್ಚಾಗುತ್ತಿದ್ದು, ಆರೋಗ್ಯದ ಮೇಲೂ ಪರಿಣಾಮ ಬೀರುತ್ತಿರುವ ಅಂಶಗಳು ಸಂಶೋಧನೆಯಿಂದ ಹೊರಬರುತ್ತಿವೆ. ಇವುಗಳಿಗೆ ತಜ್ಞರು ತಿಳಿಸುವ ಪರಿಹಾರೋಪಾಯಗಳು ಹೆಚ್ಚು ಜನರಿಗೆ ತಲುಪಬೇಕಿದೆ. ಸಂಶೋಧನೆಯ ಭಾಗವಾಗಿ ಉತ್ಸವದಲ್ಲಿ ವ್ಯಕ್ತವಾದ ಅಭಿಪ್ರಾಯ, ಮಾದರಿಗಳು ಜನರ ಉಪಯೋಗಕ್ಕೆ ಬರುವಂತೆ ಆಗಲಿ' ಎಂದು ಅವರು ಹೇಳಿದರು.

ಧ್ವನಿ ಬಳಕೆ ಬಗೆಗಿನ ಕಾರ್ಯಾಗಾರದಲ್ಲಿ ನರವಿಜ್ಞಾನಿ ದಲಾಲ್ ಅಬು ಅಮ್ನೇಹ್ ಸಂವಾದ ನಡೆಸಿದರು. ಧ್ವನಿ ಏರಿಳಿತಗಳ ಕುರಿತು ಹಲವರು ತಮ್ಮ ಅನುಮಾನಗಳನ್ನು ಪರಿಹರಿಸಿಕೊಂಡರು.

ದೇಶ, ವಿದೇಶದಿಂದ ಬಂದಿದ್ದ 130ಕ್ಕೂ ಹೆಚ್ಚು ತಜ್ಞರು, 26 ಗೋಷ್ಠಿ ಮತ್ತು ಸಂವಾದಗಳಲ್ಲಿ ಭಾಗಿಯಾದರು. 23 ಕಾರ್ಯಾಗಾರಗಳು ನಡೆದವು. 32 ಮಳಿಗೆಗಳಲ್ಲಿ ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದ ಚಟುವಟಿಕೆಗಳ ಪ್ರದರ್ಶನ ಗಮನ ಸೆಳೆಯಿತು.

ಪೋಷಕರು, ವಿದ್ಯಾರ್ಥಿಗಳು, ಸಂಶೋಧನಾರ್ಥಿಗಳು, ವೈದ್ಯರು, ಕಲಾವಿದರು, ಸ್ವಯಂ ಸೇವಾ ಸಂಘಟನೆಗಳ ಪ್ರಮುಖರು ಎರಡು ದಿನದ ಮನೋತ್ಸವದಲ್ಲಿ ಭಾಗಿಯಾಗಿ, ಅರ್ಥಪೂರ್ಣ ಚರ್ಚೆ, ಸಂವಾದ, ಚಟುವಟಿಕೆಗೆ ಒತ್ತು ನೀಡಿದರು.

'ಎರಡು ದಿನದಲ್ಲಿ ಸುಮಾರು 6 ಸಾವಿರ ಮಂದಿ ಮನೋತ್ಸವಕ್ಕೆ ಭೇಟಿ ನೀಡಿದ್ದರು' ಎಂದು ಸಂಘಟಕರು ತಿಳಿಸಿದರು.



ಧ್ವನಿ ಬಳಕೆ ಬಗೆಗಿನ ಕಾರ್ಯಾಗಾರವನ್ನು ನರವಿಜ್ಞಾನಿ ದಲಾಲ್ ಅಬು ಅಮ್ನೇಹ್ ನಡೆಸಿಕೊಟ್ಟರು – ಪ್ರಜಾವಾಣಿ ಚಿತ್ರ

'ಪದ್ಮಲತಾ ಪ್ರಕರಣ ಎಸ್‌ಐಟಿಗೆ ಸೇರಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಧರ್ಮಸ್ಥಳದ ಸುತ್ತಮುತ್ತ ನಡೆದಿರುವ ಅಸಹಜ ಸಾವಿನ ಪ್ರಕರಣಗಳ ಕುರಿತು ವಿಶೇಷ ತನಿಖಾ ತಂಡ ನಡೆಸುತ್ತಿರುವ ತನಿಖೆಗೆ ಪದ್ಮಲತಾ ಅಪಹರಣ, ಸಾವಿನ ಪ್ರಕರಣವನ್ನು ಸೇರಿಸಬೇಕು' ಎಂದು ಸಿಪಿಎಂ ರಾಷ್ಟ್ರೀಯ ಕಾರ್ಯದರ್ಶಿ ಎಂ.ಎ.ಬೇಬಿ ಆಗ್ರಹಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವ ಅವರು, 'ಧರ್ಮಸ್ಥಳ ಸುತ್ತಮುತ್ತ ನಡೆದಿರುವ ಹೆಣ್ಣುಮಕ್ಕಳ ಅತ್ಯಾಚಾರ ಹಾಗೂ ಕೊಲೆ ಪ್ರಕರಣಗಳ ತನಿಖೆಗೆ ವಿಶೇಷ ತನಿಖಾ ತಂಡವನ್ನು ರಾಜ್ಯ ಸರ್ಕಾರ ರಚಿಸಿರುವುದು ಸ್ವಾಗತಾರ್ಹ. ಆದರೆ 1986ರಲ್ಲಿ ಸಿಪಿಎಂ ಶಾಖಾ ಕಾರ್ಯದರ್ಶಿ ದೇವಾನಂದ ಅವರ ಮಗಳು ಪದ್ಮಲತಾ ಅಪಹರಣಕ್ಕೆ ಒಳಗಾಗಿ, ನಂತರ ಕೊಲೆಯಾಗಿದ್ದಳು. ದೇವಾನಂದ್ ಅವರು ಭೂ ಮಾಫಿಯಾ ವಿರುದ್ಧ ಹೋರಾಟ ಮಾಡಿದ್ದಕ್ಕೆ ಮಗಳನ್ನು ಕೊಲೆ ಮಾಡಲಾಗಿತ್ತು. ಆಗಿನ ಗೃಹ ಸಚಿವ ಬಿ.ರಾಚಯ್ಯ ತನಿಖೆಗೆ ಆದೇಶಿಸಿದರೂ ಒತ್ತಡದಿಂದಾಗಿ ಆರೋಪಿಗಳನ್ನು ಪತ್ತೆ ಮಾಡಲು ಆಗಲಿಲ್ಲ' ಎಂದು ತಿಳಿಸಿದ್ದಾರೆ.

INFOSYS LIMITED
No. 44, Electronics City, Hosur Road, Bengaluru, 560100 Karnataka India.
CIN: L85110KA1981PLC013115
Website: www.infosys.com
Email: investors@infosys.com
Tel: +91 80 28520261 / (Extn: 67775)
Fax: +91 80 28520362
Contact: A.G.S. Manikantha, Company Secretary
Tel: +91 80 41167775
Email: sharebuyback@infosys.com

PUBLIC ANNOUNCEMENT

FOR THE ATTENTION OF EQUITY SHAREHOLDERS/BENEFICIAL OWNERS OF EQUITY SHARES OF INFOSYS LIMITED (THE "COMPANY") FOR THE BUYBACK OF EQUITY SHARES ON A PROPORTIONATE BASIS THROUGH THE TENDER OFFER ROUTE USING THE STOCK EXCHANGE MECHANISM UNDER THE SECURITIES AND EXCHANGE BOARD OF INDIA (BUY-BACK OF SECURITIES) REGULATIONS, 2018, AS AMENDED.

This public announcement (the "**Public Announcement**") is being made pursuant to the provisions of Regulation 7(i) of the Securities and Exchange Board of India (Buy-Back of Securities) Regulations, 2018, as amended (including any statutory modification(s), amendment(s) or re-enactments from time to time) ("**Buyback Regulations**") and contains the requisite disclosures as specified in Schedule II of the Buyback Regulations read with Schedule I of the Buyback Regulations.

OFFER TO BUYBACK UP TO 10,00,00,000 (TEN CRORE) FULLY PAID-UP EQUITY SHARES OF FACE VALUE OF ₹ 5/- (RUPEES FIVE ONLY) EACH OF INFOSYS LIMITED, REPRESENTING 2.41% OF THE TOTAL NUMBER OF EQUITY SHARES IN THE PAID-UP EQUITY SHARE CAPITAL OF THE COMPANY (ON A STANDALONE BASIS) FROM ALL THE ELIGIBLE SHAREHOLDERS (AS DEFINED BELOW) OF EQUITY SHARES OF THE COMPANY AS ON NOVEMBER 14, 2025 (RECORD DATE) AS PER THE RECORDS MADE AVAILABLE TO THE COMPANY BY DEPOSITORIES (AS DEFINED BELOW) AS ON THE RECORD DATE, ON A PROPORTIONATE BASIS (SUBJECT TO SMALL SHAREHOLDER RESERVATION), THROUGH THE "TENDER OFFER" ROUTE AT A PRICE OF ₹ 1,800/- (RUPEES ONE THOUSAND EIGHT HUNDRED ONLY) PER EQUITY SHARE PAYABLE IN CASH FOR AN AGGREGATE CONSIDERATION OF UP TO ₹ 18,000 CRORE (RUPEES EIGHTEEN THOUSAND CRORE ONLY) ("**BUYBACK**").

Certain figures contained in this Public Announcement, including financial information, have been subject to rounding-off adjustments. All decimals have been rounded off to 2 (two) decimal points. In certain instances, (i) the sum or percentage change of such numbers may not conform exactly to the total figure given; and (ii) the sum of the numbers in a column or row in certain tables may not conform exactly to the total figure given for that column or row. Further, certain numerical information in this Public Announcement has been presented in 'crore'. One crore represents 10 million, i.e. 10,000,000. All references to "Rupee(s)", "₹" or "Rs." are to Indian Rupees, the official currency of the Republic of India.

1. DETAILS OF THE BUYBACK OFFER AND BUYBACK OFFER PRICE

1.1 The Board of Directors of the Company (the "**Board**"), at its meeting held on September 11, 2025, has, subject to the approval of the members of the Company, by way of a special resolution through postal ballot ("**Special Resolution**") and subject to such other approvals, permissions and sanctions, as may be necessary, including exemptive relief from the US Securities and Exchange Commission ("**SEC**") on certain aspects of U.S. federal securities laws applicable to the Buyback, approved the proposal to Buyback its own fully paid-up equity shares of face value of ₹ 5/- (Rupees Five) each ("**Equity Shares**") from the shareholders of the Company, as on the record date, to be determined by the Board/ Buyback Committee, ("**Record Date**"), on a proportionate basis, at a price of ₹ 1,800/- (Rupees One Thousand Eight Hundred only) per Equity Share ("**Buyback Price**") and for an amount of ₹ 18,000 crore (Rupees Eighteen Thousand Crore only) ("**Buyback Offer Size**"), representing 24.31% and 21.68% of the aggregate of the total paid-up share capital and free reserves of the Company based on the latest audited interim condensed financial statements of the Company as at June 30, 2025 on a standalone basis and consolidated basis, respectively, through the tender offer route, in accordance with the provisions of the Securities and Exchange Board of India (Buy-Back of Securities) Regulations, 2018 (as amended) ("**Buyback Regulations**") and the Companies Act, 2013 and the rules made thereunder ("**Buyback**").

1.2 Since the Buyback is more than 10% of the total paid-up equity capital and free reserves of the Company, in terms of Section 68(2)(b) of the Companies Act, 2013, as may be amended from time to time, along with all rules and regulations issued thereunder ("**Act**") and Regulation 5(i)(b) of the Buyback Regulations, the Board had sought approval of the shareholders of the Company for Buyback, by a special resolution, through notice of postal ballot dated September 25, 2025 ("**Postal Ballot Notice**"), the results of which were announced on November 6, 2025. The shareholders of the Company have approved the Buyback through the Special Resolution. The Buyback is being undertaken in accordance with Article 14 of the Articles of Association of the Company, and in terms of Chapter III of the Buyback Regulations through tender offer route and in accordance with other applicable provisions of the Buyback Regulations, the SEBI Circulars (*as defined below*), Securities and Exchange Board of India (Listing Obligations and Disclosure Requirements) Regulations, 2015, as amended ("**LODR Regulations**") and Sections 68, 69, 70 and other applicable provisions, if any, of the Act, and the relevant rules framed thereunder, including the Companies (Share Capital and Debenture) Rules, 2014 ("**Share Capital Rules**") and Companies (Management and Administration) Rules, 2014 ("**Management Rules**"), to the extent applicable. The Company proposed the buyback of its fully paid-up Equity Shares, not exceeding 10,00,00,000 (Ten crore) Equity Shares (representing 2.41% of the total number of Equity Shares in the existing total paid-up equity share capital of the Company on a standalone basis) at a price of ₹ 1,800/- (Rupees One Thousand Eight Hundred only) per Equity Share, payable in cash, for an aggregate amount of up to ₹ 18,000 Crore (Rupees Eighteen Thousand Crore only), representing 24.31% and 21.68% of the aggregate of fully paid-up Equity Share capital and free reserves as per the latest audited interim condensed financial statements of the Company as at June 30, 2025 on a standalone basis and consolidated basis, respectively, which is within the prescribed limit of 25% under the Act and Regulation 4(i) of the Buyback Regulations.

1.3 In accordance with Regulation 5(via) of the Buyback Regulations, the Board/Buyback Committee may increase the Buyback Price and decrease the number of Equity Shares proposed to be bought back provided that there is no change in the Buyback Offer Size, till one working day prior to the Record Date fixed for the purpose of Buyback.

1.4 The Buyback Offer Size does not include any expenses or transaction costs incurred or to be incurred for the Buyback, such as, brokerage, filing fees, advisory fees, intermediaries' fees, public announcement publication expenses, printing and dispatch expenses, applicable taxes such as securities transaction tax, goods and services tax, stamp duty etc. and other incidental and related expenses ("**Transaction Costs**").

1.5. Given the Company's class of securities registered under Section 12 of the U.S. Securities Exchange Act of 1934, as amended, and the shareholding of U.S. residents by way of ADSs and Equity Shares, it was necessary for the Company to seek and obtain exemptive relief from the SEC on certain aspects of the tender offer procedures, due to conflicting regulatory requirements between Indian and U.S. laws for tender offer buybacks, and the same has been obtained post the Board's approval for the Buyback

1.6. The Equity Shares are currently traded under the trading code(s) 500209 at BSE Limited ("**BSE**") and INFY at National Stock Exchange of India Limited ("**NSE**") (collectively referred to as "**Indian Stock Exchanges**"). The ISIN of the Equity Shares is INE009A01021. The American Depositary Shares ("**ADSs**") of the Company are listed on the New York Stock Exchange.

1.7. The Buyback shall be implemented using the "Mechanism for acquisition of shares through Stock Exchange pursuant to Tender-Offers under Takeovers, Buyback and Delisting" notified by Securities and Exchange Board of India ("**SEBI**") vide circular CIR/CFD/POLICYCELL/1/2015 dated April 13, 2015 read with SEBI circular CFD/DCR2/P/2016/131 dated December 9, 2016, SEBI circular SEBI/HO/CFD/DCR-III/CIR/P/615 dated August 13, 2021 and SEBI circular SEBI/HO/CFD/PoD-2/P/CIR/2023/35 dated March 8, 2023, and such other circulars or notifications, as may be applicable, including any amendments thereof as amended ("**SEBI Circulars**")

ಝುಡ್‌ಎಸ್ ಅಸೋಸಿಯೇಟ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ನೀಡುವ ಅವಕಾಶ ಇದಾಗಿದೆ.
ಅರ್ಹತೆ: ಅರ್ಜಿ ಸಲ್ಲಿಸುವವರು ಪುಣೆ, ನವದೆಹಲಿ ಅಥವಾ ಬೆಂಗಳೂರಿನಲ್ಲಿರುವ ಸಂಸ್ಥೆಗಳಲ್ಲಿ ಸಾಮಾನ್ಯ ಅಥವಾ ವೃತ್ತಿಪರ ಕೋರ್ಸ್‌ಗಳಲ್ಲಿ ಪದವಿ ಕಲಿಯುತ್ತಿರಬೇಕು.
ಸಾಮಾನ್ಯ ವರ್ಗಕ್ಕೆ ಸೇರುವ ಕೋರ್ಸ್‌ಗಳು: ಬಿಎಸ್ಸಿ, ಬಿಎಸ್ಸಿ (ಸ್ಟ್ಯಾಟಿಸ್ಟಿಕ್ಸ್), ಬಿಸಿಎ, ಬಿಬಿಎ/ಬಿಬಿಎಂ/ಬಿಬಿಎಸ್, ಬಿಇಡಿ, ಬಿಫಾರ್ಮ್, ಬಿಎಂಸಿ, ಬಿಎಸ್‌ಡಬ್ಲ್ಯು, ಬಿಎಸ್ಸಿ (ಐಟಿ), ಬಿಎ, ಬಿಕಾಂ.
ವೃತ್ತಿಪರ ಕೋರ್ಸ್‌ಗಳು: ಬಿಟೆಕ್/ಬಿಇ., ಬಿಆರ್ಕ್, ಬಿಎ ಎಲ್‌ಎಲ್‌ಬಿ, ಎಲ್‌ಎಲ್‌ಬಿ, ಎಂಬಿಬಿಎಸ್, ಬಿಡಿಎಸ್, ಬಿಎಸ್ಸಿ ನರ್ಸಿಂಗ್, ಬಿಟೆಕ್ + ಎಂಟೆಕ್ ಇಂಟಿಗ್ರೇಟೆಡ್ (5 ವರ್ಷ) ಅರ್ಜಿದಾರರು 12ನೇ ತರಗತಿಯ ಬೋರ್ಡ್ ಪರೀಕ್ಷೆಯಲ್ಲಿ ಕನಿಷ್ಠ ಶೇ 60ರಷ್ಟು ಅಂಕಗಳನ್ನು ಗಳಿಸಿರಬೇಕು.ಕುಟುಂಬದ ವಾರ್ಷಿಕ ಆದಾಯ ₹ 8 ಲಕ್ಷಕ್ಕಿಂತ ಕಡಿಮೆ ಇರಬೇಕು.
ಆರ್ಥಿಕ ನೆರವು: ವರ್ಷಕ್ಕೆ ₹ 50,000ದವರೆಗೆ
ಅರ್ಜಿ ಸಲ್ಲಿಸಲು ಕೊನೇ ದಿನ: 28-11-2025
ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್
ಹೆಚ್ಚಿನ ಮಾಹಿತಿಗೆ: Short Url: www.b4s.in/praja/ZSPU9

ಉದ್ಯೋಗ ಕಿರಣ

ವರ್ಕ್ ಫ್ರಂ ಹೋಮ್ ಇಂಟರ್ನ್‌ಷಿಪ್

- **ಗ್ರಾಫಿಕ್ ಡಿಸೈನ್:** ಇನ್‌ಆ್ಯಮಿಗೋಸ್ ಫೌಂಡೇಷನ್ (InAmigos Foundation) ಸಂಸ್ಥೆಯು ಗ್ರಾಫಿಕ್ ಡಿಸೈನ್ ಇಂಟರ್ನಿಗಳನ್ನು ನೇಮಿಸಿಕೊಳ್ಳಲಿದೆ. ಇಂಗ್ಲಿಷ್‌ನಲ್ಲಿ ಸಂವಹನ ಸಾಮರ್ಥ್ಯ ಇರುವ ವಿದ್ಯಾರ್ಥಿಗಳು ಡಿಸೆಂಬರ್ 5ರ ಒಳಗೆ ಅರ್ಜಿ ಸಲ್ಲಿಸಬಹುದು. ಸ್ಟೈಪೆಂಡ್– ₹ 1500– ₹ 3,500 ಸಂಪರ್ಕ: https://shorturl.at/b8bEe.
- **ಸಬ್ಜೆಕ್ಟ್ ಮ್ಯಾಟರ್ ಎಕ್ಸ್‌ಪರ್ಟ್ (ಮ್ಯಾಥಮೆಟಿಕ್ಸ್):** ಕುಂದುಸ್ ಟೆಕ್ನಾಲಜೀಸ್ ಸಂಸ್ಥೆಯು ಸಬ್ಜೆಕ್ಟ್ ಮ್ಯಾಟರ್ ಎಕ್ಸ್‌ಪರ್ಟ್ (ಮ್ಯಾಥಮೆಟಿಕ್ಸ್) ಇಂಟರ್ನಿಗಳನ್ನು ನೇಮಕ ಮಾಡಿಕೊಳ್ಳಲಿದೆ. ಗಣಿತ, ಇಂಗ್ಲಿಷ್‌ನಲ್ಲಿ ಸಂವಹನ ಸಾಮರ್ಥ್ಯ, ಸಬ್ಜೆಕ್ಟ್ ಮ್ಯಾಟರ್ ಎಕ್ಸ್‌ಪರ್ಟ್ (ಎಸ್‌ಎಂಇ) ಮತ್ತು ಬೋಧನಾ ಜ್ಞಾನ ಇರುವವರು ಡಿಸೆಂಬರ್ 5ರ ಒಳಗೆ ಅರ್ಜಿ ಸಲ್ಲಿಸಬಹುದು. ಸ್ಟೈಪೆಂಡ್– ₹ 5000– ₹ 6,000. ಸಂಪರ್ಕ: https://shorturl.at/lTzOL.

ಬೆಂಗಳೂರು ಕೇಂದ್ರಿತ ಇಂಟರ್ನ್‌ಷಿಪ್

ಕಸ್ಟಮರ್ ಸರ್ವಿಸ್/ ಕಸ್ಟಮರ್ ಸಪೋರ್ಟ್: ಶುಗರ್.ಫಿಟ್ (Sugar.fit) ಸಂಸ್ಥೆಯು ಕಸ್ಟಮರ್ ಸರ್ವಿಸ್/ಕಸ್ಟಮರ್ ಸಪೋರ್ಟ್ ಇಂಟರ್ನಿಗಳನ್ನು ನೇಮಿಸಿಕೊಳ್ಳಲಿದೆ. ಪರಿಣಾಮಕಾರಿ ಸಂವಹನ ಮತ್ತು ಇಂಗ್ಲಿಷ್ ಸಂವಹನದಲ್ಲಿ ಸಾಮರ್ಥ್ಯ ಇರುವವರು ಅರ್ಜಿ ಸಲ್ಲಿಸಬಹುದು. ನವೆಂಬರ್ 30 ಅರ್ಜಿ ಸಲ್ಲಿಸಲು ಕಡೇ ದಿನ. ಸ್ಟೈಪೆಂಡ್– ₹ 15,000. ಸಂಪರ್ಕ– https://shorturl.at/7RGwA.
- **ಸೇಲ್ಸ್ ಡೆವಲಪ್‌ಮೆಂಟ್ (ಬಿ2ಬಿ ಸೇಲ್ಸ್):** ಪ್ರಾಸ್ಟ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ (ಒನ್‌ಅಶ್ಯೂರ್) ಸಂಸ್ಥೆಯು ಸೇಲ್ಸ್ ಡೆವಲಪ್‌ಮೆಂಟ್ (ಬಿ2ಬಿ ಸೇಲ್ಸ್) ಇಂಟರ್ನಿಗಳನ್ನು ನೇಮಕ ಮಾಡಿಕೊಳ್ಳಲಿದೆ. ಬಿ2ಬಿ ಸೇಲ್ಸ್‌ನಲ್ಲಿ ಜ್ಞಾನ, ಇಂಗ್ಲಿಷ್‌ನಲ್ಲಿ ಸಂವಹನ ಮತ್ತು ಬರವಣಿಗೆ ಸಾಮರ್ಥ್ಯ ಇರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರು. ಸ್ಟೈಪೆಂಡ್– ₹ 15,000– ₹ 20,000 ಸಂಪರ್ಕ: https://shorturl.at/lCRMM.

‘ಶಿಕ್ಷಣ ಪುರವಣಿ’ಗೆ ಬರಹಗಳನ್ನು ಕಳುಹಿಸಬಹುದಾದ ಇ–ಮೇಲ್ ವಿಳಾಸ: shikshana@prajavani.co.in



ಕ್ಯಾಂಪಸ್ ಸಂದರ್ಶನ ಸಿದ್ಧರಿದ್ದೀರಾ?

- ಗಿರೀಶ ಯರಲಕಟ್ಟಿ ಮಠ

ಉನ್ನತ ಶಿಕ್ಷಣ ಪಡೆಯುತ್ತಿರುವ ಮಕ್ಕಳ ಪಾಲಕರಿಗೆ ಪರಿಚಿತರಿಂದ ಎಲ್ಲೆಂದರಲ್ಲಿ ಕೇಳಿಬರುವ ಮಾತುಗಳೆಂದರೆ ‘ಸರ್, ನಿಮ್ಮ ಹುಡುಗ ಇಂಜಿನಿಯರಿಂಗ್ ಮಾಡ್ತಿದ್ನಲ್ಲಾ, ಅವನದು ಪ್ಲೇಸ್‌ಮೆಂಟ್ ಆಯ್ತಾ?’, ‘ನಿಮ್ಮ ಹುಡುಗಿ ಎಂಬಿಎ ಫೈನಲ್ ಇಯರ್ ಇರಬೇಕಲ್ವಾ? ಎಲ್ಲಾದ್ರೂ ಪ್ಲೇಸ್ ಆದ್ಲಾ?’ ‘ಯಾರೋ ನಮ್ಮ ಆಫೀಸ್‌ನವರ ಮಾತು ಕೇಳಿ, ಹೆವಿ ಡೊನೇಶನ್ ಕೊಟ್ಟು ಇದೇ ಬ್ರ್ಯಾಂಚ್ ಬೇಕು ಅಂತ ಸೇರಿಸಿದ್ವಿ, ಕೋರ್ಸ್ ಮುಗಿದು ಒಂದು ವರ್ಷ ಆದ್ರೂ ಎಲ್ಲೂ ಕೆಲಸ ಇಲ್ಲ’.

> • ನಿಮ್ಮ ರೆಸ್ಯುಮೆ ನಿಮ್ಮ ಮೊದಲ ಪರಿಚಯ ಪತ್ರ. ಅದು ಸಂಕ್ಷಿಪ್ತ, ದೋಷರಹಿತ ಮತ್ತು ನಿಮ್ಮ ನೈಜ ಕೌಶಲಗಳನ್ನು ಪ್ರತಿಬಿಂಬಿಸಬೇಕು

ಇಲ್ಲಿ ಪಾಲಕರು ಹಾಗೂ ವಿದ್ಯಾರ್ಥಿಗಳು ಮುಖ್ಯವಾಗಿ ಮನದಟ್ಟು ಮಾಡಿಕೊಳ್ಳಬೇಕಾದ ವಿಷಯ ಒಂದಿದೆ. ಅದೆಂದರೆ, ಕಾಲೇಜಿನ ಕ್ಯಾಂಪಸ್ ನೇಮಕಾತಿಗಾಗಿ ಬರುವ ಕಂಪನಿಗಳು, ತಾವು ಅಪೇಕ್ಷಿಸುವ ಕೌಶಲ ಇಲ್ಲದ ವಿದ್ಯಾರ್ಥಿಗಳನ್ನು ಯಾವ ಕಾರಣಕ್ಕೂ ನೇಮಕ ಮಾಡಿಕೊಳ್ಳುವುದಿಲ್ಲ.

ಈ ಸ್ಪರ್ಧಾತ್ಮಕ ಜಗತ್ತಿನಲ್ಲಿ, ಬರೀ ಕೋರ್ಸ್ ಮುಗಿಸಿದ ಕಾರಣಕ್ಕೆ ತಕ್ಷಣ ಕೆಲಸ ದೊರಕುವುದಿಲ್ಲ. ಪ್ರಸ್ತುತ ಮಾರುಕಟ್ಟೆ ಬಯಸುವ ಕೌಶಲಗಳನ್ನು ಕರಗತ ಮಾಡಿಕೊಳ್ಳಲೇಬೇಕು. ಇಲ್ಲದಿದ್ದರೆ ಒಳ್ಳೆಯ ಸಂಬಳ ಹಾಗೂ ಇಷ್ಟಪಟ್ಟ ಕೆಲಸ ಸಿಗುವುದು ಕನಸಿನ ಮಾತು. ಅಂತಹ ಕೌಶಲಗಳನ್ನು ಹೊಂದುವುದು ಹೇಗೆ? ಇಲ್ಲಿವೆ ಕೆಲವು ಸಲಹೆಗಳು:

- ನಿಮ್ಮ ಆಸಕ್ತಿಯ ಕ್ಷೇತ್ರದ ಬಗ್ಗೆ ನಿಮಗೆ ಸ್ಪಷ್ಟತೆ ಇರಲಿ. ಐ.ಟಿ, ಬ್ಯಾಂಕಿಂಗ್, ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್ ಅಥವಾ ಕೋರ್ ಎಂಜಿನಿಯರಿಂಗ್– ಈ ಯಾವ ಕ್ಷೇತ್ರದಲ್ಲಿ ಕೆಲಸ ಮಾಡಲು ಇಷ್ಟಪಡುತ್ತೀರಿ ಎಂಬುದರ ಆಧಾರದ ಮೇಲೆ ನಿಮ್ಮ ತಯಾರಿ ಇರಬೇಕು.
- ನಿಮ್ಮ ಮೂಲಭೂತ ವಿಷಯಗಳಲ್ಲಿ ಪರಿಣತಿ ಇರಲಿ. ನೀವು ಕಂಪ್ಯೂಟರ್ ಸೈನ್ಸ್ ವಿದ್ಯಾರ್ಥಿ ಎಂದುಕೊಳ್ಳಿ. ಡೇಟಾ ಸ್ಟ್ರಕ್ಚರ್ಸ್, ಅದ್ರೇ ಮತ್ತು ಲಿಂಕ್ಡ್‌ಲಿಸ್ಟ್ ನಡುವಿನ ವ್ಯತ್ಯಾಸ, ಅವುಗಳ ಉಪಯೋಗ ಮತ್ತು ಸಮಯ ಸಂಕೀರ್ಣತೆಯ ಬಗ್ಗೆ ನಿಮಗೆ ಸ್ಪಷ್ಟ ಮಾಹಿತಿ ಇರಲೇಬೇಕು. ಸಂದರ್ಶನದ ಸಮಯದಲ್ಲಿ ಅದ್ರೇ ಬದಲು ಲಿಂಕ್ಡ್‌ಲಿಸ್ಟ್ ಯಾವಾಗ ಉಪಯೋಗಿಸಬೇಕು ಎಂದು ಕೇಳಿದರೆ, ಆ ಪ್ರಶ್ನೆಗೆ ಸರಿಯಾದ ಉತ್ತರ ನೀಡಲು ಸಾಧ್ಯವಾಗಬೇಕು. ಯಾವುದೇ ವಿಷಯವನ್ನು ಅವಸರದಿಂದ ಓದಬೇಡಿ, ತಿಳಿದುಕೊಳ್ಳುವವರೆಗೂ ಮುಂದಿನದನ್ನು ಓದಬೇಡಿ.
- ಬೇರೆಯವರ ರೆಸ್ಯುಮೆ ಅನ್ನು ಕಾಪಿ ಮಾಡಬೇಡಿ. ಎಲ್ಲಾ ಕಂಪನಿಗಳು ಮತ್ತು ಖಾಲಿ ಇರುವ ಹುದ್ದೆಗಳು ಒಂದೇ ರೀತಿಯ ಕೌಶಲಗಳನ್ನು ಅಪೇಕ್ಷಿಸುವುದಿಲ್ಲ. ‘ಮಾರ್ಕೆಟಿಂಗ್’ ಕೆಲಸಕ್ಕೆ ಬೇಕಾಗಿರುವ ರೆಸ್ಯುಮೆ ಫೈನಾನ್ಸ್ ಹುದ್ದೆಗೆ ಹೊಂದಿಕೆಯಾಗದೇ ಇರಬಹುದು. ಉದಾಹರಣೆಗೆ, ನೀವು ಒಂದು ಎಫ್‌ಎಂಸಿಜಿ (ಫಾಸ್ಟ್ ಮೂವಿಂಗ್ ಕನ್‌ಸ್ಯೂಮರ್ ಗೂಡ್ಸ್) ಕಂಪನಿಗೆ ಅರ್ಜಿ ಸಲ್ಲಿಸುತ್ತಿದ್ದೀರಿ ಎಂದುಕೊಳ್ಳಿ. ನಿಮ್ಮ ರೆಸ್ಯುಮೆಯಲ್ಲಿ ‘ಡಿಜಿಟಲ್ ಮಾರ್ಕೆಟಿಂಗ್’ ಕ್ಯಾಂಪೇನ್, ಬ್ರ್ಯಾಂಡ್ ಮ್ಯಾನೇಜ್‌ಮೆಂಟ್ ಮತ್ತು ಮಾರ್ಕೆಟ್ ರಿಸರ್ಚ್ ಅನುಭವಗಳಿಗೆ ಹೆಚ್ಚು ಒತ್ತು ನೀಡಿ. ಅದೇ ರೆಸ್ಯುಮೆ ಅನ್ನು ಇನ್ವೆಸ್ಟ್‌ಮೆಂಟ್ ಬ್ಯಾಂಕಿಂಗ್ ಹುದ್ದೆಗೆ ಸಲ್ಲಿಸಬೇಡಿ. ಅಲ್ಲಿ ಫೈನಾನ್ಶಿಯಲ್ ಮಾಡೆಲಿಂಗ್, ಈಕ್ವಿಟಿ ರಿಸರ್ಚ್ ಮತ್ತು ಡೇಟಾ ಆ್ಯನಲಿಟಿಕ್ಸ್‌ಗೆ ಪ್ರಾಮುಖ್ಯತೆ ನೀಡಿ.
- ನೀವು ಮಾಡಿರುವ ಕೆಲಸಗಳ ಬಗ್ಗೆ ಹೆಚ್ಚು ಹೇಳುವುದಕ್ಕಿಂತ ಅದರ ಪರಿಣಾಮಗಳನ್ನು ತಿಳಿಸಿ. ವಿದ್ಯಾರ್ಥಿಯು ಪದವಿ ಸಮಯದಲ್ಲಿ ಮಾಡುವ ‘ಇಂಟರ್ನ್‌ಶಿಪ್ ಅಥವಾ ಪ್ರಾಜೆಕ್ಟ್’ ಒಂದು ಉತ್ತಮ ಕೆಲಸ ಗಿಟ್ಟಿಸುವಲ್ಲಿ ಅತಿ ಮುಖ್ಯ ಪಾತ್ರ ವಹಿಸುತ್ತದೆ.
- ನೀವು ಬರೀ ‘ಸೋಷಿಯಲ್ ಮೀಡಿಯಾ ಮಾರ್ಕೆಟಿಂಗ್ ನಿರ್ವಹಿಸಿದೆ’ ಎಂದು ಬರೆಯುವ ಬದಲು, ಒಂದು ಡಿಜಿಟಲ್ ಮಾರ್ಕೆಟಿಂಗ್ ಕ್ಯಾಂಪೇನನ್ನು ರೂಪಿಸಿದೆ ಎಂದು ಹೇಳಿ. ಅದರಿಂದ ಶೇ 30ರಷ್ಟು ಹೆಚ್ಚು ಗ್ರಾಹಕರು, ಸಂಬಂಧಿಸಿದ ಕಂಪನಿಯ ವೆಬ್‌ಸೈಟ್ ಅನ್ನು ವೀಕ್ಷಿಸಿದ್ದಾರೆ ಹಾಗೂ 500ಕ್ಕೂ ಹೆಚ್ಚು ಗ್ರಾಹಕರನ್ನು ಪಡೆಯಲಾಗಿದೆ ಎಂದು ಹೇಳಿ. ಇದು ನಿಮ್ಮ ಕೊಡುಗೆಯನ್ನು ಸಂಖ್ಯೆಗಳಲ್ಲಿ ತೋರಿಸುತ್ತದೆ.
- ಬರೀ ತಾಂತ್ರಿಕ ಕೌಶಲಗಳನ್ನು ಅಭಿವೃದ್ಧಿಪಡಿಸಿಕೊಳ್ಳುವುದಕ್ಕೇ ಹೆಚ್ಚು ಸಮಯವನ್ನು ಮೀಸಲಿಡಬೇಡಿ. ಸಾಫ್ಟ್ ಸ್ಕಿಲ್ಸ್ ಅಭಿವೃದ್ಧಿಗೆ ಗಮನ ಕೊಡಿ. ಉತ್ತಮ ಸಂವಹನ, ತಂಡದ ಅಭಿವೃದ್ಧಿ, ಸಮಸ್ಯೆ ಪರಿಹರಿಸುವ ಕೌಶಲಗಳು ನಿಮ್ಮ ಮೌಲ್ಯವನ್ನು ಹೆಚ್ಚಿಸುತ್ತವೆ. ಉದಾಹರಣೆಗೆ, ಸ್ನೇಹಿತರ ಒಂದು ಸಣ್ಣ ಗುಂಪನ್ನು ರಚಿಸಿಕೊಂಡು, ‘ಕಾಲೇಜು ಶುಲ್ಕ ಪಾವತಿ ವ್ಯವಸ್ಥೆ ಡಿಜಿಟಲ್ ಆಗಬೇಕೆ?’ ಎಂಬಂತಹ ವಿಷಯಗಳ ಮೇಲೆ ಗುಂಪು ಚರ್ಚೆ ನಡೆಸಿ. ಇದು ನಿಮ್ಮ ಆಲೋಚನೆಗಳನ್ನು ಸ್ಪಷ್ಟವಾಗಿ ವ್ಯಕ್ತಪಡಿಸಲು ನೆರವಾಗುತ್ತದೆ.
- ಕಂಪನಿ ಹಾಗೂ ನೀವು ಇಷ್ಟಪಡುವ ಹುದ್ದೆಯ ಬಗ್ಗೆ ಮುಂಚಿತವಾಗಿ ಹೆಚ್ಚು ಸಂಶೋಧನೆ ಮಾಡಿ. ಅಂದರೆ, ನೀವು ಅರ್ಜಿ ಸಲ್ಲಿಸುತ್ತಿರುವ ಕಂಪನಿಯ ಇತ್ತೀಚಿನ ಆಗುಹೋಗುಗಳನ್ನು ಸಮಗ್ರವಾಗಿ ತಿಳಿದುಕೊಳ್ಳಿ. ಹಾಗೆಯೇ ನೀವು ನಿರೀಕ್ಷಿಸುವ ಹುದ್ದೆ ನಿಮ್ಮಿಂದ ಏನನ್ನು ಅಪೇಕ್ಷಿಸುತ್ತದೆ, ಆ ಹುದ್ದೆ ನಿರ್ವಹಿಸಲು ಯಾವ ಯಾವ ಹೊಸ ತಂತ್ರಜ್ಞಾನಗಳನ್ನು ಬಳಸಬಹುದು ಎಂದು ಮುಂಚೆಯೇ ತಿಳಿದುಕೊಂಡರೆ ಸಂದರ್ಶನದ ಸಮಯದಲ್ಲಿ ಉತ್ತಮವಾಗಿ ‘ಪರ್‌ಫಾರ್ಮ್’ ಮಾಡಬಹುದು.
- ಮಾನಸಿಕ ಸಾಮರ್ಥ್ಯ ಮತ್ತು ತರ್ಕಶಕ್ತಿ ಪ್ರಶ್ನೆಗಳಿಗೆ ಸಿದ್ಧರಾಗಿರಿ. ಈ ದಿಸೆಯಲ್ಲಿ ಪ್ರತಿನಿತ್ಯ ಪ್ರತ್ಯೇಕ ಅಭ್ಯಾಸ ಅತ್ಯಗತ್ಯ. ಇದಕ್ಕಾಗಿಯೇ ಇರುವ ಕೆಲವು ಕಂಪನಿಗಳ ಪುಸ್ತಕಗಳ ನೆರವಿನಿಂದ ದಿನವೂ ಪ್ರಶ್ನೆಗಳನ್ನು ಪರಿಹರಿಸಲು ಅಭ್ಯಾಸ ಮಾಡಿ.
- ಸಂದರ್ಶನದ ಸಮಯದಲ್ಲಿ ಶಾಂತವಾಗಿ ಇರಿ. ಗೊತ್ತಿಲ್ಲದ್ದನ್ನು ಗೊತ್ತಿಲ್ಲ ಎಂದೇ ಹೇಳಿ. ಆದರೆ ಗೊತ್ತಿಲ್ಲದ್ದನ್ನು ಕಲಿಯಲು ಸಂಪೂರ್ಣ ಸಿದ್ಧರಿರುವುದಾಗಿ ಸೌಮ್ಯವಾಗಿ ಹೇಳಿ. ಪ್ರಾಮಾಣಿಕತೆಗೆ ಮಹತ್ವ ನೀಡಿ. ಸಂದರ್ಶನದ ಯಾವ ಹಂತದಲ್ಲೂ ಉದ್ವೇಗಕ್ಕೆ ಒಳಗಾಗಬೇಡಿ.
- ಪ್ರತಿ ಅನುಭವದಿಂದ ಕಲಿಯಿರಿ ಮತ್ತು ಮುಂದುವರಿಯಿರಿ. ಉದಾಹರಣೆಗೆ, ನೀವು ಒಂದು ಗುಂಪು ಚರ್ಚೆಯಲ್ಲಿ (ಗ್ರೂಪ್ ಡಿಸ್ಕಷನ್) ಮೊದಲ ಸುತ್ತಿನಲ್ಲಿಯೇ ಹೊರಬಂದಿದ್ದೀರಿ ಎಂದು ತಿಳಿದುಕೊಳ್ಳಿ. ಆ ಚರ್ಚೆಯಲ್ಲಿ ಯಾರು ಯಾವ ಅಂಶಗಳನ್ನು ಹೇಳಿದರು, ನೀವು ಯಾವ ಅಂಶಗಳನ್ನು ಹೇಳಲು ವಿಫಲರಾದಿರಿ ಎಂಬುದನ್ನು ವಿಶ್ಲೇಷಿಸಿ. ಮುಂದಿನ ನಡೆಗೆ ಸಂಪೂರ್ಣ ಸಿದ್ಧರಾಗಿ.

ಯಶಸ್ವಿ ಪ್ಲೇಸ್‌ಮೆಂಟ್ ಎಂಬುದು ಒಂದು ರಾತ್ರಿಯಲ್ಲಿ ಸಾಧಿಸಬಹುದಾದ ಗುರಿಯಲ್ಲ. ಇದು ಸತತ ಪ್ರಯತ್ನ, ಸರಿಯಾದ ಯೋಜನೆ ಮತ್ತು ಸಕಾರಾತ್ಮಕ ದೃಷ್ಟಿಕೋನದ ಫಲಿತಾಂಶ.

ಲೇಖಕ: ಸಹ ಪ್ರಾಧ್ಯಾಪಕ, ಕಿರ್ಲೋಸ್ಕರ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಹರಿಹರ

> **ಇದಕ್ಕಿರಲಿ ಆದ್ಯತೆ**
> ಸಂದರ್ಶನದ ಸಮಯದಲ್ಲಿ ನಿಮ್ಮ ಆಲೋಚನೆಗಳನ್ನು ಸರಳ ಮತ್ತು ಆತ್ಮವಿಶ್ವಾಸದಿಂದ ವ್ಯಕ್ತಪಡಿಸಲು ಸಾಧ್ಯವಾಗಬೇಕು. ಅದಕ್ಕಾಗಿ ಇಂಗ್ಲಿಷ್ ಸಂವಹನಕ್ಕೆ ಹೆಚ್ಚು ಗಮನ ಕೊಡಿ. ಇದಕ್ಕೆ ಪೂರಕವಾಗಿ ದಿನಕ್ಕೆ 15 ನಿಮಿಷ ಇಂಗ್ಲಿಷ್ ವಾರ್ತೆಯನ್ನು ಕೇಳಿ ಅಥವಾ ವೀಕ್ಷಿಸಿ, ಇಂಗ್ಲಿಷ್ ದಿನಪತ್ರಿಕೆಗಳನ್ನು ಓದಿ. ಇದು ಕೇಳುವ ಮತ್ತು ಮಾತನಾಡುವ ನಿಮ್ಮ ಕೌಶಲಕ್ಕೆ ಹೆಚ್ಚು ಮೆರುಗು ನೀಡುತ್ತದೆ.

ಮಗಳೆಂಬ ಬಿಸಿತುಪ್ಪ!



ಸಮಾಧಾನ
ಡಾ. ಡಿ.ಎಂ. ಹೆಗಡೆ, ಸಮಾಲೋಚಕ

- **ನಮ್ಮದು ಮೇಲ್ಮಧ್ಯಮ ವರ್ಗದ ಸಂಸಾರ. ನಮಗೆ ಇಬ್ಬರು ಮಕ್ಕಳು. ಮಗ ಎಂಜಿನಿಯರಿಂಗ್ ಓದುತ್ತಿದ್ದಾನೆ. ಮಗಳು ಪಿಯುಸಿ ಎರಡನೇ ವರ್ಷದಲ್ಲಿದ್ದಾಳೆ. ಅವಳು ಕದ್ದು ಧೂಮಪಾನ ಮಾಡುತ್ತಾಳೆ, ಆಗಾಗ ಕುಡಿಯುತ್ತಾಳೆ ಎಂಬ ಗುಮಾನಿ ಇದೆ. ವಾರಾಂತ್ಯದಲ್ಲಿ ಗ್ರೂಪ್ ಸ್ಟಡಿಗೆ ಎಂದು ಗೆಳತಿಯ ಮನೆಗೆ ಹೋಗುತ್ತಾಳೆ. ಓದಿನಲ್ಲಿ ಗಾಂಭೀರ್ಯ ಇಲ್ಲ. ನಮಗಂತೂ ಬಿಸಿತುಪ್ಪ ಗಂಟಲಲ್ಲಿ ಇರುವಂತೆ ಆಗಿದೆ. ಅವಳನ್ನು ಎಚ್ಚರಿಸುವುದು ಹೇಗೆ?** –ಯಶೋದಾ ರವಿ, ಬೆಂಗಳೂರು

ಗುಮಾನಿ ಇದ್ದ ಮಾತ್ರಕ್ಕೆ ಅದು ನಿಜವಾಗಿರಲಿಕ್ಕಿಲ್ಲ. ಅಕಸ್ಮಾತ್ ನಿಜವಾಗಿದ್ದರೂ ನೀವು ಬೈದು, ಹೊಡೆದು ಮಾಡುವುದರಿಂದ ಅವಳಿಗೆ ಅವಮಾನವಾಗುತ್ತದೆ. ಅವಳು ಕೆರಳುತ್ತಾಳೆ. ಅದರ ಪರಿಣಾಮವಾಗಿ ಆಕೆ ಚಟಗಳಿಗೆ ಇನ್ನಷ್ಟು ದಾಸಳಾಗುವ ಸಾಧ್ಯತೆ ಹೆಚ್ಚು. ಇದರಿಂದ ಮನೆಯ ನೆಮ್ಮದಿ ಹಾಳಾಗುತ್ತದೆ. ಹಾಗಾಗದಂತೆ ನೋಡಿಕೊಳ್ಳಿ. ಸಜ್ಜನರ ಸಹವಾಸ ಹಾಗೂ ಸದಭಿರುಚಿಯ ಹವ್ಯಾಸಗಳ ಮಹತ್ವವನ್ನು ಅವಳಿಗೆ ತಿಳಿಸಿ. ಧೂಮಪಾನದಿಂದ ಆಗುವ ಅನಾಹುತಗಳ ಬಗ್ಗೆ ಆಗಾಗ ಸಹಜವಾಗಿಯೇ ಮಗಳ ಎದುರಿಗೆ ಮಾತನಾಡಬಹುದು.

ನೀವು ಹದಿಹರೆಯದಲ್ಲಿ ಎದುರಿಸಿದ್ದ ಸಮಸ್ಯೆಗಳಿಗಿಂತಲೂ ಹೆಚ್ಚು ವೈವಿಧ್ಯಮಯವಾದ ಸಮಸ್ಯೆಗಳನ್ನು ನಿಮ್ಮ ಮಗಳು ಎದುರಿಸುತ್ತಿರಬಹುದು. ಅವಳು ಸಂಪೂರ್ಣ ಏಕಾಂಗಿಯಾಗದಂತೆ, ಕುಗ್ಗದಂತೆ ನೋಡಿಕೊಳ್ಳಿ. ಆಕೆ ತನ್ನ ಸ್ವಾತಂತ್ರ್ಯಕ್ಕಾಗಿ ಚಡಪಡಿಸಬಹುದು. ಅಂತ ಮುರ್ಖಿಯಾಗಿ ನರಳುತ್ತಿರಬಹುದು. ಇಂಥ ಸನ್ನಿವೇಶದಲ್ಲಿ ಮಗಳಿಗೆ ಆಸರೆಯಾಗಿ, ಸಂತೈಸಿ. ಅವಳಿಗೆ ಸಿಗರೇಟಿನಿಂದ ಸಿಗುವುದಕ್ಕಿಂತ ಹೆಚ್ಚು ಭರವಸೆ ಹಾಗೂ ನೆಮ್ಮದಿ ನಿಮ್ಮಿಂದ, ಮನೆಯಲ್ಲಿ ಸಿಗುವಂತೆ ವರ್ತಿಸಿ. ಅವಳನ್ನು ಗೌರವಿಸಿ. ಅವಳು ಸಮಾಧಾನವಾಗಿ ಇರುವಂತೆ ನೋಡಿಕೊಳ್ಳಿ. ಮಕ್ಕಳು ನೆಮ್ಮದಿಯಿಂದ ಬೆಳೆಯುತ್ತಿದ್ದರೆ, ನಿಮ್ಮ ಮನೆಯೂ ಸಂತೋಷದ ಬೆಳಕಿನಿಂದ ಬೆಳಗುತ್ತದೆ. ಅದು ಸಂಸಾರದ ಯಶಸ್ಸು.

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ | ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ | ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಸಮಾಜವಿಜ್ಞಾನ

ಮೈಸೂರು ಒಡೆಯರು ಹಾಗೂ ಕರ್ನಾಟಕದಲ್ಲಿ ಬ್ರಿಟಿಷ್ ಆಳ್ವಿಕೆಗೆ ಪ್ರತಿರೋಧಗಳು

ಬಹು ಆಯ್ಕೆ ಪ್ರಶ್ನೆಗಳು

17) ಟಿಪ್ಪು ಸುಲ್ತಾನ್ ನಾಲ್ಕನೇ ಆಂಗ್ಲೋ ಮೈಸೂರು ಯುದ್ಧದಲ್ಲಿ ಮಡಿದನು ಆ ಸಂದರ್ಭದಲ್ಲಿ ಬ್ರಿಟಿಷ್ ಭಾರತದ ಗವರ್ನರ್ ಜನರಲ್‌ನಾಗಿ ಯಾರು ಇದ್ದರು?
ಎ) ಲಾರ್ಡ್ ವೆಲ್ಲೆಸ್ಲಿ ಬಿ) ಲಾರ್ಡ್ ಮೌಂಟ್ ಬ್ಯಾಟನ್
ಸಿ) ಲಾರ್ಡ್ ಬೆಂಟಿಂಕ್ ಡಿ) ಲಾರ್ಡ್ ಕಾರ್ನ್ ವಾಲೀಸ್
ಉತ್ತರ:– ಎ

18) ಬ್ರಿಟಿಷ್ ಸರಕಾರವು 1881ರಲ್ಲಿ ಮೈಸೂರಿನ ಸಿಂಹಾಸನವನ್ನು ಹತ್ತನೆಯ ಚಾಮರಾಜೇಂದ್ರ ಒಡೆಯರಿಗೆ ವಹಿಸಿತು. ಕಮೀಷನರ್ ಆಡಳಿತ ಕೊನೆಗೊಂಡು ....ಎಂಬ ಬ್ರಿಟಿಷ್ ಪ್ರತಿನಿಧಿಯನ್ನು ನೇಮಿಸಲಾಯಿತು.
ಎ) ದಿವಾನ್ ಬಿ) ಗವರ್ನರ್ ಜನರಲ್
ಸಿ) ವೈಸರಾಯ್ ಡಿ) ರೆಸಿಡೆಂಟ್
ಉತ್ತರ:– ಡಿ

19) ಹತ್ತನೆಯ ಚಾಮರಾಜೇಂದ್ರ ಒಡೆಯರಿಗೆ ಬ್ರಿಟಿಷ್ ಸರಕಾರವು 1881ರಲ್ಲಿ ಮೈಸೂರಿನ ಸಿಂಹಾಸನವನ್ನು ಬಿಟ್ಟುಕೊಟ್ಟಾಗ ದಿವಾನರಾಗಿ ನೇಮಕವಾದವರು ಯಾರು?
ಎ) ಸರ್ ಎಂ. ವಿಶ್ವೇಶ್ವರಯ್ಯ
ಬಿ) ಸಿ. ರಂಗಾಚಾರ್ಲು ಸಿ) ಕೆ. ಶೇಷಾದ್ರಿ ಅಯ್ಯರ್
ಡಿ) ಮೇಲಿನ ಯಾರೂ ಅಲ್ಲ.
ಉತ್ತರ:– ಬಿ

20) ಮೈಸೂರು ಪ್ರಜಾಪ್ರತಿನಿಧಿ ಸಭೆಯನ್ನು ಪ್ರಾರಂಭಿಸಿದರು ಯಾರು?
ಎ) ಸಿ. ರಂಗಾಚಾರ್ಲು ಬಿ) ಕೆ. ಶೇಷಾದ್ರಿ ಅಯ್ಯರ್
ಸಿ) ಕಾಂತರಾಜೆ ಅರಸ ಡಿ) ಮಾಧವರಾವ್
ಉತ್ತರ:– ಎ

21) 1881ರಲ್ಲಿ ಕೋಲಾರದ ಚಿನ್ನದಗಣಿ ಆರಂಭಿಸಿದವರು ಯಾರು?
ಎ) ಕಾಂತರಾಜೆ ಅರಸ ಬಿ) ಮಾಧವರಾವ್
ಸಿ) ಸಿ. ರಂಗಾಚಾರ್ಲು ಡಿ) ಕೆ. ಶೇಷಾದ್ರಿ ಅಯ್ಯರ್
ಉತ್ತರ:– ಸಿ

22) ಯಾರು 1882ರಲ್ಲಿ ಬೆಂಗಳೂರು–ಮೈಸೂರು ರೈಲು ಮಾರ್ಗವನ್ನು ಆರಂಭಿಸಿದರು?
ಎ) ಮಾಧವರಾವ್ ಬಿ) ಸಿ. ರಂಗಾಚಾರ್ಲು
ಸಿ) ಸರ್ ಎಂ. ವಿಶ್ವೇಶ್ವರಯ್ಯ ಡಿ) ಕಾಂತರಾಜೆ ಅರಸ
ಉತ್ತರ:– ಬಿ

23) 1883ರಲ್ಲಿ ರಂಗಾಚಾರ್ಲು ಕಾಲವಾದ ನಂತರ ದಿವಾನರಾದರು ಯಾರು?
ಎ) ಕೆ. ಶೇಷಾದ್ರಿ ಅಯ್ಯರ್ ಬಿ) ಸರ್ ಎಂ. ವಿಶ್ವೇಶ್ವರಯ್ಯ
ಸಿ) ಕಾಂತರಾಜೆ ಅರಸ ಡಿ) ಮೇಲಿನ ಯಾರೂ ಅಲ್ಲ
ಉತ್ತರ:– ಎ

24) ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಯನ್ನು ಆರಂಭಿಸಿದರು ಯಾರು?
ಎ) ಕೆ. ಶೇಷಾದ್ರಿ ಅಯ್ಯರ್ ಬಿ) ಎನ್ ಮಾಧವ ರಾವ್
ಸಿ) ಕಾಂತರಾಜೆ ಅರಸ ಡಿ) ಸರ್ ಎಂ. ವಿಶ್ವೇಶ್ವರಯ್ಯ
ಉತ್ತರ:– ಎ

25) ....ರವರು ಮೈಸೂರಿಗೆ ಬಂದಿದ್ದ ಸ್ವಾಮಿ ವಿವೇಕಾನಂದರಿಗೆ ಆಶ್ರಯ ನೀಡಿ ಅವರು ಚಿಕಾಗೋ ಸರ್ವಧರ್ಮ ಸಮ್ಮೇಳನಕ್ಕೆ ಹೋಗಲು ಸಹಾಯ ಮಾಡಿದರು.
ಎ) ಚಾಮರಾಜೇಂದ್ರ ಒಡೆಯರ್
ಬಿ) ರಾಜ ಒಡೆಯರ್ ಸಿ) ಕೃಷ್ಣರಾಜ ಒಡೆಯರ್
ಡಿ) ಮೇಲಿನ ಯಾರೂ ಅಲ್ಲ
ಉತ್ತರ:– ಎ

26) ಮೈಸೂರಿನಲ್ಲಿ ಮಹಾರಾಣಿ ಬಾಲಿಕಾ ಪ್ರೌಢಶಾಲೆಯನ್ನು ಸ್ಥಾಪಿಸಿದರು ಯಾರು?
ಎ) ಕಾಂತರಾಜೆ ಅರಸ ಬಿ) ಸರ್ ಎಂ. ವಿಶ್ವೇಶ್ವರಯ್ಯ
ಸಿ) ಕೆ. ಶೇಷಾದ್ರಿ ಅಯ್ಯರ್ ಡಿ) ಎನ್ ಮಾಧವ ರಾವ್
ಉತ್ತರ:– ಸಿ

27) ಅನೇಕ ಕೃತಿಗಳನ್ನು ರಚಿಸಿ “ಅಭಿನವ ಕಾಳಿದಾಸ” ಎನಿಸಿಕೊಂಡರು ಯಾರು?
ಎ) ಬಸಪ್ಪಶಾಸ್ತ್ರಿ ಬಿ) ಸಂಚಿಹೊನ್ನಮ್ಮ
ಸಿ) ಕುಮಾರವ್ಯಾಸ ಡಿ) ಲಿಂಗಪ್ಪ
ಉತ್ತರ:– ಎ

28) ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಗಾಗಿ ಎಲ್ಲ ಪ್ರಾಥಮಿಕ ಶಾಲೆಗಳಲ್ಲಿಯೂ ಶಿಕ್ಷಣ ಶುಲ್ಕವನ್ನು ರದ್ದು ಮಾಡಲಾಯಿತು. ಹೆಣ್ಣುಮಕ್ಕಳ ವಿದ್ಯಾಭ್ಯಾಸದ ಏಳಿಗೆಗೆ ನೆರವು ಸಿಕ್ಕಿತು. ಮೈಸೂರು ವಿಶ್ವವಿದ್ಯಾನಿಲಯವು ಸ್ಥಾಪಿಸಲಾಯಿತು,. ವಿದೇಶ ವಿದ್ಯಾಭ್ಯಾಸಕ್ಕೆ ಹೋಗುವವರಿಗೆ ವಿದ್ಯಾರ್ಥಿ ವೇತನ ನೀಡುವ ಪದ್ಧತಿಯನ್ನು ಜಾರಿಗೆ ತರಲಾಯಿತು. ಬೆಂಗಳೂರಿನಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಯನ್ನು 1905ರಲ್ಲಿ ಟಾಟಾರವರ ಬೆಂಬಲದಿಂದ ಸ್ಥಾಪಿಸಲಾಯಿತು.
ಮೇಲಿನ ಟಿಪ್ಪಣಿ ಯಾರಿಗೆ ಸರಿ ಹೊಂದುತ್ತದೆ?
ಎ) ನಾಲ್ವಡಿ ಕೃಷ್ಣರಾಜ ಒಡೆಯರು
ಬಿ) ಜಯಚಾಮರಾಜ ಒಡೆಯರ್
ಸಿ) ರಾಜ ಒಡೆಯರ್ ಡಿ) ಮೇಲಿನ ಯಾರೂ ಅಲ್ಲ
ಉತ್ತರ:– ಎ

30. ಪ್ರಸಿದ್ಧ ವಿದ್ವಾಂಸರುಗಳಾದ ಶ್ಯಾಮಾಶಾಸ್ತ್ರಿ, ಎಂ. ಹಿರಿಯಣ್ಣ, ವೀಣೆ ಶೇಷಣ್ಣ, ಸಾಂಬಯ್ಯ, ಬಿಡಾರಂ ಕೃಷ್ಣಪ್ಪ, ಮುತ್ತಯ್ಯ ಭಾಗವತರ್, ವಾಸುದೇವಾಚಾರ್ಯ, ಟಿ. ಚೌಡಯ್ಯ, ಮುಂತಾದವರು....................ಅವರ ಪ್ರೋತ್ಸಾಹ ಪಡೆದರು.
ಎ) ಜಯಚಾಮರಾಜ ಒಡೆಯರ್
ಬಿ) ನಾಲ್ವಡಿ ಕೃಷ್ಣರಾಜ ಒಡೆಯ
ಸಿ) ಯದುರಾಜ ಒಡೆಯರು ಡಿ) ಮೇಲಿನ ಯಾರೂ ಅಲ್ಲ
ಉತ್ತರ:– ಬಿ

31) ನಾಲ್ವಡಿ ಕೃಷ್ಣರಾಜ ಒಡೆಯರ ಅವರ ಆಡಳಿತದಿಂದಾಗಿ ಮೈಸೂರು ‘ಮಾದರಿ ರಾಜ್ಯ’ ಎಂಬ ಹೆಸರನ್ನು ಪಡೆಯಿತು ಹೀಗಾಗಿ ಇವರನ್ನು ‘ರಾಜರ್ಷಿ’ ಎಂದು ಕರೆಯಲಾಗಿತು. ಹೀಗೆ ಕರೆದರು ಯಾರು?
ಎ) ಸ್ವಾಮಿ ವಿವೇಕಾನಂದ ಬಿ) ರಾಮಕೃಷ್ಣ ಪರಮ ಹಂಸ
ಸಿ) ದಯಾನಂದ ಸರಸ್ವತಿ ಡಿ) ಮಹಾತ್ಮ ಗಾಂಧಿ
ಉತ್ತರ:– ಡಿ

32) ಕೆಳಗಿನ ಟಿಪ್ಪಣಿ ಗಮನಿಸಿ
ಟಿಪ್ಪುವಿನ ಸೈನ್ಯದಲ್ಲಿದ್ದ ಅತೃಪ್ತ ಸೈನಿಕರು, ಅಧಿಕಾರದಿಂದ ಮುಕ್ತಗೊಳಿಸಲ್ಪಟ್ಟ ಪಾಳೇಯಗಾರರು ಮೊದಲಾದವರನ್ನು ಸಂಘಟಿಸಿ ಒಂದು ಸೈನ್ಯವನ್ನು ಸುಸಜ್ಜಿತಗೊಳಿಸಿ ಬಂಡಾಯದ ಬಾವುಟವನ್ನು ಹಾರಿಸಿದನು. ಶಿವಮೊಗ್ಗ ಮತ್ತು ಬಿದನೂರಿನ ಕೋಟೆಗಳನ್ನು ವಶಪಡಿಸಿಕೊಂಡನು. ಚಿತ್ರದುರ್ಗದ ಕೋಟೆಯನ್ನು ವಶಪಡಿಸಿಕೊಳ್ಳಲು ವಿಫಲ ಪ್ರಯತ್ನಗಳನ್ನು ನಡೆಸಿದನು. ಗವರ್ನರ್ ಜನರಲ್‌ನಾಗಿದ್ದ ಲಾರ್ಡ್ ವೆಲ್ಲೆಸ್ಲಿ ಇತನ ಬಂಡಾಯವನ್ನು ಹತ್ತಿಕ್ಕಲು ಪ್ರಾರಂಭಿಸಿದನು. ಶಿವಮೊಗ್ಗ, ಹೊನ್ನಾಳಿ, ಹರಿಹರ ಮೊದಲಾದವುಗಳ ಮೇಲೆ ಆಕ್ರಮಣ ನಡೆಸಿ ಈತನ ನಿಯಂತ್ರಣದಲ್ಲಿದ್ದ ಪ್ರದೇಶಗಳನ್ನು ಮುಕ್ತಗೊಳಿಸಲಾಯಿತು. ಆಗ ಈತ ತನ್ನ ನೆಲೆಯನ್ನು ಕಳೆದುಕೊಂಡನು. ಶಿಕಾರಿಪುರವನ್ನು ಬ್ರಿಟಿಷರು ವಶಪಡಿಸಿಕೊಂಡ ತರುವಾಯ ಈತ ನಿಜಾಮನ ಹತೋಟಿಯಲ್ಲಿದ್ದ ಗುತ್ತಿಯ ಕಡೆಗೆ ಪಲಾಯನಗೈದನು. ಆಗ ನಿಜಾಮನು ಗುತ್ತಿಯನ್ನು ಮುತ್ತಿಗೆ ಹಾಕಿದನು ತಕ್ಷಣ ಈತ ಮರಾಠರ ಪ್ರದೇಶಕ್ಕೆ ಓಡಿಹೋದನು.
ಈ ಮೇಲಿನ ಟಿಪ್ಪಣಿ ಯಾರ ಕುರಿತಾದದ್ದು?
ಎ) ಸುರಪುರದ ವೆಂಕಟಪ್ಪ ನಾಯಕ
ಬಿ) ಸಂಗೊಳ್ಳಿ ರಾಯಣ್ಣ ಸಿ) ಧೋಂಡಿಯಾ ವಾಘ್
ಡಿ) ಮೇಲಿನ ಯಾರೂ ಅಲ್ಲ ಉತ್ತರ:– ಸಿ

PHYSICS

CURRENT ELECTRICITY

21. Write a brief note on resistor and its colour codes.
Ans:- (........Contd)
First three colour bands -

Colour	Number	Multipler
1. Black	0	1
2. Brown	1	10^1
3. Red	2	10^2
4. Orange	3	10^3
5. Yellow	4	10^4
6. Green	5	10^5
7. Blue	6	10^6
8. Violet	7	10^7
9. Gray	8	10^8
10. White	9	10^9
11. Silver	0.01	10^{-2}
12. Gold	0.1	10^{-1}

The value of the resistor is found by noting the order of the band of colours and the values assigned to each other.

The first three colours give the value of resistance and the fourth band gives the tolerance. Tolerance is the percentage of deviation from the rated value.

Fourth colour bands –


Colour	Tolerance
1. Gold	± 5%
2. Silver	± 10%
3. None	± 20%

The code followed is -
(1) We go starting from the extreme left end towards the centre of the resistor.
The colour of the first ring on the extreme left gives the first digit (from the left).
(2) The colour of the second ring gives the second digit.
(3) The third ring gives the multiples of ten by which the first two digits are to be multiplied with or it gives the number of zeros that should follow the first two digits.

If silver or gold ring forms the third ring then silver stands for the multiple of 10^{-2} and gold stands for the multiple of 10^{-1}.

The fourth ring determines the tolerance of the resistor. The tolerance is the possible variation of the value of resistance of the given resistor expressed in percent.

22. Write a brief note on the grouping of cells in series.
Ans: - Grouping of cells in series - When cells are connected in series such that their emfs are in the same direction, they are said to be in conjunction with each other. Their net emf is then the arithmetic sum of the individual emfs. As the cells are in series, their effective internal resistance is the arithmetic sum of the individual internal resistances. (If two cells are connected in series such that their emfs are oppositely directed, the cells are said to be in opposition).




If m similar cells, each of emf E and internal resistance r are connected in series in conjunction with each other, than net emf = mE and effective internal resistance = mr.

If the combination is connected to an external resistance R, current I, set up in the circuit, is given by -
I = effective emf / eff. resistance of the circuit.

$$I = \frac{mE}{(R + mr)}$$

23. Write a brief note on the grouping of cells in parallel.
Ans: - Grouping of cells in parallel
The figure shows the cells connected in parallel.
If the emfs of all the individual cells are in the same direction, the combination behaves like one cell. If all the cells are similar, the net emf is E, the emf of one cell. As the cells are in parallel, effective internal resistance is given by



$$\frac{1}{r_e} = \left(\frac{1}{r}\right) + \left(\frac{1}{r}\right) + \left(\frac{1}{r}\right) + \left(\frac{1}{r}\right) + \ldots\ldots$$

If there are 'n' cells,

$$\frac{1}{r_e} = \left(\frac{n}{r}\right) \Rightarrow r_e = \frac{r}{n}$$

(Contd......)

ಕಳೆಯಲ್ಲಿ ಸಿಲುಕಿ ಎರಡು ಆನೆ ಸಾವು

ಹಾರೋಬೆಲೆ ಜಲಾಶಯದ ಹಿನ್ನೀರು ದಾಟುವಾಗ ಅವಘಡ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಮೃತಪಟ್ಟ ಎರಡೂ ಗಂಡಾನೆಗಳು
- ಒಂದಕ್ಕೆ 20 ವರ್ಷ, ಮತ್ತೊಂದಕ್ಕೆ 15 ವರ್ಷ
- ಆನೆಗಳ ಕಾಲಿಗೆ ಕಳೆ ಸುತ್ತಿರುವ ಸಾಧ್ಯತೆ

ಕನಕಪುರ (ಬೆಂಗಳೂರು ದಕ್ಷಿಣ): ತಾಲ್ಲೂಕಿನ ಸಾತನೂರು ಅರಣ್ಯ ವಲಯದ ಹಾರೋಬೆಲೆ ಜಲಾಶಯದ ಹುಲಿಬೆಲೆ ಮತ್ತು ಕೂನೂರು ಸಮೀಪದ ಹಿನ್ನೀರು ದಾಟುತ್ತಿದ್ದ ಎರಡು ಕಾಡಾನೆಗಳು ನೀರಿನಲ್ಲಿ ಬೆಳೆದಿದ್ದ ಕಳೆಗೆ ಸಿಲುಕಿದ್ದು, ಮುಳುಗಿ ಮೃತಪಟ್ಟಿವೆ.

ಹಿನ್ನೀರು ದಾಟಿ ಬನ್ನೇರುಘಟ್ಟ ಅರಣ್ಯದತ್ತ ಹೋಗುತ್ತಿದ್ದ ಆನೆಗಳ ಕಾಲುಗಳಿಗೆ ಕಳೆ(ಸತ್ತೆ) ಸುತ್ತಿಕೊಂಡಿದೆ. ಇದರಿಂದ ಚಲಿಸಲಾಗದೆ ನೀರಲ್ಲಿ ಮುಳುಗಿ ಕೊನೆಯುಸಿರೆಳೆದಿವೆ. ಮೃತಪಟ್ಟ ಎರಡೂ ಗಂಡಾನೆಗಳು. ಒಂದಕ್ಕೆ 20 ವರ್ಷ, ಮತ್ತೊಂದಕ್ಕೆ 15 ವರ್ಷ ವಯಸ್ಸಾಗಿದೆ.

ತಿಂಗಳ ಹಿಂದೆಯಷ್ಟೇ ಚನ್ನಪಟ್ಟಣ ತಾಲ್ಲೂಕಿನಲ್ಲಿ ವಿದ್ಯುತ್ ಪ್ರವಹಿಸಿ ಕಾಡಾನೆಯೊಂದು ಜೀವ ಕಳೆದುಕೊಂಡಿತ್ತು. ಅದರ ಬೆನ್ನಲ್ಲೇ ಈಗ ಮತ್ತೊಂದು ಅವಘಡ ಸಂಭವಿಸಿದೆ.

ಏಳು ಆನೆಗಳಿದ್ದವು: 'ಬನ್ನೇರುಘಟ್ಟ ಅರಣ್ಯದಿಂದ ತೆಂಗಿನಕಲ್ಲು ಅರಣ್ಯಕ್ಕೆ ಏಳು ಆನೆಗಳ ಹಿಂಡು ಬಂದಿತ್ತು. ಮತ್ತೆ ಬನ್ನೇರುಘಟ್ಟಕ್ಕೆ ಓಡಿಸಲು ಶುಕ್ರವಾರ ಕಾರ್ಯಾಚರಣೆ ನಡೆಸಲಾಗಿತ್ತು' ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ರಾಮಕೃಷ್ಣಪ್ಪ 'ಪ್ರಜಾವಾಣಿ'ಗೆ ತಿಳಿಸಿದರು.

'ಆನೆಗಳ ಹಿಂಡು ಹಿನ್ನೀರು ದಾಟಲು ಮುಂದಾಗಿತ್ತು. ಐದು ಆನೆಗಳು ದಾಟಿದ್ದವು. ಎರಡು ನೀರಿನಲ್ಲಿ ಸಿಲುಕಿದ್ದವು. ಅವುಗಳಿಗಾಗಿ ಹುಡುಕಾಟ ನಡೆದಿತ್ತು' ಎಂದು ಹೇಳಿದರು.

ಹಿನ್ನೀರಿನಲ್ಲಿ ಆನೆಗಳ ಕಳೇಬರ ಗಮನಿಸಿದ ಸ್ಥಳೀಯರು ಇಲಾಖೆ ಗಮನಕ್ಕೆ ತಂದಿದ್ದರು. ಮರಣೋತ್ತರ ಪರೀಕ್ಷೆ ಬಳಿಕ ಅಂತ್ಯಕ್ರಿಯೆ ನಡೆಸಲಾಯಿತು ಎಂದು ತಿಳಿಸಿದರು.

ಭಾರಿ ಪ್ರಮಾಣದಲ್ಲಿ ಬೆಳೆದು ನಿಂತಿರುವ ಕಳೆ ಸಂಪೂರ್ಣವಾಗಿ ಹಿನ್ನೀರನ್ನು ಆವರಿಸಿಕೊಂಡಿದೆ. ನೆಲದಿಂದ ನೀರಿನ ಮೇಲ್ಮೈವರೆಗೆ ಜಾಲದಂತೆ ಒತ್ತೊತ್ತಾಗಿ ಹಬ್ಬಿರುವ ಕಳೆ ಆನೆಗಳ ಕಾಲಿಗೆ ಸುತ್ತಿಕೊಂಡು ಮೃತಪಟ್ಟಿರಬಹುದು ಎಂದು ಅಧಿಕಾರಿಗಳು ಶಂಕಿಸಿದ್ದಾರೆ.

ಸ್ಥಳಕ್ಕೆ ಬೆಂಗಳೂರು ವೃತ್ತದ ಅರಣ್ಯ ಸಂರಕ್ಷಣಾಧಿಕಾರಿ (ಸಿಎಫ್) ಶಿವಶಂಕರ್, ಡಿಸಿಎಫ್ ರಾಮಕೃಷ್ಣಪ್ಪ ಮತ್ತು ಇತರೆ ಅಧಿಕಾರಿಗಳು ಭೇಟಿ ನೀಡಿದ್ದರು.



ಕನಕಪುರ ತಾಲ್ಲೂಕಿನ ಸಾತನೂರು ಹಾರೋಬೆಲೆ ಜಲಾಶಯದ ಹುಲಿಬೆಲೆ ಮತ್ತು ಕೂನೂರು ಸಮೀಪದ ಹಿನ್ನೀರು ದಾಟುವಾಗ ಮುಳುಗಿ ಮೃತಪಟ್ಟ ಕಾಡಾನೆ

ಗಜಕಾಳಗ: 'ಭೀಮ'ನ ದಂತ ಭಗ್ನ

ಬೇಲೂರು (ಹಾಸನ ಜಿಲ್ಲೆ): ತಾಲ್ಲೂಕಿನ ಜಗಬೋರನಹಳ್ಳಿಯಲ್ಲಿ ಭಾನುವಾರ ಮದಗಜಗಳು ಕಾದಾಡಿದ್ದು, ದೈತ್ಯ ಕಾಡಾನೆ 'ಭೀಮ'ನ ಒಂದು ದಂತ ತುಂಡಾಗಿದೆ.

ಬಿಕ್ಕೋಡು ಹೋಬಳಿಯಲ್ಲಿ ಬೀಡು ಬಿಟ್ಟಿರುವ ಕಾಡಾನೆಗಳನ್ನು ಹುಡುಕಿಕೊಂಡು 'ಭೀಮ' ಆನೆ ಹೊರಟಿತ್ತು. ಸಾಕಾನೆಯಂತೆ ರಸ್ತೆಯಲ್ಲಿಯೇ ನಡೆದುಕೊಂಡು ಹೋಗುತ್ತಿದ್ದ ಆನೆಯನ್ನು ಜನರು ವೀಕ್ಷಿಸುತ್ತಾ ನಿಂತಿದ್ದರು. ಇನ್ನೊಂದೆಡೆ ಆನೆ ಕಾರ್ಯಪಡೆಯ ತಂಡ ಜೀಪಿನೊಂದಿಗೆ ಆನೆಗೆ ಎಸ್ಕಾರ್ಟ್ ನೀಡಿತ್ತು.

ಇತ್ತ ಜಗಬೋರನಹಳ್ಳಿ ಗ್ರಾಮಕ್ಕೆ ಬರುತ್ತಿದ್ದಂತೆಯೇ 'ಭೀಮ'ನಿಗೆ ಮತ್ತೊಂದು ಆನೆ 'ಕ್ಯಾಪ್ಟನ್' ಎದುರಾಗಿದೆ. ಈ ವೇಳೆ ಎರಡೂ ಆನೆಗಳ ನಡುವೆ ಕಾದಾಟ ಶುರುವಾಗಿದೆ. ಇದರಿಂದ ಭೀಮನ ಒಂದು ದಂತ ಮುರಿದಿದೆ. ಮದದಲ್ಲಿದ್ದ ಕಾಡಾನೆ 'ಕ್ಯಾಪ್ಟನ್', ಮನೆಯ ಎದುರು ಇಟ್ಟಿದ್ದ ಪ್ಲಾಸ್ಟಿಕ್ ಪೈಪ್ ಹಾಗೂ ನೀರು ತುಂಬಿದ್ದ ಡ್ರಮ್ ಒಡೆದು ಹಾಕಿದೆ. ಪಕ್ಕದಲ್ಲಿದ್ದ ಚಕ್ಕಡಿಗೂ ಹಾನಿ ಮಾಡಿದೆ.

ಕಾಳಗ ನೋಡುತ್ತಿದ್ದ ಗ್ರಾಮಸ್ಥರು ಭೀತಿಯಿಂದ, 'ಹೋಗು ನಮ್ಮಪ್ಪ ಸಾಕು ನಮ್ಮಪ್ಪ' ಎಂದು ಕೂಗುತ್ತಿದ್ದರು. ಕಾರ್ಯಪಡೆ ಸಿಬ್ಬಂದಿ ಆನೆಗಳನ್ನು ಪ್ರತ್ಯೇಕಿಸಿ ಓಡಿಸಿ ಕಾಳಗಕ್ಕೆ ಅಂತ್ಯಹಾಡಿದರು.



ಕಾಡಾನೆ 'ಭೀಮ'ನ ದಂತ ಮುರಿದು ಬಿದ್ದಿರುವುದು

₹64 ಕೋಟಿ ಮೌಲ್ಯದ ಆಸ್ತಿ ಮುಟ್ಟುಗೋಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೇಲೆಕೇರಿ ಬಂದರಿನಿಂದ ಕಬ್ಬಿಣದ ಅದಿರು ಕದ್ದು ಸಾಗಿಸಿದ ಪ್ರಕರಣದಲ್ಲಿ ಕಾಂಗ್ರೆಸ್ ಶಾಸಕ ಸತೀಶ್ ಸೈಲ್ ಅವರಿಗೆ ಸೇರಿದ ₹64 ಕೋಟಿಯಷ್ಟು ಮಾರುಕಟ್ಟೆ ಮೌಲ್ಯದ ಸ್ಥಿರಾಸ್ತಿಗಳನ್ನು ಜಾರಿ ನಿರ್ದೇಶನಾಲಯವು (ಇ.ಡಿ) ಮುಟ್ಟುಗೋಲು ಹಾಕಿಕೊಂಡಿದೆ.

ಗೋವಾದ ವಾಸ್ಕೋಡಗಾಮಾದ 'ಅವರ್ ಲೇಡಿ ಮರ್ಸಸ್' ವಾಣಿಜ್ಯ ಸಂಕೀರ್ಣ, ದಕ್ಷಿಣ ಗೋವಾದ ಮರ್ಮಗಾವೊ ತಾಲ್ಲೂಕಿನ ವಿವಿಧೆಡೆ ಇರುವ 16,850 ಚದರ ಮೀಟರ್ ಅಳತೆಯ ಕೃಷಿ ಜಮೀನುಗಳು, 12,500 ಚದರ ಮೀಟರ್ ಅಳತೆಯ ನಿವೇಶನಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಈ ಸ್ಥಿರಾಸ್ತಿಗಳ ಮಾರ್ಗದರ್ಶಿ ಮೌಲ್ಯವೇ ₹21 ಕೋಟಿಯಷ್ಟಾಗುತ್ತದೆ ಎಂದು ಇ.ಡಿ ತಿಳಿಸಿದೆ.

ಬೇಲೆಕೇರಿ ಬಂದರಿನಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯು ವಶಕ್ಕೆ ಪಡೆದು ಸಂಗ್ರಹಿಸಿದ್ದ 5 ಲಕ್ಷ ಟನ್‌ಗಳಷ್ಟು ಕಬ್ಬಿಣದ ಅದಿರಿನಲ್ಲಿ, 1.54 ಲಕ್ಷ ಟನ್‌ಗಳಷ್ಟು ಅದಿರನ್ನು ಸತೀಶ್ ಸೈಲ್ ಅವರ ಒಡೆತನದ ಎಸ್‌ಎಂಎಸ್‌ಪಿಎಲ್ ಕಂಪನಿಯು ಚೀನಾಕ್ಕೆ ರಫ್ತು ಮಾಡಿತ್ತು. ಎಂವಿ ಕೊಲಂಬಿಯ ಮತ್ತು ಎಂವಿ ಮ್ಯಾಡರಿನ್ ಎಂಬ ಹಡಗುಗಳ ಮೂಲಕ ಈ ಅದಿರನ್ನು ಸಾಗಿಸಲಾಗಿತ್ತು ಎಂದು ವಿವರಿಸಿದೆ.

ಚೀನಾದಲ್ಲಿ ಮತ್ತೊಂದು ಕಂಪನಿಯನ್ನು ತೆರೆದು, ಆ ಕಂಪನಿಯು ಈ ಅದಿರನ್ನು ಖರೀದಿಸಿದಂತೆ ದಾಖಲೆ ಸೃಷ್ಟಿಸಲಾಗಿತ್ತು. ವಾಸ್ತವದಲ್ಲಿ ಬೇರೆಯದ್ದೇ ಕಂಪನಿಗೆ ಅದಿರನ್ನು ಮಾರಾಟ ಮಾಡಲಾಗಿತ್ತು ಎಂದಿದೆ.

ಜಿಂಕೆ ಬೇಟೆ: ಇಬ್ಬರ ಸೆರೆ

ಹುಣಸೂರು (ಮೈಸೂರು ಜಿಲ್ಲೆ): ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಆನೆಚೌಕೂರು ವಲಯದ ಭುಂಗಲೆಕೂಪ ಅರಣ್ಯದಲ್ಲಿ ಜಿಂಕೆ ಬೇಟೆಯಾಡುತ್ತಿದ್ದ ಇಬ್ಬರನ್ನು ಅರಣ್ಯ ಸಿಬ್ಬಂದಿ ಬಂಧಿಸಿದ್ದಾರೆ.

ಕೊಡಗು ಮೂಲದ ರೂಪೇಶ್, ಅರುಣ್ ಮತ್ತು ಜೀವಿತ್ ಅರಣ್ಯಕ್ಕೆ ಅಕ್ರಮವಾಗಿ ಪ್ರವೇಶಿಸಿ ಗಂಡು ಜಿಂಕೆ ಬೇಟೆಯಾಡಿದ್ದಾರೆ. ಗಸ್ತಿನಲ್ಲಿದ್ದ ಸಿಬ್ಬಂದಿಗೆ ಗುಂಡಿನ ಶಬ್ದ ಕೇಳುತ್ತಿದ್ದಂತೆ ಸ್ಥಳಕ್ಕೆ ಹೋಗಿದ್ದರಿಂದ ಇಬ್ಬರನ್ನು ವಶಕ್ಕೆ ಪಡೆದಿದ್ದು, ಮತ್ತೊಬ್ಬ ಆರೋಪಿ ಜೀವಿತ್ ತಲೆಮರೆಸಿಕೊಂಡಿದ್ದಾನೆ.


'ಸ್ಥಳದಲ್ಲಿ ಗಂಡು ಜಿಂಕೆ ಕಳೇಬರ, ಬಂದೂಕು, ಮಾಂಸ ಸಾಗಣೆಗೆ ತಂದಿದ್ದ ಕಾರು, ಹೆಡ್ ಟಾರ್ಚ್, ಜೀವಂತ ಗುಂಡು ವಶಕ್ಕೆ ಪಡೆಯಲಾಗಿದೆ' ಎಂದು ಎಸಿಎಫ್ ಲಕ್ಷ್ಮೀಕಾಂತ್ ಮಾಹಿತಿ ನೀಡಿದರು.

ಸುದ್ದಿ 2 ನಿಮಿಷ

'ಟಿಇಟಿ ವಿರೋಧಿಸಿ ದೆಹಲಿಯಲ್ಲಿ 24ರಂದು ಪ್ರತಿಭಟನೆ'

ಹಾವೇರಿ: 'ಸೇವಾನಿರತ ಶಿಕ್ಷಕರಿಗೆ ಟಿಇಟಿ (ಶಿಕ್ಷಕರ ಅರ್ಹತಾ ಪರೀಕ್ಷೆ) ನಿಗದಿಪಡಿಸುತ್ತಿರುವ ನಿರ್ಧಾರವನ್ನು ಕೇಂದ್ರ ಸರ್ಕಾರ ಕೈಬಿಡಬೇಕು' ಎಂದು ಒತ್ತಾಯಿಸಿ ನವದೆಹಲಿಯ ಜಂತರ್ ಮಂತರ್‌ನಲ್ಲಿ ನವೆಂಬರ್ 24ರಂದು ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ' ಎಂದು ಅಖಿಲ ಭಾರತ ಶಿಕ್ಷಕರ ಫೆಡರೇಷನ್‌ನ ರಾಷ್ಟ್ರೀಯ ಘಟಕದ ಅಧ್ಯಕ್ಷ ಬಸವರಾಜ ಗುರಿಕಾರ ತಿಳಿಸಿದರು.

ಭಾನುವಾರ ಸುದ್ದಿಗಾರರ ಜೊತೆ ಈ ವಿಷಯ ತಿಳಿಸಿದ ಅವರು, 'ರಾಷ್ಟ್ರ ಮಟ್ಟದಲ್ಲಿ ಇದೇ ಮೊದಲ ಬಾರಿಗೆ ಪ್ರತಿಭಟನೆ ನಡೆದಿದ್ದು, ಎಲ್ಲ ರಾಜ್ಯಗಳ ಶಿಕ್ಷಕ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ' ಎಂದರು.



'24ರಂದು ಸಾಂಕೇತಿಕವಾಗಿ ಪ್ರತಿಭಟನೆ ನಡೆಸಲಾಗುವುದು. ನಂತರ, ರಾಜ್ಯ, ಜಿಲ್ಲೆ ಹಾಗೂ ತಾಲ್ಲೂಕು ಮಟ್ಟದಲ್ಲಿಯೂ ಪ್ರತಿಭಟನೆಗಳು ನಡೆಯಲಿವೆ' ಎಂದು ತಿಳಿಸಿದರು.

'ಶಿಕ್ಷಕರ ಸೇವಾನುಭವವೇ ದೊಡ್ಡ ತರಬೇತಿಯಾಗಿದೆ. ಪರೀಕ್ಷೆ ನಡೆಸುವ ನಿರ್ಧಾರ ಹಿಂಪಡೆಯಬೇಕು. ಸುಪ್ರೀಂಕೋರ್ಟ್ ತೀರ್ಪು ಮರುಪರಿಶೀಲನೆ ಕೋರಿ ಅರ್ಜಿ ಸಲ್ಲಿಸಬೇಕು' ಎಂದು ಆಗ್ರಹಿಸಿದರು.

'ಟಿಪ್ಪು ಜಯಂತಿ ಆಚರಣೆ ಖಚಿತ'

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): 'ಟಿಪ್ಪು ಜಯಂತಿ ಆಚರಣೆಗೆ ನಿಷೇಧ ಹೇರಿದ್ದರೂ ಪಟ್ಟಣದಲ್ಲಿ ನ.10ರಂದು ಕಾರ್ಯಕ್ರಮ ನಡೆಸುವುದು ಖಚಿತ' ಎಂದು ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಘಟಕದ ಕಾರ್ಯದರ್ಶಿ ಸುಶೀಲಾ ತಿಳಿಸಿದರು.

ಇಲ್ಲಿ ಮುಸ್ಲಿಂ ಸೌಹಾರ್ದ ಒಕ್ಕೂಟದಿಂದ ಭಾನುವಾರ ಹಮ್ಮಿಕೊಂಡಿದ್ದ 'ಟಿಪ್ಪು ಸದ್ಭಾವನಾ' ಸಮಾರಂಭದಲ್ಲಿ ಅವರು ಮಾತನಾಡಿದರು.

'ಟಿಪ್ಪು ಜಯಂತಿ ಆಚರಣೆ ತಡೆಯಲು ತಾಲ್ಲೂಕು ಆಡಳಿತ ನಿಷೇಧಾಜ್ಞೆ ಜಾರಿಗೊಳಿಸಿದೆ. ಯಾರೇ ತಡೆದರೂ ಟಿಪ್ಪು ಜಯಂತಿ ನಡೆಯಲಿದೆ' ಎಂದು ಹೇಳಿದರು.

ನಿಷೇಧಾಜ್ಞೆ: ಸೋಮವಾರ (ನ.10) ಬೆಳಿಗ್ಗೆ 6ರಿಂದ ರಾತ್ರಿ 9ರವರೆಗೆ ಟೌನ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿ ತಹಶೀಲ್ದಾರ್ ಚೇತನಾ ಯಾದವ್ ಆದೇಶಿಸಿದ್ದಾರೆ.

ಮೈಸೂರು: ದಾಳಿಕೋರ ಹುಲಿ ಸೆರೆ

ಮೂವರ ಬಲಿ ಪಡೆದಿದ್ದ ಹುಲಿ • ದೃಢಪಡಿಸಿಕೊಳ್ಳಲು ಸಚಿವ ಖಂಡ್ರೆ ಸೂಚನೆ

ಪ್ರಜಾವಾಣಿ ವಾರ್ತೆ

ಮೈಸೂರು: 'ಜಿಲ್ಲೆಯ ಸರಗೂರು ತಾಲ್ಲೂಕಿನಲ್ಲಿ ಪದೇ ಪದೇ ದಾಳಿ ನಡೆಸುತ್ತಿದ್ದ ಗಂಡು ಹುಲಿಯನ್ನು ಸೆರೆ ಹಿಡಿಯಲಾಗಿದೆ' ಎಂದು ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದ್ದಾರೆ.

'ಕಳೆದ ಒಂದು ತಿಂಗಳಲ್ಲಿ, ದಾಳಿ ನಡೆಸಿ ಮೂವರ ಸಾವಿಗೆ ಕಾರಣವಾಗಿದ್ದ ಹುಲಿಯನ್ನು ಸೆರೆ ಹಿಡಿದಿರುವುದಾಗಿ ಅರಣ್ಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ' ಎಂದು ಹೇಳಿದ್ದಾರೆ.

'ಮೃತರ ಮರಣೋತ್ತರ ಪರೀಕ್ಷೆ ವರದಿ ಮತ್ತು ಸೆರೆಸಿಕ್ಕಿರುವ ಹುಲಿಯ ಡಿ.ಎನ್.ಎ ಹೋಲಿಕೆ ಮಾಡಿ ಸಿಕ್ಕಿಬಿದ್ದಿರುವುದು ಹೆಡಿಯಾಲ, ಮೊಳೆಯೂರು, ನುಗು ವ್ಯಾಪ್ತಿಯಲ್ಲಿ ದಾಳಿ ಮಾಡಿದ್ದ ಹುಲಿಯೇ ಎಂಬುದನ್ನು ಖಚಿತಪಡಿಸಿಕೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ' ಎಂದು ಮಾಹಿತಿ ನೀಡಿದ್ದಾರೆ.



ಶನಿವಾರ ರಾತ್ರಿ ಸೆರೆ ಸಿಕ್ಕ ಹುಲಿ

'ಬಂಡೀಪುರ ಮತ್ತು ನಾಗರಹೊಳೆಯ ಅರಣ್ಯದಂಚಿನಲ್ಲಿ ಮನುಷ್ಯರು, ಜಾನುವಾರುಗಳ ಮೇಲೆ ಹುಲಿ ದಾಳಿ ಪ್ರಕರಣಗಳು ಹೆಚ್ಚಾಗಿತ್ತು. ಬಂಡೀಪುರ ಮತ್ತು ನಾಗರಹೊಳೆಯ ಸಫಾರಿ ಸ್ಥಗಿತಗೊಳಿಸಿ, ಆ ಸಿಬ್ಬಂದಿಯನ್ನೂ ಹುಲಿ ಸರೆ ಕಾರ್ಯಾಚರಣೆಗೆ ನಿಯೋಜಿಸಲಾಗಿತ್ತು' ಎಂದು ತಿಳಿಸಿದ್ದಾರೆ.

'ಸೆರೆ ಸಿಕ್ಕಿರುವ ಹುಲಿಗೆ ಅಂದಾಜು 12 ವರ್ಷದ್ದಾಗಿದ್ದು, ಹಲ್ಲುಗಳು ಬಲಹೀನವಾಗಿವೆ. ಹೀಗಾಗಿ ಅರಣ್ಯದಲ್ಲಿ ಸಸ್ಯಹಾರಿ ವನ್ಯಜೀವಿಗಳ ಬೇಟೆಗೆ ಅಶಕ್ತವಾಗಿದ್ದ ಕಾರಣ, ಪಕ್ಕದ ಗ್ರಾಮಗಳಿಗೆ ನುಗ್ಗಿ ಜನ-ಜಾನುವಾರು ಮೇಲೆ ದಾಳಿ ಮಾಡುತ್ತಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ' ಎಂದು ಹೇಳಿದ್ದಾರೆ.

'ವಸತಿ ಪ್ರದೇಶಗಳ ಬಳಿ ಹುಲಿಗಳ ಸಂಚಾರ ಇರುವ ಸ್ಥಳದಲ್ಲಿಯೇ ಮೊಕ್ಕಾಂ ಹೂಡಬೇಕು. ಈ ಹುಲಿಯಲ್ಲದೆ ಬೇರೆ ಹುಲಿಗಳೂ ದಾಳಿ ಮಾಡಿರುವ ಕುರಿತು ಪರಿಶೀಲಿಸಿ ಕಾರ್ಯಾಚರಣೆ ನಡೆಸುವಂತೆಯೂ ವನ್ಯಜೀವಿ ವಿಭಾಗದ ಎ.ಪಿ.ಸಿ.ಸಿ.ಎಫ್. ಮತ್ತು ಹುಲಿ ಯೋಜನೆಯ ನಿರ್ದೇಶಕರಿಗೆ ಸೂಚಿಸಲಾಗಿದೆ' ಎಂದು ಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಸರಗೂರು ತಾಲ್ಲೂಕು ಹೊಸಕೋಟೆ ಬಳಿ ಶನಿವಾರ ರಾತ್ರಿ ಸೆರೆ ಸಿಕ್ಕಿರುವ ಹುಲಿಯ ಕುತ್ತಿಗೆ ಮತ್ತು ಕಾಲಿನ ಭಾಗದಲ್ಲಿ ಗಾಯವಾಗಿದೆ. ಅದನ್ನು ಮೈಸೂರು ತಾಲ್ಲೂಕಿನ ಕೂರ್ಗಳ್ಳಿಯಲ್ಲಿರುವ ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದೆ' ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಕೈದಿಗಳಿಗೆ ಆತಿಥ್ಯ: ಕ್ರಮಕ್ಕೆ ಸಿ.ಎಂ ಸೂಚನೆ'

ಹರಪನಹಳ್ಳಿ (ವಿಜಯನಗರ ಜಿಲ್ಲೆ): 'ಪರಪ್ಪನ ಅಗ್ರಹಾರದಲ್ಲಿ ಕೈದಿಗಳಿಗೆ ರಾಜಾತಿಥ್ಯ ಪ್ರಕರಣ ಕುರಿತು ಗೃಹ ಸಚಿವರು ಸೋಮವಾರ ಸಭೆ ಕರೆದಿದ್ದು, ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಸೂಚಿಸಲಾಗಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಇಲ್ಲಿ ಹೆಲಿಪ್ಯಾಡ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನೋಂದಣಿ ಆಗದ ಎಲ್ಲ ಸಂಘಟನೆಗಳನ್ನು ನಿಷೇಧಿಸಲು ಹೇಳಿದ್ದೇವೆ, ಆರ್‌ಎಸ್‌ಎಸ್ ಎಂದು ಹೇಳಿಲ್ಲ. ಆದರೆ, ಜಹ ಅರ್ಥ ಮಾಡಿಕೊಂಡರೆ ಏನು ಹೇಳೋದು' ಎಂದರು.

'ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆ ಸಂಬಂಧಿತ ಪ್ರಕರಣ ಹೈಕೋರ್ಟ್‌ನಲ್ಲಿದೆ. ತೀರ್ಪಿನಂತೆ ಕ್ರಮ ವಹಿಸಲಾಗುವುದು' ಎಂದು ಹೇಳಿದರು.

ವರದಿ ನೀಡಲು ಪರಮೇಶ್ವರ ಸೂಚನೆ

ಒಂದನೇ ಪುಟದಿಂದ...

ಪದೇ ಪದೇ ಇಂತಹ ಘಟನೆಗಳು ಜೈಲಿನಲ್ಲಿ ನಡೆಯುತ್ತಿವೆ. ಜೈಲಿನ ಉಸ್ತುವಾರಿ ಯಾರಿದ್ದಾರೆ ಅವರ ವಿರುದ್ಧ ಕ್ರಮ ಆಗಲೇಬೇಕು. ಶೀಘ್ರ ಅಧಿಕಾರಿಗಳ ಸಭೆ ಕರೆದು ಚರ್ಚಿಸಲಾಗುವುದು. ಹಳೆಯ ವಿಡಿಯೊ ಎಂಬುದು ಗೊತ್ತಿಲ್ಲ. ತನಿಖೆ ಬಳಿಕ ಗೊತ್ತಾಗಲಿದೆ. ಹಳೆಯ ವಿಡಿಯೊ ಆಗಿದ್ದರೂ ಯಾರಿಗೂ ಮೊಬೈಲ್ ಕೊಡುವಂತಿಲ್ಲ. ನಟ ದರ್ಶನ್ ಅವರು ದಿಂಬು, ಹಾಸಿಗೆಗೆ ನ್ಯಾಯಾಲಯದಲ್ಲಿ ಮನವಿ ಮಾಡಿಕೊಳ್ಳುತ್ತಿದ್ದಾರೆ. ಆದರೆ, ಕೈದಿಗಳಿಗೆ ಎಲ್ಲವೂ ಸುಲಭವಾಗಿ ಸಿಗುತ್ತದೆ ಎಂದು ಜೈಲು ಅಧಿಕಾರಿಗಳ ವಿರುದ್ಧ ಅಸಮಾಧಾನ ಹೊರಹಾಕಿದರು.

ಮದ್ಯ ಕುಡಿದು ಕೈದಿಗಳ ನೃತ್ಯ....

ಒಂದನೇ ಪುಟದಿಂದ...

ಕೈದಿಗಳಾದ ಜುಹಾದ್ ಹಮೀದ್, ಉಮೇಶ್ ರೆಡ್ಡಿ ಇರುವ ಬ್ಯಾರಕ್ ಮೇಲೆ ಭಾನುವಾರ ಮುಂಜಾನೆ ಕಾರಾಗೃಹ ಇಲಾಖೆ ಅಧಿಕಾರಿಗಳ ತಂಡ ದಾಳಿ ನಡೆಸಿ, ಪರಿಶೀಲನೆ ನಡೆಸಿತು. ಉಮೇಶ್ ರೆಡ್ಡಿ ಇರುವ ಕೊಠಡಿಯಲ್ಲಿನ ಟಿ.ವಿ ಸಹಿತ ಹಲವು ವಸ್ತುಗಳು ಮಾಯವಾಗಿರುವುದು ಅಧಿಕಾರಿಗಳಿಗೆ ಅಚ್ಚರಿಯುಂಟು ಮಾಡಿದೆ.

ಈ ನಡುವೆ ಕಾರಾಗೃಹ ಇಲಾಖೆ ಹೆಚ್ಚುವರಿ ಡಿಐಜಿ ಪಿ.ವಿ.ಆನಂದ ರೆಡ್ಡಿ ಅವರು ಕಾರಾಗೃಹಕ್ಕೆ ಭೇಟಿ ನೀಡಿ, ಅಧೀನ ಅಧಿಕಾರಿಗಳು ಮತ್ತು ಸಿಬ್ಬಂದಿಯ ವಿಚಾರಣೆ ನಡೆಸಿ, ಘಟನೆ ಕುರಿತು ಮಾಹಿತಿ ಪಡೆದುಕೊಂಡರು.

ಕೈದಿಗಳ ಬಳಿ ಇದ್ದ ಮೊಬೈಲ್‌ಗಳು ಒಂದೇ ದಿನದಲ್ಲಿ ಮಾಯವಾಗಲು ಹೇಗೆ ಸಾಧ್ಯ ಎಂಬುದರ ಬಗ್ಗೆ ಜೈಲು ಅಧಿಕಾರಿಗಳು ತಲೆ ಕೆಡಿಸಿಕೊಂಡಿದ್ದಾರೆ. ಇದರ ಜತೆಗೆ ಜೈಲಿನ ಕೆಲ ಸಿಬ್ಬಂದಿಯೇ ಕೈದಿಗಳೊಂದಿಗೆ ಶಾಮೀಲಾಗಿರುವ ಶಂಕೆ ವ್ಯಕ್ತವಾಗಿದ್ದು, ಆ ನಿಟ್ಟಿನಲ್ಲೂ ತನಿಖೆ ನಡೆಸಲಾಗುವುದು ಎಂದು ಮೂಲಗಳು ಹೇಳಿವೆ.

ಅತ್ಯಾಚಾರ ಪ್ರಕರಣದ ಅಪರಾಧಿ ಉಮೇಶ್ ರೆಡ್ಡಿ, ಲಷ್ಕರ್ -ಎ-ತಯಬಾ ಸಂಘಟನೆಯ ಉಗ್ರ ಜುಹಾದ್ ಹಮೀದ್ ಶಕೀಲ್ ಮನ್ನಾ, ದುಬೈನಿಂದ ಚಿನ್ನ ಕಳ್ಳ ಸಾಗಣೆ ಮಾಡಿದ ಪ್ರಕರಣದ ಆರೋಪಿ ತರುಣ್ ರಾಜ್ ಅವರು ಮೊಬೈಲ್ ಫೋನ್ ಹಿಡಿದುಕೊಂಡು ತಮ್ಮ ಸಹಚರರು ಹಾಗೂ ಸಂಬಂಧಿಕರ ಜತೆ ಮಾತುಕತೆ ನಡೆಸುತ್ತಿರುವುದು, ಕೊಠಡಿಯಲ್ಲಿ ಟಿ.ವಿ.ಸೌಲಭ್ಯ ಇರುವುದು ವಿಡಿಯೊದಲ್ಲಿ ಸೆರೆಯಾಗಿದೆ.



ಮದ್ಯ ಹಾಗೂ ಶೇಂಗಾ

ವಿಚಾರಣಾಧೀನ ಕೈದಿಗಳ ನೃತ್ಯ: ಬ್ಯಾರಕ್‌ನ ಕೊಠಡಿಯಲ್ಲಿ 10ರಿಂದ 15 ಮಂದಿ ವಿಚಾರಣಾಧೀನ ಕೈದಿಗಳು ಮದ್ಯದ ಬಾಟಲ್ ಇಟ್ಟುಕೊಂಡು ಪಾರ್ಟಿ ಹಾಗೂ ನೃತ್ಯ ಮಾಡಿದ್ದಾರೆ. ಮೋಜು-ಮಸ್ತಿ ಮಾಡುತ್ತಿರುವ 1 ನಿಮಿಷ 44 ಸೆಕೆಂಡಿನ ವಿಡಿಯೊ ಇದಾಗಿದ್ದು, ಡ್ರಮ್, ತಟ್ಟೆಗಳೇ ಕೈದಿಗಳಿಗೆ ಮ್ಯೂಸಿಕ್ ಬ್ಯಾಂಡ್ ಆಗಿದ್ದವು.

ಜೈಲು ಅಧಿಕಾರಿಗಳ ಬೆಂಬಲ: ಈ ಹಿಂದೆ ಕೇರಳದ ಶಂಕಿತ ಉಗ್ರ ಟಿ.ನಾಸೀರ್‌ನ ಸೂಚನೆ ಮೇರೆಗೆ ಬೆಂಗಳೂರು, ತಮಿಳುನಾಡು ಹಾಗೂ ದೇಶದ ಕೆಲವೆಡೆ ವಿಧ್ವಂಸಕ ಕೃತ್ಯ ಎಸಗಲು ಸಂಚು ರೂಪಿಸಿದ್ದ ಪ್ರಕರಣದಲ್ಲಿ ಹತ್ತು ಮಂದಿಯನ್ನು ಬಂಧಿಸಲಾಗಿತ್ತು.

'ವಿಡಿಯೊ ಅಸಲಿ'

ಒಂದನೇ ಪುಟದಿಂದ...

ಜಾಲತಾಣದಲ್ಲಿ ಹರಿದಾಡುತ್ತಿರುವ ವಿಡಿಯೊಗಳ ಪೈಕಿ ಕೆಲವನ್ನು 2023ರಲ್ಲಿ ಚಿತ್ರೀಕರಿಸಲಾಗಿದೆ. ಇನ್ನೂ ಕೆಲವನ್ನು 2025ರಲ್ಲಿ ಚಿತ್ರೀಕರಿಸಿರುವುದು ಮೇಲ್ನೋಟಕ್ಕೆ ಖಚಿತವಾಗಿದೆ. ಮೊಬೈಲ್‌ಗಳು ಸಿಕ್ಕಿದ್ದು ಹೇಗೆ? ಕೊಟ್ಟವರು ಯಾರು? ಯಾವಾಗ ಚಿತ್ರೀಕರಿಸಲಾಯಿತು? ಮಾಧ್ಯಮಗಳಿಗೆ ವಿಡಿಯೊಗಳನ್ನು ಹರಿಬಿಟ್ಟವರು ಯಾರು? ಎಂಬುದನ್ನು ತಿಳಿಯಲು ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲು ಕಾರಾಗೃಹದ ಮುಖ್ಯ ಅಧೀಕ್ಷಕರಿಗೆ ಸೂಚಿಸಲಾಗಿದೆ. ಅಲ್ಲದೇ ಇಲಾಖಾ ವತಿಯಿಂದಲೂ ತನಿಖೆ ನಡೆಸಿ ವರದಿ ನೀಡುವಂತೆ ದಕ್ಷಿಣ ವಲಯದ ಉಪ ಮಹಾನಿರೀಕ್ಷಕರಿಗೆ ಸೂಚಿಸಲಾಗಿದೆ ಎಂದಿದ್ದಾರೆ.

'ಮಾದಿಗ ಸಮುದಾಯದ ಒಗ್ಗಟ್ಟು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಕ್ಷಿಣದ ರಾಜ್ಯಗಳಲ್ಲಿರುವ ಮಾದಿಗ ಸಮುದಾಯವನ್ನು ಒಗ್ಗೂಡಿಸಿ ಶ್ರೀ ಮಾದಾರ ಚೆನ್ನಯ್ಯರವರ 956ನೇ ಜಯಂತ್ಯುತ್ಸವವನ್ನು ನಗರದ ಅರಮನೆ ಮೈದಾನದಲ್ಲಿ ಡಿ. 6 ಮತ್ತು 7ರಂದು ಆಯೋಜಿಸಲಾಗುವುದು' ಎಂದು ಕರ್ನಾಟಕ ಮಾದರ ಮಹಾಸಭಾದ ಅಧ್ಯಕ್ಷರೂ ಆಗಿರುವ ಆಹಾರ ಸಚಿವ ಕೆ.ಎಚ್. ಮುನಿಯಪ್ಪ ತಿಳಿಸಿದರು.

ಅರಮನೆ ಮೈದಾನದ ಗಾಯತ್ರಿ ವಿಹಾರದಲ್ಲಿ ಭಾನುವಾರ ನಡೆದ ಪೂರ್ವಸಿದ್ಧತಾ ಸಭೆಯಲ್ಲಿ ಮಾತನಾಡಿದ ಅವರು, 'ಕರ್ನಾಟಕ ಮಾದರ ಮಹಾಸಭಾ ಮತ್ತು ಕರ್ನಾಟಕ ಮಾತಂಗ ಫೌಂಡೇಶನ್‌ನ ಸಹ ಭಾಗಿತ್ವದಲ್ಲಿ ಆದಿ ಜಾಂಬವ, ಮಾದಾರ ಚೆನ್ನಯ್ಯ, ಮಾತಂಗ ಮಾತ, ಮಾತಂಗ ಮುನಿ ಮುಂತಾದ ಸಂಘಟನೆಗಳ ಸಹಯೋಗದಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗುವುದು' ಎಂದರು.

'ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ, ಮಹಾರಾಷ್ಟ್ರ, ತೆಲಂಗಾಣ ಮತ್ತು ಕೇರಳ ರಾಜ್ಯಗಳ ರಾಜಕೀಯ ನಾಯಕರು, ಹಿರಿಯ ಸಾಹಿತಿಗಳು, ಚಿಂತಕರು, ಸಾಂಸ್ಕೃತಿಕ ನಾಯಕರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಲಾಗುವುದು' ಎಂದರು.

ಕಬ್ಬು ದರ: ಕೇಂದ್ರ ಸಚಿವ, ವಿಜಯೇಂದ್ರ ವಿರುದ್ಧ ವಾಗ್ದಾಳಿ

'ದ್ರೋಹ ಬಗೆದದ್ದು ಜೋಶಿ'

ಪ್ರಜಾವಾಣಿ ವಾರ್ತೆ

ಕೂಡ್ಲಿಗಿ (ವಿಜಯನಗರ ಜಿಲ್ಲೆ): 'ಕಬ್ಬಿಗೆ ಎಫ್‌ಆರ್‌ಪಿ, ಎಂಎಸ್‌ಪಿ ನಿಗದಿಪಡಿಸುವುದು ಕೇಂದ್ರದ ಬಿಜೆಪಿ ಸರ್ಕಾರ. ಆದರೆ ತನ್ನ ತಪ್ಪು ಮುಚ್ಚಿಟ್ಟು ರೈತರನ್ನು ಎತ್ತಿಕಟ್ಟಲು ಯತ್ನಿಸಿತು. ಕಬ್ಬು ಬೆಳೆಗಾರರಿಗೆ ನಿಜವಾಗಿ ದ್ರೋಹ ಬಗೆದದ್ದು ಪ್ರಲ್ಹಾದ ಜೋಶಿ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕಿಸಿದರು.

ಭಾನುವಾರ ಇಲ್ಲಿ 74 ಕೆರೆ ತುಂಬಿಸುವ ಯೋಜನೆಗೆ ಚಾಲನೆ ಹಾಗೂ ₹1,250 ಕೋಟಿಗೂ ಅಧಿಕ ವೆಚ್ಚದ ವಿವಿಧ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಿ, ಮಾತನಾಡಿದರು.

'ವಿಜಯೇಂದ್ರ ಕೇಂದ್ರದ ದ್ರೋಹವನ್ನು ಮರೆಮಾಚಿ ಬೆಳಗಾವಿಯಲ್ಲಿ ಪ್ರತಿಭಟನೆಯ ನಾಟಕ ಆಡಿದರು. ಅವರು ಪ್ರಧಾನಿ, ಗೃಹ ಸಚಿವ, ಪ್ರಲ್ಹಾದ ಜೋಶಿ ಅವರ ಬಳಿ ರೈತರ ಬೇಡಿಕೆಯಿಟ್ಟು ಅವರ ಮನೆಯಲ್ಲಿ ತಮ್ಮ ಜನ್ಮದಿನ ಆಚರಿಸಬೇಕಿತ್ತು' ಎಂದು ಕುಟುಕಿದರು.

'ರೈತರ ಹಿತವನ್ನು ಗಮನಿಸಿ ರಾಜ್ಯ ಸರ್ಕಾರ ಇಂದು ಸ್ಪಷ್ಟ ನಿರ್ಧಾರಕ್ಕೆ ಬಂದಿದೆ' ಎಂದು ಹೇಳಿದರು.

'ಕಬ್ಬು ಬೆಳೆಗೆ ಕನಿಷ್ಠ ಬೆಂಬಲ ಬೆಲೆಯನ್ನು ಕಾರ್ಖಾನೆಗಳು ನೀಡುವ ವಿಶ್ವಾಸವಿದೆ ಎಂದು ಹೇಳಿದರು.

'ನಿಗದಿಯಾಗಿರುವ ದರ ವಿರೋಧಿಸುವ ಕಾರ್ಖಾನೆಗಳ ಮಾಲೀಕರಾಗಲಿ, ಬಸನಗೌಡ ಪಾಟೀಲ ಯತ್ನಾಳ್ ಆಗಲಿ ಅವರ ವಿರುದ್ಧ ಕ್ರಮ ಜರುಗಿಸಲಾಗುವುದು' ಎಂದು ಎಚ್ಚರಿಕೆ ನೀಡಿದರು.



ಬಿಜೆಪಿಯವರ ಮನೆದೇವ್ರು ಸುಳ್ಳು. ಮತಗಳ್ಳತನ ಮಾಡಿಯೇ ಅಧಿಕಾರಕ್ಕೆ ಬಂದವರು. ಮೊನ್ನೆ ಬಿಹಾರದ ಚುನಾವಣೆಯಲ್ಲೂ ಮತಕಳವು ಆಗಿದೆ

ಸಿದ್ದರಾಮಯ್ಯ, ಮುಖ್ಯಮಂತ್ರಿ

'ಅಣೆಕಟ್ಟೆ ಮುಖ್ಯವೋ, ಬೆಳೆಯೊ'

'ತುಂಗಭದ್ರಾ ಅಣೆಕಟ್ಟೆ ನೀರು ಆಶ್ರಯಿಸಿರುವ ರೈತರು ಎರಡನೇ ಬೆಳೆ ವಿಚಾರದಲ್ಲಿ ರಾಜಕೀಯ ಮಾಡಬಾರದು. ಅಣೆಕಟ್ಟೆ ಮುಖ್ಯನೋ, ಬೆಳೆ ಮುಖ್ಯನೋ ಎಂದು ಚಿಂತಿಸಬೇಕು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.




'ರೈತರಿಗೆ ದೀರ್ಘಾವಧಿಗೆ ಸುಭದ್ರ ಅಣೆಕಟ್ಟೆಯ ಅಗತ್ಯವಿದ್ದು, ನೆರೆ ರಾಜ್ಯಗಳನ್ನು ಒಪ್ಪಿಸಿ ಗೇಟ್ ಅಳವಡಿಕೆ ಕಾರ್ಯಕ್ಕೆ ಚಾಲನೆ ನೀಡಲಾಗುತ್ತಿದೆ' ಎಂದು ಹೇಳಿದರು.

ಕೆರೆ ಹರಾಜು ಹಾಕಿ: '₹ 800 ಕೋಟಿಗೂ ಹೆಚ್ಚು ಹಣ ಕೆರೆ ತುಂಬಿಸುವ ಯೋಜನೆಗೆ ಬಂದಿದೆ. ಎಲ್ಲ ಕೆರೆಗಳು ಹರಾಜು ಹಾಕಬೇಕು. ಮೀನು ಮರಿಗಳನ್ನು ಬೆಳೆಸಿ, ಬರುವ ಹಣದಿಂದ ವಿದ್ಯುತ್ ಬಿಲ್ ತುಂಬಬೇಕು' ಎಂದು ಸಲಹೆ ನೀಡಿದರು.

ಚಿಟಿಕೆ ಸುದ್ದಿ

ಭದ್ರಾ ನಾಲೆಗೆ ಉರುಳಿದ ಕಾರು: ಇಬ್ಬರ ಸಾವು



ಸಂತೇಬೆನ್ನೂರು (ದಾವಣಗೆರೆ): ಚಾಲಕನ ನಿಯಂತ್ರಣ ತಪ್ಪಿದ ಕಾರು ಶನಿವಾರ ಹೊಸೂರು ಗ್ರಾಮದ ಬಳಿಯ ಭದ್ರಾ ನಾಲೆಗೆ ಉರುಳಿದ್ದು, ಇಬ್ಬರು ಮೃತಪಟ್ಟಿದ್ದಾರೆ. ಇತರ ನಾಲ್ವರು ಈಜಿ ದಡ ಸೇರಿದ್ದಾರೆ.

ದಾವಣಗೆರೆಯ ಮಲ್ಲಿಕಾರ್ಜುನ್ (29) ಹಾಗೂ ಸಿದ್ದೇಶ್ (38) ಮೃತರು. ಆರು ಜನ ಸ್ನೇಹಿತರು ಮಂಗಳೂರು ಬಳಿಯ ಕೊರಗಜ್ಜ ದೇಗುಲದ ದರ್ಶನ ಪಡೆದು ರಾತ್ರಿ ದಾವಣಗೆರೆಗೆ ಮರಳುತ್ತಿದ್ದಾಗ ಅವಘಡ ಸಂಭವಿಸಿದೆ. ಇದಕ್ಕೆ ಅತಿವೇಗ ಹಾಗೂ ನಿರ್ಲಕ್ಷ್ಯದ ಚಾಲನೆಯೇ ಕಾರಣ ಎನ್ನಲಾಗಿದೆ.

ಸಂತೇಬೆನ್ನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೈಗಾ: ಗೇಟ್ ಬಿದ್ದು ಸಿಐಎಸ್‌ಎಫ್ ಯೋಧ ಸಾವು

ಕಾರವಾರ: ತಾಲ್ಲೂಕಿನ ಕೈಗಾ ಅಣು ವಿದ್ಯುತ್ ಸ್ಥಾವರದ ಅಣು ತ್ಯಾಜ್ಯ ವಿಲೇವಾರಿ ಘಟಕದ ಕಾವಲಿಗೆ ನಿಯೋಜಿಸಲಾಗಿದ್ದ ಸಿಐಎಸ್‌ಎಫ್ ಹೆಡ್ ಕಾನ್‌ಸ್ಟೆಬಲ್ ಶನಿವಾರ ರಾತ್ರಿ ಗೇಟ್ ಬಿದ್ದು ಮೃತಪಟ್ಟಿದ್ದಾರೆ.


ಮಹಾರಾಷ್ಟ್ರದ ಮಹಿಮಾನಗಢದ ನಿವಾಸಿ ಶೇಖರ ಭೀಮರಾವ್ ಜಗದಾಲೆ (48) ಮೃತ.

'ಗೇಟ್ ಬಿದ್ದು ತಲೆಗೆ ಬಲವಾದ ಏಟು ಬಿದ್ದಿತ್ತು. ರಕ್ಷಣೆಗೆ ಧಾವಿಸಿದ್ದ ಎಸ್‌ಟಿಎಫ್ ಸಿಬ್ಬಂದಿ ಹೆಚ್ಚಿನ ಚಿಕಿತ್ಸೆಗೆ ಒಯ್ಯುವಷ್ಟರಲ್ಲಿ ಶೇಖರ ಮೃತಪಟ್ಟಿದ್ದರು' ಎಂದು ಅಣು ಸ್ಥಾವರದ ಅಧಿಕಾರಿಗಳ ಹೇಳಿಕೆಯನ್ನು ಆಧರಿಸಿ ಮಲ್ಲಾಪುರ ಠಾಣೆ ಪೊಲೀಸರು ತಿಳಿಸಿದ್ದಾರೆ.

ನಿಧನ ವಾರ್ತೆ

ಶಾರದಾ ಅಶ್ವತ್ಥ್

ಮೈಸೂರು: ಚಿತ್ರನಟ ದಿವಂಗತ ಕೆ.ಎಸ್. ಅಶ್ವತ್ಥ್ ಅವರ ಪತ್ನಿ ಎನ್.ಆರ್.ಶಾರದಾ (96) ಅವರು ಇಲ್ಲಿನ ಸರಸ್ವತಿಪುರಂ ನಿವಾಸದಲ್ಲಿ ಭಾನುವಾರ ವಯೋಸಹಜ ಅನಾರೋಗ್ಯದಿಂದ ನಿಧನರಾದರು.



ಎನ್‌.ಆರ್. ಶಾರದಾ

ಅವರಿಗೆ ನಟ ಶಂಕರ್ ಅಶ್ವತ್ಥ್ ಸೇರಿದಂತೆ ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಇದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಸೋಮವಾರ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಶಿವಪ್ರಕಾಶ, ರಾಮಕೃಷ್ಣ, ಜಾಹ್ನವಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಇಲ್ಲಿನ ಬೆಟಗೇರಿ ಕೃಷ್ಣಶರ್ಮ ಸ್ಮಾರಕ ಟ್ರಸ್ಟ್, ಹಿರಿಯ ಮತ್ತು ಯುವ ಸಾಹಿತಿಗಳಿಗೆ 2023, 2024 ಮತ್ತು 2025ನೇ ಸಾಲಿನ ವಾರ್ಷಿಕ ಕಥೆ, ಕಾವ್ಯ ಪ್ರಶಸ್ತಿಗಳನ್ನು ಪ್ರಕಟಿಸಿದೆ.

ಬೆಳಗಾವಿಯಲ್ಲಿ ನ.11ರಂದು ಬೆಳಿಗ್ಗೆ 11ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಪ್ರಶಸ್ತಿ ಪ್ರದಾನ ಮಾಡುವರು ಎಂದು ಪ್ರಕಟಿಸಿದೆ.

'ಕವಿ ಎಚ್.ಎಸ್.ಶಿವಪ್ರಕಾಶ ಅವರನ್ನು 2023ನೇ ಸಾಲಿನ ಕಾವ್ಯ ಪ್ರಶಸ್ತಿ, ಚಿಂತಕ ಮತ್ತು ಪತ್ರಕರ್ತ ಜಿ.ರಾಮಕೃಷ್ಣ ಅವರನ್ನು 2024ನೇ ಸಾಲಿನ ವೈಚಾರಿಕ ಮತ್ತು ಪತ್ರಿಕೋದ್ಯಮ ಪ್ರಶಸ್ತಿ, ಕಥೆಗಾರ್ತಿ ಬಿ.ಟಿ.ಜಾಹ್ನವಿ ಅವರನ್ನು 2025ನೇ ಸಾಲಿನ ಕಥಾ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಈ ಪ್ರಶಸ್ತಿಗಳು ತಲಾ ₹ 50 ಸಾವಿರ ಒಳಗೊಂಡಿವೆ' ಎಂದು ಟ್ರಸ್ಟ್ ಅಧ್ಯಕ್ಷೆ ವಿನಯಾ ಒಕ್ಕುಂದ ಇಲ್ಲಿ ತಿಳಿಸಿದರು.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಅವರು, 'ಯುವ ಸಾಹಿತ್ಯ ಪುರಸ್ಕಾರಕ್ಕೆ ಮೂವರು ಆಯ್ಕೆ ಆಗಿದ್ದಾರೆ. ಶಿವಮೊಗ್ಗದ ಕೆ.ಅಕ್ಷತಾ (2023), ಮಂಗಳೂರಿನ ವಿಲ್ಸನ್ ಕಟೀಲ್ (2024) ಮತ್ತು ರಾಯಚೂರಿನ ಆರಿಫ್ ರಾಜಾ (2025) ಆಯ್ಕೆಯಾಗಿದ್ದಾರೆ. ಪ್ರಶಸ್ತಿ ತಲಾ ₹10 ಸಾವಿರ ನಗದು ಹೊಂದಿದೆ' ಎಂದರು.



ಶಿವಪ್ರಕಾಶ



ಜಿ.ರಾಮಕೃಷ್ಣ



ಬಿ.ಟಿ.ಜಾಹ್ನವಿ

'ರಾಜ್ಯಮಟ್ಟದ ಯುವ ಕಥೆ ಸ್ಪರ್ಧೆಯಲ್ಲಿ ಮಣಿಕಂಠ ಗೊದಮನಿ (ಪ್ರಥಮ), ಸಂತೋಷ ನಾಯಿಕ (ದ್ವಿತೀಯ), ಪ್ರಹ್ಲಾದ ಡಿ.ಎಂ. (ತೃತೀಯ), ರಾಜ್ಯಮಟ್ಟದ ಯುವ ಕಾವ್ಯ ಸ್ಪರ್ಧೆಯಲ್ಲಿ ವಿದ್ಯಾ (ಪ್ರಥಮ), ಮಂಜುಳಾ ಜಿ.ಎಚ್ (ದ್ವಿತೀಯ), ಶಿವರಾಜ ಅರಳಿ (ತೃತೀಯ) ಮತ್ತು ಶ್ರೀ ಮುದ್ರಾಡಿ (4ನೇ ಸ್ಥಾನ) ಗಳಿಸಿದ್ದಾರೆ. ಅವರಿಗೂ ಬಹುಮಾನ ನೀಡಲಾಗುವುದು' ಎಂದು ತಿಳಿಸಿದರು.

123 ವರ್ಷಗಳ ನಂತರ ಸಂಶೋಧಕರಿಗೆ ಕಾಣಿಸಿಕೊಂಡ 'ಪಿಲಿಯಾ' ಪ್ರಭೇದ

ಮಧುಗುಂಡಿ: ಅಪರೂಪದ ಜೇಡ ಗೋಚರ

• ವಿಜಯಕುಮಾರ್ ಎಸ್.ಕೆ.

ಚಿಕ್ಕಮಗಳೂರು: ಪಶ್ಚಿಮ ಘಟ್ಟದ ಜೀವವೈವಿಧ್ಯದ ಅಧ್ಯಯನ ಕೈಗೊಂಡಿರುವ ಸಂಶೋಧಕರ ತಂಡವು ಮೂಡಿಗೆರೆ ತಾಲ್ಲೂಕಿನ ಮಧುಗುಂಡಿಯಲ್ಲಿ ಕುಪ್ಪಳಿಸುವ ಜೇಡಗಳ 'ಪಿಲಿಯಾ' ಗುಂಪಿಗೆ ಸೇರಿದ ಹೊಸ ಪ್ರಭೇದದ ಜೇಡವು ಗೋಚರಿಸಿದೆ.

ಈ ಕುರಿತ ವರದಿ ಅಂತರರಾಷ್ಟ್ರೀಯ ಜೀವವೈವಿಧ್ಯ ಅಧ್ಯಯನ ಪತ್ರಿಕೆ ಝೂಟಾಕ್ಸಾನಲ್ಲಿ(Zootaxa) ಪ್ರಕಟವಾಗಿದೆ. ಈ ತಳಿಯ ಜೇಡ ಕೊನೆಯದಾಗಿ 1902ರಲ್ಲಿ ಕೇರಳದಲ್ಲಿ ಕಾಣಿಸಿಕೊಂಡಿತ್ತು. ಈಗ, 123 ವರ್ಷಗಳ ನಂತರ ಮಧುಗುಂಡಿಯಲ್ಲಿ ಈ ಸಂಕುಲ ಕಾಣಿಸಿಕೊಂಡಿರುವುದು ದಾಖಲಾಗಿದೆ.

ಸಂಶೋಧಕರು ಮೊದಲ ಬಾರಿಗೆ ಈ ಪ್ರಭೇಧದ ಗಂಡು, ಹೆಣ್ಣು ಜೇಡಗಳನ್ನು ಗುರುತಿಸಿದ್ದಾರೆ. ಈ ಗುಂಪಿಗೆ 'ಪಿಲಿಯಾ ಮಲೆನಾಡು' ಎಂಬ ಹೆಸರನ್ನು ಸಂಶೋಧಕರು ಸೂಚಿಸಿದ್ದಾರೆ. ಗೋಚರಿಸಿದ ಸ್ಥಳಕ್ಕೆ ಗೌರವ ಸೂಚಿಸಲು ಈ ಹೆಸರು ನೀಡಲಾಗಿದೆ ಎಂದೂ ಹೇಳುತ್ತಾರೆ.

> ಮಧುಗುಂಡಿಯಲ್ಲಿ ಪರಿಸರ ಅಧ್ಯಯನಕ್ಕೆ ಹೆಚ್ಚು ಅವಕಾಶವಿರುವುದು ಮತ್ತೆ ಸಾಬೀತಾಗಿದೆ. ಹಾಗಾಗಿ ಅಧ್ಯಯನ ಆಸಕ್ತಿ ಇರುವ ಅತಿಥಿಗಳಿಗೇ ಹೆಚ್ಚಿನ ಅವಕಾಶ ನೀಡುತ್ತಿದ್ದೇವೆ
>
> **ಶ್ರೀಜಿತ್**, ರಿವರ್ ಮಿಸ್ಟ್ ಮುಖ್ಯಸ್ಥ

ಮಧುಗುಂಡಿಯ ರಿವರ್ ಮಿಸ್ಟ್ ರೆಸಾರ್ಟ್‌ನಲ್ಲಿ ನೈಸರ್ಗಿಕ ತಜ್ಞರಾಗಿರುವ, ವನ್ಯಜೀವಿ ನಿರ್ವಹಣೆಯಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಅಜಿತ್ ಪಡಿಯಾರ್ ಈ ಹೊಸ ಪ್ರಭೇದವನ್ನು ಮೊದಲಿಗೆ ಗಮನಿಸಿದ್ದಾರೆ. ಒಟ್ಟು 24 ಜೇಡ ಪತ್ತೆಯಾಗಿವೆ. ಅವುಗಳಲ್ಲಿ 17 ಗಂಡು, ಮೂರು ಹೆಣ್ಣು ಮತ್ತು ನಾಲ್ಕು ಎಳೆಯ ಜೇಡಗಳಿವೆ. ಕಳೆದ ವರ್ಷ ಇದೇ ಸ್ಥಳದಲ್ಲಿ ಅಪರೂಪದ 'ಕೇಸರಿ ರೀಡ್‌ಟೇಲ್' ಚಿಟ್ಟೆಗಳನ್ನು ಅಜಿತ್ ಪಡಿಯಾರ್ ಗುರುತಿಸಿದ್ದರು.

'ಸಾಮಾನ್ಯವಾಗಿ ಮನೆ ಮತ್ತು ತೋಟಗಳಲ್ಲಿ ಕಾಣಿಸುವ ಜೇಡಗಳಿಗಿಂತ ಈ ಪಿಲಿಯಾ ಪ್ರಭೇದದ ಜೇಡಗಳು ವಿಭಿನ್ನವಾಗಿವೆ. ಅದರಲ್ಲೂ ಹೆಣ್ಣು ಜೇಡ ಮೊದಲ ಬಾರಿಗೆ ಗುರುತಿಸಲ್ಪಟ್ಟಿದೆ. ಇದು ಈ ಪ್ರಭೇದದ ಅಧ್ಯಯನದಲ್ಲಿ ಮಹತ್ವದ ಹೆಜ್ಜೆ' ಎಂದು ಪಡಿಯಾರ್ ಅಭಿಪ್ರಾಯಪಡುತ್ತಾರೆ.

ಗಮನಾರ್ಹವೆಂದರೆ ಈ ಜೇಡಗಳು ಅಪರೂಪದ ಸಸ್ಯ ಪ್ರಭೇದಗಳಾದ 'ಮೆಮೆಸಿಲಾನ್ ಅಂಬಲಾಟಮ್' ಮತ್ತು 'ಮೆಮೆಸಿಲಾನ್ ಮಲಬಾರಿಕಮ್'ಗಳಲ್ಲಿ ಮಾತ್ರವೇ ಕಾಣಿಸಿಕೊಳ್ಳುತ್ತಿವೆ. ಸಾಮಾನ್ಯವಾಗಿ ಈ ಸಸ್ಯಗಳ ಎಲೆಗಳ ನಡುವೆ ಅಡಗಿಕೊಂಡಿರುವುದು ಕಂಡುಬಂದಿದೆ ಎಂದು ವಿವರಿಸಿದರು.

ಜೇಡಗಳ ಅಧ್ಯಯನದಲ್ಲಿ ಪರಿಣತಿಯುಳ್ಳ ಜಾನ್ ಟಿ.ಡಿ. ಕ್ಯಾಲೆಬ್, ವೈದ್ಯ ಎ.ಪಿ.ಸಿ. ಅಭಿಜಿತ್ ಮತ್ತು ಐಟಿ ವೃತ್ತಿಪರ ಜಿತೇಶ್ ಪೈ ಅವರು ಲೇಖನದ ಸಹ-ಲೇಖಕರು ಎಂದು ಪಡಿಯಾರ್ ವಿವರಿಸಿದರು.

ಆರೋಗ್ಯಕರ ಪರಿಸರದ ಸೂಚಕ



'ಪಿಲಿಯಾ ಜೇಡ'

'ಅಧ್ಯಯನದ ಪ್ರಕಾರ, ಈ ಜೇಡಗಳು ನಿರ್ದಿಷ್ಟ ಆವಾಸಸ್ಥಾನದಲ್ಲಷ್ಟೇ ಜೀವಿಸುತ್ತವೆ ಎಂಬುದು ತಿಳಿಯುತ್ತದೆ. ಆವಾಸಸ್ಥಾನ ರಕ್ಷಿಸದಿದ್ದರೆ ಪ್ರಭೇದ ನಾಶವಾಗುವ ಸಾಧ್ಯತೆ ಇದೆ. ಇವು ಕೀಟ ನಿಯಂತ್ರಕವಾಗಿ ಕೆಲಸ ಮಾಡುತ್ತವೆ. ಇವುಗಳು ಇರುವಿಕೆ ಪಶ್ಚಿಮ ಘಟ್ಟ ರಕ್ಷಣೆಯ ಅಗತ್ಯವನ್ನು ಒತ್ತಿ ಹೇಳುತ್ತಿದೆ' ಎಂದು ಅಜಿತ್ ಪಡಿಯಾರ್ ಪ್ರತಿಪಾದಿಸಿದರು.

'ಮಧುಗುಂಡಿಯಲ್ಲಿ 2019ರಲ್ಲಿ ಭೀಕರ ಪ್ರವಾಹ ಸೃಷ್ಟಿಯಾಗಿತ್ತು. ಗುಡ್ಡ ಸರಿದು ಮನೆಗಳು ಕುಸಿದಿದ್ದವು. ಇಂತಹ ಪ್ರದೇಶದಲ್ಲಿ ಹೊಸ ಪ್ರಭೇದದ ಜೇಡ ಕಾಣಿಸಿರುವುದು ಆರೋಗ್ಯಕರ ಪರಿಸರ ವ್ಯವಸ್ಥೆಯ ಸೂಚಕವಾಗಿದೆ' ಎಂದು ಅಭಿಪ್ರಾಯಪಟ್ಟರು.

ಬಿಹಾರ ಪ್ರಜಾಮತ ಜನತಂತ್ರದ ಹಬ್ಬ
ವಿಧಾನಸಭಾ ಚುನಾವಣೆ - 2025

7.4 ಕೋಟಿ ಒಟ್ಟು ಮತದಾರರು | 3.7 ಕೋಟಿ 11 ರಂದು ಮತ ಚಲಾಯಿಸಲಿರುವ ಮತದಾರರು | 1,302 2ನೇ ಹಂತದಲ್ಲಿ ಕಣದಲ್ಲಿರುವ ಒಟ್ಟು ಅಭ್ಯರ್ಥಿಗಳ ಸಂಖ್ಯೆ | 122 ಎರಡನೇ ಹಂತದಲ್ಲಿ ಮತದಾನ ನಡೆಯಲಿರುವ ಕ್ಷೇತ್ರಗಳ ಸಂಖ್ಯೆ

ಬಿಹಾರ: ಎರಡನೇ ಹಂತದ ಮತದಾನ ನಾಳೆ

ಕೊನೆಯ ಹಂತದ ಪ್ರಚಾರ ಅಂತ್ಯ

• ಅಭಯ್ ಕುಮಾರ್

ಪಟ್ನಾ (ಬಿಹಾರ): ಬಿಹಾರ ವಿಧಾನಸಭಾ ಚುನಾವಣೆಯ ಎರಡನೇ ಹಾಗೂ ಕೊನೇ ಹಂತದ ಮತದಾನವು ಮಂಗಳವಾರ (ನ.11) ನಡೆಯಲಿದೆ. ಮತದಾರರ ಮನ ಗೆಲ್ಲಲು ಎನ್‌ಡಿಎ ಹಾಗೂ ಇಂಡಿಯಾ ಕೂಟದ ಪರವಾಗಿ ಪ್ರಮುಖ ನಾಯಕರು ಭಾನುವಾರ ರಾಜ್ಯದ ವಿವಿಧೆಡೆ ಅಬ್ಬರದ ಪ್ರಚಾರ ನಡೆಸಿದರು.

ಪ್ರಧಾನಿ ನರೇಂದ್ರ ಮೋದಿ ಶನಿವಾರ ಹಲವು ಜಿಲ್ಲೆಗಳಲ್ಲಿ ರ‍್ಯಾಲಿ ನಡೆಸಿದ್ದರು. ಕೇಂದ್ರ ಗೃಹ ಸಚಿವ ಅಮಿತ್ ಶಾ ಅರವಲ್ ಜಿಲ್ಲೆಯಲ್ಲಿ, ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಮಧುಬನಿ ಜಿಲ್ಲೆಯಲ್ಲಿ ಭಾನುವಾರ ಪ್ರಚಾರ ನಡೆಸಿದರು. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಕಿಶನ್‌ಗಂಜ್, ಪೂರ್ಣಿಯಾ ಜಿಲ್ಲೆಗಳಲ್ಲಿ ಮೈತ್ರಿಪಕ್ಷದ ಅಭ್ಯರ್ಥಿ ಪರ ಮತಯಾಚಿಸಿದರು.

ಪಕ್ಷವಾರು ಸ್ಪರ್ಧಿಗಳ ವಿವರ	
ಆರ್‌ಜೆಡಿ	70
ಬಿಜೆಪಿ	52
ಜೆಡಿಯು	45
ಕಾಂಗ್ರೆಸ್	37



ಬಿಹಾರದ ಮಧುಬನಿ ಜಿಲ್ಲೆಯ ಬಿಸ್ಫಿ ವಿಧಾನಸಭಾ ಕ್ಷೇತ್ರದಲ್ಲಿ ಪಕ್ಷದ ಅಭ್ಯರ್ಥಿಪರ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಪ್ರಚಾರ ನಡೆಸಿದರು —ಪಿಟಿಐ ಚಿತ್ರ


ಕಣದಲ್ಲಿರುವ ಪ್ರಮುಖರು

- ನಕ್ಸಲ್‌ಪೀಡಿತ ಇಮಾಮ್‌ಗಂಜ್ ಕ್ಷೇತ್ರದಿಂದ ಕೇಂದ್ರ ಸಚಿವ ಹಿಂದೂಸ್ತಾನಿ ಅವಾಂ ಮೋರ್ಚಾದ (ಜಾತ್ಯತೀತ) ಅಧ್ಯಕ್ಷ ಜಿತನ್ ರಾಂ ಮಾಂಝಿ ಅವರ ಸೊಸೆ ದೀಪಾ ಮಾಂಝಿ ಕಣದಲ್ಲಿದ್ದಾರೆ.
- ಎನ್‌ಡಿಎ ಒಕ್ಕೂಟ ರಾಷ್ಟ್ರೀಯ ಲೋಕಮೋರ್ಚಾದ ಪರವಾಗಿ ಉಪೇಂದ್ರ ಕುಶ್ವಾಹಾ ಪತ್ನಿ ಸ್ನೇಹಲತಾ ಅವರು 'ಸಾಸಾರಾಂ' ಕ್ಷೇತ್ರದಿಂದ ಸ್ಪರ್ಧಿಸಿದ್ದಾರೆ.
- ಬಿಹಾರ ಕಾಂಗ್ರೆಸ್ ಘಟಕದ ಅಧ್ಯಕ್ಷ ರಾಜೇಶ್ ರಾಮ್ ಔರಂಗಾಬಾದ್‌ನ 'ಕುಟುಂಬ' ಕ್ಷೇತ್ರದಿಂದ ಕಣದಲ್ಲಿದ್ದಾರೆ.
- ಮಖ್‌ದುಂಪುರ (ಜೆಹನಾಬಾದ್) ಕ್ಷೇತ್ರದಲ್ಲಿ (2,47,574) ಕನಿಷ್ಠ ಮತದಾರರಿದ್ದು, ನಲಂದಾ ಜಿಲ್ಲೆಯ ಹಿಸುವಾ ಕ್ಷೇತ್ರದಲ್ಲಿ (3,67,667) ಗರಿಷ್ಠ ಮತದಾರರಿದ್ದಾರೆ.
- ಮೊದಲ ಹಂತದಲ್ಲಿ (ನವೆಂಬರ್ 6) 121 ಕ್ಷೇತ್ರಗಳಿಗೆ ನಡೆದ ಮತದಾನದಲ್ಲಿ ಶೇಕಡಾ 65.1ರಷ್ಟು ಮತ ಚಲಾವಣೆಯಾಗಿದೆ.
- 122 ವಿಧಾನಸಭಾ ಕ್ಷೇತ್ರಗಳು ಬಿಹಾರದ 20 ಜಿಲ್ಲೆಗಳಲ್ಲಿ ಹರಡಿಕೊಂಡಿದ್ದು, ಮುಸಲ್ಮಾನ ಬಾಹುಳ್ಯವುಳ್ಳ ಕ್ಷೇತ್ರಗಳು ಹೆಚ್ಚಿವೆ.
- 243 ಕ್ಷೇತ್ರಗಳ ಫಲಿತಾಂಶವು ನ.14ರಂದು ಪ್ರಕಟವಾಗಲಿದೆ.
- ರಾಜ್ಯದಲ್ಲಿ ರಾಹುಲ್ ಗಾಂಧಿ ಒಟ್ಟು 15 ರ‍್ಯಾಲಿಗಳಲ್ಲಿ ಭಾಗವಹಿಸಿದ್ದರೆ, ನರೇಂದ್ರ ಮೋದಿ 14 ರ‍್ಯಾಲಿಗಳಲ್ಲಿ ಭಾಗಿಯಾಗಿದ್ದಾರೆ.

ಮತ ಕಳವು ಮರೆಮಾಚಲು ಎಸ್‌ಐಆರ್: ರಾಹುಲ್

ಮಹಾರಾಷ್ಟ್ರ, ಛತ್ತೀಸಗಢದಲ್ಲೂ ಅಕ್ರಮ ನಡೆದಿರುವ ಶಂಕೆ

ಪಚಮಡಿ (ಮಧ್ಯಪ್ರದೇಶ) (ಪಿಟಿಐ): 'ಮತ ಕಳ್ಳತನದ ಆರೋಪಗಳನ್ನು ಮರೆಮಾಚಲು ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಮಾಡಲಾಗುತ್ತಿದೆ ಮತ್ತು ಅದನ್ನು ಸಾಂಸ್ಥಿಕರಣಗೊಳಿಸಲಾಗುತ್ತಿದೆ' ಎಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಭಾನುವಾರ ಆರೋಪಿಸಿದರು.



ರಾಹುಲ್ ಗಾಂಧಿ

ಮಧ್ಯಪ್ರದೇಶದ ನರ್ಮದಾಪುರಂನ ಪಚಮಡಿ ಪಟ್ಟಣದಲ್ಲಿ ನಡೆದ ಜಿಲ್ಲಾ ಮಟ್ಟದ ಕಾಂಗ್ರೆಸ್ ಅಧ್ಯಕ್ಷರ ತರಬೇತಿ ಶಿಬಿರದ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು.

'ಮತ ಕಳ್ಳತನ ದೊಡ್ಡ ಸಮಸ್ಯೆಯಾಗಿದೆ. ಆದರೆ, ಅದನ್ನು ಎಸ್‌ಐಆರ್ ಮೂಲಕ ಮುಚ್ಚಿಹಾಕುವ ಯತ್ನ ನಡೆಯುತ್ತಿದೆ' ಎಂದು ಅವರು ದೂರಿದರು.

'ಇತ್ತೀಚೆಗಷ್ಟೇ ನಾನು ಹರಿಯಾಣದಲ್ಲಿ ನಡೆದ ಮತ ಕಳ್ಳತನದ ಬಗ್ಗೆ ಪುರಾವೆಗಳೊಂದಿಗೆ ಪ್ರಸ್ತಾಪಿಸಿದ್ದೆ. ಅಲ್ಲಿ 25 ಲಕ್ಷಕ್ಕೂ ಹೆಚ್ಚು ಮತಗಳ ಕಳ್ಳತನ ನಡೆದಿತ್ತು. ಅಂದರೆ ಪ್ರತಿ ಎಂಟು ಮತಗಳಲ್ಲಿ ಒಂದು ಕದ್ದ ಮತವಾಗಿತ್ತು' ಎಂದು ಅವರು ಆರೋಪಿಸಿದರು.

'ಹರಿಯಾಣದ ದತ್ತಾಂಶ ಗಮನಿಸಿದ ಬಳಿಕ ನನಗೆ, ಮಧ್ಯಪ್ರದೇಶ, ಮಹಾರಾಷ್ಟ್ರ ಮತ್ತು ಛತ್ತೀಸಗಢದಲ್ಲಿಯೂ ಅದೇ ರೀತಿ ಮತ ಕಳ್ಳತನ ನಡೆದಿರಬಹುದು ಎಂದೆನಿಸುತ್ತದೆ. ಏಕೆಂದರೆ, ಅದು ಬಿಜೆಪಿ ಮತ್ತು ಚುನಾವಣಾ ಆಯೋಗದ ವ್ಯವಸ್ಥೆಯಾಗಿದೆ' ಎಂದು ಅವರು ಆರೋಪಿಸಿದರು.

'ನಮ್ಮ ಬಳಿ ಇನ್ನಷ್ಟು ಪುರಾವೆಗಳಿವೆ. ಈಗ ಬಿಡುಗಡೆ ಮಾಡಿರುವುದು ಸ್ವಲ್ಪವಷ್ಟೇ. ಉಳಿದದ್ದನ್ನು ಹಂತ ಹಂತವಾಗಿ ಬಿಡುಗಡೆ ಮಾಡುತ್ತೇವೆ' ಎಂದು ಅವರು ಪ್ರತಿಕ್ರಿಯಿಸಿದರು.

'ಪ್ರಜಾಪ್ರಭುತ್ವ ಮತ್ತು ಅಂಬೇಡ್ಕರ್ ಅವರ ಸಂವಿಧಾನದ ಮೇಲೆ ದಾಳಿ ನಡೆಯುತ್ತಿದೆ. ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ, ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರು ಜಂಟಿಯಾಗಿ ಈ ದಾಳಿ ನಡೆಸುತ್ತಿದ್ದಾರೆ. ಇದರಿಂದ ದೇಶ ನರಳುತ್ತಿದೆ. ಭಾರತ ಮಾತೆಗೆ ಹಾನಿಯಾಗುತ್ತಿದೆ' ಎಂದು ಅವರು ಅವರು ಆರೋಪಿಸಿದರು.

'ಮೋದಿ, ಶಾ ಸಿಕ್ಕಿಬೀಳುತ್ತಾರೆ'

ಕಿಶನ್‌ಗಂಜ್ (ಬಿಹಾರ): 'ಪ್ರಧಾನಿ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರು ಎಲ್ಲಿ ಬೇಕಾದರೂ ಓಡಾಡಿಕೊಂಡು ಇರಬಹುದು. ಆದರೆ ಅವರು ಅಂತಿಮವಾಗಿ ಮತ ಕಳ್ಳತನದಲ್ಲಿ ಸಿಕ್ಕಿ ಬೀಳುತ್ತಾರೆ' ಎಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಭಾನುವಾರ ಹೇಳಿದರು.

ಇಲ್ಲಿ ನಡೆದ ಚುನಾವಣಾ ರ‍್ಯಾಲಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಬಿಹಾರದ ಚುನಾವಣೆ ಎರಡು ಸಿದ್ಧಾಂತಗಳ ನಡುವೆ ನಡೆಯುತ್ತಿದೆ. ಆರ್‌ಎಸ್‌ಎಸ್ ಮತ್ತು ಬಿಜೆಪಿ ಜನರನ್ನು ವಿಭಜಿಸಲು ಪ್ರಯತ್ನಿಸುತ್ತಿದ್ದರೆ, 'ಇಂಡಿಯಾ' ಬಣ ಜನರನ್ನು ಒಗ್ಗೂಡಿಸಲು ಯತ್ನಿಸುತ್ತಿದೆ ಎಂದರು.

ಮತ ಕಳವು ಆರೋಪಗಳಿಗೆ ಮೋದಿ, ಶಾ ಮತ್ತು ಚುನಾವಣಾ ಆಯೋಗದ ಬಳಿ ಉತ್ತರ ಇಲ್ಲವಾಗಿದೆ. ಸತ್ಯ ಈಗ ಜನರ ಮುಂದೆಯೇ ಸ್ಪಷ್ಟವಾಗಿದೆ. ಜನರು ಒಂದಾಗಿ ಮತಕಳ್ಳತನ ನಿಲ್ಲಿಸಿದರೆ 'ಇಂಡಿಯಾ' ಬಣ ಬಿಹಾರದಲ್ಲಿ ಸರ್ಕಾರ ರಚಿಸುವುದು ಖಚಿತ ಎಂದು ಅವರು ಪ್ರತಿಪಾದಿಸಿದರು.

'ಬಿಹಾರದಲ್ಲಿ ನ. 6ರಂದು ನಡೆದ ಮೊದಲ ಹಂತದ ಮತದಾನದಲ್ಲಿ ಕೆಲ ಅರ್ಹ ಮತದಾರರಿಗೆ ಮತದಾನಕ್ಕೆ ಅವಕಾಶ ದೊರೆತಿರಲಿಲ್ಲ. ಇನ್ನೊಂದೆಡೆ, ದೆಹಲಿಯಲ್ಲಿ ಮತದಾನದ ಹಕ್ಕು ಹೊಂದಿರುವ ಬಿಜೆಪಿಯ ಹಿರಿಯ ನಾಯಕರೊಬ್ಬರು ಬಿಹಾರದಲ್ಲೂ ಮತ ಚಲಾಯಿಸಿದ್ದರು. ಒಬ್ಬರು ಒಂದೇ ಕಡೆ ಮಾತ್ರ ಮತ ಚಲಾಯಿಸಬೇಕು ಎಂದು ಹೇಳುವ ಚುನಾವಣಾ ಆಯೋಗ, ಇಲ್ಲಿಯವರೆಗೂ ಆ ನಾಯಕರ ವಿರುದ್ಧ ಏಕೆ ಕ್ರಮ ತೆಗೆದುಕೊಂಡಿಲ್ಲ. ಅಲ್ಲದೆ, ಹರಿಯಾಣ ವಿಧಾನಸಭಾ ಚುನಾವಣೆಯಲ್ಲಿ ನಡೆದಿರುವ ಮತ ಕಳವು ಕುರಿತು ನಾನು ಮಾಡಿದ ಆರೋಪಗಳಿಗೂ ಪ್ರತಿಕ್ರಿಯಿಸಿಲ್ಲ' ಎಂದು ರಾಹುಲ್ ಹೇಳಿದರು.

ಚಿಟಿಕೆ ಸುದ್ದಿ

ಬ್ಯಾರಿ ವಿದ್ಯಾರ್ಥಿ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಪ್ರತಿ ವರ್ಷ ನಡೆಯುವ ವಿದ್ಯಾರ್ಥಿ ಪ್ರತಿಭಾ ಪುರಸ್ಕಾರಕ್ಕೆ ಅರ್ಹ ಬ್ಯಾರಿ ವಿದ್ಯಾರ್ಥಿಗಳಿಂದ ಬ್ಯಾರೀಸ್ ವೆಲ್‌ಫೇರ್ ಅಸೋಸಿಯೇಶನ್ ಅರ್ಜಿ ಆಹ್ವಾನಿಸಿದೆ.

ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಕನಿಷ್ಠ ಶೇ 95ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳು ಇದೇ 12ರ ಒಳಗಾಗಿ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ಬೆಂಗಳೂರಿನ ಎಚ್‌ಬಿಆರ್ ಲೇಔಟ್‌ನಲ್ಲಿರುವ ಕಚೇರಿಯನ್ನು (ಸಂಪರ್ಕ ಸಂಖ್ಯೆ– 7259966404) ಸಂಪರ್ಕಿಸಬಹುದು.

ಸಹಪಾಠಿಗೆ ಗುಂಡಿಕ್ಕಿದ 11ನೇ ತರಗತಿ ವಿದ್ಯಾರ್ಥಿ

ಗುರುಗ್ರಾಮ (ಪಿಟಿಐ): ತಂದೆಯ ಬಳಿ ಇದ್ದ, ಪರವಾನಗಿ ಪಡೆದ ಬಂದೂಕಿನಿಂದ 11ನೇ ತರಗತಿ ವಿದ್ಯಾರ್ಥಿಯೊಬ್ಬ ತನ್ನ ಸಹಪಾಠಿಗೆ ಗುಂಡಿಕ್ಕಿರುವ ಘಟನೆ ಸೆಕ್ಟರ್ 48ನ ಫ್ಲ್ಯಾಟ್‌ವೊಂದರಲ್ಲಿ ನಡೆದಿದೆ.

ಗುಂಡು ವಿದ್ಯಾರ್ಥಿಯ ಕುತ್ತಿಗೆ ಹೊಕ್ಕಿದ್ದು, ಆತನ ಸ್ಥಿತಿ ಗಂಭೀರವಾಗಿದೆ. ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಪೊಲೀಸರು ಭಾನುವಾರ ತಿಳಿಸಿದರು.

ಸಾದರ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಬಾಲಕರನ್ನು ವಶಕ್ಕೆ ಪಡೆಯಲಾಗಿದೆ. ಬಂದೂಕು, 70 ಗುಂಡುಗಳನ್ನು ವಶಕ್ಕೆ ಪಡೆಯಲಾಗಿದೆ ಎಂದರು.

'ದೇಣಿಗೆ ಕೊಡುವವರು ಯಾರು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆರ್‌ಎಸ್‌ಎಸ್‌ಗೆ ದೇಣಿಗೆ ಕೊಡುವ ಸ್ವಯಂಸೇವಕರು ಯಾರು, ಅವರನ್ನು ಹೇಗೆ ಗುರುತಿಸಲಾಗುತ್ತದೆ' ಎಂದು ಸಚಿವ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದ್ದಾರೆ.

'ಸ್ವಯಂಸೇವಕರು ನೀಡುವ ದೇಣಿಗೆ ಮೂಲಕ ಆರ್‌ಎಸ್‌ಎಸ್ ಕಾರ್ಯ ನಿರ್ವಹಿಸುತ್ತದೆ' ಎಂಬ ಆರ್‌ಎಸ್‌ಎಸ್ ಸರ ಸಂಘಚಾಲಕ ಮೋಹನ್ ಭಾಗವತ್ ಹೇಳಿಕೆಯನ್ನು ಪ್ರಸ್ತಾಪಿಸಿ 'ಎಕ್ಸ್'ನಲ್ಲಿ ಪ್ರತಿಕ್ರಿಯಿಸಿ ರುವ ಪ್ರಿಯಾಂಕ್, 'ಈ ಹೇಳಿಕೆಗೆ ಸಂಬಂಧಿಸಿದಂತೆ ಹಲವಾರು ಕಾನೂನು ಬದ್ಧ ಪ್ರಶ್ನೆಗಳು ಉದ್ಭವಿಸುತ್ತವೆ' ಎಂದಿದ್ದಾರೆ.

'ರಾಷ್ಟ್ರ ಮಟ್ಟದಲ್ಲಿ ವ್ಯಾಪಕವಾದ ಪ್ರಭಾವ ಮತ್ತು ಉಪಸ್ಥಿತಿಯ ಹೊರತಾಗಿಯೂ ಆರ್‌ಎಸ್‌ಎಸ್ ನೋಂದಣಿಯಾಗದೆ ಏಕೆ ಮುಂದುವರಿದಿದೆ, ಭಾರತದಲ್ಲಿರುವ ಪ್ರತಿಯೊಂದು ಧಾರ್ಮಿಕ ಅಥವಾ ದತ್ತಿ ಸಂಸ್ಥೆಯು ಆರ್ಥಿಕ ಪಾರದರ್ಶಕತೆಯನ್ನು ಕಾಯ್ದುಕೊಳ್ಳಬೇಕಾದಾಗ, ಆರ್‌ಎಸ್‌ಎಸ್‌ಗೆ ಇದೇ ರೀತಿಯ ಹೊಣೆಗಾರಿಕೆ ಕಾರ್ಯವಿಧಾನಗಳ ಅನುಪಸ್ಥಿತಿಯನ್ನು ಸಮರ್ಥಿಸುವುದು ಏನು' ಎಂದೂ ಅವರು ಪ್ರಶ್ನಿಸಿದ್ದಾರೆ.

'ನೀಡಲಾದ ದೇಣಿಗೆಗಳ ಪ್ರಮಾಣ ಮತ್ತು ಸ್ವರೂಪ ಏನು? ಈ ಕೊಡುಗೆಗಳನ್ನು ಹೇಗೆಲ್ಲ ಸ್ವೀಕರಿಸಲಾಗುತ್ತದೆ? ಆರ್‌ಎಸ್‌ಎಸ್ ಪಾರದರ್ಶಕವಾಗಿ ಕಾರ್ಯನಿರ್ವಹಿಸುತ್ತಿದ್ದರೆ, ತನ್ನದೇ ಆದ ನೋಂದಾಯಿತ ಗುರುತಿನಡಿಯಲ್ಲಿ ಸಂಸ್ಥೆಗೆ ನೇರವಾಗಿ ದೇಣಿಗೆಗಳನ್ನು ಏಕೆ ನೀಡಲಾಗುವುದಿಲ್ಲ? ನೋಂದಾಯಿತ ಘಟಕವಾಗದೆ ಆರ್‌ಎಸ್‌ಎಸ್ ತನ್ನ ಹಣಕಾಸು ಮತ್ತು ಸಾಂಸ್ಥಿಕ ರಚನೆಯನ್ನು ಹೇಗೆ ಉಳಿಸಿಕೊಳ್ಳುತ್ತದೆ? ಪೂರ್ಣ ಸಮಯದ ಪ್ರಚಾರಕರಿಗೆ ಯಾರು ವೇತನ ನೀಡುತ್ತಾರೆ ಮತ್ತು ಸಂಸ್ಥೆಯ ದಿನನಿತ್ಯದ ಕಾರ್ಯಾಚರಣೆಯ ವೆಚ್ಚಗಳನ್ನು ಪೂರೈಸುತ್ತಾರೆ' ಎಂದೂ ಕೇಳಿದ್ದಾರೆ.

'ಹಿಂದೂಗಳಿಗಷ್ಟೇ ಆರ್‌ಎಸ್‌ಎಸ್ ಪ್ರವೇಶ'

ಒಂದನೇ ಪುಟದಿಂದ...

'ಭಾರತದಲ್ಲಿ ನಿಜವಾಗಿಯೂ ಜಾತೀಯತೆ ಇಲ್ಲ. ಇರುವುದು ಜಾತಿ ಕುರಿತ ಗೊಂದಲ ಮಾತ್ರ. ಅದನ್ನೂ ರಾಜಕೀಯ ಲಾಭಕ್ಕಾಗಿ ಸೃಷ್ಟಿಸಲಾಗಿದೆ. ಶಾಖೆಗೆ ಬರುವವರ ಜಾತಿ, ಧರ್ಮವನ್ನು ನಾವು ಲೆಕ್ಕಹಾಕುವುದಿಲ್ಲ. ಅವರನ್ನು ಹಿಂದೂ ಎಂದೇ ಪರಿಗಣಿಸುತ್ತೇವೆ' ಎಂದರು.

'ದೇಶ ವಿಭಜನೆ ಏಕಾಯಿತು' ಎಂದು ಸಭಿಕರು ಕೇಳಿದ ಪ್ರಶ್ನೆಗೆ, 'ಅದಕ್ಕೆ ಹಲವಾರು ತಾತ್ಕಾಲಿಕ ಕಾರಣಗಳು ಇರಬಹುದು. ಆದರೆ ಹಿಂದೂಗಳ ಸಂಖ್ಯೆ ಕಡಿಮೆಯಾಗಿತ್ತು ಅಥವಾ ಹಿಂದೂ ಭಾವ ಕುಗ್ಗಿತ್ತು ಎಂಬುದೇ ವಿಭಜನೆಗೆ ನಿಜವಾದ ಕಾರಣ' ಎಂದು ಉತ್ತರಿಸಿದರು.

'ನೋಂದಣಿ ಏಕೆ ಮಾಡಿಕೊಳ್ಳಬೇಕು?'

ಒಂದನೇ ಪುಟದಿಂದ...

'ನಮ್ಮನ್ನು ಮೂರು ಬಾರಿ ನಿಷೇಧಿಸಲು ಯತ್ನಿಸಲಾಗಿದೆ. ಅಂದರೆ ಸರ್ಕಾರವು ನಮ್ಮ ಇರುವಿಕೆಯನ್ನು ಗುರುತಿಸಿದೆ ಎಂದಲ್ಲವೇ. ನಮಗೆ ಹೊರಗಿನಿಂದ ಯಾವುದೇ ಹಣ ಬರುವುದಿಲ್ಲ. ಸ್ವಯಂಸೇವಕರು ಗುರುದಕ್ಷಿಣೆ ನೀಡುತ್ತಾರೆ' ಎಂದರು. 'ನಮ್ಮದು ರಾಜಕೀಯ ಸಂಘಟನೆ ಅಲ್ಲ. ರಾಮಮಂದಿರ ನಿರ್ಮಾಣಕ್ಕೆ ಹೋರಾಡಿದ ಬಿಜೆಪಿಯನ್ನು ಬೆಂಬಲಿಸಿದೆವು. ಕಾಂಗ್ರೆಸ್ ಆ ಕೆಲಸ ಮಾಡಿದ್ದರೆ, ಅದನ್ನೂ ಬೆಂಬಲಿಸುತ್ತಿದ್ದೆವು' ಎಂದರು.

'ನುಸುಳುಕೋರರಿಗೆ 'ಇಂಡಿಯಾ' ನೆರವು'

ಸಸಾರಾಂ (ಬಿಹಾರ) (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ದೇಶದಲ್ಲಿ ಕೈಗಾರಿಕಾ ಕಾರಿಡಾರ್ ನಿರ್ಮಿಸಲು ಬಯಸುತ್ತಿದ್ದರೆ, 'ಇಂಡಿಯಾ' ಬಣದವರು 'ನುಸುಳುಕೋರರ ಕಾರಿಡಾರ್' ನಿರ್ಮಿಸಲು ಪ್ರಯತ್ನಿಸುತ್ತಿದ್ದಾರೆ ಎಂದು ಗೃಹ ಸಚಿವ ಅಮಿತ್ ಶಾ ಭಾನುವಾರ ಆರೋಪಿಸಿದರು.

ಬಿಹಾರ ವಿಧಾನಸಭಾ ಚುನಾವಣೆಯ ಎರಡನೇ ಮತ್ತು ಅಂತಿಮ ಹಂತದ ಚುನಾವಣಾ ಪ್ರಚಾರದ ಕೊನೆಯ ದಿನ ಅವರು ಸಸಾರಾಂ ಪಟ್ಟಣದಲ್ಲಿ ರ‍್ಯಾಲಿ ಉದ್ದೇಶಿಸಿ ಮಾತನಾಡಿದರು.

'ರಾಹುಲ್ ಗಾಂಧಿ ಹಾಗೂ ತೇಜಸ್ವಿ ಯಾದವ್ ಮತದಾರರ ಅಧಿಕಾರ ಯಾತ್ರೆಯನ್ನು ಇತ್ತೀಚೆಗೆ ನಡೆಸಿದ್ದರು. ಅದು ಬಿಹಾರದ ಬಡ, ದಲಿತ ಮತ್ತು ಅತ್ಯಂತ ಹಿಂದುಳಿದ ವರ್ಗಗಳ ಜನರ ಜೀವನದಲ್ಲಿ ಸುಧಾರಣೆ ತರುವ ಉದ್ದೇಶ ಹೊಂದಿರಲಿಲ್ಲ. ಬದಲಿಗೆ ನುಸುಳುಕೋರರನ್ನು ರಕ್ಷಿಸುವ ಉದ್ದೇಶ ಹೊಂದಿತ್ತು' ಎಂದು ಅವರು ದೂರಿದರು.

'ಕೇಂದ್ರದಲ್ಲಿ ಮನಮೋಹನ್ ಸಿಂಗ್, ಸೋನಿಯಾ ಗಾಂಧಿ, ಲಾಲೂ ಅವರ ಆಳ್ವಿಕೆ ಇದ್ದಾಗ ಭಯೋತ್ಪಾದಕರು ನಮ್ಮ ನೆಲದಲ್ಲಿ ತಮ್ಮ ಇಚ್ಛೆಯಂತೆ ದಾಳಿ ನಡೆಸಿದ್ದರು. ಆದರೆ ಅದಕ್ಕೆ ವ್ಯತಿರಿಕ್ತ ಎಂಬಂತೆ, ಈಗ ನಾವು ಭಯೋತ್ಪಾದಕರನ್ನು ಅವರ ಮನೆಗಳೊಳಗೇ ಹೊಡೆದುರುಳಿಸುತ್ತಿದ್ದೇವೆ' ಎಂದು ಅಮಿತ್ ಶಾ ಪ್ರತಿಪಾದಿಸಿದರು.

'ಭವಿಷ್ಯದಲ್ಲಿ ಪಾಕಿಸ್ತಾನದ ಭಯೋತ್ಪಾದಕರು ಮತ್ತೆ ದಾಳಿ ನಡೆಸಲು ಧೈರ್ಯ ಮಾಡಿದರೆ, ಅವರು ಹಾರಿಸುವ ಗುಂಡುಗಳಿಗೆ ಪ್ರತಿಯಾಗಿ ಮಾರ್ಟರ್ ಶೆಲ್‌ಗಳಿಂದ ಪ್ರತೀಕಾರ ತೀರಿಸಿಕೊಳ್ಳಲಾಗುವುದು. ಈ ಮಾರ್ಟರ್ ಶೆಲ್‌ಗಳನ್ನು ಎಲ್ಲಿ ತಯಾರಿಸಲಾಗುತ್ತದೆ ಎಂಬುದು ನಿಮಗೆ ಗೊತ್ತಿದೆಯಾ? ಅದು ಬಿಹಾರದ ಸಸಾರಾಂನಲ್ಲಿ. ಪ್ರಧಾನಿ ಮೋದಿ ಅವರು ಇಲ್ಲಿ ರಕ್ಷಣಾ ಕಾರಿಡಾರ್ ನಿರ್ಮಿಸಲು ಪ್ರಯತ್ನಿಸುತ್ತಿದ್ದಾರೆ' ಎಂದು ಅವರು ಹೇಳಿದರು.

ಮೂವರು ಶಂಕಿತ ಉಗ್ರರ ಬಂಧನ

ಒಂದನೇ ಪುಟದಿಂದ...

'ಎಟಿಎಸ್ ಅಧಿಕಾರಿಗಳು ಖಚಿತ ಮಾಹಿತಿ ಮೇರೆಗೆ ಹೈದರಾಬಾದ್‌ನ ಸೈಯದ್‌ನನ್ನು ನವೆಂಬರ್ 7ರಂದು ಗಾಂಧಿನಗರದಲ್ಲಿ ಬಂಧಿಸಿದ್ದಾರೆ. ಆತನಿಂದ ಪಿಸ್ತೂಲ್, ಸ್ಫೋಟಕಗಳು ಮತ್ತು ನಾಲ್ಕು ಲೀಟರ್ ಹರಳೆಣ್ಣೆ ವಶಪಡಿಸಿಕೊಳ್ಳಲಾಗಿದೆ' ಎಂದು ಜೋಶಿ ತಿಳಿಸಿದರು.

'ಚೀನಾದಲ್ಲಿ ಎಂಬಿಬಿಎಸ್ ಪದವಿ ಪಡೆದಿರುವ ಸೈಯದ್, ದೊಡ್ಡ ಭಯೋತ್ಪಾದಕ ದಾಳಿ ನಡೆಸಲು 'ರೈಸಿನ್' ಎಂಬ ಅತ್ಯಂತ ಮಾರಕ ವಿಷವನ್ನು ತಯಾರಿಸುತ್ತಿದ್ದಾನೆ. ಅದಕ್ಕಾಗಿ ಈಗಾಗಲೇ ಸಂಶೋಧನೆ ಪ್ರಾರಂಭಿಸಿದ್ದನಲ್ಲದೆ, ಅಗತ್ಯ ಕಚ್ಚಾ ವಸ್ತುಗಳನ್ನು ಸಂಗ್ರಹಿಸಿದ್ದನು' ಎಂದು ಮಾಹಿತಿ ನೀಡಿದರು.

'ರೈಸಿನ್' ಎಂಬ ರಾಸಾಯನಿಕವು ವಿಷಕಾರಿ ಆಗಿದ್ದು, ಹರಳೆಣ್ಣೆ ಬೀಜ ವನ್ನು ಸಂಸ್ಕರಿಸಿದ ಬಳಿಕ ಉಳಿದ ತ್ಯಾಜ್ಯ ವಸ್ತುಗಳಿಂದ ಇದನ್ನು ತಯಾರಿಸಬಹುದು. 'ಶಸ್ತ್ರಾಸ್ತ್ರಗಳನ್ನು ಪಡೆದು ಭಯೋತ್ಪಾದಕ ದಾಳಿಗೆ ಸಂಚು ರೂಪಿಸಲು ಈ ಮೂವರು ಗುಜರಾತ್‌ಗೆ ಬಂದಿದ್ದರು. ಪಿತೂರಿಯ ಭಾಗವಾಗಿ ಹಣ ಸಂಗ್ರಹಿಸಲು ಮತ್ತು ವ್ಯಕ್ತಿಗಳನ್ನು ನೇಮಿಸಿಕೊಳ್ಳಲು ಸೈಯದ್ ಯೋಜಿಸಿದ್ದ' ಎಂದರು.



ಗುಜರಾತ್ ಎಟಿಎಸ್ ಅಧಿಕಾರಿಗಳು ಬಂಧಿಸಿರುವ ಶಂಕಿತ ಉಗ್ರರು —ಪಿಟಿಐ ಚಿತ್ರ

ಪಾಕ್‌ನಿಂದ ಶಸ್ತ್ರಾಸ್ತ್ರ

'ಇತರ ಇಬ್ಬರು ಆರೋಪಿಗಳಾದ ಶೇಖ್ ಮತ್ತು ಸುಹೇಲ್ ಉತ್ತರ ಪ್ರದೇಶದವರಾಗಿದ್ದು, ಗುಜರಾತ್‌ನ ಬನಾಸ್‌ಕಾಂತಾ ಜಿಲ್ಲೆಯಲ್ಲಿ ಬಂಧಿಸಲಾಯಿತು. ಸೈಯದ್‌ಗೆ ಶಸ್ತ್ರಾಸ್ತ್ರ ಪೂರೈಸಿದ ಆರೋಪದ ಮೇಲೆ ಇವರನ್ನು ಬಂಧಿಸಲಾಗಿದೆ. ತಮ್ಮ ಹ್ಯಾಂಡ್ಲರ್ ಪಾಕ್‌ನಿಂದ ಕಳುಹಿಸಿದ ಶಸ್ತ್ರಾಸ್ತ್ರವನ್ನು ಇವರು ರಾಜಸ್ತಾನದ ಹನುಮಗಢದಲ್ಲಿ ಪಡೆದುಕೊಂಡಿದ್ದರು' ಎಂದು ಡಿಐಜಿ ವಿವರಿಸಿದರು.

'ಲೋಕಾಯುಕ್ತ: ಕಾಯ್ದೆ ತಿದ್ದುಪಡಿ ಅವಶ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲೋಕಾಯುಕ್ತ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುವ ನ್ಯಾಯಮೂರ್ತಿಗಳು ಮತ್ತು ಸರ್ಕಾರಿ ನೌಕರರು ತಮ್ಮ ಆಸ್ತಿಯ ವಿವರಗಳನ್ನು ಬಹಿರಂಗಗೊಳಿಸುವುದಕ್ಕೆ ಅವಕಾಶ ಕಲ್ಪಿಸಲು ಲೋಕಾಯುಕ್ತ ಕಾಯ್ದೆ ತಿದ್ದುಪಡಿಗೆ ಮುಂಬರುವ ವಿಧಾನಮಂಡಲ ಅಧಿವೇಶನದಲ್ಲಿ ಮಸೂದೆ ಮಂಡಿಸಬೇಕು' ಎಂದು ವಿಧಾನ ಪರಿಷತ್ ಸದಸ್ಯರೂ ಆಗಿರುವ ಕೆಪಿಸಿಸಿ ಮಾಧ್ಯಮ ವಿಭಾಗದ ಅಧ್ಯಕ್ಷ ರಮೇಶ್ ಬಾಬು ಆಗ್ರಹಿಸಿದ್ದಾರೆ.

ಈ ಬಗ್ಗೆ ಕಾನೂನು ಸಚಿವ ಎಚ್.ಕೆ. ಪಾಟೀಲ ಅವರಿಗೆ ಪತ್ರ ಬರೆದಿರುವ ಅವರು, 'ಪಾರದರ್ಶಕ ಆಡಳಿತ ಉದ್ದೇಶದಿಂದ ಪ್ರತಿ ವರ್ಷ ಲೋಕಾಯುಕ್ತರು, ಉಪ ಲೋಕಾಯುಕ್ತರು ಮತ್ತು ನೌಕರರು ತಮ್ಮ ಆಸ್ತಿಗಳನ್ನು ಬಹಿರಂಗಗೊಳಿಸಲು ಕಾಯ್ದೆಗೆ ತಿದ್ದುಪಡಿ ತರಬೇಕು' ಎಂದು ಮನವಿ ಮಾಡಿದ್ದಾರೆ.

'ಲೋಕಾಯುಕ್ತ ಕಾಯ್ದೆಯ ಅನ್ವಯ ವಿಧಾನ ಮಂಡಲದ ಸದಸ್ಯರು ಪ್ರತಿವರ್ಷ ಜೂನ್ 30ರೊಳಗೆ ತಮ್ಮ ಆಸ್ತಿಯ ವಿವರಗಳನ್ನು ಲೋಕಾಯುಕ್ತಕ್ಕೆ ಸಲ್ಲಿಸಬೇಕು. ಗಡುವು ಮೀರಿದರೆ, ವಿವರ ಸಲ್ಲಿಸದ ಶಾಸಕರ ಪಟ್ಟಿಯನ್ನು ಕಾಯ್ದೆ ಅನ್ವಯ ಬಿಡುಗಡೆ ಮಾಡಲಾಗುತ್ತದೆ. ಸಾರ್ವಜನಿಕ ಹಿತದೃಷ್ಟಿಯಿಂದ ಇದು ಅವಶ್ಯ. ಇದೇ ರೀತಿ ಲೋಕಾಯುಕ್ತ ಸಂಸ್ಥೆಯಲ್ಲಿ ಇರುವವರೂ ತಮ್ಮ ಆಸ್ತಿ ಪಟ್ಟಿಯನ್ನು ಪ್ರಕಟಿಸುವುದು ಅವಶ್ಯ' ಎಂದು ಅವರು ಪ್ರತಿಪಾದಿಸಿದ್ದಾರೆ.

'ಲೋಕಾಯುಕ್ತರು ಮತ್ತು ಉಪಲೋಕಾಯುಕ್ತರು ತಮ್ಮ ಆಸ್ತಿ ಬಹಿರಂಗಪಡಿಸಲು ಲೋಕಾಯುಕ್ತ ಕಾಯ್ದೆ ತಿದ್ದುಪಡಿ ಮಾಡಬೇಕೆಂದು 2021 ರಲ್ಲಿ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದೆ. ನನ್ನ ಪತ್ರಕ್ಕೆ ಅಭಿಪ್ರಾಯ ನೀಡುವಂತೆ ಲೋಕಾಯುಕ್ತ ನಿಬಂಧಕರಿಗೆ ಸರ್ಕಾರ ಪತ್ರ ಬರೆದಿದ್ದರೂ, ಲೋಕಾಯುಕ್ತದಿಂದ ಯಾವುದೇ ಮಾಹಿತಿ ನೀಡಿಲ್ಲ. ಲೋಕಾಯುಕ್ತವು ವಾರ್ಷಿಕ ವರದಿಯನ್ನು ಅನುಮೋದನೆಗಾಗಿ ನಿಯಮಾನುಸಾರ ವಿಧಾನಮಂಡಲದಲ್ಲಿ ಮಂಡಿಸಲು ಕ್ರಮ ಕೈಗೊಳ್ಳಬೇಕು' ಎಂದೂ ಅವರು ಕೋರಿದ್ದಾರೆ.

ಸಂಕ್ಷಿಪ್ತ ಸುದ್ದಿ

ಅತ್ಯಾಚಾರ ಆರೋಪಿ ಹರ್ಮೀತ್ ಸಿಂಗ್ ಆಸ್ಟ್ರೇಲಿಯಾದಲ್ಲಿ

ಪಟಿಯಾಲ (ಪಿಟಿಐ): ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿಸಿ, ಕರೆದ್ಯೊಯುವಾಗ ಪರಾರಿಯಾಗಿದ್ದ ಪಂಜಾಬ್‌ನ ಆಮ್ ಆದ್ಮಿ ಪಕ್ಷದ (ಎಎಪಿ) ಶಾಸಕ ಹರ್ಮೀತ್ ಸಿಂಗ್ ಪಠಾನ್‌ಮಾಜ್ರಾ ಅವರು, ವಿಡಿಯೊ ಸಂದರ್ಶನವೊಂದರಲ್ಲಿ ಕಾಣಿಸಿಕೊಳ್ಳುವ ಮೂಲಕ ಆಸ್ಟ್ರೇಲಿಯಾದಲ್ಲಿ ಇದ್ದಾರೆ ಎಂಬುದು ತಿಳಿದುಬಂದಿದೆ.

ಪಠಾನ್‌ಮಾಜ್ರಾ ಅವರು ಆಸ್ಟ್ರೇಲಿಯಾದ ಪಂಜಾಬಿ ವೆಬ್ ವಾಹಿನಿಯೊಂದರ ವಿಡಿಯೊ ಸಂದರ್ಶನದಲ್ಲಿ ಕಾಣಿಸಿಕೊಂಡಿದ್ದು, ಜಾಮೀನು ದೊರೆತ ಬಳಿಕವೇ ಪಂಜಾಬ್‌ಗೆ ಬರುವುದಾಗಿ ಅದರಲ್ಲಿ ಹೇಳಿದ್ದಾರೆ.

ತಮ್ಮ ವಿರುದ್ಧದ ಎಲ್ಲ ಆರೋಪಗಳನ್ನು ತಿರಸ್ಕರಿಸಿದ ಅವರು, 'ಇದೊಂದು ರಾಜಕೀಯ ಪಿತೂರಿಯಾಗಿದ್ದು, ಪಂಜಾಬ್ ಜನರ ಪರವಾಗಿ ಮಾತನಾಡುವ ಧ್ವನಿಗಳನ್ನು ಹತ್ತಿಕ್ಕುವ ಉದ್ದೇಶದ್ದಾಗಿದೆ. ದೆಹಲಿಯಲ್ಲಿ ಸೋತ ಕೆಲವು ನಾಯಕರು, ಈಗ ಪಂಜಾಬ್ ಅನ್ನು ವಶಪಡಿಸಿಕೊಂಡಿದ್ದಾರೆ. ಆದರೆ, ನ್ಯಾಯಾಂಗ ವ್ಯವಸ್ಥೆ ಮೇಲೆ ನನಗೆ ಸಂಪೂರ್ಣ ನಂಬಿಕೆಯಿದೆ' ಎಂದು ಪಠಾನ್‌ಮಾಜ್ರಾ ಸಂದರ್ಶನದಲ್ಲಿ ತಿಳಿಸಿದ್ದಾರೆ.

ಪಠಾನ್‌ಮಾಜ್ರಾ ಅವರು ಪರಾರಿಯಾದ ಬಳಿಕ, ಅವರ ಪತ್ತೆಗಾಗಿ ಪೊಲೀಸರು ಅನೇಕ ಅಡಗುತಾಣಗಳ ಮೇಲೆ ಶೋಧ ಕಾರ್ಯ ನಡೆಸಿ, ವಿಫಲರಾಗಿದ್ದರು. ಅವರ ವಿರುದ್ಧ ಪಟಿಯಾಲ ಪೊಲೀಸರು ಲುಕ್‌ಔಟ್ ನೋಟಿಸ್ ಜಾರಿಗೊಳಿಸಿದ್ದಾರೆ.

'ಲಿಂಗತ್ವ ಅಲ್ಪಸಂಖ್ಯಾತರಿಗೆ ಶೈಕ್ಷಣಿಕ ದಾಖಲೆ ನಿರಾಕರಣೆ ಸಲ್ಲ'

ಪ್ರಯಾಗರಾಜ್ (ಪಿಟಿಐ): ಲಿಂಗ ಮತ್ತು ಹೆಸರು ಬದಲಾಯಿಸಿದ ಲಿಂಗತ್ವ ಅಲ್ಪಸಂಖ್ಯಾತ ಶರದ್ ರೋಷನ್ ಸಿಂಗ್ ಅವರಿಗೆ ಹೊಸ ಶೈಕ್ಷಣಿಕ ದಾಖಲೆಗಳನ್ನು ನೀಡಲು ಅಲಹಾಬಾದ್ ಹೈಕೋರ್ಟ್ ಉತ್ತರ ಪ್ರದೇಶ ಶಿಕ್ಷಣ ಇಲಾಖೆಗೆ ಸೂಚನೆ ನೀಡಿದೆ. ಆ ಮೂಲಕ ಲಿಂಗತ್ವ ಅಲ್ಪಸಂಖ್ಯಾತ ಜನರ ಹಕ್ಕುಗಳನ್ನು ಎತ್ತಿಹಿಡಿದಿದೆ.

ಲಿಂಗ ಪರಿವರ್ತನೆ ಶಸ್ತ್ರಚಿಕಿತ್ಸೆಗೆ ಒಳಗಾಗಿ ಲಿಂಗ ಬದಲಾಯಿಸಿಕೊಂಡವರಿಗೆ ಹೊಸ ದಾಖಲೆಗಳನ್ನು ನೀಡಲು ನಿರಾಕರಿಸುವಂತಿಲ್ಲ ಎಂದು ಕೋರ್ಟ್ ಹೇಳಿದೆ. ಶರದ್ ಅವರು ಸಲ್ಲಿಸಿದ ಅರ್ಜಿಯ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿಗಳಾದ ಸೌರಬ್ ಶ್ಯಾಮ್ ಈ ಬಗ್ಗೆ ಗುರುವಾರ ತೀರ್ಪು ನೀಡಿದ್ದರು.

ಹೊಸ ದಾಖಲೆಗಾಗಿ ಮನವಿ ಮಾಡುವವರಿಗೆ ಬಹಳ ವಯಸ್ಸಾದ ಮೇಲೆ ಇಂಥ ದಾಖಲೆಗಳನ್ನು ಸರಿಪಡಿಸಿಕೊಡಲು ಸರ್ಕಾರದ ಯಾವುದೇ ನಿಯಮವಿಲ್ಲ ಎಂದು ಹೇಳಿದ್ದ ಬರೇಲಿ ಮಾಧ್ಯಮಿಕ ಶೈಕ್ಷಣಿಕ ಪರಿಷತ್ತು, ಶರದ್ ಅವರಿಗೆ ಹೊಸ ದಾಖಲೆಗಳನ್ನು ನಿರಾಕರಿಸಿತ್ತು.

ಈ ಆದೇಶವನ್ನು ಕೋರ್ಟ್ ತಿರಸ್ಕರಿಸಿದೆ. ಹೊಸ ದಾಖಲೆಗಳನ್ನು ನೀಡಲು ಲಿಂಗತ್ವ ಅಲ್ಪಸಂಖ್ಯಾತ ವ್ಯಕ್ತಿಗಳ (ಹಕ್ಕುಗಳ ರಕ್ಷಣೆ) ಕಾಯ್ದೆ, 2019ರ ಅನ್ವಯ ಅವಕಾಶವಿಲ್ಲ ಎಂದೂ ಶಿಕ್ಷಣ ಇಲಾಖೆ ವಾದಿಸಿತ್ತು.

'ಈ ಕಾಯ್ದೆಯು ಲಿಂಗತ್ವ ಅಲ್ಪಸಂಖ್ಯಾರಿಗೆ ಅನುಕೂಲವಾಗುವಂತೆ ಇದೆಯೇ ಹೊರತು, ಅವರ ಹಕ್ಕುಗಳನ್ನು ನಿರಾಕರಿಸುವಂತೆ ಇಲ್ಲ. ಶಿಕ್ಷಣ ಇಲಾಖೆಯು ಕಾನೂನಾತ್ಮಕವಾಗಿ ತಪ್ಪೆಸಗಿದೆ' ಎಂದು ತೀರ್ಪಿನಲ್ಲಿ ಹೇಳಲಾಗಿದೆ.

ಠಾಕ್ರೆ ನಿವಾಸದ ಮೇಲೆ ಡ್ರೋನ್ ಹಾರಾಟ: ಆತಂಕ

ಮುಂಬೈ: ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರ 'ಮಾತೋಶ್ರೀ' ನಿವಾಸದ ಮೇಲೆ ಡ್ರೋನ್‌ವೊಂದು ಹಾರಾಡಿದ್ದು ಕೆಲಕಾಲ ಆತಂಕಕ್ಕೆ ಕಾರಣವಾಗಿತ್ತು.

ಮುಂಬೈ ಮೆಟ್ರೊಪಾಲಿಟನ್ ಪ್ರದೇಶ ಅಭಿವೃದ್ಧಿ ಮಂಡಳಿಯು (ಎಂಎಂಆರ್‌ಡಿಎ) ಬಾಂದ್ರಾ–ಕುರ್ಲಾ ಕಾಂಪ್ಲೆಕ್ಸ್ ಪ್ರದೇಶದಲ್ಲಿ ಸಮೀಕ್ಷೆ ಕೈಗೊಂಡ ಕಾರಣ ಡ್ರೋನ್ ಹಾರಿಸಲಾಗಿತ್ತು ಎಂದು ಬಳಿಕ ತಿಳಿದುಬಂದಿತು.

ಉದ್ಧವ್ ಅವರ ಪುತ್ರ, ಶಾಸಕ ಆದಿತ್ಯ ಠಾಕ್ರೆ, ನಿವಾಸಿಗಳಿಗೆ ಮಾಹಿತಿ ನೀಡದೆ ಸಮೀಕ್ಷೆ ಕೈಗೊಂಡ ಅಧಿಕಾರಿಗಳ ಮೇಲೆ ಅಸಮಾಧಾನ ವ್ಯಕ್ತಪಡಿಸಿದರು.

ಬಹುಪತ್ನಿತ್ವ ನಿಷೇಧಕ್ಕೆ ಅಸ್ಸಾಂ ಸಚಿವ ಸಂಪುಟ ಅಸ್ತು

ಗುವಾಹಟಿ (ಪಿಟಿಐ): ಬಹುಪತ್ನಿತ್ವ ನಿಷೇಧಕ್ಕೆ ಸಂಬಂಧಿಸಿದ ಮಸೂದೆಯನ್ನು ಅಸ್ಸಾಂ ಸಚಿವ ಸಂಪುಟ ಸಭೆ ಅನುಮೋದಿಸಿದೆ. ಮಸೂದೆಯು ಕಾಯ್ದೆಯಾಗಿ ಜಾರಿಗೆ ಬಂದ ನಂತರ ನಿಯಮ ಉಲ್ಲಂಘಿಸಿ, ಬಹುಪತ್ನಿತ್ವ ಅನುಸರಿಸುವವರಿಗೆ ಏಳು ವರ್ಷಗಳವರೆಗೆ ಕಠಿಣ ಶಿಕ್ಷೆ ವಿಧಿಸಲಾಗುವುದು ಎಂದು ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ತಿಳಿಸಿದ್ದಾರೆ.

ವಿಧಾನ ಮಂಡಲದ ಅಧಿವೇಶನದಲ್ಲಿ ಮಸೂದೆಯನ್ನು ಮಂಡಿಸಲಾಗುವುದು. ಬಹುಪತ್ನಿತ್ವ ನಿಷೇಧದ ಕಾರಣಕ್ಕೆ ಸಂತ್ರಸ್ತರಾಗುವವರಿಗೆ ನೆರವು ಕಲ್ಪಿಸಲು ಪ್ರತ್ಯೇಕ ಹಣಕಾಸು ನಿಧಿ ಸ್ಥಾಪಿಸಲಾಗುವುದು ಎಂದೂ ಹೇಳಿದ್ದಾರೆ.

ಮಲಗಿದ್ದ ಬಾಲಕಿ ಅಪಹರಿಸಿ ಲೈಂಗಿಕ ದೌರ್ಜನ್ಯ

ಕೋಲ್ಕತ್ತ (ಪಿಟಿಐ): ರೈಲ್ವೆ ಶೆಡ್‌ನಲ್ಲಿ ಅಜ್ಜಿಯೊಂದಿಗೆ ಮಲಗಿದ್ದ 4 ವರ್ಷದ ಬಾಲಕಿಯನ್ನು ಅಪಹರಿಸಿ, ಲೈಂಗಿಕ ದೌರ್ಜನ್ಯ ನಡೆಸಿರುವ ಘಟನೆ ಪಶ್ಚಿಮ ಬಂಗಾಳದ ಹೂಗ್ಲಿ ಜಿಲ್ಲೆಯಲ್ಲಿ ನಡೆದಿದೆ.

ಜಿಲ್ಲೆಯ ತಾರಕೇಶ್ವರದಲ್ಲಿ ರೈಲು ಶೆಡ್‌ನಲ್ಲಿ ಶನಿವಾರ ಘಟನೆ ನಡೆದಿದೆ. ಇದಕ್ಕೆ ಸಂಬಂಧಿಸಿದಂತೆ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದ್ದು, ಒಬ್ಬ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಭಾನುವಾರ ತಿಳಿಸಿದರು.

ಇಲ್ಲಿನ ಚರಂಡಿ ಬಳಿ, ಪ್ರಜ್ಞೆ ತಪ್ಪಿದ ಸ್ಥಿತಿಯಲ್ಲಿ ಬಾಲಕಿ ಪತ್ತೆಯಾದಳು. ಆಕೆಯ ಮೈ ಮೇಲೆ ಗಾಯಗಳಾಗಿದ್ದು, ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದರು.

ಸಮಾಜಮುಖಿ ಸಾಹಿತ್ಯ ಸಮ್ಮೇಳನ ವಿಚಾರಗೋಷ್ಠಿಯಲ್ಲಿ ಚರ್ಚೆ, ಕಳವಳ

'ಪ್ರಜಾಪ್ರಭುತ್ವಕ್ಕೆ ನಾನಾ ಬಿಕ್ಕಟ್ಟು'

ಬೆಂಗಳೂರು: ಪ್ರಜಾಪ್ರಭುತ್ವಕ್ಕೆ ಹಲವು ಹಂತದ, ಹಲವು ಆಯಾಮದ ಬಿಕ್ಕಟ್ಟುಗಳು ಎದುರಾಗುತ್ತಿವೆ. ಅವುಗಳನ್ನು ಗುರುತಿಸುವಲ್ಲಿ ನಾವು ಸೋಲುತ್ತಿದ್ದೇವೆ. ಅವುಗಳನ್ನು ಗುರುತಿಸಿ, ಎಚ್ಚೆತ್ತುಕೊಳ್ಳದಿದ್ದರೆ ಪ್ರಜಾತಂತ್ರ ಅಂತ್ಯವಾಗುತ್ತದೆ ಎಂಬ ಕಳವಳ ಸಮಾಜಮುಖಿ ಸಾಹಿತ್ಯ ಸಮ್ಮೇಳನದ 'ಬಿಕ್ಕಟ್ಟಿನಲ್ಲಿ ಗಣತಂತ್ರ ಮತ್ತು ಪ್ರಜಾಪ್ರಭುತ್ವ' ಗೋಷ್ಠಿಯಲ್ಲಿ ವ್ಯಕ್ತವಾಯಿತು. ಅಧಿಕಾರ ವಿಕೇಂದ್ರೀಕರಣದ ಕಡೆಗಣನೆ, ಅಸಹಿಷ್ಣುತೆ, ಭಿನ್ನಮತ ಕುರಿತಾದ ಅಸಹನೆಗಳು ಪ್ರಜಾತಂತ್ರವನ್ನು ಅಳಿವಿನ ಹಾದಿಗೆ ಕರೆದೊಯ್ಯುತ್ತಿವೆ ಎಂಬುದನ್ನು ಸಂಪನ್ಮೂಲ ವ್ಯಕ್ತಿಗಳು ತೆರೆದಿಟ್ಟರು.



ಗೋಷ್ಠಿಯಲ್ಲಿ ಆಯಿಶಾ ಫರ್ಝಾನ ಯು.ಟಿ., ರಾಜಾರಾಮ್ ತೋಳ್ಪಾಡಿ, ಪ್ರಕಾಶ್ ಶೇಷರಾಘವಾಚಾರ್, ಬಿ.ಎಲ್.ಶಂಕರ್, ಅಗ್ರಹಾರ ಕೃಷ್ಣಮೂರ್ತಿ, ಎ.ನಾರಾಯಣ ಮತ್ತು ಎಂ.ಕೆ. ಆನಂದರಾಜೇ ಅರಸ್ ಪಾಲ್ಗೊಂಡಿದ್ದರು

'ಪಂಚಾಯಿತಿ ವ್ಯವಸ್ಥೆ ಕಡೆಗಣನೆ'

ಪ್ರಜಾಪ್ರಭುತ್ವ ಎಂಬುದು ಈಗ ಶಾಸಕರು ಮತ್ತು ಸಂಸದರು ಎಂಬುದಕ್ಕಷ್ಟೇ ಸೀಮಿತವಾಗಿದೆ. ಅಧಿಕಾರ ವಿಕೇಂದ್ರೀಕರಣದ ಬಹುಮುಖ್ಯ ಹಂತವಾದ ಪಂಚಾಯತ್ ವ್ಯವಸ್ಥೆಯನ್ನು ಎಲ್ಲರೂ ಕಡೆಗಣಿಸಿದ್ದಾರೆ. ಇದು ಪ್ರಜಾಪ್ರಭುತ್ವಕ್ಕೆ ಬಂದಿರುವ ಅತ್ಯಂತ ದೊಡ್ಡ ಬಿಕ್ಕಟ್ಟು. ಎಲ್ಲ ಸ್ಥಳೀಯ ಸಂಸ್ಥೆಗಳ ಸದಸ್ಯರೂ ಜನರ ಪ್ರತಿನಿಧಿಗಳು ಎಂಬುದನ್ನು ಮರೆಸಲಾಗುತ್ತಿದೆ. ಈ ತಳಮಟ್ಟದ ಜನಪ್ರತಿನಿಧಿಗಳ ಅಧಿಕಾರಗಳೂ ತಮ್ಮಲ್ಲಿಯೇ ಇರಬೇಕು ಎಂಬಂತೆ ಶಾಸಕರು–ಸಂಸದರು ವರ್ತಿಸುತ್ತಿದ್ದಾರೆ. ಹೀಗಾಗಿಯೇ ಗ್ರಾಮ ಪಂಚಾಯಿತಿ ಚುನಾವಣೆಗಳು ವಿಳಂಬವಾಗುತ್ತಿವೆ. ಬಿಬಿಎಂಪಿ ಚುನಾವಣೆ ನಡೆಸಲಿಲ್ಲ. ಈ ಅಪಾಯವನ್ನು ನಾವು ಅರಿತುಕೊಳ್ಳಬೇಕು.

ಬಿ.ಎಲ್.ಶಂಕರ್, ಕೆಪಿಸಿಸಿ ಉಪಾಧ್ಯಕ್ಷ

ಸರ್ಕಾರದಲ್ಲಿ ಭಿನ್ನಮತ ಮತ್ತು ಪ್ರತಿರೋಧಕ್ಕೆ ಆಡಳಿತ ವ್ಯವಸ್ಥೆ ಹೇಗೆ ಸ್ಪಂದಿಸುತ್ತದೆ ಎಂಬುದು ಪ್ರಜಾಪ್ರಭುತ್ವ ಬಿಕ್ಕಟ್ಟಿನಲ್ಲಿ ಇದೆಯೇ, ಇಲ್ಲವೇ ಎಂಬುದನ್ನು ನಿರ್ಧರಿಸುತ್ತದೆ

ರಾಜಾರಾಮ್ ತೋಳ್ಪಾಡಿ, ಪ್ರಾಧ್ಯಾಪಕ

ಬೇರೆ– ಬೇರೆ ಸ್ವರೂಪದಲ್ಲಿ ಬರುವ ಬಿಕ್ಕಟ್ಟುಗಳನ್ನು ನಾವು ಹೇಗೆ ಎದುರುಗೊಳ್ಳುತ್ತೇವೆ ಎಂಬುದರ ಮೇಲೆ ಅವುಗಳ ಅಪಾಯದ ಮಟ್ಟ ನಿರ್ಧಾರವಾಗುತ್ತದೆ

ಅಗ್ರಹಾರ ಕೃಷ್ಣಮೂರ್ತಿ, ಚಿಂತಕ

ರಾಜಕಾರಣದಲ್ಲಿ, ಶಾಸನಸಭೆಗಳಲ್ಲಿ ಮುಸ್ಲಿಮರ ಪ್ರಾತಿನಿಧ್ಯ ಕುಗ್ಗುತ್ತಿರುವುದೂ ಪ್ರಜಾತಂತ್ರ ಬಿಕ್ಕಟ್ಟಿನಲ್ಲಿರುವುದರ ಸೂಚಕ

ಆಯಿಶಾ ಫರ್ಝಾನ, ಕಾಂಗ್ರೆಸ್ ವಕ್ತಾರೆ

'ಪ್ರತಿಭಟಿಸುವವರು ದೇಶದ್ರೋಹಿಗಳೆ'

ಪ್ರಜಾಪ್ರಭುತ್ವವು ಬಿಕ್ಕಟ್ಟಿನಲ್ಲಿ ಇದೆ ಅಥವಾ ಇಲ್ಲ ಎಂಬ ಎರಡು ಪ್ರತಿಪಾದನೆಗಳ ನಡುವಣ ಸ್ಥಿತಿಯಲ್ಲಿ ನಾವಿದ್ದೇವೆ. ಪ್ರಜಾಪ್ರಭುತ್ವವು ಅಪಾಯದಲ್ಲಿದೆ ಎಂಬುದನ್ನು ಬೇರೆ–ಬೇರೆ ಸಂಗತಿಗಳ ಮೂಲಕ ನಾವು ಕಂಡುಕೊಳ್ಳಬೇಕಾಗುತ್ತದೆ. ಸಂಸತ್ ಭವನದ ಆವರಣದಲ್ಲಿ ಪ್ರತಿಭಟನೆ ನಡೆಸುವ ವಿದ್ಯಾರ್ಥಿಗಳನ್ನು ದೇಶದ್ರೋಹಿಗಳು ಎಂದು ಕರೆಯುವುದಾದರೆ, ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯತ್ತ ಶೂ ಎಸೆಯಲು ಯತ್ನಿಸಿದ ವ್ಯಕ್ತಿಯನ್ನು ದೇಶಪ್ರೇಮಿ ಎನ್ನುವುದಾದರೆ, ಆಳುವವರಿಗೆ ಪ್ರತಿಭಟನೆಗಳು ಮತ್ತು ಪ್ರಶ್ನಿಸುವವರನ್ನು ಕಂಡರೆ ಭಯವಿರುವುದಾದರೆ ಪ್ರಜಾಪ್ರಭುತ್ವವು ಬಿಕ್ಕಟ್ಟಿನ ಹಾದಿಯಲ್ಲಿ ಇದೆ ಎಂದೇ ಅರ್ಥ.

ಎ.ನಾರಾಯಣ, ಪ್ರಾಧ್ಯಾಪಕ

ವಾಗ್ವಾದ

'ಸಂಸತ್ತು ಮತ್ತು ವಿಧಾನಸಭೆಯಲ್ಲಿ ಈಚಿನ ದಿನಗಳಲ್ಲಿ ಚರ್ಚೆಗೆ ಅವಕಾಶವೇ ಇಲ್ಲದಂತಾಗಿದೆ. ವಿರೋಧ ಪಕ್ಷಗಳು ಬರಿಯ ಗಲಾಟೆ–ಗದ್ದಲ ಮಾಡುತ್ತವೆ ಎಂದು ಬಿಜೆಪಿ ವಕ್ತಾರ ಪ್ರಕಾಶ್ ಶೇಷರಾಘವಾಚಾರ್ ಹೇಳಿದರು. ಇದಕ್ಕೆ ಸಭಿಕರೊಬ್ಬರು ಆಕ್ಷೇಪ ವ್ಯಕ್ತಪಡಿಸಿದರು. ಮುಂದುವರೆದು, 'ಆರ್‌ಎಸ್‌ಎಸ್ ಒಂದು ಸಾಂಸ್ಕೃತಿಕ ಸಂಘಟನೆ ಎಂದು ನೀವು ಹೇಳಿಕೊಳ್ಳುತ್ತೀರಿ. ಆದರೆ ವಾಸ್ತವದಲ್ಲಿ ಅದು ಹಿಂದೂ ಸಂಘಟನೆ. ಅದನ್ನು ಮತ್ತು ಬಿಜೆಪಿಯು ಆರ್‌ಎಸ್‌ಎಸ್ ರಾಜಕೀಯ ಅಂಗ ಎಂಬುದನ್ನು ಘಂಟಾಘೋಷವಾಗಿ ಹೇಳಿಬಿಡಿ' ಎಂದು ಒತ್ತಾಯಿಸಿದರು.

ಪ್ರಕಾಶ್ ಅವರು, 'ಆರ್‌ಎಸ್‌ಎಸ್‌ಗೂ, ಬಿಜೆಪಿಗೂ ಸಂಬಂಧವಿಲ್ಲ' ಎಂದರು. ಇದನ್ನು ಒಪ್ಪದ ಸಭಿಕರು, 'ಪ್ರಧಾನಿ, ಬಿಜೆಪಿ ಶಾಸಕರು ಆರ್‌ಎಸ್‌ಎಸ್ ಶಾಖೆ ಮತ್ತು ಕಾರ್ಯಕ್ರಮಗಳಿಗೆ ಹೋಗುವುದು ಏಕೆ' ಎಂದು ಪ್ರಶ್ನಿಸಿದರು. ಅಲ್ಲಿಗೆ ಗೋಷ್ಠಿಯನ್ನು ಬರಖಾಸ್ತು ಮಾಡಲಾಯಿತು. ಮುಖ್ಯ ವೇದಿಕೆಯ ಹೊರಗೂ ಪ್ರಕಾಶ್, ಆಯಿಶಾ ಫರ್ಝಾನ ಮತ್ತು ಬಿ.ಎಲ್.ಶಂಕರ್ ಅವರನ್ನು ತಡೆಗಟ್ಟದ ಕೆಲ ಸಭಿಕರು, 'ಈ ಎಲ್ಲ ಪ್ರಶ್ನೆಗಳಿಗೆ ಉತ್ತರಿಸಬೇಕು' ಎಂದು ಪಟ್ಟು ಹಿಡಿದರು. ಅಲ್ಲಿಗೆ ಬಂದ ಪೊಲೀಸರು, ಎಲ್ಲರನ್ನೂ ಆವರಣದಿಂದ ಹೊರಗೆ ಕಳುಹಿಸಿದರು.

ಅಭಿಮತ ವಿಭಾಗ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಅರಿವಿನಾಚೆಯ ತೀರ ಮೌನ ಬರೀ ಮೌನ!
ಜ್ಞಾನ ತಾನಲ್ಲಿಲ್ಲ ಜ್ಞೇಯಮದುಮಿಲ್ಲ.

–ಕುವೆಂಪು

ಸಂಪಾದಕೀಯ

ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಕೊರತೆ ಸರ್ಕಾರದ ನಿರಾಸಕ್ತಿ–ನಿರ್ಲಕ್ಷ್ಯದ ಫಲ

ವಿದ್ಯಾರ್ಥಿಗಳ ಕೊರತೆಯ ಕಾರಣದಿಂದಾಗಿ ಮುಚ್ಚುತ್ತಿರುವ ಸರ್ಕಾರಿ ಶಾಲೆಗಳ ಸಾಲಿಗೆ ಪದವಿಪೂರ್ವ ಕಾಲೇಜುಗಳೂ ಸೇರಿಕೊಳ್ಳುತ್ತಿರುವುದು, ಶಿಕ್ಷಣ ಕ್ಷೇತ್ರದಲ್ಲಿ ಖಾಸಗೀಕರಣ ತೀವ್ರಗೊಳ್ಳುತ್ತಿರುವುದರ ಸಂಕೇತದಂತಿದೆ. ಸರ್ಕಾರಿ ಕಾಲೇಜುಗಳು ದುರ್ಬಲಗೊಂಡು ಅಸ್ತಿತ್ವದ ಆತಂಕ ಎದುರಿಸುತ್ತಿರುವುದಕ್ಕೆ, ಖಾಸಗಿ ಕಾಲೇಜುಗಳ ಆರಂಭಕ್ಕೆ ರಾಜ್ಯ ಸರ್ಕಾರ ಅವ್ಯಾಹತವಾಗಿ ಅನುಮತಿ ನೀಡುತ್ತಿರುವುದೇ ಕಾರಣವಾಗಿದೆ. ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾಗುವ ವಿದ್ಯಾರ್ಥಿಗಳ ಸಂಖ್ಯೆಗಿಂತ ಪ್ರಥಮ ಪಿಯುಸಿಯ ಸೀಟುಗಳ ಸಂಖ್ಯೆಯಲ್ಲಿ ಪ್ರತಿ ವರ್ಷ ಏರಿಕೆ ಆಗುತ್ತಿದೆ. 2025-26ನೇ ಸಾಲಿನಲ್ಲಿ ಪ್ರಥಮ ಪಿಯುಗೆ 7,72,402 ಸೀಟುಗಳು ಲಭ್ಯವಿದ್ದವು. ಆದರೆ, 2025ರಲ್ಲಿ ಎಸ್‌ಎಸ್‌ಎಲ್‌ಸಿಗೆ ನಡೆದ ಮೂರು ಪರೀಕ್ಷೆಗಳಲ್ಲಿ 6,54,399 ವಿದ್ಯಾರ್ಥಿಗಳು ಉತ್ತೀರ್ಣರಾಗಿರುವುದರಿಂದ, 1,18,003 ಸೀಟುಗಳು ಖಾಲಿ ಉಳಿದಿವೆ. ಕಳೆದ ಐದು ವರ್ಷಗಳಲ್ಲಿ ಖಾಸಗಿ ಪಿಯು ಕಾಲೇಜುಗಳ ಸಂಖ್ಯೆಯಲ್ಲಿ ಆಗಿರುವ ಹೆಚ್ಚಳ, ಸರ್ಕಾರಿ ಕಾಲೇಜುಗಳ ಪ್ರವೇಶ ಪ್ರಕ್ರಿಯೆ ಮೇಲೆ ಪರಿಣಾಮ ಬೀರಿದೆ. ಪ್ರಸ್ತುತ 3,623 ಪದವಿಪೂರ್ವ ಕಾಲೇಜುಗಳು ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಅವುಗಳಲ್ಲಿ, 1,319 ಸರ್ಕಾರಿ ಪಿಯು ಕಾಲೇಜುಗಳು ಹಾಗೂ 815 ಅನುದಾನಿತ ಕಾಲೇಜುಗಳಿದ್ದು, ವಿದ್ಯಾರ್ಥಿಗಳ ಕೊರತೆ ಎದುರಿಸುತ್ತಿವೆ.

ಸರ್ಕಾರಿ ಕಾಲೇಜುಗಳಿಗೆ ವಿದ್ಯಾರ್ಥಿಗಳನ್ನು ಆಕರ್ಷಿಸುವ ಉದ್ದೇಶದಿಂದ ಸರ್ಕಾರ ಕೆಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಬಾಲಕಿಯರಿಗೆ ಉಚಿತ ಶಿಕ್ಷಣ ನೀಡಲಾಗುತ್ತಿದೆ; ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡುವ ವ್ಯವಸ್ಥೆಯನ್ನು ಕೆಲವು ಕಾಲೇಜುಗಳಲ್ಲಿ ಕಲ್ಪಿಸಲಾಗಿದೆ. ಇಷ್ಟಾದರೂ, ಖಾಸಗಿ ಕಾಲೇಜುಗಳ ವ್ಯಾಪಾರಿ ತಂತ್ರಗಳೆದುರು ಸರ್ಕಾರಿ ಕಾಲೇಜುಗಳು ವಿದ್ಯಾರ್ಥಿಗಳನ್ನು ಆಕರ್ಷಿಸುವಲ್ಲಿ ಸೋತಿವೆ. ಅಂಗಡಿ ಮುಂಗಟ್ಟುಗಳ ಮುಂದಿನ ಜಾಹೀರಾತುಗಳಂತೆ, ಖಾಸಗಿ ಕಾಲೇಜುಗಳ ಮುಂದಿನ ಸಿಇಟಿ, ನೀಟ್, ಜೆಇಇ ಪರೀಕ್ಷೆಯ ತರಬೇತಿ ವಿವರಗಳ ಹಾಗೂ ಯಶಸ್ವೀ ಅಭ್ಯರ್ಥಿಗಳ ಚಿತ್ರಪಟಗಳು ವಿದ್ಯಾರ್ಥಿಗಳನ್ನು ಮತ್ತು ಪೋಷಕರನ್ನು ಆಕರ್ಷಿಸುತ್ತಿವೆ. ಟ್ಯೂಷನ್ ಸೆಂಟರ್‌ಗಳ ಸ್ವರೂಪ ಪಡೆದಿರುವ ಖಾಸಗಿ ಕಾಲೇಜುಗಳ ಲಕ್ಷಾಂತರ ರೂಪಾಯಿ ಶುಲ್ಕ ಭರಿಸಲು ಪೋಷಕರು ಹಿಂಜರಿಯುತ್ತಿಲ್ಲ. ಸಾಲ ಮಾಡಿಯಾದರೂ ಮಕ್ಕಳನ್ನು ಖಾಸಗಿ ವಿದ್ಯಾಸಂಸ್ಥೆಗಳಲ್ಲಿ ಓದಿಸುವ ಪೋಷಕರಿದ್ದಾರೆ. ಸರ್ಕಾರಿ ಪದವಿಪೂರ್ವ ಕಾಲೇಜುಗಳು ಮುಚ್ಚುವುದರ ನೇರ ಪರಿಣಾಮ ಉಂಟಾಗುವುದು ಗ್ರಾಮೀಣ ಪ್ರದೇಶಗಳ ವಿದ್ಯಾರ್ಥಿಗಳ ಮೇಲೆ, ವಿಶೇಷವಾಗಿ ಹೆಣ್ಣುಮಕ್ಕಳ ಮೇಲೆ. ಆರ್ಥಿಕವಾಗಿ ಹಿಂದುಳಿದ ಕುಟುಂಬಗಳ ಮಕ್ಕಳಿಗೆ ಖಾಸಗಿ ಶಾಲೆಗಳ ಶುಲ್ಕವನ್ನು ಭರಿಸುವುದು ಕಷ್ಟ. ಸರ್ಕಾರಿ ಕಾಲೇಜುಗಳು ಇಲ್ಲದೆ ಹೋದರೆ ಬಹಳಷ್ಟು ಗ್ರಾಮೀಣ ಬಡ ಮಕ್ಕಳು ವಿದ್ಯಾಭ್ಯಾಸದಿಂದಲೇ ವಂಚಿತರಾಗಬೇಕಾಗುತ್ತದೆ. ಹಾಗೆಯೇ, ಸಮೀಪದಲ್ಲಿರುವ ಕಾರಣದಿಂದಾಗಿ ಕಾಲೇಜಿನ ಮೆಟ್ಟಿಲು ಹತ್ತುವ ಅವಕಾಶ ಪಡೆದಿರುವ ಹೆಣ್ಣುಮಕ್ಕಳು, ಹೆಚ್ಚು ಖರ್ಚು ಹಾಗೂ ದೂರದ ಕಾಲೇಜಿಗೆ ಹೋಗುವ ಸಂದರ್ಭ ಎದುರಾದಲ್ಲಿ ಕಲಿಕೆಯ ಅವಕಾಶದಿಂದ ವಂಚಿತರಾಗುವ ಅಪಾಯವೂ ಹೆಚ್ಚು.



ಸರ್ಕಾರಿ ಪದವಿಪೂರ್ವ ಕಾಲೇಜುಗಳು ವಿದ್ಯಾರ್ಥಿಗಳ ಕೊರತೆ ಎದುರಿಸುತ್ತಿವೆ. ಶಿಕ್ಷಣ ಕ್ಷೇತ್ರದ ಬಗ್ಗೆಗಿನ ಸರ್ಕಾರದ ಉದಾಸೀನದ ಕಾರಣದಿಂದ ಈ ಪರಿಸ್ಥಿತಿ ಎದುರಾಗಿದೆ.

ಸರ್ಕಾರಿ ಕಾಲೇಜುಗಳನ್ನು ಉಳಿಸುವ ನಿಟ್ಟಿನಲ್ಲಿ ಸರ್ಕಾರ ಎಚ್ಚರಗೊಳ್ಳುವುದು ಅಗತ್ಯ. ಮುಂದಿನ ಕೆಲವು ವರ್ಷಗಳವರೆಗೆ ಹೊಸ ಖಾಸಗಿ ಕಾಲೇಜುಗಳಿಗೆ ಅನುಮತಿ ನೀಡಬಾರದು ಹಾಗೂ 'ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ ವರ್ಗೀಕರಣ ಮತ್ತು ನೋಂದಣಿ ನಿಯಮಗಳು-1997' ಕಟ್ಟುನಿಟ್ಟಾಗಿ ಜಾರಿಗೆ ತರಬೇಕಾಗಿದೆ. ಸರ್ಕಾರಿ ಕಾಲೇಜು ಹಾಗೂ ವಿಲೀನದ ಹೆಸರಿನಲ್ಲಿ ಕನ್ನಡ ಶಾಲೆಗಳು ಮುಚ್ಚುವುದು ವಾರ್ಷಿಕ ಪ್ರಕ್ರಿಯೆ ಎನ್ನುವಂತಾಗಿದೆ. ಸಂಶೋಧನೆ ಹಾಗೂ ಚಿಂತನ ಸ್ವಾತಂತ್ರ್ಯಗಳೂ, ಮೂಲ ಸೌಕರ್ಯಗಳ ಕೊರತೆಯಿಂದ ಬಳಲುತ್ತಿರುವ ಸರ್ಕಾರಿ ವಿಶ್ವವಿದ್ಯಾಲಯಗಳು ರೋಗಗ್ರಸ್ತವಾಗಿವೆ. ಪ್ರಾಥಮಿಕ ಮತ್ತು ಉನ್ನತ ಶಿಕ್ಷಣದ ನಡುವಿನ ಕೊಂಡಿಯಂತಿರುವ ಪದವಿಪೂರ್ವ ಕಾಲೇಜುಗಳು ಇದೀಗ ದುರ್ಬಲಗೊಂಡಿವೆ. ಇದೆಲ್ಲದರ ಪರಿಣಾಮವಾಗಿ, ಶಿಕ್ಷಣ ಕ್ಷೇತ್ರದ ನಿರ್ವಹಣೆ ಸರ್ಕಾರಕ್ಕೆ ಸಾಧ್ಯವಿಲ್ಲ ಹಾಗೂ ಗುಣಮಟ್ಟದ ಶಿಕ್ಷಣ ಖಾಸಗಿಯವರಿಂದಲೇ ಸಾಧ್ಯ ಎನ್ನುವ ಸಾರ್ವಜನಿಕ ಅಭಿಪ್ರಾಯ ರೂಪುಗೊಳ್ಳುತ್ತದೆ. ಈ ಅಭಿಪ್ರಾಯ ಬಲಗೊಳ್ಳಲು ಸರ್ಕಾರಗಳೂ ಪರೋಕ್ಷ ಬೆಂಬಲ ನೀಡುತ್ತಿವೆ. ಗುಣಮಟ್ಟದ ಹಾಗೂ ಉಚಿತ ಶಿಕ್ಷಣ ನೀಡುವ ಕರ್ತವ್ಯದಿಂದ ಸರ್ಕಾರ ನುಣುಚಿಕೊಳ್ಳುವುದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಬಗೆಯುವ ದ್ರೋಹ. ಸಾಮಾಜಿಕ ಅಸಮಾನತೆಯನ್ನು ತೊಡೆದು ಹಾಕುವುದರಲ್ಲಿ ಶಿಕ್ಷಣ ಮಹತ್ವದ ಪಾತ್ರ ವಹಿಸುತ್ತದೆ. ಆದರೆ, ಖಾಸಗೀಕರಣಗೊಳ್ಳುವ ಶಿಕ್ಷಣ ವ್ಯವಸ್ಥೆಯೇ ಸಾಮಾಜಿಕ ಅಸಮಾನತೆಗೆ ಕಾರಣವಾಗುತ್ತದೆ ಎನ್ನುವುದನ್ನು ಸರ್ಕಾರ ನೆನಪಿನಲ್ಲಿರಿಸಿಕೊಳ್ಳಬೇಕು.

ಚಾವಡಿ




ಜಾತಿ ವೈಯಕ್ತಿಕ

ಜಾತ್ಯತೀತ ಗಣರಾಜ್ಯದಲ್ಲಿ ಮತ ಮತ್ತು ಜಾತಿ ಖಾಸಗಿ ವಿಷಯವಾಗಿರಬೇಕು. ಯಾವುದೇ, ಧರ್ಮ ಮತ್ತು ಜಾತಿಯು ಸಾರ್ವಜನಿಕ ನೀತಿ ಅಥವಾ ಆಡಳಿತದ ಆಧಾರವಾಗಲು ಸಾಧ್ಯವಿಲ್ಲ; ಸರ್ಕಾರವು ಅದಕ್ಕೆ ಅನುಗುಣವಾಗಿ ಕಾರ್ಯ ನಿರ್ವಹಿಸಬೇಕು, ನ್ಯಾಯಾಲಯವು ಅದಕ್ಕೆ ಅನುಗುಣವಾಗಿ ಆದೇಶ ಮತ್ತು ತೀರ್ಪುಗಳನ್ನು ನೀಡುತ್ತದೆ. ದೇಶದ ದುರಂತವೆಂದರೆ, ಜಾತಿ ಮತ್ತು ಮತವನ್ನು ಹೊರತುಪಡಿಸಿದ ಆಡಳಿತವನ್ನು ಇಂದಿನವರೆಗೆ ಕಾಣಲಾಗಿಲ್ಲ.

ಜಿ.ಟಿ. ನರೇಂದ್ರ, ವಕೀಲ, 'ಫೇಸ್‌ಬುಕ್'ನಿಂದ

ಕಿಡಿನುಡಿ



ಮತಚೋರಿ ವಿರುದ್ಧ ಸಿದ್ದರಾಮಯ್ಯ ಅವರು ಹೊತ್ತೊಯ್ಯಲಿರುವ ಸಹಿ ಸಂಗ್ರಹದ ಗಂಟು ಮುಖ್ಯಮಂತ್ರಿ ಕುರ್ಚಿಯ ತೂಕ ಅಳೆಯುವ ಉದ್ದೇಶವನ್ನು ಸಂಕೇತಿಸುತ್ತಿದೆ. ರಾಹುಲ್ ಗಾಂಧಿಯವರ ಮತಕಳವು ಆರೋಪದ ತೂಕ ಹೆಚ್ಚಿಸುವುದಕ್ಕಂತೂ ಬಳಕೆಯಾಗುವುದಿಲ್ಲ.

ಬಿ.ವೈ. ವಿಜಯೇಂದ್ರ, ಅಧ್ಯಕ್ಷ, ಬಿಜೆಪಿ ರಾಜ್ಯ ಘಟಕ

25 ವರ್ಷಗಳ ಹಿಂದೆ

ಶುಕ್ರವಾರ, 10-11-2000

• ಅಭಿವೃದ್ಧಿ ಕಾರ್ಯಕ್ರಮಗಳಿಗೆ ವಿಶ್ವಬ್ಯಾಂಕ್ ಮೆಚ್ಚುಗೆ

ಬೆಂಗಳೂರು, ನ. 9– ಕೆರೆ, ನೀರಾವರಿ, ಕುಡಿಯುವ ನೀರು ಸರಬರಾಜು, ಹೆದ್ದಾರಿ ನಿರ್ಮಾಣ ಸೇರಿದಂತೆ ಬಡತನ ನಿರ್ಮೂಲನೆಗಾಗಿ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಮುಂದಿನ ಏಳು ವರ್ಷಗಳಲ್ಲಿ ರಾಜ್ಯಕ್ಕೆ 12 ಸಾವಿರ ಕೋಟಿ ರೂಪಾಯಿ ದೀರ್ಘಾವಧಿ ಸಾಲ ನೀಡುವುದಾಗಿ ವಿಶ್ವಬ್ಯಾಂಕ್ ಅಧ್ಯಕ್ಷ ಜೇಮ್ಸ್ ಡಿ. ವೂಫೆನ್‌ಸನ್ ಇಂದು ಇಲ್ಲಿ ಪ್ರಕಟಿಸಿದರು.

ಬಳ್ಳಾರಿ ಜಿಲ್ಲೆಯ ಹಲವು ಗ್ರಾಮಗಳಿಗೆ ಭೇಟಿ ನೀಡಿ ವಿಶ್ವಬ್ಯಾಂಕ್ ನೆರವಿನ ವಿವಿಧ ಅಭಿವೃದ್ಧಿ ಯೋಜನೆಗಳ ಪ್ರಗತಿ ಪರಿಶೀಲನೆಯ ನಂತರ ಇಂದು ಇಲ್ಲಿ ತಿಳಿಸಿದರು.

75 ವರ್ಷಗಳ ಹಿಂದೆ

ಶುಕ್ರವಾರ, 10-11-1950

• ನೇಪಾಳದಲ್ಲಿ ಕ್ರಾಂತಿ ಆರಂಭವಾಗಲಿದೆ

ನವದೆಹಲಿ, ನ. 9– ಕಠ್ಮಂಡುವಿನ ಭಾರತ ರಾಯಭಾರಿ ಕಚೇರಿಯಲ್ಲಿ ಆಶ್ರಯ ಪಡೆದಿರುವ ನೇಪಾಳದ ರಾಜರು, ಭಾರತಕ್ಕೆ ಬರಲು ತಮ್ಮ ಇಚ್ಛೆ ವ್ಯಕ್ತಪಡಿಸಿದ್ದಾರೆಂದು ಅಧಿಕೃತವಾಗಿ ಹೇಳಲಾಗಿದೆ.

ಭಾರತ ಸರ್ಕಾರವು ಇವರು ಭಾರತಕ್ಕೆ ಬರಲು ಸರ್ವ ಅನುಕೂಲಗಳನ್ನು ಕಲ್ಪಿಸುವುದೆಂದು ವಿದೇಶಾಂಗ ಶಾಖಾ ವಕ್ತಾರರು ಇಂದು ತಿಳಿಸಿದರು.

56,000 ಚದರ ಮೈಲಿಗಳ ವಿಸ್ತೀರ್ಣದ ಗುಡ್ಡಗಾಡುಗಳ ಕಾಡಾದ ನೇಪಾಳದಲ್ಲಿ ಕ್ರಾಂತಿ ಆರಂಭವಾಗಲಿದೆ ಎಂದು ನೇಪಾಳಿ ಮುಖ್ಯ ವೃತ್ತವೊಂದರಿಂದ ಕಲ್ಕತ್ತೆಗೆ ಸುದ್ದಿ ಬಂದಿದೆ. ಇಂದು ನೇಪಾಳಿ ಪ್ರಧಾನಿಗಳ ಹತೋಟಿಯಲ್ಲಿರುವ ನೇಪಾಳಿ ಸೈನ್ಯವು, ಇಷ್ಟರಲ್ಲೇ ತನ್ನ ಧೋರಣೆ ಬದಲಾಯಿಸುವ ಚಿಹ್ನೆ ಇದೆ ಎಂದು ವಕ್ತಾರರು ತಿಳಿಸಿದರು.

ವಿಜ್ಞಾನದಿಂದ ಶಾಂತಿ ಸಾಧ್ಯವೇ?

ವಿಶ್ಲೇಷಣೆ



ಗುರುರಾಜ್ ಎಸ್. ದಾವಣಗೆರೆ

'ವಿಜ್ಞಾನವು ಜ್ಞಾನಸಂಚಯ ಮಾತ್ರವಲ್ಲ, ಅದು ವಿವೇಕದ ಸಾಧನ. ಅದನ್ನು ಶಾಂತಿಗಾಗಿ ಬಳಸುವುದೇ ನಮ್ಮ ಪರಮ ಗುರಿಯಾಗಬೇಕು' ಎನ್ನುವುದು 25 ವರ್ಷಗಳ ಹಿಂದೆ ಹಂಗೇರಿಯ ಬುಡಾಪೆಸ್ಟ್‌ನಲ್ಲಿ ನಡೆದ ಮೊಟ್ಟ ಮೊದಲ ವಿಜ್ಞಾನದ ವಿಶ್ವ ಸಮ್ಮೇಳನದಲ್ಲಿ, 150 ದೇಶಗಳ ಪ್ರತಿನಿಧಿಗಳು ತೊಟ್ಟಿದ್ದ ಸಂಕಲ್ಪ. ಅದರ ನೆನಪಿಗೆ ಮತ್ತು ಆ ಸಂಕಲ್ಪವನ್ನು ಸಾಕಾರಗೊಳಿಸಲು ಪ್ರತಿವರ್ಷ ನ. 10ರಂದು ವಿಶ್ವದಾದ್ಯಂತ 'ಶಾಂತಿ ಮತ್ತು ಅಭಿವೃದ್ಧಿಗಾಗಿ ವಿಶ್ವ ವಿಜ್ಞಾನ ದಿನ'ವನ್ನು ಆಚರಿಸಲಾಗುತ್ತದೆ. 'ನಂಬಿಕೆ, ಪರಿವರ್ತನೆ ಮತ್ತು ನಾಳೆ– 2050ಕ್ಕೆ ನಮಗೆ ಬೇಕಾದ ವಿಜ್ಞಾನ'– ಇದು ಈ ವರ್ಷದ ವಿಜ್ಞಾನ ದಿನದ ಧ್ಯೇಯ.

ವಿಜ್ಞಾನದ ಜ್ಞಾನ ಮತ್ತು ಫಲಿತಾಂಶಗಳ ಹಂಚಿಕೆಗಾಗಿ ದೇಶಗಳ ನಡುವೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಒಗ್ಗಟ್ಟನ್ನು ಉತ್ತೇಜಿಸುವುದು ಹಾಗೂ ಯುದ್ಧನಿರತ ದೇಶಗಳಲ್ಲಿರುವ ವಿಜ್ಞಾನಿಗಳ ನಡುವೆ ಸಹಕಾರವನ್ನು ಸುಗಮಗೊಳಿಸಲು ಈ ದಿನಾಚರಣೆ ಬಳಸಿಕೊಳ್ಳಲಾಗುತ್ತಿದೆ. ಸಮಾಜದ ಪ್ರಯೋಜನಕ್ಕಾಗಿ ವಿಜ್ಞಾನದ ಬಳಕೆಗೆ ರಾಷ್ಟ್ರೀಯ, ಅಂತರರಾಷ್ಟ್ರೀಯ ಬದ್ಧತೆಯನ್ನು ನವೀಕರಿಸುವುದು ಮತ್ತು ವೈಜ್ಞಾನಿಕ ಪ್ರಯತ್ನಗಳಿಗೆ ಬೆಂಬಲ ಹೆಚ್ಚಿಸುವ ದಿಸೆಯಲ್ಲಿ ವಿಜ್ಞಾನವು ಎದುರಿಸುತ್ತಿರುವ ಸವಾಲುಗಳತ್ತ ಗಮನ ಸೆಳೆಯುವುದು ಈ ದಿನಾಚರಣೆಯ ಉದ್ದೇಶಗಳಲ್ಲಿ ಸೇರಿವೆ.

ವಿಜ್ಞಾನ ಮತ್ತು ತಂತ್ರಜ್ಞಾನವು ಮಾನವಕುಲದ ಪ್ರಗತಿಗೆ ಬೇಕಾದ ಎಲ್ಲವನ್ನೂ ನೀಡುತ್ತಿದೆ. ಅಭಿವೃದ್ಧಿಯಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ. ಆದರೆ, ಶಾಂತಿ ಸ್ಥಾಪನೆಯ ಕೆಲಸಗಳು ನಿರೀಕ್ಷಿತ ಮಟ್ಟದಲ್ಲಿ ಆಗಿಲ್ಲ. ಅತ್ಯಾಧುನಿಕ ತಂತ್ರಜ್ಞಾನ ಸಲಕರಣೆಗಳು ಯುದ್ಧದ ಅವಕಾಶಗಳನ್ನು ಹೆಚ್ಚು ಮಾಡುತ್ತಿವೆ. ರಷ್ಯಾ ಮತ್ತು ಉಕ್ರೇನ್ ಯುದ್ಧವೇ ಇದಕ್ಕೆ ಸಾಕ್ಷಿ. ಆಸ್ತಿ ನಾಶ, ಪ್ರಾಣಹಾನಿ ಪ್ರಮಾಣವು ಮಿತಿಮೀರಿದೆ. ಭಯೋತ್ಪಾದಕರಿಗೆ, ವಿಧ್ವಂಸಕ ಕೃತ್ಯದಲ್ಲಿ ತೊಡಗಿರುವವರಿಗೆ ವಿಜ್ಞಾನ–ತಂತ್ರಜ್ಞಾನದ ಲಾಭಗಳು ಸುಲಭವಾಗಿ ದೊರಕುತ್ತಿವೆ. ಮಾರುಕಟ್ಟೆಗೆ ಬರುತ್ತಿರುವ ಬಹುತೇಕ ಸಲಕರಣೆಗಳು ವಿದ್ಯುತ್ತನ್ನು ಬೇಡುತ್ತವಲ್ಲದೆ, ಮಾಲಿನ್ಯಕ್ಕೆ ಕಾರಣವಾಗುತ್ತವೆ.

ನಾವು ಬಳಸುತ್ತಿರುವ ಚಾಟ್ ಜಿಪಿಟಿಗಳಿಗೆ ಅಗತ್ಯವಾದ ವಿದ್ಯುತ್ ಪೂರೈಸಲು ಅಣುಸ್ಥಾವರವೇ ಬೇಕು. ಜನರ ಕೊಳ್ಳುಬಾಕತನವನ್ನು ಪೋಷಿಸುವ ತಂತ್ರಜ್ಞಾನಗಳು ಮಾರುಕಟ್ಟೆಗೆ ಗಂಟೆಗೊಂದು ಬರುತ್ತಿವೆ. ತಮ್ಮ ಉತ್ಪನ್ನಗಳಿಗೆ ಸದೃಢ ಮಾರುಕಟ್ಟೆಗಳ ಹುಡುಕಾಟದಲ್ಲಿರುವ ದೇಶಗಳ ನಡುವೆ ತೀವ್ರ ಪೈಪೋಟಿಯಿದೆ. ಈ ಸ್ಪರ್ಧೆ, ಆರ್ಥಿಕ ಅಭಿವೃದ್ಧಿಯ ಮುಂದೆ ಬೇರೆಲ್ಲ ನಗಣ್ಯ ಎಂಬಂತೆ ವರ್ತಿಸಿ, ಜಗತ್ತಿನ ನೆಮ್ಮದಿ ಕಸಿಯುತ್ತಿದೆ. ಪರಿಸ್ಥಿತಿ ಹೀಗಿರುವಾಗ, ದೇಶ ದೇಶಗಳ ನಡುವೆ ಸೌಹಾರ್ದದ ಸೇತುವೆ ಸ್ಥಾಪಿಸಲು ವಿಜ್ಞಾನಕ್ಕೆ ಸಾಧ್ಯವೆ?

ಸಾಧ್ಯ ಎನ್ನುತ್ತದೆ ಪ್ಯಾಲೆಸ್ಟೀನ್ ಮತ್ತು ಇಸ್ರೇಲ್ ದೇಶದ ನಡುವಿನ 'ವಿಜ್ಞಾನ ರಾಜತಾಂತ್ರಿಕತೆ'. ಏಳು ದಶಕಗಳಿಗೂ ಹೆಚ್ಚು ಕಾಲ ಯುದ್ಧದಲ್ಲಿ ತೊಡಗಿರುವ ಈ ರಾಷ್ಟ್ರಗಳು ವಿಜ್ಞಾನ–ತಂತ್ರಜ್ಞಾನದ ವಿಷಯದಲ್ಲಿ ಜಂಟಿ ಯೋಜನೆಗಳನ್ನು ಹಾಕಿಕೊಂಡು ಸಂಶೋಧನೆಯಲ್ಲಿ ನಿರತವಾಗಿವೆ. ಇದು, ವಿಜ್ಞಾನದ ಮೂಲಕ ಶಾಂತಿ ಸ್ಥಾಪಿಸುವ 'ವಿಜ್ಞಾನ ರಾಜತಾಂತ್ರಿಕತೆ'ಗೆ ಒಳ್ಳೆಯ ಉದಾಹರಣೆ. ವಿಶ್ವ ನಾಯಕತ್ವದ ವಿಚಾರದಲ್ಲಿ ಭಾರತವನ್ನು ಸ್ಪರ್ಧಿಯೆನ್ನುವಂತೆ ಅಮೆರಿಕ ಕಂಡರೂ, ಬಾಹ್ಯಾಕಾಶ ಯೋಜನೆಗಳಿಗೆ ತಂತ್ರಜ್ಞಾನದ ಸಹಾಯ ಮಾಡುತ್ತಲೇ ಇದೆ. ವಿಜ್ಞಾನ, ತಂತ್ರಜ್ಞಾನ, ಆರ್ಥಿಕತೆಯ ವಿಷಯಗಳಲ್ಲಿ ಸದಾ ಪೈಪೋಟಿಯಲ್ಲಿರುವ ಚೀನಾ–ಅಮೆರಿಕ ಕಳೆದ 45 ವರ್ಷಗಳಿಂದ ಜಂಟಿಯಾಗಿ ಸಂಶೋಧನೆ ನಡೆಸುತ್ತಿವೆ. ಶೂನ್ಯ ಇಂಗಾಲ ಉತ್ಸರ್ಜನೆ ಸಾಧಿಸಲು ಜಗತ್ತಿನ ಎಲ್ಲ ದೇಶಗಳಿಗೂ ಅಮೆರಿಕ ನೆರವಾಗುತ್ತಿದೆ. ಯುರೋಪಿಯನ್ ಸಮುದಾಯವು

> ಸಂಘರ್ಷದಲ್ಲಿ ತೊಡಗಿರುವ ದೇಶಗಳ ನಡುವೆ ಶಾಂತಿ ನೆಲಸುವಂತೆ ಮಾಡುವ ರಾಜತಾಂತ್ರಿಕ ಪ್ರಯತ್ನಗಳಂತೆ, ವಿಜ್ಞಾನ–ತಂತ್ರಜ್ಞಾನವೂ ಸೌಹಾರ್ದದ ರಾಯಭಾರಿ ಆಗಬಲ್ಲದು. ಭಿನ್ನಾಭಿಪ್ರಾಯ ಇರುವ ದೇಶಗಳು ವಿಜ್ಞಾನ ಕ್ಷೇತ್ರದಲ್ಲಿ ಒಟ್ಟಾಗಿ ಕೆಲಸ ಮಾಡುವುದು ವಿಶ್ವಶಾಂತಿಯ ಉದ್ದೇಶಕ್ಕೆ ಪೂರಕವಾಗಿದೆ.

ಕನಿಷ್ಠ 20 ದೇಶಗಳೊಂದಿಗೆ ವಿಜ್ಞಾನ– ತಂತ್ರಜ್ಞಾನ ಯೋಜನೆಗಳಲ್ಲಿ ಕೈಜೋಡಿಸಿದೆ. 'ಲಸಿಕೆ ಸ್ನೇಹ' (ವ್ಯಾಕ್ಸಿನ್ ಮೈತ್ರಿ) ಯೋಜನೆಯ ಅಡಿಯಲ್ಲಿ ನಾವು 96 ದೇಶಗಳಿಗೆ ಕೋವಿಡ್ ಲಸಿಕೆ ನೀಡಿ ಸಹಕರಿಸಿದ್ದೆವು.

ವಾಯುಗುಣ ವೈಪರೀತ್ಯ ಎದುರಿಸಲು ಜಗತ್ತು ವಿಜ್ಞಾನ–ತಂತ್ರಜ್ಞಾನದ ಮೊರೆ ಹೋಗುತ್ತಿದೆ. ನವೀಕರಿಸಬಹುದಾದ ಸೌರ, ಪವನ ಶಕ್ತಿ ತಂತ್ರಜ್ಞಾನಗಳು ಭೂಮಿ ಬಿಸಿ ನಿಯಂತ್ರಿಸುವಲ್ಲಿ ಯಶಸ್ವಿಯಾಗುತ್ತಿವೆ. ಹಸಿರು ಜಲಜನಕ ಭಾಗ್ಯದ ಬಾಗಿಲು ತೆರೆಯಲು ಕಾಯುತ್ತಿದೆ. ವಿಜ್ಞಾನವು ಇಂಗಾಲದ ಹೊರಸೂಸುವಿಕೆಯನ್ನು ಕಡಿಮೆ ಮಾಡಲು ಅವಶ್ಯಕ ಮಾರ್ಗದರ್ಶನ ನೀಡುತ್ತಿದೆ. ಆರೋಗ್ಯ ರಕ್ಷಣೆಯ ವಿಚಾರದಲ್ಲಿ ಜಾಗತಿಕ ಬಿಕ್ಕಟ್ಟುಗಳನ್ನು ಮತ್ತು ಕೋವಿಡ್–19 ರೀತಿಯ ಸಾಂಕ್ರಾಮಿಕ ರೋಗಗಳನ್ನು ಎದುರಿಸಲು ಲಸಿಕೆ ತಯಾರಿಕೆ, ವೈದ್ಯಕೀಯ ತಂತ್ರಜ್ಞಾನಗಳನ್ನು ರೂಪಿಸಿ ಜನರ ಜೀವ ಉಳಿಸಿರುವುದಲ್ಲದೆ ಸರಾಸರಿ ಜೀವಿತಾವಧಿಯನ್ನು ಹೆಚ್ಚಿಸಲೂ ಸಹಕಾರಿಯಾಗಿವೆ.

ನಾಲ್ಕನೆಯ ಕೈಗಾರಿಕಾ ಕ್ರಾಂತಿಯ ತಂತ್ರಜ್ಞಾನದ ಅನುಕೂಲಗಳು ಸುಧಾರಿತ ದೇಶಗಳಿಗಷ್ಟೇ ಮುಕ್ತವಾಗಿ ದೊರಕುತ್ತಿವೆ ಎಂಬ ಮಾತಿದೆ. ಹಸಿರು ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ ಆವಿಷ್ಕಾರಗಳ ಫಲಶ್ರುತಿ ಸುಧಾರಣೆ ಬಯಸುವ ದೇಶಗಳಿಗೆ ಸಿಗುತ್ತಿಲ್ಲ. ಕಳೆದ ಕೈಗಾರಿಕಾ ಕ್ರಾಂತಿಗಳಲ್ಲಿ ಆದಂತೆ ತೃತೀಯ ಜಗತ್ತಿನ ದೇಶಗಳಿಗೆ ಈಗಲೂ ಅನ್ಯಾಯವಾಗುತ್ತಿದೆ. ಹಂಚಿಕೆಯ ಅಸಮಾನತೆ ಕೊನೆಯಾಗಬೇಕು. ಇಡೀ ಜಗತ್ತೇ ಒಂದು ಹಳ್ಳಿಯಂತಾಗಿರುವಾಗ, ಒಂದು ಪ್ರದೇಶದ ಏರುಪೇರುಗಳು ಇನ್ನೊಂದು ಜಾಗದಲ್ಲಿ ಕಾಣಿಸಿಕೊಳ್ಳಲು ಹೆಚ್ಚು ಸಮಯ ಹಿಡಿಯುವುದಿಲ್ಲ. ಸಂಶೋಧನಾ ಫಲಿತಾಂಶಗಳು ಮತ್ತು ವೈಜ್ಞಾನಿಕ ಮಾಹಿತಿಗಳನ್ನು ಹಂಚಿಕೊಳ್ಳುವ ಮೂಲಕ ವಿಜ್ಞಾನಿಗಳು ಜಾಗತಿಕವಾಗಿ ಒಂದಾಗಬೇಕು.

ನೀರಿನ ಕೊರತೆ, ಆಹಾರ ಭದ್ರತೆ ಅಥವಾ ನೈಸರ್ಗಿಕ ವಿಕೋಪಗಳಂತಹ ಜಾಗತಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ವಿಜ್ಞಾನವು ಪ್ರತಿಯೊಬ್ಬರಿಗೂ ಸಮಾನ ಅವಕಾಶ ಒದಗಿಸುತ್ತದೆ. ಈ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಎಲ್ಲ ದೇಶಗಳು ಒಟ್ಟಾಗಿ ಕೆಲಸ ಮಾಡಬೇಕು. ಇದು ದೇಶಗಳ ನಡುವಿನ ವೈಜ್ಞಾನಿಕ ಮತ್ತು ರಾಜಕೀಯ ಸಹಕಾರಕ್ಕೆ ವೇದಿಕೆ ಕಲ್ಪಿಸುತ್ತಲೇ ಜಾಗತಿಕ ಸಹಕಾರ ಮತ್ತು ಶಾಂತಿ ಸ್ಥಾಪನೆಗೆ ನೆರವಾಗುತ್ತದೆ.

'ಇಸ್ರೇಲ್–ಪ್ಯಾಲೆಸ್ಟೀನ್ ಸೈನ್ಸ್ ಆರ್ಗನೈಜೇಷನ್' ರೀತಿಯ ಸಂಸ್ಥೆಗಳು ರಾಜಕೀಯ ಸಂಘರ್ಷಗಳ ಹೊರತಾಗಿಯೂ ವಿಜ್ಞಾನವನ್ನು ಬಳಸಿಕೊಂಡು ಪರಸ್ಪರ ಪ್ರಗತಿ ಸಾಧಿಸಿವೆ.

ವಿಜ್ಞಾನದ ಬಹುಪಾಲು ಆವಿಷ್ಕಾರಗಳು ಶಾಂತಿ ಮತ್ತು ಸಂಘರ್ಷ ನಿವಾರಣೆಗೆ ಪ್ರಬಲ ಸಾಧನಗಳಾಗಿವೆ. ಜಾಗತಿಕ ತಿಳಿವಳಿಕೆ ಮತ್ತು ಶಾಂತಿ ಸ್ಥಾಪಿಸುವಲ್ಲಿ ಸಂವಹನ ತಂತ್ರಜ್ಞಾನಗಳ ಪಾತ್ರ ಅಗಾಧವಾಗಿದೆ. ಮಾಹಿತಿ ತಂತ್ರಜ್ಞಾನದ ಪ್ರಗತಿಯ ಫಲಗಳಾದ ಇಂಟರ್ನೆಟ್ ಮತ್ತು ಸಾಮಾಜಿಕ ಮಾಧ್ಯಮಗಳು ದೇಶಗಳನ್ನು ಮತ್ತು ಜನರನ್ನು ಒಗ್ಗೂಡಿಸಿವೆ. ಇಂಟರ್ನೆಟ್ ಮತ್ತು ವಿಡಿಯೊ ಕಾನ್ಫರೆನ್ಸ್‌ನಂತಹ ತಂತ್ರಜ್ಞಾನಗಳು ಗಡಿಗಳಾಚೆಗಿನ ವೈಜ್ಞಾನಿಕ ಮತ್ತು ಶೈಕ್ಷಣಿಕ ಸಹಯೋಗವನ್ನು ಸುಲಭಗೊಳಿಸಿವೆ. ವಿಭಿನ್ನ ಸಂಸ್ಕೃತಿಗಳ ಜನರು ಪರಸ್ಪರ ಅರ್ಥಮಾಡಿಕೊಳ್ಳಲು ಮತ್ತು ಸಂಘರ್ಷಗಳನ್ನು ಮಾತುಕತೆ ಮೂಲಕ ಪರಿಹರಿಸಲು ವೇದಿಕೆ ಸೃಷ್ಟಿಸಿವೆ.

ಬರಗಾಲ, ಅತಿವೃಷ್ಟಿ, ಬೆಳೆರೋಗ, ಕೀಟ ದಾಳಿ ಮತ್ತು ಕೃಷಿ ಇಳುವರಿಯಂತಹ ವಿಷಯಗಳ ಕುರಿತು ಉಪಗ್ರಹ ಆಧಾರಿತ ದತ್ತಾಂಶ ಮತ್ತು ಹವಾಮಾನ ಮುನ್ಸೂಚನೆಗಳನ್ನು ಹಂಚಿಕೊಳ್ಳುವುದರಿಂದ ರೈತನಿಗೆ ದೊಡ್ಡ ಅನುಕೂಲವಾಗುತ್ತದೆ. ಇದರಿಂದ ದೇಶಗಳ ನಡುವಿನ ಸ್ಪರ್ಧೆ ಕಡಿಮೆಯಾಗಿ, ಸಹಕಾರ ಏರ್ಪಡುತ್ತದೆ. ಆಹಾರ, ನೀರು, ವಾಯುಗುಣ ಸಮಸ್ಯೆಗಳು ಯಾವುದೇ ಒಂದು ದೇಶಕ್ಕೆ ಸೀಮಿತವಲ್ಲ. ಜಾಗತಿಕ ಸಹಭಾಗಿತ್ವದಿಂದ ಮಾತ್ರ ಸಮಸ್ಯೆ ಬಗೆಹರಿಯುತ್ತದೆ.

ಪರಮಾಣು ಶಕ್ತಿಯನ್ನು ಶಸ್ತ್ರಾಸ್ತ್ರಗಳಿಗಾಗಿ ಅಭಿವೃದ್ಧಿಪಡಿಸಿದರೂ, 'ಅಂತರರಾಷ್ಟ್ರೀಯ ಪರಮಾಣು ಶಕ್ತಿ ಸಂಸ್ಥೆ'ಯಂತಹ ಸಂಸ್ಥೆಗಳು, ಪರಮಾಣು ತಂತ್ರಜ್ಞಾನವನ್ನು ಶಾಂತಿಯುತ ಉದ್ದೇಶಗಳಾದ ವಿದ್ಯುತ್ ಉತ್ಪಾದನೆ, ವೈದ್ಯಕೀಯ ಚಿಕಿತ್ಸೆಗೆ ಮಾತ್ರ ಬಳಸುವುದನ್ನು ಖಚಿತಪಡಿಸಿಕೊಳ್ಳಲು ವಿಜ್ಞಾನ ಮತ್ತು ಎಂಜಿನಿಯರಿಂಗ್ ಜ್ಞಾನವನ್ನು ಬಳಸಿಕೊಳ್ಳುತ್ತವೆ. ಶಸ್ತ್ರಾಸ್ತ್ರ ನಿಯಂತ್ರಣ ಮತ್ತು ಪರಿಶೀಲನಾ ವಿಧಾನಗಳು ವಿಜ್ಞಾನದ ತಾಂತ್ರಿಕ ಸಾಮರ್ಥ್ಯಗಳ ಮೇಲೆ ಅವಲಂಬಿತವಾಗಿವೆ. ನಿಶ್ಶಸ್ತ್ರೀಕರಣಕ್ಕೆ ವಿಜ್ಞಾನದ ಬಳಕೆ ಮಾಡಿಕೊಳ್ಳುವುದು ಬಿಡುವುದು ನಮ್ಮ ಕೈಯಲ್ಲೇ ಇದೆ.

ಆಧುನಿಕ ವೈದ್ಯಕೀಯ ತಂತ್ರಜ್ಞಾನ ಮತ್ತು ಜೈವಿಕ ವಿಜ್ಞಾನದ ಸಾಧನಗಳು ಸಾಂಕ್ರಾಮಿಕ ರೋಗಗಳನ್ನು ನಿಭಾಯಿಸಲು ಜಗತ್ತನ್ನು ಒಗ್ಗೂಡಿಸಿದ ಹಲವು ಉದಾಹರಣೆಗಳಿವೆ. ಕೋವಿಡ್–19ರ ಸಮಯದಲ್ಲಿ ವಿಭಿನ್ನ ರಾಷ್ಟ್ರಗಳ ವಿಜ್ಞಾನಿಗಳು ಲಸಿಕೆ ಅಭಿವೃದ್ಧಿಗೆ ಕೈಜೋಡಿಸಿದ್ದರು. ಆ ಸಹಕಾರ, ಮಾನವ ಕಲ್ಯಾಣಕ್ಕೆ ವಿಜ್ಞಾನದ ಬದ್ಧತೆಯನ್ನು ಎತ್ತಿ ತೋರಿಸುತ್ತದೆ. ಬಾಹ್ಯಾಕಾಶ ಮತ್ತು ರಕ್ಷಣಾ ತಂತ್ರಜ್ಞಾನದಲ್ಲಿ ಸ್ವಾವಲಂಬನೆ ಗಳಿಸಿರುವ ಭಾರತ ಇತರ 83 ರಾಷ್ಟ್ರಗಳೊಂದಿಗೆ ವಿಜ್ಞಾನ, ತಂತ್ರಜ್ಞಾನ ನಾವೀನ್ಯತೆಗೆ ಕೈಜೋಡಿಸಿದೆ.

ವಿಜ್ಞಾನವು ಪೂರ್ವಗ್ರಹವಿಲ್ಲದ ಶಕ್ತಿಯಾಗಿದ್ದು, ಅದನ್ನು ರಚನಾತ್ಮಕವಾಗಿ, ಸುಸ್ಥಿರ ಅಭಿವೃದ್ಧಿಗಾಗಿ ಬಳಸುವುದೇ ಮಾನವಕುಲದ ಜವಾಬ್ದಾರಿಯಾಗಿದೆ. ವಿಜ್ಞಾನಿಗಳು, ನೀತಿ ನಿರೂಪಕರು, ಶಿಕ್ಷಕರು ಮತ್ತು ಸಾರ್ವಜನಿಕರು ಒಟ್ಟಾಗಿ ಕೆಲಸ ಮಾಡಿದಾಗ ಮಾತ್ರ, ವಿಜ್ಞಾನವು ನಿಜವಾದ ಶಾಂತಿಯುತ ಮತ್ತು ಸುಸ್ಥಿರ ಜಗತ್ತನ್ನು ನಿರ್ಮಿಸುವ ತನ್ನ ಸಾಮರ್ಥ್ಯವನ್ನು ಸಾಧಿಸಲು ಸಾಧ್ಯ.



ವಾಚಕರ ವಾಣಿ

ಶಿಕ್ಷಕರ ವರ್ಗಾವಣೆ: ಫಲಿತಾಂಶಕ್ಕೆ ಪೆಟ್ಟು

ಪ್ರೌಢಶಾಲಾ ಶಿಕ್ಷಕರ ವರ್ಗಾವಣೆ ಪ್ರಕ್ರಿಯೆಯಲ್ಲಿ ಕೆಲವು ಶಾಲೆಗಳಲ್ಲಿ ಇಬ್ಬರು, ಮೂವರು ಶಿಕ್ಷಕರು ವರ್ಗಾವಣೆ ಪಡೆದಿದ್ದಾರೆ. ಶೈಕ್ಷಣಿಕ ವರ್ಷದ ಮಧ್ಯದಲ್ಲಿ ಶಾಲೆಯಿಂದ ಶಿಕ್ಷಕರು ಬಿಡುಗಡೆಯಾಗುವುದು, ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟ ಹಾಗೂ ಫಲಿತಾಂಶದ ಮೇಲೆ ಪರಿಣಾಮ ಬೀರಲಿದೆ. ಹಾಗಾಗಿ, ವರ್ಗಾವಣೆ ಪಡೆದವರನ್ನು ಶೈಕ್ಷಣಿಕ ವರ್ಷದ ಕೊನೆಯವರೆಗೂ ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಶಾಲೆಗಳಲ್ಲಿಯೇ ಸರ್ಕಾರ ಉಳಿಸಬೇಕು.

ಸಿದ್ದೇಶ್ ಅಶೋಕ ಚನ್ನಳ್ಳಿ, ಹಿರೇಕೆರೂರು

ಹೋರಾಟದಲ್ಲೇ ಅನ್ನದಾತರು ಹೈರಾಣು

ರೈತರು ಸೌಲಭ್ಯ ಪಡೆಯಲು ಪ್ರತಿ ಬಾರಿಯೂ ಬೀದಿಗೆ ಇಳಿಯಬೇಕಿರುವುದು ದುರದೃಷ್ಟಕರ. ಕಬ್ಬು ಬೆಲೆ ಏರಿಕೆಗೆ ಆಗ್ರಹಿಸಿ ಪ್ರತಿಭಟನೆ ಮಾಡಿದ ವಾರದ ನಂತರ ಸರ್ಕಾರ ಬೆಲೆ ಘೋಷಿಸಿದೆ. ಆ ದರವೂ ರೈತರು ಮಂಡಿಸಿದ ಬೇಡಿಕೆಗೆ ಅನುಗುಣವಾಗಿಲ್ಲ. ರಾಜಕಾರಣಿಗಳಿಗೆ ದೈನಂದಿನ ಖರ್ಚುಗಳಿರುತ್ತವೆ ಎಂದಾದರೆ ರೈತರಿಗೂ ಇರುತ್ತವಲ್ಲವೆ? ಕಬ್ಬು ಬೆಳೆಯಲು ಒಂದು ವರ್ಷ ಬೇಕು. ಅದರ ಮಾರಾಟದಿಂದ ಬರುವ ಹಣವೇ ರೈತ ಕುಟುಂಬವೊಂದರ ಆದಾಯದ ಮೂಲ. ರಾಜಕಾರಣಿಗಳಿಗೆ ಇರುವಂತೆ ರೈತರಿಗೆ ಪರ್ಯಾಯ ಆದಾಯದ ಮೂಲಗಳಿಲ್ಲ.

ಸಂತೋಷ ಪೂಜಾರಿ, ವಿಜಯಪುರ

ಜನ ಮರುಳೋ ಶಾಸ್ತ್ರ ಮರುಳೋ?

'ಶಾಸ್ತ್ರ ಹೇಳುವ ನೆಪದಲ್ಲಿ ₹5 ಲಕ್ಷ ದೋಚಿ ಪರಾರಿ' ಸುದ್ದಿ ಓದಿ ಅಚ್ಚರಿಯಾಯಿತು. ಇನ್ನೂ ಮೂಢನಂಬಿಕೆ ಜೀವಂತವಾಗಿರುವ ಬಗ್ಗೆ ಬೇಸರವಾಯಿತು. ಮನೆಯೊಳಗೆ ₹5 ಲಕ್ಷ ನಗದು ಮತ್ತು 20 ಗ್ರಾಂ ಚಿನ್ನ ತುಂಬಿರುವಾಗ ತನ್ನನ್ನು ಅಸಡ್ಡೆ ಮಾಡಿದ್ದಾರೆ; ಹತ್ತಿಪ್ಪತ್ತು ರೂಪಾಯಿಗೆ ನನ್ನ ಬಗ್ಗೆಯೇ ಶಾಸ್ತ್ರ ಕೇಳಲು ಹೋಗಿದ್ದಾರಲ್ಲ ಎಂದು ಸಂಪತ್ತಿನ ಅಧಿದೇವತೆ ಲಕ್ಷ್ಮೀಗೂ ಬೇಸರವಾಗಿರಬೇಕು! ದಿನನಿತ್ಯ ಇಂತಹ ಘಟನೆಗಳನ್ನು ನೋಡಿಯೂ ಜನರು ಎಚ್ಚೆತ್ತುಕೊಳ್ಳದಿರುವುದು ದುರಂತ. ಹಾಗಾಗಿ, ಮೋಸ ಮಾಡುವವರು ಹೊಸ ವೇಷ ತೊಟ್ಟು ಮರುಳು ಮಾಡುತ್ತಾರೆ.

ದೇವನೂರು ಅಚ್ಯುತ ರಾವ್, ಕಡೂರು

ಮೊಬೈಲ್ ಪಕ್ಕಕ್ಕಿಡಿ; ಪುಸ್ತಕ ಹಿಡಿಯಿರಿ

ಚಿಣ್ಣರಿಂದ ಹಿಡಿದು ಹಿರಿಯರವರೆಗೂ ಮೊಬೈಲ್ ಗೀಳು ಅಂಟಿಕೊಂಡಿದೆ. ಇದನ್ನು ಬಿಡಿಸಲು 'ಮೊಬೈಲ್ ಬಿಡಿ; ಪುಸ್ತಕ ಹಿಡಿ' ಅಭಿಯಾನ ಆರಂಭಿಸಬೇಕಿದೆ. ಪೋಷಕರು ಓದುವ ಅಭಿರುಚಿ ಬೆಳೆಸಿಕೊಂಡರೆ, ಮಕ್ಕಳಲ್ಲೂ ಓದುವ ಅಭ್ಯಾಸ ಬೆಳೆಯುತ್ತದೆ. ಅತಿಯಾದ ಮೊಬೈಲ್ ಬಳಕೆಯಿಂದಾಗಿ ಮಕ್ಕಳ ಆಟ, ಹಿರಿಯರ ಜೊತೆ ಒಡನಾಟ ಕಡಿಮೆಯಾಗಿದೆ. ಪುಸ್ತಕ ಓದುವ ಅಭಿಯಾನವು ಮನೆಗಳಿಗಷ್ಟೆ ಸೀಮಿತವಾಗಬಾರದು. ಈ ಅಭಿಯಾನದಲ್ಲಿ ಶಿಕ್ಷಕರೂ ಭಾಗಿಯಾಗಬೇಕಿದೆ.

ಬಸವರಾಜ ರಾ. ಅಗಸರ, ಚಿಕ್ಕಸಿಂದಗಿ ಬಂದಾಳ

ಪದವೀಧರರ ಮತಪಟ್ಟಿಯ ಗೊಂದಲ

ವಿಧಾನ ಪರಿಷತ್ತಿನ ಪದವೀಧರ ಕ್ಷೇತ್ರದ ಮತದಾರರ ಪಟ್ಟಿಗೆ ಅರ್ಹ ಪದವೀಧರರು ಪ್ರತಿ ಚುನಾವಣೆಗೂ ತಮ್ಮ ವಿಧಾನಸಭಾ ಕ್ಷೇತ್ರದಲ್ಲಿ ನೋಂದಣಿ ಮಾಡಿಕೊಳ್ಳಬೇಕಿದೆ. ಇದರಿಂದ ಮತದಾರರ ಪಟ್ಟಿಯಲ್ಲಿ ಎಲ್ಲ ಪದವೀಧರರು ನೋಂದಣಿ ಮಾಡಿಕೊಳ್ಳಲಾಗುವುದಿಲ್ಲ. ಒಮ್ಮೆ ನೋಂದಣಿಯಾದ ಮತದಾರರನ್ನು ಹಾಗೆಯೇ ಉಳಿಸಿಕೊಳ್ಳಬೇಕು. ಚುನಾವಣಾ ಹೊತ್ತಿನಲ್ಲಿ ಮತದಾರರ ಪಟ್ಟಿ ಪರಿಷ್ಕರಿಸುವ ಸಂದರ್ಭದಲ್ಲಿ ಹೊಸದಾಗಿ ಸೇರ್ಪಡೆ ಮಾಡಿಕೊಳ್ಳುವ ನಿಯಮವನ್ನು ಜಾರಿಗೊಳಿಸಿದರೆ, ಪದವೀಧರ ಮತಕ್ಷೇತ್ರದ ಮತಪಟ್ಟಿ ಬೆಳೆಯುತ್ತದೆ. ಪ್ರತಿ ಬಾರಿಯೂ ನೋಂದಣಿ ಮಾಡಿಕೊಳ್ಳುವ ಅನಿವಾರ್ಯತೆ ಇರುವುದರಿಂದ, ನೋಂದಣಿಗೆ ನೀರಸ ಪ್ರತಿಕ್ರಿಯೆ ಕಂಡುಬಂದಿದೆ.

ಲಕ್ಷ್ಮೀಕಾಂತರಾಜು ಎಂ.ಜಿ., ಗುಬ್ಬಿ

ಅಂಕೆ–ಶಂಕೆ

ಪರಪ್ಪನ ಅಗ್ರಹಾರ
ಸೆರೆಮನೆಯೋ
ಅರಮನೆಯೋ
ಮೂಡಿದೆ ಶಂಕೆ:
ಎಣ್ಣೆ, ಸಿಗರೇಟು
ಟಿ.ವಿ–ಮೊಬೈಲು
ಬರ್ತ್ ಡೇ, ಡಾನ್ಸ್
ಇದ್ಯಾವುದಕ್ಕೂ ಇಲ್ಲ ಅಂಕೆ!

ಆರ್. ನಾಗರಾಜ್, ಗೊರೂರು

ಹಾಜರಿಗೆ ಆಧಾರ್: ಜಿಪಿಎಸ್ ಅಳವಡಿಸಿ

ಕಾಲೇಜು ಶಿಕ್ಷಣ ಇಲಾಖೆಯು ಅಧ್ಯಾಪಕರು, ಸಿಬ್ಬಂದಿಗೆ 'ಆಧಾರ್' ಹಾಜರಾತಿ ಪರಿಚಯಿಸಲು ಮುಂದಾಗಿದೆ. ಯುಜಿಸಿ ಸಂಬಳ ಪಡೆದು ಸರಿಯಾಗಿ ಕೆಲಸ ಮಾಡದ ಅಧ್ಯಾಪಕರಿಗೆ ಇದು ಬಿಸಿತುಪ್ಪವಾಗಲಿದೆ. ಆದಾಗ್ಯೂ, ಸರ್ಕಾರ ಚಾಪೆಯ ಕೆಳಗೆ ತೂರಿದರೆ, ಅಧ್ಯಾಪಕರು ರಂಗೋಲಿ ಕೆಳಗೆ ತೂರುವಷ್ಟು ಚತುರರು. ಹಾಗಾಗಿ, ಮೊಬೈಲ್ ಆ್ಯಪ್ ಮೂಲಕ ಲಾಗಿನ್ ಆಗಿ ಹಾಜರಾಗುವ ಪದ್ಧತಿಯಲ್ಲಿ ಜಿಪಿಎಸ್ ವ್ಯವಸ್ಥೆ ಅಳವಡಿಸಿದರೆ ಒಳ್ಳೆಯದು. ಇದರಿಂದ ಕಾಲೇಜಿಗೆ ಹಾಜರಾಗಿ ಹೊರಗಡೆ ಬೇರೆ ಕೆಲಸಗಳಲ್ಲಿ ತೊಡಗಿದವರನ್ನು ಪತ್ತೆಹಚ್ಚುವುದು ಸುಲಭ.

ಮನೋಜಕುಮಾರ್ ಎಸ್., ಚಳ್ಳಕೆರೆ

'ಕಲ್ಯಾಣ' ಬಸ್: ಯುಪಿಐ ಸೌಲಭ್ಯ ಬೇಕು

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ತನ್ನ ಬಸ್‌ಗಳಲ್ಲಿ ಯುಪಿಐ ಸೌಲಭ್ಯ ಒದಗಿಸಿರುವುದು ಒಳ್ಳೆಯದು. ಇದರಿಂದ ಚಿಲ್ಲರೆ ಸಮಸ್ಯೆಗೆ ಪರಿಹಾರ ಸಿಕ್ಕಿದೆ. ಆದರೆ, ಕಲ್ಯಾಣ ಕರ್ನಾಟಕ ಸಾರಿಗೆ ಬಸ್‌ಗಳಲ್ಲಿ ಈ ವ್ಯವಸ್ಥೆ ಇಲ್ಲ. ಹಾಗಾಗಿ, ಪ್ರಯಾಣಿಕರು ಹಾಗೂ ನಿರ್ವಾಹಕರಿಗೆ ಚಿಲ್ಲರೆ ಬವಣೆ ಇನ್ನೂ ತಪ್ಪಿಲ್ಲ. ಈ ಬಸ್‌ಗಳಲ್ಲೂ ತ್ವರಿತವಾಗಿ ಯುಪಿಐ ಸೌಲಭ್ಯ ಒದಗಿಸಬೇಕಿದೆ.

ಜ್ಞಾನೇಶ್ವರ ಕೆ.ಬಿ., ಮೈಸೂರು

ಚುರುಮುರಿ



ನಗುವುದೋ ಅಳುವುದೋ…

• ಸುಮಂಗಲಾ

'ನಗುವುದೋ ಅಳುವುದೋ ನೀವೇ ಹೇಳಿ…' ಬೆಕ್ಕಣ್ಣ ಬೆಳಗ್ಗೆಯೇ ರಾಗವಾಗಿ ಉದಯಶಂಕರ್ ಬರೆದಿದ್ದ ಚಿತ್ರಗೀತೆಯನ್ನು ಹಾಡುತ್ತಿತ್ತು. ದನಿಯಲ್ಲಿ ಒಂದು ಬಗೆಯ ದುಃಖವೂ, ಒಂದು ಬಗೆಯ ಗೊಂದಲವೂ ಇತ್ತು.

'ಯಾಕಲೇ… ಅಂಥಾ ಪರಿ ಏನಾತೀಗ?' ಅಂತ ಕೇಳಿದೆ.

'ಅದೇ ನ್ಯೂಯಾರ್ಕ್ ಮೇಯರ್ ಆಗಿ ಜೊಹ್ರಾನ್ ಮಮ್ದಾನಿ ಆಯ್ಕೆಯಾಗಿದ್ದಕ್ಕೆ ನಗುವುದೋ ಅಳುವುದೋ ಗೊತ್ತಾಗವಲ್ಲದು' ಎಂದು ನಿಟ್ಟುಸಿರು ಬಿಟ್ಟಿತು.

'ಅವನ ತಾಯಿ ಮೀರಾ ನಾಯರ್ ಭಾರತೀಯಳು. ತಂದೆ ಕಡೆ ಗುಜರಾತ್ ಮೂಲದವರಂತೆ. ಅಂದರೆ ಅಂವಾ ಡಬ್ಬಲ್ ಭಾರತೀಯ ಮೂಲದಂವಾ! ಅಗದಿ ಭಯಂಕರ ಖುಷಿಯಿಂದ ನಗಬೇಕು ಕಣಲೇ' ಎಂದೆ.

'ಅವನ ತಂದೆ ಕಡೆವ್ರು ಗುಜರಾತ್ ಮೂಲದವ್ರು ಖರೇ… ಆದ್ರೆ ಅವ್ರ ಅಡ್ಡಹೆಸರು ಮಮ್ದಾನಿ. ಪಟೇಲ್, ಶಾ, ವಘೇಲ ಇಂತಾ ಗುಜರಾತಿ ಅಡ್ಡಹೆಸರು ಅಲ್ಲವಲ್ಲ' ಬೆಕ್ಕಣ್ಣ ಅಲವತ್ತುಕೊಂಡಿತು.

'ಮಮ್ದಾನಿನೂ ಗುಜರಾತಿ ಅಡ್ಡಹೆಸರೇ. ಅಂವಾ ತನ್ನ ಭಾರತೀಯ ಬೇರುಗಳನ್ನು ಮರೆತಿಲ್ಲ. ಮೇಯರ್ ಆದ ಮ್ಯಾಲೆ ಮೊದಲ ಭಾಷಣದಾಗೆ ನೆಹರೂ ಮಾತುಗಳನ್ನು ನೆನಪಿಸಿಕೊಂಡಾನೆ. ವಲಸಿಗರಿಗೆ ಎಲ್ಲ ಥರದ ಅನುಕೂಲ ಮಾಡಿಕೊಡ್ತೀವಿ ಅಂದಾನೆ. ಹಿಂಗಾಗಿ, ನಗಬೇಕಲೇ' ಎಂದು ನಾನು ವಾದಿಸಿದೆ.

'ಅದೇ ಮತ್ತೆ… ಅಂವಾ ನೆಹರೂ ಚಾಚಾನ್ನ ಎದಕ್ಕೆ ನೆನಪಿಸಿಕೋಬೇಕು? ಹಿಂದೆ ಒಂದು ಸಲ ಭಾಷಣ ಮಾಡಬೇಕಿದ್ದರೆ ನಮ್ ಮೋದಿಮಾಮಾನ್ನ ಬೈದಾನೆ… ಹಿಂಗಾಗಿ ಅಳುವುದೇ ಈಗ' ಎಂದಿತು ಮತ್ತೆ ಅಳುದನಿಯಲ್ಲಿ.

'ಅಂವಾ ಬೈದಿಲ್ಲಲೇ… ಖರೇ ಏನೈತಿ ಅಂತ ಹೇಳ್ಯಾನೆ ಅಷ್ಟೇ!' ಎಂದು ಸಮಾಧಾನಿಸಿದೆ.

'2019ರಲ್ಲಿ ನಮ್ಮ ಮೋದಿ ಮಾಮಾ ಹೂಸ್ಟನ್ನಿನಲ್ಲಿ ಹೌಡಿ ಮೋದಿ ಕಾರ್ಯಕ್ರಮ ಮಾಡಿದ್ದರಲ್ಲ… ಹಂಗೆ ಮುಂದೆ ಯಾವಾಗಾದ್ರೂ ನ್ಯೂಯಾರ್ಕಿನಾಗೂ ಹೌಡಿ ಮೋದಿ ಕಾರ್ಯಕ್ರಮ ಮಾಡಬೌದು ಅಂದುಕೊಂಡಿದ್ದೆ. ಇನ್ನು ಅದು ಆಗೂದು ಡೌಟು… ಅಳುವುದೇ ಈಗ' ಎಂದು ಕಣ್ಣೊರೆಸಿಕೊಂಡಿತು.

ಸಂಗತ

ಭ್ರಮೆಯ ಅವತಾರ ಒಂದೆರಡಲ್ಲ, ನೂರಾರು!

• ದೇವನೂರ ಮಹಾದೇವ

ಸಂಸದ ಕೋಟ ಶ್ರೀನಿವಾಸ ಪೂಜಾರಿಯವರ 'ದೇವನೂರರಿಗೊಂದು ದಾಳಿಂಬೆ ಕೊಡಿ' (ಅ. 11) ಬರಹಕ್ಕೆ ನಾನು ಪ್ರತಿಕ್ರಿಯಿಸುತ್ತ (ಅ. 18), 1939ರಲ್ಲಿ ಅಂಬೇಡ್ಕರ್ ಆರ್‌ಎಸ್‌ಎಸ್ ಶಾಖೆಗೆ ಭೇಟಿ ನೀಡಿದ್ದರು ಎಂಬ ಪೂಜಾರಿಯವರ ಮಾತಿಗೆ ಪುರಾವೆಗಳಿಲ್ಲ ಎಂದು ಆಕ್ಷೇಪಿಸಿದ್ದಕ್ಕೆ ಅವರು, 'ಕಡುಬಿನ ರುಚಿಗೆ ತಿಂದದ್ದೇ ಆಧಾರ ಎನ್ನಬೇಕಲ್ಲವೆ?' (ಅ. 28) ಎಂದು ಪ್ರಶ್ನಿಸಿದ್ದಾರೆ. 1939ರ ವೇಳೆಗಾಗಲೇ ಅಂಬೇಡ್ಕರ್ ಎತ್ತರದ ನಾಯಕರಾಗಿದ್ದರು. ಹಾಗಾಗಿ, ಆರ್‌ಎಸ್‌ಎಸ್ ಶಾಖೆಯ ಭೇಟಿಯ ಬಗ್ಗೆ ಮರಾಠಿ ಪತ್ರಿಕೆಯಲ್ಲಾದರೂ ಸಣ್ಣ ಸುದ್ದಿಯಾದರೂ ಪ್ರಕಟವಾಗಿರಬೇಕಿತ್ತಲ್ಲವೆ? ಅಂಬೇಡ್ಕರ್ ಬರಹಗಳಲ್ಲಿ ಹುಡುಕಿದರೂ ಈ ಬಗ್ಗೆ ಸುಳಿವಿಲ್ಲ. ಯಾವ ಆಧಾರವೂ ಇಲ್ಲದೆ ರಾಹುಲ್ ಶಾಸ್ತ್ರಿಯವರ ಪುಸ್ತಕದಲ್ಲಿ ಹೇಳಿದ್ದನ್ನು ಸೇವಿಸಿಕೊಂಡು 'ಕಡುಬಿನ ರುಚಿಗೆ ತಿಂದದ್ದೇ ಆಧಾರವಲ್ಲವೆ?' ಎಂದು ಪೂಜಾರಿಯವರು ಹೇಳಿದರೆ ನಾನೇನು ಹೇಳಲಿ? ಇದಕ್ಕೆ ಮದ್ದಿಲ್ಲ.

ಥಳುಕಿನ ಭಾಷೆಯ ವಾಗ್ಝರಿಯಲ್ಲಿ ಪೂಜಾರಿಯವರು 'ದಾಳಿಂಬೆ' ಬರಹದಲ್ಲಿ ಹೇಳಿದ್ದನ್ನೆ ಮುಂದುವರಿಸಿದ್ದಾರೆ: '1963ನೇ ಇಸವಿಯಲ್ಲಿ ನೆಹರೂರವರು ಗಣರಾಜ್ಯೋತ್ಸವ ಪರೇಡ್‌ನಲ್ಲಿ ಆರ್‌ಎಸ್‌ಎಸ್‌ಗೆ ಅವಕಾಶ ನೀಡಿದ್ದು ಸುಳ್ಳೆ? ಅದು ಸತ್ಯ ಎಂದು ದೇವನೂರರು ಒಪ್ಪುತ್ತಾರಾದರೆ, ಅದೇ ನೆಹರೂ, ದುಂಡುಮೇಜಿನ ಚರ್ಚೆಯಲ್ಲಿ ಸಂಘದ ಗೋಳ್ವಲ್ಕರ್ ಸಲಹೆ ಕೇಳಿದ್ದನ್ನು ಫೋಟೊಗಳಿಲ್ಲ ಎಂಬ ಕಾರಣಕ್ಕೆ ಘಟನೆಯೇ ಸುಳ್ಳು ಎಂದು ಹೇಗೆ ಹೇಳಬಲ್ಲರು?' ಎಂದು ಪ್ರಶ್ನಿಸುತ್ತಾರೆ. ಈ ತೇಲಾಡುವ ಭಾಷಾಶೈಲಿ ಮೋಡಿಗೆ ನಾವು ತೇಲಿಹೋಗದೆ ಎರಡನ್ನೂ ಪರಿಶೀಲಿಸುವ.

1963, ಭಾರತ ಮತ್ತು ಚೀನಾ ಯುದ್ಧದ ಸಮಯ. ಭಾರತದ ಸೈನಿಕರು ಗಡಿಯಲ್ಲಿ ಹೋರಾಡುತ್ತಿದ್ದರು. ಗಣರಾಜ್ಯೋತ್ಸವ ಪರೇಡ್ ನಡೆಸುವುದಕ್ಕೂ ಮುಗ್ಗಟ್ಟಿತ್ತು. ಆಗ ನೆಹರೂ ನಾಗರಿಕರ ಮೆರವಣಿಗೆ ಮಾಡಲು ನಿರ್ಧರಿಸಿದ್ದರಿಂದ ಲಕ್ಷದಷ್ಟು ಜನರ ಮೆರವಣಿಗೆ ನಡೆಯುತ್ತದೆ. ಎನ್‌ಸಿಸಿ, ಹೋಂಗಾರ್ಡ್, ವಿದ್ಯಾರ್ಥಿಗಳು, ಟ್ರೇಡ್ ಯೂನಿಯನ್‌ಗಳು, ಸಂಘ–ಸಂಸ್ಥೆಗಳು ಭಾಗವಹಿಸಿದ್ದ ಮೆರವಣಿಗೆಯಲ್ಲಿ ಆರ್‌ಎಸ್‌ಎಸ್ ಕೂಡ ಬ್ಯಾಂಡ್ ಇಲ್ಲದೆ, ಕೇಸರಿ ಧ್ವಜವಿಲ್ಲದೆ, ದೊಣ್ಣೆರಹಿತವಾಗಿ ಭಾಗವಹಿಸಿತ್ತು. ಆರ್‌ಎಸ್‌ಎಸ್ ಮುಖವಾಣಿ 'ಆರ್ಗನೈಜರ್' ಪತ್ರಿಕೆಯು, 1963ರ ಫೆಬ್ರುವರಿ 4ರ ಸಂಚಿಕೆಯಲ್ಲಿ 'ಆರ್‌ಎಸ್‌ಎಸ್‌ನ 2 ಸಾವಿರಕ್ಕೂ ಹೆಚ್ಚು ಸ್ವಯಂಸೇವಕರು ಬಿಳಿಷರ್ಟ್, ಖಾಕಿ ನಿಕ್ಕರ್, ಬೆಲ್ಟ್, ಕರಿಟೋಪಿ ಮತ್ತು ಬೂಟ್ಸ್ ಧರಿಸಿ ಭಾಗವಹಿಸಿದ್ದರು' ಎಂದು ವರದಿ ಮಾಡಿದೆ (ಲಿಂಕ್: caravanmagazine.in/history/myth-that-nehru-invited-rss-1963-republic-day-parade). ಹೀಗೆಯೇ, 1963ರ ಆಸುಪಾಸಿನಲ್ಲೆ ನಡೆದಿದೆ ಎನ್ನಲಾದ ದುಂಡುಮೇಜಿನ ಸಭೆಗೆ ನೆಹರೂ ಆಹ್ವಾನಿಸಿ ಗೋಳ್ವಲ್ಕರ್ ಭಾಗವಹಿಸಿದ್ದರು ಎಂಬುದೂ ನಿಜವೇ ಆಗಿದ್ದರೆ, ಯಾವ ಆರ್ಕೈವ್ಸ್‌ನಲ್ಲಿ ಇಲ್ಲದಿದ್ದರೂ ಪರವಾಗಿಲ್ಲ, 'ಆರ್ಗನೈಜರ್'ನಲ್ಲಾದರೂ ಪ್ರಕಟವಾಗಿರಬೇಕಿತ್ತಲ್ಲವೆ?



ಮನಸ್ಸಿನಲ್ಲೆ ಮಂಡಿಗೆ ತಿನ್ನುವ 'ಕಡುಬಿನ ರುಚಿಗೆ ತಿಂದದ್ದೇ ಆಧಾರವಲ್ಲವೆ?' ಸಿದ್ಧಾಂತವು ಭ್ರಮೆ ಆಗಿಬಿಡಬಹುದು. ಉದಾಹರಣೆಗೆ, ಒಬ್ಬ ವ್ಯಕ್ತಿಯು– 'ಒಂದು ಚರಂಡಿ ನಾಲೆ, ದುರ್ಗಂಧ ಬೀರುತ್ತಿತ್ತು. ಅದರಲ್ಲಿ ಗ್ಯಾಸ್ ಬರ್ತಿತ್ತಲ್ಲ, ಅಲ್ಲಿಗೆ ಪೈಪ್‌ಲೈನ್ ಮುಖಾಂತರ ಸ್ಟೌಗೆ ಸಂಪರ್ಕ ಮಾಡಿದ ಚಹಾವಾಲ, ಆ ಗ್ಯಾಸಲ್ಲಿ ಚಹಾ ಮಾಡುತ್ತಿದ್ದ' ಎಂದು ಅನುಭವಿಸುತ್ತ ಹೇಳಿದರೆ ಹಾಗೂ ಭಾರತವು ಪಾಕಿಸ್ತಾನದ ಬಾಲಾಕೋಟ್ ಮೇಲೆ ದಾಳಿ ಮಾಡುವ ಸಂದರ್ಭದಲ್ಲಿ ಅದೇ ವ್ಯಕ್ತಿಯು– 'ನಾನು ಸೈನ್ಯದ ಮುಖ್ಯಸ್ಥರಿಗೆ ಹೇಳಿದೆ, ಮೋಡವಿದೆ, ಮಳೆ ಇದೆ, ಇದರಿಂದ ಒಂದು ಲಾಭ ಇದೆ, (ಪಾಕಿಸ್ತಾನದ) ರಾಡರ್‌ನಿಂದ ಬಚಾವಾಗಬಹುದು, ದಾಳಿ ಮಾಡಿ ಎಂದೆ' ಅಂತ ಹೇಳಿದರೆ, ಆ ವ್ಯಕ್ತಿಯ 'ದೇಹ ಬೆಳೆದಿದೆ, ಬುದ್ಧಿ ಎಳಸು' ಎಂದುಕೊಂಡು ನಗುತ್ತಲೊ ಅಥವಾ ವ್ಯಥೆಪಟ್ಟುಕೊಂಡೊ ಮುಂದೆ ಸಾಗಬಹುದು.

ಆದರೆ, ಆ ಮಾತುಗಳು ನಮ್ಮ ಪ್ರಧಾನಿ ನರೇಂದ್ರ ಮೋದಿಯವರದು! ದೇಶದ ಚುಕ್ಕಾಣಿ ಹಿಡಿದ ವ್ಯಕ್ತಿ ಹೀಗೆ ಮಾತಾಡಿದರೆ ಪ್ರಜೆಗಳ ಗತಿ ಅಧೋಗತಿ. ಯಾಕೆಂದರೆ, ಅಂಥವರಿಗೆ ವಾಸ್ತವ ಕಣ್ಣಿಗೆ ಕಾಣಿಸುವುದಿಲ್ಲ.

ನಿರುದ್ಯೋಗ ಪ್ರಮಾಣವು, 2018ರ ಸರ್ಕಾರದ ರಾಷ್ಟ್ರೀಯ ಅಂಕಿಅಂಶ ಆಯೋಗದ ಸಮೀಕ್ಷೆ ಪ್ರಕಾರ ಶೇ 6.2ಕ್ಕೆ ಏರಿಕೆಯಾಗಿದೆ, ಇದು ಕಳೆದ 40 ವರ್ಷಗಳಲ್ಲೆ ಅತ್ಯಧಿಕ. ನಮ್ಮ ಪ್ರಧಾನಿ ವಾಸ್ತವಕ್ಕೆ ಮುಖಾಮುಖಿಯಾಗದೆ ಸಮೀಕ್ಷೆಯನ್ನೆ ನಿಲ್ಲಿಸಿಬಿಟ್ಟರು. ಬದಲಿಗೆ, ನಿರುದ್ಯೋಗಿಗಳು ರೀಲ್ಸ್ ಮಾಡುವುದನ್ನೂ, ಪಕೋಡ ಮಾರುವುದನ್ನೂ ಉದ್ಯೋಗದ ಲೆಕ್ಕಕ್ಕೆ ಸೇರಿಸಿ ನಿರುದ್ಯೋಗ ಕಮ್ಮಿಯಾಗಿದೆ ಎಂದು ಸಂಭ್ರಮಿಸುತ್ತಿದ್ದಾರೆ. ಭಾರತವು ಹಸಿವಿನ ಸೂಚ್ಯಂಕದಲ್ಲಿ ಜಾಗತಿಕವಾಗಿ 121 ದೇಶಗಳ ಪೈಕಿ 108ನೇ ಸ್ಥಾನದಲ್ಲಿದ್ದರೂ ಪಾಕಿಸ್ತಾನ, ಬಾಂಗ್ಲಾದೇಶ, ಶ್ರೀಲಂಕಾಗಿಂತ ಕೆಳಗಿದ್ದರೂ ದೇಶದ ಪ್ರಧಾನಿಗೆ ಕಣ್ಣಿಗಾಣುವುದಿಲ್ಲ. ಅವರು ಶತಕೋಟಿ ಬಂಡವಾಳಿಗರ ಊಟ ಪಾಠ ಆಟ ನೋಡಿಕೊಂಡು ಆನಂದದಲ್ಲಿದ್ದಾರೆ. ಇಂಥ ಭ್ರಮೆಯ ಅವಾಂತರ ಒಂದೆರಡಲ್ಲ, ನೂರಾರು.

ಪೂಜಾರಿಯವರು ಉಲ್ಲೇಖಿಸುವ 'ಜಾತಿಯ ಹೆಸರಲ್ಲಿ ಹಿಂದೂಧರ್ಮ ಒಡೆಯದಂತೆ ಜಾಗೃತಿವಹಿಸೋಣ' ಎಂದು ಗೋಳ್ವಲ್ಕರ್ ಹೇಳಿದ್ದರು ಎಂಬುದನ್ನಾಗಲಿ, ಬಾಳಾ ಸಾಹೇಬ್ ದೇವರಸ್ 'ಜಗತ್ತಿನಲ್ಲಿ ಮನುಷ್ಯ ಮನುಷ್ಯನನ್ನು ಮುಟ್ಟಲಾಗದ ಅಸ್ಪೃಶ್ಯತೆ ತಪ್ಪಲ್ಲವಾದರೆ ಪ್ರಪಂಚದ ಯಾವ ಅಪರಾಧವೂ ತಪ್ಪಲ್ಲ'– ಇಂಥವುಗಳನ್ನು ಗೌರವಿಸುತ್ತೇನೆ, ಸೇವಿಸುತ್ತೇನೆ. ಆದರೆ, ಗೋಳ್ವಲ್ಕರ್‌ರ 'ಚಾತುರ್ವರ್ಣ ಸಮಾಜವೇ ದೇವರ ಸಾಕ್ಷಾತ್ಕಾರ' ಹಾಗೂ ಸಾವರ್ಕರ್‌ರ 'ಮನುಸ್ಮೃತಿಯೇ ಹಿಂದೂ ಕಾಯ್ದೆ' ಹೇಳಿಕೆಗಳನ್ನು ನಾನು ಪ್ರಶ್ನಿಸಿದ್ದಕ್ಕೆ, ಅದರೊಳಗೇನೊ ಮರ್ಮವಿದೆ ಎಂದು ಪೂಜಾರಿಯವರು ಶಂಕಿಸುತ್ತಾರೆ. 'ಯಾರೇನೇ ಹೇಳಿದರೂ ಸಂಘದ ಜಾತಿ ಒಂದೇ– ಹಿಂದೂ, ಹಿಂದೂ, ಹಿಂದೂ' ಎಂದು ಘೋಷಣೆ ಕೂಗುತ್ತಾರೆ. ಇಲ್ಲಿ ಅವರ ಭಾಷೆ ಹರಳೆಣ್ಣೆ ಹಚ್ಚಿಕೊಂಡು ಅಖಾಡಕ್ಕಿಳಿದಂತಿದೆ. ಇದು ಸಲ್ಲ. ಪೂಜಾರಿಯವರೇ, ನಾವೆಲ್ಲರೂ ನಮ್ಮ ಆರೋಗ್ಯಕ್ಕಾಗಿ ನಮ್ಮ ಸೈದ್ಧಾಂತಿಕ ಪಿತೃಗಳ ಒಳಿತನ್ನು ಸೇವಿಸಿ, ಕೆಡಕುಗಳನ್ನು ವಿಸರ್ಜಿಸಬೇಕೆಂಬುದು ನನ್ನ ವಿನಂತಿ, ಅಷ್ಟೆ.

(ಈ ಬರಹದೊಂದಿಗೆ 'ಆರ್‌ಎಸ್‌ಎಸ್‌ಗೆ ನೂರು ವರ್ಷಗಳಂತೆ! ಹೌದಾ?' ಬರಹಕ್ಕೆ ಸಂಬಂಧಿಸಿದ ಚರ್ಚೆ ಕೊನೆಗೊಂಡಿದೆ)

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಕಾಂಗ್ರೆಸ್ ಸರ್ಕಾರಕ್ಕೆ ಎರಡು ವರ್ಷ, ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ಮೆಚ್ಚುಗೆ: ಸಿವಿಕ್ ಸಂಸ್ಥೆಯ ವರದಿ

ಘೋಷಣೆಯಾಗಿಯೇ ಉಳಿದ ಭರವಸೆ

ಪ್ರಜಾವಾಣಿ ವಾರ್ತೆ

ಕಾಂಗ್ರೆಸ್ ಪಕ್ಷವು 2023ರ ವಿಧಾನಸಭಾ ಚುನಾವಣೆಗೂ ಮುನ್ನ ನೀಡಿದ್ದ ಪ್ರಮುಖ 134 ಭರವಸೆಗಳ ಪೈಕಿ, ಅಧಿಕಾರಕ್ಕೆ ಬಂದ ಮೊದಲ ಎರಡು ವರ್ಷಗಳಲ್ಲಿ ಕೇವಲ ಒಂಬತ್ತನ್ನಷ್ಟೇ ಈಡೇರಿಸಿದೆ. ಪ್ರಮುಖ ಘೋಷಣೆಯಾದ ಐದು ಗ್ಯಾರಂಟಿ ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನ ಮಾಡಿದ್ದನ್ನು ಬಿಟ್ಟರೆ, ಶಿಕ್ಷಣ, ಆರೋಗ್ಯ, ಪರಿಸರ, ನಗರಾಭಿವೃದ್ಧಿ, ಬೆಂಗಳೂರು ಅಭಿವೃದ್ಧಿ, ಕಾರ್ಮಿಕರು, ಆಡಳಿತದಂತಹ ಪ್ರಮುಖ ಕ್ಷೇತ್ರಗಳಲ್ಲಿ ಅದರ ಸಾಧನೆಯ ಶೇಕಡವಾರು ಪ್ರಮಾಣ (ಶೇ 6.7) ಎರಡು ಅಂಕಿಯನ್ನೂ ದಾಟಿಲ್ಲ. ಈ ಪೈಕಿ ನಾಲ್ಕು ಕ್ಷೇತ್ರಗಳಲ್ಲಿ ಸರ್ಕಾರದ ಸಾಧನೆ ಶೂನ್ಯ.

–ಇವು ಬೆಂಗಳೂರಿನ ಸಿವಿಕ್ ಸಂಸ್ಥೆಯ ವರದಿಯ ಮುಖ್ಯ ಅಂಶಗಳು.

ರಾಜ್ಯ ಸರ್ಕಾರದ ಎರಡು ವರ್ಷಗಳ ಸಾಧನೆಯನ್ನು ಪರಾಮರ್ಶೆಗೆ ಒಳಪಡಿಸಿರುವ ಸಂಸ್ಥೆ, ‘ನಮ್ಮ ಸರ್ಕಾರ, ನಮ್ಮ ರಿಪೋರ್ಟ್ ಕಾರ್ಡ್’ ಎಂಬ ವರದಿಯನ್ನು ಅಕ್ಟೋಬರ್ 30ರಂದು ಬಿಡುಗಡೆ ಮಾಡಿದೆ. ಚುನಾವಣೆಗೂ ಪೂರ್ವದಲ್ಲಿ ಕಾಂಗ್ರೆಸ್ ಪಕ್ಷ ನೀಡಿದ್ದ ಭರವಸೆಗಳನ್ನು ಆಧರಿಸಿ, ಎರಡು ವರ್ಷಗಳಲ್ಲಿ ಎಷ್ಟು ಆಶ್ವಾಸನೆಗಳನ್ನು ಈಡೇರಿಸಿದೆ ಎಂಬುದನ್ನು ಅದು ಲೆಕ್ಕ ಹಾಕಿದೆ. ‘ಇದು ಸರ್ಕಾರದ ಕಾರ್ಯವೈಖರಿಯ ಬಗ್ಗೆ ನಾಗರಿಕರ ವಿಮರ್ಶೆ’ ಎಂದು ಸಂಸ್ಥೆ ಪ್ರತಿಪಾದಿಸಿದೆ.

ಸಾರ್ವಜನಿಕವಾಗಿ ಲಭ್ಯವಿರುವ ಮಾಹಿತಿ, ಮಾಹಿತಿ ಹಕ್ಕು ಕಾಯ್ದೆಯಿಂದ ಪಡೆದ ಉತ್ತರಗಳ ಆಧಾರದಲ್ಲಿ 8 ಪ್ರಮುಖ ಕ್ಷೇತ್ರಗಳಲ್ಲಿ ನೀಡಲಾದ 134 ಭರವಸೆಗಳ ಸ್ಥಿತಿಗತಿಯನ್ನು ವರದಿಯಲ್ಲಿ ಅವಲೋಕಿಸಲಾಗಿದೆ. ಶಿಕ್ಷಣ, ಆರೋಗ್ಯ, ಪರಿಸರ, ನಗರಾಭಿವೃದ್ಧಿ, ಬೆಂಗಳೂರು, ಕಾರ್ಮಿಕರು, ಆಡಳಿತ ಮತ್ತು 5 ಗ್ಯಾರಂಟಿ ಯೋಜನೆಗಳು. ಈ ಎಂಟು ಕ್ಷೇತ್ರಗಳಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳ ಕುರಿತು ವಿಸ್ತೃತ ವಿಶ್ಲೇಷಣೆಯನ್ನು ವರದಿ ಒಳಗೊಂಡಿದೆ. ಪ್ರಗತಿಯಲ್ಲಿರುವ ಯೋಜನೆಗಳು, ಇನ್ನೂ ಆರಂಭವಾಗದ ಯೋಜನೆಗಳ ಬಗ್ಗೆಯೂ ವರದಿಯಲ್ಲಿ ಪ್ರಸ್ತಾಪಿಸಲಾಗಿದೆ.

ಐದು ಗ್ಯಾರಂಟಿಗಳನ್ನು ಹೊರತುಪಡಿಸಿ, ಇತರ ಏಳು ಪ್ರಮುಖ ಕ್ಷೇತ್ರಗಳಲ್ಲಿ ನೀಡಲಾಗಿದ್ದ 129 ಭರವಸೆಗಳಲ್ಲಿ 4 ಮಾತ್ರ ಈಡೇರಿವೆ. ಭರವಸೆಗಳ ಸ್ಥಿತಿಗತಿಯನ್ನು ಪ್ರಕಟಿಸಲು, ಗಮನಾರ್ಹ, ಪ್ರಗತಿಯಲ್ಲಿದೆ, ಸಮಸ್ಯಾತ್ಮಕ, ಪ್ರಶ್ನಾರ್ಹ, ಅಪಾಯಕಾರಿ ಎಂದು ವಿಂಗಡಿಸಲಾಗಿದೆ.

ಹಲವು ಪ್ರಮುಖ ಭರವಸೆಗಳಿಗೆ ಸಂಬಂಧಿಸಿದಂತೆ ಕೇವಲ ಆರಂಭವಾಗಿವೆ. ಸ್ಥಳೀಯ ಸಂಸ್ಥೆಗಳ ಚುನಾವಣೆಗಳಿಗೆ ಕಟ್ಟುನಿಟ್ಟಾದ ಸಮಯ ನಿಗದಿಪಡಿಸುವುದು, ಗಿಗ್ ಕಾರ್ಮಿಕರಿಗೆ ಕನಿಷ್ಠ ಗಂಟೆಗಳ ವೇತನ ಕಡ್ಡಾಯಗೊಳಿಸುವುದು, ಕರ್ನಾಟಕ ಅಪಾರ್ಟ್‌ಮೆಂಟ್ ಮಾಲೀಕತ್ವ ಕಾಯ್ದೆಯನ್ನು ಅನುಷ್ಠಾನಗೊಳಿಸುವುದು, ನಮ್ಮ ಮೆಟ್ರೊ, ಉಪನಗರ ರೈಲು ಮತ್ತು ಸಾರ್ವಜನಿಕ ಸಾರಿಗೆ ವ್ಯವಸ್ಥೆಗಳ ಸುಗಮ ಏಕೀಕರಣವನ್ನು ಖಚಿತಪಡಿಸುವುದು, ರಾಷ್ಟ್ರೀಯ ಹೆದ್ದಾರಿಗಳ ಉದ್ದಕ್ಕೂ ಪ್ರತಿ 100 ಕಿ.ಮೀ.ಗಳಲ್ಲಿ ಅಪಘಾತ ನಿರ್ವಹಣಾ ಕೇಂದ್ರಗಳನ್ನು ಸ್ಥಾಪಿಸುವುದು ಇಂತಹ ಹಲವು ಭರವಸೆಗಳು ಇನ್ನೂ ಕಾಗದದಲ್ಲೇ ಉಳಿದಿವೆ ಎಂದು ವರದಿ ಹೇಳಿದೆ.

ನಗರಾಭಿವೃದ್ಧಿಯಡಿಯಲ್ಲಿ ಶೇ 70ರಷ್ಟು ಭರವಸೆಗಳಿಗೆ ಸಂಬಂಧಿಸಿದಂತೆ ಅನುಷ್ಠಾನ ಪ್ರಕ್ರಿಯೆ ಶುರುವಾಗಿಲ್ಲ. ಆರೋಗ್ಯ ಮತ್ತು ಆಡಳಿತ ಕ್ಷೇತ್ರಗಳಲ್ಲಿ ಈ ಪ್ರಮಾಣ ತಲಾ ಶೇ 64.3ರಷ್ಟಿದೆ. ಗಣಿಗಾರಿಕೆ, ಪರಿಸರ ಮತ್ತು ಅರಣ್ಯ ಕ್ಷೇತ್ರದಲ್ಲಿ ನೀಡಿದ್ದ ಆಶ್ವಾಸನೆಗಳ ಪೈಕಿ ಶೇ 50ರಷ್ಟು ಪ್ರಗತಿಯಲ್ಲಿದೆ ಎಂದು ವರದಿ ವಿವರಿಸಿದೆ.



2023ರ ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್ ಪ್ರಣಾಳಿಕೆ ಬಿಡುಗಡೆ ಮಾಡಿದ್ದ ಸಂದರ್ಭದ ಚಿತ್ರ

ಭ್ರಷ್ಟಾಚಾರದ ಬಗ್ಗೆ ಕಳವಳ

ಭ್ರಷ್ಟಾಚಾರದ ಬಗ್ಗೆ ಜನರಿಂದ ದೂರು ಬಂದಿರುವುದು ಮತ್ತು ಸಿಎಜಿ ಕೂಡ ಇದರ ಬಗ್ಗೆ ಗಮನ ಸೆಳೆದ ಬಗ್ಗೆ ವರದಿ ಪ್ರಸ್ತಾಪಿಸಿದೆ. ಭ್ರಷ್ಟಾಚಾರ ತಡೆಯುವ ದಿಸೆಯಲ್ಲಿ ಲೋಕಾಯುಕ್ತದ ಪಾತ್ರವನ್ನೂ ಉಲ್ಲೇಖಿಸಲಾಗಿದೆ. ಲೋಕಾಯುಕ್ತದಲ್ಲಿ ಅಕ್ರಮ ಸಂಪತ್ತಿನ 218 ಪ್ರಕರಣಗಳ ವಿಚಾರಣೆ ನಡೆಸಲಾಗಿದೆ. ನಾಲ್ಕು ಪ್ರಕರಣಗಳನ್ನು ಮಾತ್ರ ಪೂರ್ಣಗೊಳಿಸಲಾಗಿದೆ. 82 ಅಧಿಕಾರಿಗಳನ್ನು ಅಮಾನತು ಮಾಡಲಾಗಿದೆ. 101 ಪ್ರಕರಣಗಳಲ್ಲಿ ಕಾನೂನಾತ್ಮಕ ಸವಾಲುಗಳು ಎದುರಾಗಿವೆ. 67 ಪ್ರಕರಣಗಳಿಗೆ ಹೈಕೋರ್ಟ್ ತಡೆಯಾಜ್ಞೆ ನೀಡಿದೆ. 34 ಪ್ರಕರಣಗಳನ್ನು ರದ್ದುಪಡಿಸಲಾಗಿದೆ. ನಗರಾಭಿವೃದ್ಧಿ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕಂದಾಯ, ಇಂಧನ ಮತ್ತು ಲೋಕೋಪಯೋಗಿ ಇಲಾಖೆಗಳಲ್ಲಿ ಅತಿ ಹೆಚ್ಚು ಭ್ರಷ್ಟಾಚಾರ ಪ್ರಕರಣಗಳು ವರದಿಯಾಗಿವೆ.

ವೈಫಲ್ಯಗಳ ಪಟ್ಟಿ

‘ಹಿಂದಿನ ಸರ್ಕಾರ ಜಾರಿಗೆ ತಂದಿದ್ದ ಜನವಿರೋಧಿಯಾದ ಮೂರು ಕಾಯ್ದೆಗಳನ್ನು (ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯದ ಹಕ್ಕು ಕಾಯ್ದೆ 2022, ಪ್ರಾಣಿವಧೆ ನಿಷೇಧ ಮತ್ತು ಪ್ರಾಣಿ ಸಂರಕ್ಷಣಾ ಕಾಯ್ದೆ 2020, ಭೂ ಸುಧಾರಣೆಗಳ ತಿದ್ದುಪಡಿ ಕಾಯ್ದೆ) ವಾಪಸ್ ಪಡೆಯುವಲ್ಲಿ ಸರ್ಕಾರ ವಿಫಲವಾಗಿದೆ ಎಂದೂ ವರದಿ ಉಲ್ಲೇಖಿಸಿದೆ. ಜತೆಗೆ, ತಾಲ್ಲೂಕು ಪಂಚಾಯ್ತಿ, ಜಿಲ್ಲಾ ಪಂಚಾಯ್ತಿ, ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ನಡೆಸದೇ ಇರುವುದು ಕೂಡ ಸರ್ಕಾರದ ವೈಫಲ್ಯ’ ಎಂದು ವರದಿ ಹೇಳಿದೆ.

ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ನಡೆದ ಕಾಲ್ತುಳಿತ ಪ್ರಕರಣ ಮತ್ತು ಧರ್ಮಸ್ಥಳದ ಎಸ್‌ಐಟಿ ತನಿಖೆಯನ್ನು ಸರ್ಕಾರ ಸರಿಯಾಗಿ ನಿಭಾಯಿಸಲಿಲ್ಲ ಎಂದು ವರದಿ ಹೇಳಿದೆ. ನೆಲಮಂಗಲದಲ್ಲಿ ಶಾಸಕರ ತರಬೇತಿಗೆ (2023) ಆಧ್ಯಾತ್ಮಿಕ ಮುಖಂಡರನ್ನು ಕರೆಸಲಾಗಿತ್ತು. ದ್ವೇಷ ಭಾಷಣ ಮಾಡಿದ ಕಲ್ಲಡ್ಕ ಪ್ರಭಾಕರ್ ಭಟ್ ವಿರುದ್ಧ ಕ್ರಮ ಜರುಗಿಸುವಲ್ಲಿ ಸರ್ಕಾರ ವಿಫಲವಾಗಿದೆ ಎನ್ನುವುದನ್ನು ಉಲ್ಲೇಖಿಸಲಾಗಿದೆ.

ಎಸ್‌ಸಿ, ಎಸ್‌ಟಿಗೆ ಸೂಕ್ತ ಅನುದಾನ ನೀಡದೇ ಇದ್ದುದು, ಕುರುಬರನ್ನು ಎಸ್‌ಟಿ ಪಟ್ಟಿಗೆ ಸೇರಿಸಲು ಹೊರಟಿರುವುದು, ಹಿಂದಿನ ಸರ್ಕಾರ ವಾಪಸ್ ಪಡೆದಿದ್ದ ಮುಸ್ಲಿಮರ ಶೇ 4ರ ಮೀಸಲಾತಿಯನ್ನು ಮತ್ತೆ ನೀಡದೇ ಇದ್ದುದು ಸರ್ಕಾರದ ವೈಫಲ್ಯ ಎಂದಿದೆ.

ಯಾವ ಕ್ಷೇತ್ರದಲ್ಲಿ ಎಷ್ಟು ಭರವಸೆ ಈಡೇರಿಕೆ?

ಕ್ಷೇತ್ರ	ಕೊಟ್ಟ ಭರವಸೆ	ಈಡೇರಿಕೆ	ಶೇಕಡವಾರು
ಶಿಕ್ಷಣ	22	1	4.5%
ಆರೋಗ್ಯ	14		
ಪರಿಸರ	8		
ನಗರಾಭಿವೃದ್ಧಿ	10		
ಬೆಂಗಳೂರು	46	2	4.3%
ಕಾರ್ಮಿಕರು*	15	1	6.6%
5 ಗ್ಯಾರಂಟಿಗಳು	5	5	100%
ಆಡಳಿತ	14		
ಒಟ್ಟು	134	9	6.7%

* ಬೀದಿ ವ್ಯಾಪಾರಿಗಳು, ಗಿಗ್ ಕಾರ್ಮಿಕರು, ಚಾಲಕರು, ಪೌರಕಾರ್ಮಿಕರು, ಗಾರ್ಮೆಂಟ್ ಕಾರ್ಮಿಕರು ಹಾಗೂ ಇತರ ಕಾರ್ಮಿಕ ವರ್ಗದವರಿಗೆ ನೀಡಲಾದ ಆಶ್ವಾಸನೆಗಳನ್ನು ಪರಿಗಣಿಸಲಾಗಿದೆ

ವರದಿ ತಯಾರಿ ಹೇಗೆ?

ಸಿವಿಕ್ ಸದಸ್ಯರು, ಸ್ವಯಂಸೇವಕರು ಮತ್ತು ಇಂಟರ್ನ್‌ಗಳ ನೆರವಿನಿಂದ ವರದಿ ತಯಾರಿಸಲಾಗಿದೆ. ಪ್ರಮುಖ ಕ್ಷೇತ್ರಗಳಲ್ಲಿನ ಉಪವಿಭಾಗಗಳನ್ನು ಆಯ್ಕೆ ಮಾಡಿ, ಪ್ರಣಾಳಿಕೆಯಲ್ಲಿ ನೀಡಿದ ಭರವಸೆಗಳನ್ನು ಪರಿಶೀಲಿಸಲಾಯಿತು. ನಂತರ, ಎಲ್ಲಾ ಭರವಸೆಗಳ ಸ್ಥಿತಿಯನ್ನು ನಿರ್ಣಯಿಸಲು ಇಲಾಖೆಗಳಿಗೆ ಆರ್‌ಟಿಐ ಅರ್ಜಿ ಸಲ್ಲಿಸಲಾಯಿತು. ಎರಡು ವರ್ಷಗಳಲ್ಲಿ ಮುದ್ರಣ ಮತ್ತು ಆನ್‌ಲೈನ್ ಸುದ್ದಿ ಮೂಲಗಳನ್ನು ಸಹ ಪರಿಶೀಲಿಸಿತು. ಈ ಎರಡು ಮೂಲಗಳಿಂದ ಪಡೆದ ಮಾಹಿತಿಯ ಆಧಾರದ ಮೇಲೆ, ತಂಡವು ಪ್ರತಿ ಭರವಸೆಯ ಸ್ಥಿತಿಗತಿ ಏನು ಎನ್ನುವುದನ್ನು ವರದಿಯಲ್ಲಿ ದಾಖಲಿಸಿದೆ.

ಪ್ರಾಥಮಿಕ ಶಿಕ್ಷಣ

ಸಕಾರಾತ್ಮಕ

- 9 ಮತ್ತು 10ನೇ ತರಗತಿ ಮಕ್ಕಳಿಗೂ ಮೊಟ್ಟೆ/ಚಿಕ್ಕಿ/ಬಾಳೆಹಣ್ಣು ನೀಡುತ್ತಿರುವುದು; ವಾರದಲ್ಲಿ ಆರು ದಿನ ಮೊಟ್ಟೆ/ಬಾಳೆ ಹಣ್ಣು ನೀಡುವ ನಿರ್ಧಾರ
- ಎಲ್ಲ ಸರ್ಕಾರಿ ಶಾಲೆಗಳಿಗೂ ಉಚಿತ ನೀರು, ಮತ್ತು ವಿದ್ಯುತ್ ಪೂರೈಕೆ
- ರಾಷ್ಟ್ರೀಯ ಶಿಕ್ಷಣ ನೀತಿ ತಿರಸ್ಕರಿಸಿ ರಾಜ್ಯ ಶಿಕ್ಷಣ ನೀತಿ ರೂಪಿಸುವ ಪ್ರಯತ್ನ

ನಕಾರಾತ್ಮಕ

- ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ಒಂದು ವರ್ಷದೊಳಗೆ ತುಂಬಲಾಗುವುದು ಎಂದು ನೀಡಿದ್ದ ಭರವಸೆ ಈಡೇರಿಲ್ಲ.
- ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಕಾಯ್ದೆ 2009ರ ಪರಿಣಾಮಕಾರಿ ಅನುಷ್ಠಾನಕ್ಕೆ ನೀಲನಕ್ಷೆ ರೂಪಿಸುವಲ್ಲಿ ವಿಫಲ
- ಸಾವಿರಾರು ಮಕ್ಕಳು ಈಗಲೂ ಶಾಲೆಯ ಹೊರಗೆ ಇದ್ದಾರೆ. ಒಟ್ಟು ಮಕ್ಕಳ ದತ್ತಾಂಶವೂ ಲಭ್ಯವಿಲ್ಲ
- 2023–24ನೇ ಸಾಲಿನಲ್ಲಿ ಶಿಕ್ಷಣಕ್ಕೆ ಬಜೆಟ್‌ನ ಶೇ 11.4ರಷ್ಟು ಮೊತ್ತ ಮೀಸಲಿಟ್ಟಿತ್ತು. ರಾಷ್ಟ್ರೀಯ ಪಟ್ಟದಲ್ಲಿ ಈ ಸರಾಸರಿ ಶೇ 14ರಷ್ಟಿದೆ

ಬೆಂಗಳೂರು: ಗೊತ್ತು ಗುರಿ ಇಲ್ಲದ ಯೋಜನೆಗಳು



ಬೆಂಗಳೂರಿನ ಅಭಿವೃದ್ಧಿಗೆ ಸಂಬಂಧಿಸಿದಂತೆ ಕಾಂಗ್ರೆಸ್ ಪ್ರಣಾಳಿಕೆಯಲ್ಲಿ 46 ಭರವಸೆಗಳನ್ನು ನೀಡಿತ್ತು. ಅದರಲ್ಲಿ ಇಲ್ಲಿಯವರೆಗೆ ಈಡೇರಿಸಿದ್ದು ಎರಡನ್ನು ಮಾತ್ರ (ಜಿಬಿಎ ಸ್ಥಾಪನೆ ಮತ್ತು ಮೆಟ್ರೊ ನಿಲ್ದಾಣಗಳಲ್ಲಿ ಇವಿ ಚಾರ್ಜಿಂಗ್ ಘಟಕಗಳ ಸ್ಥಾಪನೆ). ಉಳಿದ 44ರ ಪೈಕಿ ಶೇ 41.3ರಷ್ಟು ಭರವಸೆಗಳ ಅನುಷ್ಠಾನ ಪ್ರಗತಿಯಲ್ಲಿದೆ ಎಂದು ವರದಿ ಹೇಳಿದೆ.

ನಗರದ ಅಭಿವೃದ್ಧಿಗೆ ಸಂಬಂಧಿಸಿದಂತೆ ಹಲವು ಯೋಜನೆಗಳನ್ನು ಸರ್ಕಾರ ಘೋಷಿಸಿದ್ದರೂ ಅವು ಗೊಂದಲಕಾರಿಯಾಗಿವೆ. ಗುರಿಯಿಲ್ಲದ ಕಾರ್ಯಕ್ರಮಗಳು ಮತ್ತು ಸುಳ್ಳು ಭರವಸೆಗಳು ನಗರವನ್ನು ಹಾಳುಗೆಡಹುತ್ತಿರುವುದಲ್ಲದೆ, ಜನರ ಜೀವನದ ಗುಣಮಟ್ಟವೂ ಕುಸಿಯುವಂತೆ ಮಾಡುತ್ತಿದೆ ಎಂದು ಅದು ಹೇಳಿದೆ. ರಾಜಧಾನಿಯಲ್ಲಿ ಸರ್ಕಾರ ಕೈಗೆತ್ತಿಕೊಂಡಿರುವ ಯೋಜನೆಗಳನ್ನು ಪ್ರಶ್ನಾರ್ಥಕ, ಸಮಸ್ಯಾತ್ಮಕ ಮತ್ತು ಅಪಾಯಕಾರಿ ಎಂದು ವರದಿಯಲ್ಲಿ ವರ್ಗೀಕರಿಸಲಾಗಿದೆ.

ಸುರಂಗ ಮಾರ್ಗ ಸೇರಿದಂತೆ ದೊಡ್ಡ ಬಜೆಟ್ಟಿನ ಮೂಲಸೌಕರ್ಯ ಯೋಜನೆಗಳಿಂದ ಪರಿಸರಕ್ಕೆ ಆಗಲಿರುವ ಹಾನಿಯ ಬಗ್ಗೆ ವರದಿ ಕಳವಳ ವ್ಯಕ್ತಪಡಿಸಿದ್ದು, ಇವು ‘ಅಪಾಯಕಾರಿ’ ಯೋಜನೆಗಳು ಎಂದು ಕರೆದಿದೆ.

ಪ್ರಶ್ನಾರ್ಥಕ ಯೋಜನೆಗಳು

- ಪ್ರೀಮಿಯಂ ಫ್ಲೋರ್ ಏರಿಯಾ ಅನುಪಾತ
- ಸ್ವಾಧೀನಾನುಭವ ಪ್ರಮಾಣ ಪತ್ರದಿಂದ (ಒಸಿ) ವಿನಾಯಿತಿ
- ಬಿ–ಖಾತಾದಿಂದ ಎ–ಖಾತಾಕ್ಕೆ ಪರಿವರ್ತನೆ
- ಅಕ್ರಮ ಬಡಾವಣೆಗಳು , ಅಕ್ರಮ ಕಟ್ಟಡಗಳು

ಸಮಸ್ಯಾತ್ಮಕ

- ಮಾಸ್ಟರ್‌ಪ್ಲಾನ್ ಪ್ರಗತಿಯಲ್ಲಿ ಕೊರತೆ
- ಪ್ರಜಾಸತ್ತಾತ್ಮಕ ವ್ಯವಸ್ಥೆ ಇಲ್ಲದಿರುವುದು (ಇದು ದುರಾಡಳಿತಕ್ಕೆ ಕಾರಣವಾಗುತ್ತಿದೆ)
- ಬಗೆಹರಿಯದ ಕಸದ ಸಮಸ್ಯೆ
- **ಕಾನೂನು ಮತ್ತು ಆಡಳಿತದಲ್ಲಿನ ಕೊರತೆ:**
  - ಮೆಟ್ರೊಪಾಲಿಟನ್ ಯೋಜನಾ ಆಯೋಗ (ಎಂಪಿಸಿ) ಕಾರ್ಯರೂಪಕ್ಕೆ ಬಾರದಿರುವುದು
  - ಅಸಾಂವಿಧಾನಿಕ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ)
  - ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆಯಲ್ಲಿ (ಜಿಬಿಜಿಎ) ಗಂಭೀರ ನ್ಯೂನತೆಗಳು
  - ಕಾಗದದಲ್ಲೇ ಉಳಿದ ಬೆಂಗಳೂರು ಮೆಟ್ರೊಪಾಲಿಟನ್ ರಸ್ತೆ ಸಾರಿಗೆ ಪ್ರಾಧಿಕಾರ (ಬಿಎಂಎಲ್‌ಟಿಎ)

ಅಪಾಯಕಾರಿ

- ಎತ್ತರಿಸಿದ ಕಾರಿಡಾರ್‌ಗಳು, ಸುರಂಗ ಮಾರ್ಗಗಳಂತಹ ಹೆಚ್ಚು ಯೋಜಿತವಲ್ಲದ ಮೆಗಾ ಯೋಜನೆಗಳ ಬಗೆಗಿನ ಒಲವು
- ದೂರದೃಷ್ಟಿ ಕೊರತೆಯಿಂದ ಸಾರ್ವಜನಿಕ ಸಾರಿಗೆ ಯೋಜನೆಗಳಾದ ಹೊರವಲಯ ರೈಲು ಯೋಜನೆ, ಮೆಟ್ರೊ, ಬಸ್ ಸೌಲಭ್ಯಗಳ ನಿರ್ಲಕ್ಷ್ಯ
- ಕಳಪೆ ಮೂಲಸೌಕರ್ಯಗಳು
- **ಪರಿಸರದ ಮೇಲೆ ದಾಳಿ**
  - ಕೆರೆಗಳ ಬಫರ್ ವಲಯ ಗುರುತಿಸುವ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ (ಕೆಟಿಸಿಡಿಎ) ತಿದ್ದುಪಡಿ ಮಸೂದೆ–2025
  - ರಾಜಕಾಲುವೆ ಬಫರ್ ವಲಯಕ್ಕೆ ಸಂಬಂಧಿಸಿದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆ
  - ಲಾಲ್‌ಬಾಗ್, ಸ್ಯಾಂಕಿ ಕೆರೆ ಮತ್ತು ಇತರ ಕೆರೆಗಳಿಗೆ ಅಪಾಯ ತಂದೊಡ್ಡಲಿರುವ ಮೆಗಾ ಯೋಜನೆಗಳು

ಕೃಷಿ ಕ್ಷೇತ್ರ

ಸಕಾರಾತ್ಮಕ

- ₹5,000 ಕೋಟಿಯ ಪ್ರಕೃತಿ ವಿಕೋಪ ನಿಧಿಗೆ ಸಂಬಂಧಿಸಿದಂತೆ ಸರ್ಕಾರವು ಗಮನಾರ್ಹ ಸಾಧನೆ ಮಾಡಿದೆ
- ಕೇಂದ್ರವು ವಿಳಂಬವಾಗಿ, ಕಡಿಮೆ ವಿಪತ್ತು ಪರಿಹಾರ ನಿಧಿ ಬಿಡುಗಡೆ ಮಾಡಿತು. ಆದಾಗ್ಯೂ ರಾಜ್ಯ ಸರ್ಕಾರವು 2023–24ನೇ ಸಾಲಿನಲ್ಲಿ ತನ್ನ ಸಂಪನ್ಮೂಲದಿಂದ 38.78 ಲಕ್ಷ ರೈತರಿಗೆ ಬರ ಪರಿಹಾರಕ್ಕಾಗಿ ₹4,047 ಕೋಟಿ ವ್ಯಯಿಸಿದೆ
- ನಮ್ಮ ಸಿರಿಧಾನ್ಯ ಯೋಜನೆ, ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ-2.0, ಕಿಸಾನ್ ಮಾಲ್‌ಗಳು, ಬೆಂಗಳೂರಿನಲ್ಲಿ ಅಂತರರಾಷ್ಟ್ರೀಯ ಹೂವಿನ ಮಾರುಕಟ್ಟೆಯಂಥ ಹಲವಾರು ಮುಂದಾಲೋಚನೆಯ ಉಪಕ್ರಮಗಳನ್ನು ಸರ್ಕಾರ ಕೈಗೊಂಡಿದ್ದು, ಇವು ರಚನಾತ್ಮಕ ಹೆಜ್ಜೆಗಳಾಗಿವೆ
- ಉಪಗ್ರಹ ಮತ್ತು ಎಐ ತಂತ್ರಜ್ಞಾನದ ನೆರವಿನಿಂದ 41 ತಾಲ್ಲೂಕುಗಳ ಅಂತರ್ಜಲ, ಕೆರೆ, ಕುಂಟೆ, ಜಲಮೂಲಗಳ ನಿರ್ವಹಣೆ
- ನೀರಾವರಿಗಾಗಿ ಬಜೆಟ್‌ನಲ್ಲಿ ಶೇ 5.8ರಷ್ಟು ಅನುದಾನ ಮೀಸಲಿಡಲಾಗಿದ್ದು, ಇದು ರಾಷ್ಟ್ರೀಯ ಸರಾಸರಿಗಿಂತ ಹೆಚ್ಚಾಗಿದೆ

ನಕಾರಾತ್ಮಕ

- ಕೈಗಾರಿಕಾ ಯೋಜನೆಗಳಿಗಾಗಿ 1,700 ಎಕರೆಗಳಿಗೂ ಹೆಚ್ಚು ಫಲವತ್ತಾದ ಕೃಷಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದು, ಎರಡು ಎಕರೆವರೆಗೆ ಭೂಮಿಯನ್ನು ರೈತರು ಮಾರಬಹುದು ಎಂದು ನಿಯಮ ಮಾಡಿರುವುದು
- ರೈತರ ವಿರೋಧದ ನಡುವೆಯೂ ಬಿಡದಿಯ ಎಐ ಟೌನ್‌ಶಿಪ್ ಮತ್ತು ಬೆಂಗಳೂರು ಬ್ಯುಸಿನೆಸ್ ಕಾರಿಡಾರ್‌ಗಾಗಿ ಭೂಸ್ವಾಧೀನಕ್ಕೆ ಮುಂದಾಗಿರುವುದು
- ಕಾರ್ಪೊರೇಟ್, ಉದ್ಯಮಿಗಳು, ರಿಯಲ್ ಎಸ್ಟೇಟ್‌ನವರ ಹಿತಾಸಕ್ತಿಗಾಗಿ ರೈತರ ಫಲವತ್ತಾದ ಕೃಷಿ ಭೂಮಿಯನ್ನು ಸ್ವಾಧೀನ ಮಾಡಿಕೊಳ್ಳುವ ಮೂಲಕ ರೈತರ ಹಿತಾಸಕ್ತಿ ಮತ್ತು ಹಕ್ಕುಗಳ ದಮನ
- ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸರ್ಕಾರದ ನೀತಿಗಳು ದ್ವಂದ್ವದಿಂದ ಕೂಡಿವೆ
- ಸರ್ಕಾರವು ಕೃಷಿಗೆ ಭೂಮಿಗೆ ಪರಿಹಾರ ನೀಡುವಾಗ ರೈತರಿಗೆ ಹೆಚ್ಚು ಪರಿಹಾರ ಸಿಗಲು ನೆರವಾಗುವ ಭೂಸ್ವಾಧೀನ ಕಾಯ್ದೆ–2013ರ ಬದಲು ಬಿಡಿಎ ಕಾಯ್ದೆಯಂಥ ಹಳೆಯ ಕಾಯ್ದೆಗಳನ್ನು ಅನುಸರಿಸುತ್ತಿದೆ

ದಾಂಪತ್ಯ ಹೇಗಿರಬೇಕು?

ನುಡಿ ಬೆಳಗು



ದಾದಾಪೀರ್ ನವಿಲೇಹಾಳ್


ಗಿಡ್ಡನ ಮನೆಯವರು ಮಗನಿಗೆ ಜೋಡಿಯಾಗಬಲ್ಲ ಗಿಡ್ಡಿಯನ್ನು ಹುಡುಕಿ ಮದುವೆ ಮಾಡಿದರು. ಗಿಡ್ಡ ತನ್ನ ಹೆಂಡತಿಯನ್ನು ಗಿಡ್ಡಿ ಅಂತ ಕರೆದರೆ ಆಕೆಯೂ ತನ್ನ ಗಂಡನನ್ನು ಗಿಡ್ಡ ಅಂತಲೇ ಕೂಗಿ ಕರೆಯುವಂತಹ ಅನ್ಯೋನ್ಯತೆ ಅವರಲ್ಲಿತ್ತು. ಆದರೆ ಗಿಡ್ಡಿ ಮನೆಯಲ್ಲಿ ಮಾತ್ರವಲ್ಲದೆ ಮಾರ್ಕೆಟ್ಟು, ಬಸ್ ಸ್ಟ್ಯಾಂಡ್ ಮುಂತಾದ ಸಾರ್ವಜನಿಕ ಸ್ಥಳಗಳಲ್ಲಿ ತನ್ನನ್ನು ಗಿಡ್ಡ ಅಂತ ಕರೆಯುವುದರಿಂದ ಮುಜುಗರಪಡುತ್ತಿದ್ದ. ಮನೆಯಲ್ಲಿದ್ದಾಗ ಗಿಡ್ಡ ಅಂತ ಕರಿ, ಹೊರಗಡೆ ಗೌರವದಿಂದ ರೀ, ಬನ್ನಿ, ಹೋಗಿ ಅಂತ ಕರಿ ಎಂದು ಆಕೆಗೆ ಪ್ರೀತಿಯಿಂದಲೇ ಹೇಳಿದ. ಆಕೆ ಒಪ್ಪಿಕೊಂಡಳು.

ಒಂದು ದಿನ ಅಪ್ಪ ಅಮ್ಮ ಅವರ ಮನೆಗೆ ಬರುತ್ತಿದ್ದುದನ್ನು ಅಂಗಳದಲ್ಲಿದ್ದ ಗಿಡ್ಡಿ ನೋಡಿದಳು. ಸಂತೋಷ ತಡೆಯಲಾರದೆ ‘ಗಿಡ್ಡ ಗಿಡ್ಡ... ನಮ್ಮಪ್ಪ ನಮ್ಮಮ್ಮ ಬಂದ್ರು’ ಅಂತ ಕುಣಿದಾಡುತ್ತಾ ಕೂಗಿದಳು. ಗಿಡ್ಡನಿಗೆ ತನ್ನ ಅತ್ತೆ ಮಾವನ ಎದುರಿಗೆ ಅಸಾಧ್ಯವಾದ ಅವಮಾನವಾದಂತಾಗಿ ಹಲ್ಲು ಹಲ್ಲು ಕಡಿದ. ಊಟೋಪಚಾರದ ನಂತರ ಮಗಳು ಅಳಿಯನನ್ನು ಹರಸಿ ಅತ್ತೆ ಮಾವ ಹೊರಟು ಹೋದರು. ಅವರು ಅತ್ತ ಹೋಗುತ್ತಿದ್ದಂತೆ ಗಿಡ್ಡ ತುಂಬಿಕೊಂಡಿದ್ದ ಸಿಟ್ಟನ್ನೆಲ್ಲಾ ಒಟ್ಟುಗೂಡಿಸಿಕೊಂಡು ಗಿಡ್ಡಿಯನ್ನು ದರದರ ಎಳೆದುಕೊಂಡು ಹಿತ್ತಲಿಗೊಯ್ದು ಕತ್ತರಿಸಿ ಸಣ್ಣಸಣ್ಣ ತುಂಡು ಮಾಡಿ ಬಿಸಾಕಿದ. ಒಂದೆರಡು ದಿನದಲ್ಲಿ ಗಿಡ್ಡಿಯ ದೇಹದ ತುಂಡುಗಳೆಲ್ಲಾ ಗರಿಕೆ ಹುಲ್ಲಾಗಿ ಹುಟ್ಟಿ ಚಿಗುರಿದವು. ಹಸುವೊಂದು ಆ ಹುಲ್ಲನ್ನು ತಿಂದು ‘ಅಂಬಾ ಗಿಡ್ಡಾ’ ಅಂತ ತೇಗಿತು. ಕೇಳಿಸಿಕೊಂಡ ಗಿಡ್ಡನಿಗೆ ರೇಗಿತು. ಹಸುವನ್ನು ಕೊಂದು ಅದರ ಚರ್ಮವನ್ನು ತುಂಡುಗಳಾಗಿ ಕತ್ತರಿಸಿ ಹಿತ್ತಲಲ್ಲಿ ಸುರಿದ. ಮರುದಿನ ಹುಂಜವೊಂದು ಹಿತ್ತಲಲ್ಲಿ ಚೆಲ್ಲಿದ್ದ ಚರ್ಮದ ತುಣುಕುಗಳನ್ನು ತಿಂದು ‘ಕೊಕ್ಕೊಕ್ಕೋ ಗಿಡ್ಡಾ’ ಅಂತ ಕೂಗಿತು. ಕೆಂಡದಂತಹ ಕೋಪದಿಂದ ಗಿಡ್ಡ ಹುಂಜವನ್ನು ಹಿಡಿದು ಕೊಯ್ದು ಸಾರು ಮಾಡಿಕೊಂಡು ಗಟಗಟ ಕುಡಿದ. ಸ್ವಲ್ಪ ಹೊತ್ತಿನಲ್ಲೇ ಗಿಡ್ಡನ ಗಂಟಲಿನಿಂದ ತೇಗುಗಳು ಶುರುವಾಗಿ ಪ್ರತಿ ತೇಗಿನ ಕೊನೆಯಲ್ಲಿ ‘ಗಿಡ್ಡಾ’ ಅಂತ ತನ್ನ ಹೆಂಡತಿಯೇ ಕೂಗಿದಂತಾಯಿತು. ತನ್ನ ಹೊಟ್ಟೆಯಲ್ಲೇ ಅವಳು ಸೇರಿಕೊಂಡಿದ್ದಾಳೆಂದು ತಿಳಿದ ಗಿಡ್ಡ ಅವಳನ್ನು ಎಲ್ಲಿದ್ದರೂ ಕೊಂದೇ ತೀರಬೇಕೆಂಬ ಹಟದಲ್ಲಿ ತನ್ನನ್ನು ತಾನು ಕೊಂದುಕೊಂಡ.

ಭೌತಿಕ ಅಸ್ತಿತ್ವವನ್ನು ಕಳೆದುಕೊಂಡರೂ ಗಂಡಿನ ಮೇಲರಿಮೆಯ ವಿರುದ್ಧ ಸ್ಥಿರವಾಗಿ ನಿಂತ ಹೆಣ್ಣಿನ ಗಟ್ಟಿತನವನ್ನು ಸಾಬೀತುಪಡಿಸುವ ಈ ಕತೆ ದುರ್ಬಲ ಗಂಡಸಿನ ಮನೋದಾರಿದ್ರ್ಯವನ್ನೂ ಹೇಳುತ್ತದೆ. ಅಹಮ್ಮಿನ ಸಮರದಲ್ಲಿ ಬದುಕು ಮಾಧುರ್ಯ ಕಳೆದುಕೊಂಡು ದಾಂಪತ್ಯದ ಲಯ ತಪ್ಪುತ್ತಿದೆ. ದಂಪತಿ ನಡುವಿನ ಬೆಸುಗೆ ದೇಹ ಮನಸ್ಸುಗಳ ಸಮಾನ ಸಮ್ಮಿಲನಕ್ಕೆ ಸಾಕ್ಷಿ. ಹಾಗೆ ನೋಡಿದರೆ ಹೆಣ್ಣಿನ ಮೇಲಿನ ಅತಿಯಾದ ಅವಲಂಬನೆಯೇ ಗಂಡಿನ ಕ್ರೌರ್ಯದ ಮೂಲವಾಗಿದೆ.

ಗಂಡ ಹೆಂಡತಿ ಸಂಬಂಧ ಭಾವನಾತ್ಮಕ ಹೊಂದಾಣಿಕೆಯನ್ನು ಬಯಸುತ್ತದೆ. ಮೇಲು ಕೀಳು ಮೀರಿದ ಒಲವಿನಿಂದ ಮಾತ್ರ ದಾಂಪತ್ಯ ದೃಢವಾಗುತ್ತಾ ಸಾಗುತ್ತದೆ. ‘ನಾನು ಬಡವಿ ಆತ ಬಡವ ಒಲವೆ ನಮ್ಮ ಬದುಕು ಬಳಸಿಕೊಂಡೆವದನೆ ನಾವು ಅದಕು ಇದಕು ಎದಕು’ ಎನ್ನುವುದು ಭೂಮಿ ಬಂಗಾರ ಎಂಬುದು ಸಂಪತ್ತಲ್ಲ, ಪ್ರೀತಿಯೇ ಸಂಪತ್ತು ಎಂದು ಭಾವಿಸಿ ಬದುಕುವುದಕ್ಕೆ ಬೇಕಾದ ನಿಲವು. ಅಭಿರುಚಿ, ಆಸಕ್ತಿ ಆಲೋಚನೆಗಳಲ್ಲಿ ವ್ಯತ್ಯಾಸಗಳಿಲ್ಲದ ಒಂದೇ ಒಂದು ಜೋಡಿ ಸಿಗುವುದು ಸಾಧ್ಯವಿಲ್ಲ. ಆದರೆ ಸಣ್ಣ ಮಟ್ಟದ ಹೊಂದಾಣಿಕೆಯಲ್ಲಿ ವ್ಯತ್ಯಾಸಗಳನ್ನು ಸಹಿಸಿಕೊಂಡು ಪರಸ್ಪರರ ತಪ್ಪುಗಳನ್ನು ನುಂಗಿಕೊಳ್ಳುತ್ತಾ ಸುದೀರ್ಘ ಬಾಳುವೆ ಸಾಗಿಸುತ್ತಿರುವ ನೂರಾರು ನಿದರ್ಶನಗಳು ಸಿಗುತ್ತವೆ. ಅಸಮಾಧಾನದ ಒಂದರೆಕ್ಷಣದಲ್ಲಿ ಕೇಳುವ ಕ್ಷಮೆಯೊಂದು ಆರಾಮದಾಯಕ ಸುಖ ಕೊಡುತ್ತದೆ. ಹಾಗಾದಾಗ ವ್ಯತ್ಯಾಸಗಳನ್ನು ಸಂಭ್ರಮಿಸುವುದು ಸಾಧ್ಯ. ಅಹಂ ತುಂಬಿದ ದಾಂಪತ್ಯ ಯಾತನಾಮಯ. ಕ್ಷಮೆ ಸಹನೆ ಅರಿತ ಸಂಸಾರವು ಅನನ್ಯ ಗೆಳೆತನದ ಯಾನ. ಒಬ್ಬರನ್ನೊಬ್ಬರು ಆಲಿಸುವ ಆತುಕೊಳ್ಳುವ ಕೂಡುಪಯಣ.

ಗುಂಡಣ್ಣ



ರಾಷ್ಟ್ರೀಯ

ಆರ್‌ಎಸ್‌ಎಸ್‌ನ ಗೀತೆ ಹಾಡಿದ ಮಕ್ಕಳು ತನಿಖೆಗೆ ಆದೇಶಿಸಿದ ಕೇರಳ

ತಿರುವನಂತಪುರ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಶನಿವಾರ ಚಾಲನೆ ನೀಡಿದ ಬೆಂಗಳೂರು–ಎರ್ನಾಕುಳಂ ‘ವಂದೇ ಭಾರತ್ ಎಕ್ಸ್‌ಪ್ರೆಸ್’ ರೈಲಿನಲ್ಲಿ ಶಾಲಾ ವಿದ್ಯಾರ್ಥಿಗಳು ಆರ್‌ಎಸ್‌ಎಸ್‌ನ ಹಾಡು ಹಾಡಿರುವ ಕುರಿತು ಸಿಪಿಎಂ ನೇತೃತ್ವದ ಕೇರಳ ಸರ್ಕಾರ ಭಾನುವಾರ ತನಿಖೆಗೆ ಆದೇಶಿಸಿದೆ.

‘ಮಕ್ಕಳು ದೇಶಭಕ್ತಿಯ ಹಾಡು ಹಾಡಿದ್ದಾರೆ’ ಎಂದು ಕೇಂದ್ರ ಸಚಿವ ಸುರೇಶ್ ಗೋಪಿ ಬಲವಾಗಿ ಸಮರ್ಥಿಸಿಕೊಂಡಿದ್ದಾರೆ.

ಮಕ್ಕಳು ಹಾಡಿದ ಹಾಡಿನ ಕುರಿತು ತನಿಖೆ ನಡೆಸಿ, ವರದಿ ಸಲ್ಲಿಸುವಂತೆ ಶಿಕ್ಷಣ ಸಚಿವ ವಿ.ಶಿವನ್‌ಕುಟ್ಟಿ ಅವರು ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರಿಗೆ ಸೂಚನೆ ನೀಡಿದ್ದಾರೆ.

‘ಸರ್ಕಾರವು ಈ ಘಟನೆಯನ್ನು ಗಂಭೀರವಾಗಿ ಪರಿಗಣಿಸಿದೆ. ಸರ್ಕಾರಿ ಕಾರ್ಯಕ್ರಮದಲ್ಲಿ ಮಕ್ಕಳನ್ನು ಮುಂದಿಟ್ಟುಕೊಂಡು ಕೋಮು ಕಾರ್ಯಸೂಚಿಯನ್ನು ಜಾರಿಗೆ ತರಲು ಯತ್ನಿಸಿದ್ದು, ಸಾಂವಿಧಾನಿಕ ತತ್ವಗಳ ಉಲ್ಲಂಘನೆಯಾಗಿದೆ. ಈ ಕುರಿತು ತಕ್ಷಣವೇ ತನಿಖೆ ನಡೆಸಿ, ವರದಿ ನೀಡಬೇಕು. ಅಧಿಕೃತ ಕಾರ್ಯಕ್ರಮದಲ್ಲಿ ಮಕ್ಕಳು ಭಾಗವಹಿಸಿದ್ದ ವೇಳೆ ಎಲ್ಲಿ ಲೋಪವಾಗಿದೆ ಎಂಬುದರ ಕುರಿತು ಪರಿಶೀಲನೆ ನಡೆಸಬೇಕು, ವರದಿ ಆಧರಿಸಿ, ಕಾನೂನು ಕ್ರಮ ಕೈಗೊಳ್ಳಲಾಗುವುದು’ ಎಂದು ಶಿವನ್‌ಕುಟ್ಟಿ ಕಚೇರಿ ತಿಳಿಸಿದೆ.

‘ಶಾಲಾ ಆಡಳಿತ ಮಂಡಳಿಯು ಕೋಮು ಉದ್ದೇಶಕ್ಕಾಗಿಯೇ ಮಕ್ಕಳನ್ನು ಬಳಸಿಕೊಂಡಿದ್ದು, ಸೂಕ್ತ ಕ್ರಮ ಕೈಗೊಳ್ಳಬೇಕು’ ಎಂದು ಕಾಂಗ್ರೆಸ್ ಕೂಡ ಒತ್ತಾಯಿಸಿದೆ.



ಇದು ಮಕ್ಕಳ ಮುಗ್ಧ ಸಂಭ್ರಮವಾಗಿತ್ತು. ಆ ಕ್ಷಣಕ್ಕೆ ಮಕ್ಕಳು ತೋಚಿದ್ದನ್ನು ಹಾಡಿದ್ದಾರೆ. ಅಲ್ಲದೇ, ಯಾವುದೇ ಉಗ್ರರ ಹಾಡು ಅದಾಗಿರಲಿಲ್ಲ

ಸುರೇಶ್ ಗೋಪಿ, ನೈಸರ್ಗಿಕ ಅನಿಲ, ಪೆಟ್ರೋಲಿಯಂ ಖಾತೆ ರಾಜ್ಯ ಸಚಿವ



ಮಕ್ಕಳು ಹಾಡಿದ ‘ಗಾನ ಗೀತಂ’ನಲ್ಲಿ ಕೋಮು ಅಂಶದ ಯಾವ ವಿಚಾರವಿದೆ? ವಿದೇಶಗಳಲ್ಲಿ ಭಾರತ ವಿರೋಧಿ ಭಾವನೆಗಳನ್ನು ವ್ಯಕ್ತಪಡಿಸುವವರಿಗೆ ಈ ಹಾಡು ಇಷ್ಟವಾಗದಿರಬಹುದು

ಜಾರ್ಜ್ ಕುರಿಯನ್, ಕೇಂದ್ರದ ಮೀನುಗಾರಿಕೆ, ಪಶುಸಂಗೋಪನೆ ರಾಜ್ಯ ಸಚಿವ

ಸಮರ್ಥಿಸಿಕೊಂಡ ಶಾಲಾ ಆಡಳಿತ

ಸಿಪಿಎಂ ಸರ್ಕಾರ ಹಾಗೂ ಕಾಂಗ್ರೆಸ್ ಪಕ್ಷದ ಹೇಳಿಕೆ ಕುರಿತು ಟೀಕಿಸಿರುವ ಶಾಲಾ ಆಡಳಿತ ಮಂಡಳಿ, ‘ವಿವಿಧತೆಯಲ್ಲಿ ಏಕತೆ’ಯ ಉದ್ದೇಶದಿಂದಲೇ ಈ ಹಾಡು ಹಾಡಲಾಗಿದೆ, ಅದರಲ್ಲಿ ಯಾವ ವಿಚಾರ ಕೋಮು ಅಂಶ ಹೊಂದಿದೆ ಎಂಬುದನ್ನು ಬಹಿರಂಗಪಡಿಸಬೇಕು’ ಎಂದು ತಿಳಿಸಿದೆ.

ದಕ್ಷಿಣ ರೈಲ್ವೆ ಇಲಾಖೆಯವರು ನಿರ್ದಿಷ್ಟ ಹಾಡು ಹಾಡುವಂತೆ ಸೂಚಿಸಿರಲಿಲ್ಲ. ಮಕ್ಕಳೇ ಮಲಯಾಳ ದೇಶಭಕ್ತಿ ಗೀತೆಯನ್ನು ಹಾಡಿದ್ದಾರೆ. ‘ಎಕ್ಸ್’ನಲ್ಲಿ ಈ ಹಾಡು ತೆಗೆದುಹಾಕಿದ ಕುರಿತು ಪ್ರಧಾನಮಂತ್ರಿ ಕಚೇರಿ ಹಾಗೂ ದಕ್ಷಿಣ ರೈಲ್ವೆ ವಿಭಾಗಕ್ಕೂ ಪತ್ರ ಬರೆದು ಮಾಹಿತಿ ನೀಡಿದ್ದೇವೆ’ ಎಂದು ಎಲಮಕ್ಕರಾದ ಸರಸ್ವತಿ ವಿದ್ಯಾನಿಕೇತನ ಪಬ್ಲಿಕ್ ಸ್ಕೂಲ್‌ನ ಪ್ರಾಂಶುಪಾಲ ಕೆ.ಪಿ.ಡಿಂಟೋ ಹೇಳಿಕೆ ನೀಡಿದ್ದಾರೆ.

ಅಡ್ವಾಣಿ ಸೇವೆಯನ್ನು ಸೀಮಿತವಾಗಿ ನೋಡಬಾರದು: ತರೂರ್



ನವದೆಹಲಿ (ಪಿಟಿಐ): ಬಿಜೆಪಿ ನಾಯಕ ಎಲ್.ಕೆ.ಅಡ್ವಾಣಿ ಅವರ 98ನೇ ಹುಟ್ಟುಹಬ್ಬಕ್ಕೆ ಶುಭಾಶಯ ತಿಳಿಸಿರುವ ಕಾಂಗ್ರೆಸ್ ನಾಯಕ ಶಶಿ ತರೂರ್ ಅವರು, ‘ಬಿಜೆಪಿ ನಾಯಕನ ದೀರ್ಘ ಕಾಲದ ಸೇವೆಯನ್ನು ಸೀಮಿತ ದೃಷ್ಟಿಯಲ್ಲಿ ನೋಡುವುದು ನ್ಯಾಯೋಚಿತವಲ್ಲ’ ಎಂದು ಹೇಳಿದ್ದಾರೆ.

‘ನೆಹರೂ ಅವರ ವೃತ್ತಿ ಜೀವನದ ಪರಿಪೂರ್ಣತೆಯನ್ನು ಚೀನಾದೊಂದಿಗಿನ ಯುದ್ಧದಲ್ಲಿನ ಹಿನ್ನಡೆಯಿಂದ ಮತ್ತು ಇಂದಿರಾಗಾಂಧಿ ಅವರನ್ನು ತುರ್ತು ಪರಿಸ್ಥಿತಿಯಿಂದಷ್ಟೇ ಅಳೆಯಲಾಗದು; ಅದೇ ರೀತಿ ಅಡ್ವಾಣಿ ಅವರನ್ನೂ ಒಂದೇ ಒಂದು ವಿವಾದಾತ್ಮಕ ಘಟನೆ ಇಟ್ಟುಕೊಂಡು ನೋಡಲಾಗದು’ ಎಂದಿದ್ದಾರೆ.

ಅಂತರ ಕಾಯ್ದುಕೊಂಡ ಕಾಂಗ್ರೆಸ್: ತರೂರ್ ಹೇಳಿಕೆಯಿಂದ ಕಾಂಗ್ರೆಸ್ ಅಂತರ ಕಾಯ್ದುಕೊಂಡಿದೆ. ಕಾಂಗ್ರೆಸ್‌ನ ಸಂಸದರಾಗಿ, ಪಕ್ಷದ ಕಾರ್ಯಕಾರಿ ಸಮಿತಿ ಸದಸ್ಯರಾಗಿಯೂ ಅವರು ಹೀಗೆ ಮಾತನಾಡುತ್ತಿದ್ದಾರೆ ಎಂದರೆ ಅದು ಪಕ್ಷದ ಪ್ರಜಾಪ್ರಭುತ್ವ ಮತ್ತು ಉದಾರವಾದಿ ಮನೋಭಾವವನ್ನು ತೋರುತ್ತದೆ ಎಂದು ಕಾಂಗ್ರೆಸ್ ಹೇಳಿದೆ.

ಪದಬಂಧ 6219


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಮಾದಕ ವಸ್ತು ಸೇವನೆಯಿಂದಾಗುವ ಜೊಂಪು (2)
3.ಧಾನ್ಯಗಳನ್ನು ಕುಟ್ಟುವ ಸಾಧನ (3)
6.ಕುದುರೆಯನ್ನೇರುವ ಬಳೆ (3)
8.ಆಸ್ಪತ್ರೆಯನ್ನು ಹೀಗೂ ಹೇಳುವರು (4)
10.ಅಗ್ರಗಣ್ಯರೆಲ್ಲಾ ಪ್ರವೇಶಿದ ಕಾಡು (3)
11.ಹೆಚ್ಚಳವಾದುದನ್ನು ಹೀಗೆನ್ನಿ (3)
12.ಈತ ನರಕಾಧಿಪತಿಯ ಕಿಂಕರ (4)
15.ಪಟ ತೋರಿಸಿ ಮಾಡಿರುವ ಮೋಸ (3)
17. ವಿಷಯಾಸಕ್ತ ಇಲ್ಲಿದ್ದಾನೆ (3)
18.ಜರೂರಾಗಿ ಹಾಕಿಸಿಕೊಂಡಿರುವ ಸಹಿ (2)

ಮೇಲಿಂದ ಕೆಳಕ್ಕೆ

2.ಹಳೆ ಸಾಮಾನುಗಳನ್ನು ಮಾರುವ ಅಂಗಡಿ (3)
3.ನೆನಪು ಮಾಡಿಕೊಂಡು ತೋರುವ ವಯ್ಯಾರ (3)
4.ಮಣ್ಣು ಮಿಶ್ರಿತ ನೀರು (3)
5.ಕೊನೆಗೆ ಫಲವಿದ್ದರೆ ಇದು ಫಲಕಾರಿ (3)
7.ಕಾರು ಇದ್ದರಷ್ಟೇ ಈ ದಯೆ! (3)
9.ಯಮನ ಬಳಿಯಿರುವ ಜೋಡಿ (3)
10.ದಶಮ ಗ್ರಹ ಎನಿಸಿಕೊಂಡವ! (3)
11.ಸ್ಲೇಟಿನ ಮೇಲೆ ಬರೆಯುವ ಸಾಧನ (3)
13.ವಿಶಾಲವಾದ ಕಟ್ಟಡ (3)
14.ಭಾಸ್ಕರ ಉದಯವಾಗುವಾಗ ಕಳ್ಳ ಕಾಣಿಸಿದನಲ್ಲಾ! (3)
15.ಕಲೆಸಿದ ಗೋಧಿ ಹಿಟ್ಟು (3)
16.ಗುರುಗುಟ್ಟುತ್ತಿರುವ ಗಂಡು ಕುರಿ (3)



6218 ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪುರೋಗಾಮಿ 4.ಅಗ್ಗ 5.ಕಲಗಚ್ಚು 7.ಗಬ್ಬಿಲ 9.ಮಶಕ 11.ಶಕುನಿ 12.ಗಣಕ 14.ಮತದಾರ 16.ತುತ್ತು 17.ಕಾರವಾರ

ಮೇಲಿಂದ ಕೆಳಕ್ಕೆ: 1.ಪುನರಾಗಮನ 2.ಗಾಣಿಗ 3.ಫಲ 4.ಅಚ್ಚು 5.ಕಲಸುಮೇಲೊಗರ 6.ಗರ್ಭಕೋಶ 8.ಶ್ರೀನಿವಾಸಪುರ 10.ಕರಜಾತ 13.ಕಮ್ಮಾರ 14.ಮತ್ತು 15.ದಾರ

ಸುಡೊಕು 6603

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	9	2		3			6	8
4					7	3		9
6		3		9		1		7
		4			9		8	
	2			5				3
8			2				4	
	4			2		8		
			9					5
2		8		7			3	

6602 ಸುಡೊಕು

7	9	4	3	5	8	6	2	1
3	8	5	2	6	1	7	9	4
2	1	6	4	9	7	8	3	5
5	2	7	8	3	9	1	4	6
4	6	1	7	2	5	3	8	9
9	3	8	6	1	4	5	7	2
1	5	2	9	8	3	4	6	7
8	4	9	5	7	6	2	1	3
6	7	3	1	4	2	9	5	8

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

10 ನವೆಂಬರ್ 2025 ಸೋಮವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣ ಷಷ್ಠಿ ಗಂ. 24-09 **ನಕ್ಷತ್ರ:** ಪುನರ್ವಸು ಗಂ 18-49 **ಯೋಗ:** ಸಾಧ್ಯ ಗಂ. 12-05 **ಕರಣ:** ಗರ ಗಂ. 12-57 ತುಲಾ ಮಾಸದ 24 ನೇ ದಿನ. **ಮಳೆ ನಕ್ಷತ್ರ :** ವಿಶಾಖ 2 ನೇ ಪಾದ. **ರಾಹುಕಾಲ:** ಬೆಳಿಗ್ಗೆ 07-30 - 09-00 ,**ಸೂರ್ಯೋದಯ :** 06-31 **ಸೂರ್ಯಾಸ್ತ :** 05-58,**ಮುಸ್ಲಿಂ ದಿನಾಂಕ :** 18 ಜುಮಾದುಲ್ಲಾವಲ್ ,**ಅದೃಷ್ಟ ಸಂಖ್ಯೆ :** 1, 9

ಮೇಷ: ಹೊಸ ಉದ್ಯಮ ಅಥವಾ ವ್ಯಾಪಾರ ಪ್ರಾರಂಭಿಸಲು ಆಲೋಚಿಸುತ್ತಿರುವವರಿಗೆ ಸಕಾಲ. ಯೋಜನೆಯಂತೆ ಕೆಲಸಗಳು ನಡೆಸಲು ಕಷ್ಟ. ಆದರೆ ಸರಿಯಾಗಿ ನೋಡಿಕೊಂಡರೆ, ಊಹೆಗೂ ಮೀರಿದ ಲಾಭ ಪಡೆದು ಕೊಳ್ಳುವಿರಿ.

ವೃಷಭ: ಮೊದಲು ತಲುಪಬೇಕಾಗಿರುವ ಗುರಿಯ ಕಡೆಗೆ ಲಕ್ಷ್ಯ ಹರಿಸಿ. ಕೈಗೊಂಡಿರುವ ಕೆಲಸದ ಸಾಧನೆ ಸುಲಭ ಸಾಧ್ಯವೆನಿಸಲು ಜಾಣ್ಮೆ ಪ್ರದರ್ಶಿಸಿ. ತುಸು ಮೃದು ಧೋರಣೆ ಬೆಳೆಸಿಕೊಳ್ಳಿರಿ.

ಮಿಥುನ: ವ್ಯವಹಾರಗಳ ವಿಷಯಕ್ಕೆ ಸಂಬಂಧಿಸಿದಂತೆ ಸ್ನೇಹಿತನೊಂದಿಗೆ ಚರ್ಚಿಸಿದರೆ ನಷ್ಟಕ್ಕೆ ಕಾರಣ ತಿಳಿಯುತ್ತದೆ. ಧಾರ್ಮಿಕ ಕೆಲಸಗಳಿಗಾಗಿ ಹಣ ವಿನಿಯೋಗವಾಗುವುದು.

ಕರ್ಕಾಟಕ: ಕೆಲಸ ಕಾರ್ಯಗಳು ಮೇಲಧಿಕಾರಿಗಳಿಗೆ ಅಸಮಾಧಾನ ಉಂಟುಮಾಡಬಹುದು. ಜಾಗ್ರತರಾಗಿರಿ. ವಾಹನ ಮಾರಾಟಗಳಿಂದ ಲಾಭ ಪಡೆಯುವಿರಿ. ಉದ್ಯೋಗದಲ್ಲಿದ್ದ ಅನಿಶ್ಚಿತತೆ ದೂರಾಗಲಿದೆ.

ಸಿಂಹ: ಉನ್ನತ ಶಿಕ್ಷಣದಲ್ಲಿ ಶ್ರಮ ವಹಿಸಿ ಉತ್ತಮ ಶ್ರೇಣಿ ಪಡೆದುಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ತಂದೆ ತಾಯಿ ಆಶೀರ್ವಾದ ಅನಿವಾರ್ಯ. ಜಾಹೀರಾತಿನಲ್ಲಿ ಅಭಿನಯಿಸಲು ಬೇಡಿಕೆ ಬರಲಿದೆ.

ಕನ್ಯಾ: ಮಾಡುತ್ತಿರುವ ಪರೋಪಕಾರದ ಕೆಲಸಗಳಿಗೆ ಸಕಾರಾತ್ಮಕ ಪ್ರತಿಫಲ ಕಟ್ಟಿಟ್ಟ ಬುತ್ತಿ. ಹಿಡಿದ ಕೆಲಸಗಳು ಹಂತ ಹಂತವಾಗಿ ಅಥವಾ ಒಂದೊಂದಾಗಿ ಮುಗಿಸುವ ಪ್ರಯತ್ನವಿರಲಿ. ವಿಶ್ವಾಸವಿರಲಿ.

ತುಲಾ: ಕೆಲವು ವಸ್ತುಗಳ ದರ್ಶನದಿಂದ ಪೂರ್ವಾಶ್ರಮದ ಘಟನೆಗಳು ನೆನಪಾಗುತ್ತವೆ. ಬದಲಾದ ಕೆಲವು ಗೃಹೋಪಯೋಗಿ ವಸ್ತುಗಳು ಅಡ್ಡ ಪರಿಣಾಮವನ್ನು ಉಂಟುಮಾಡುವುದು.

ವೃಶ್ಚಿಕ: ಪ್ರಭಾವದಿಂದ ಬೇರೆಯವರು ಲಾಭ ಪಡೆಯುವಷ್ಟು ಯೋಗ್ಯತೆ ನಿಮ್ಮದಾಗುತ್ತದೆ. ಲಾಭದಾಯಕವಾಗಿ ನಡೆಯುವ ವ್ಯವಹಾರದ ಮೇಲೆ ನಿಗಾ ಇರಲಿ. ಮುಖ್ಯವಾದ ವಿಚಾರ ಮರೆಯದಿರಿ.

ಧನು: ಉದ್ಯೋಗದಲ್ಲಿ ವೈಯಕ್ತಿಕ ಅನಿಸಿಕೆಯು ಉತ್ತಮ ರೀತಿಯಲ್ಲಿ ಸಹಾಯಕಾರಿ ಆಗುವುದು. ಅಪರೂಪದ ಅತಿಥಿಯ ಆಗಮನ ಸಂತೋಷ ತರಲಿದೆ. ಕೊಂಕು ಮಾತುಗಳಿಗೆ ಬೇಸರಿಸದಿರಿ.

ಮಕರ: ಪ್ರಯಾಣದಲ್ಲಿ ವಂಚನೆ, ನಷ್ಟದ ಪ್ರಸಂಗಗಳಿವೆ. ಆರೋಗ್ಯ ಸ್ಥಿತಿಯಲ್ಲಿ ಸುಧಾರಣೆ ಕಂಡುಬರುತ್ತದೆ. ಉದ್ಯೋಗ ಬದಲಿಸುವ ವಿಚಾರದಲ್ಲಿ ಚೆನ್ನಾಗಿ ಯೋಚಿಸುವುದು ಉತ್ತಮ.

ಕುಂಭ: ರಾಜಕೀಯ ವ್ಯಕ್ತಿಗಳಿಗೆ ನಂಬಿಕೆ ದ್ರೋಹ ಅಥವಾ ಅಪಪ್ರಚಾರ ಎದುರಾಗಬಹುದು. ವ್ಯಾಪಾರಕ್ಕೆ ಸಂಬಂಧಿಸಿದಂತೆ ಬ್ಯಾಂಕ್ ಅಧಿಕಾರಿಗಳ ಜೊತೆ ಮಾತುಕತೆ ನಡೆಸಬೇಕಾದೀತು.

ಮೀನ: ಸಂಕಟ ಬಂದಾಗ ವೆಂಕಟರಮಣ ಎನ್ನುವಂತೆ ಇಂದು ಆಪತ್ತು ಉಂಟಾದಾಗ ನಿಮ್ಮ ಹಳೆಯ ಹರಕೆಗಳ ನೆನಪು ಬರಬಹುದು. ಸಿಹಿ ತಿಂಡಿಗಳ ಉತ್ಪನ್ನಗಳಿಂದ ಲಾಭ ಗಳಿಸುವಿರಿ.

15 ಲಕ್ಷ ಟನ್ ಸಕ್ಕರೆ ರಫ್ತಿಗೆ ಒಪ್ಪಿಗೆ

ಸಿ.ಎಂ ಸಿದ್ದರಾಮಯ್ಯಗೆ ಬರೆದ ಪತ್ರದಲ್ಲಿ ಸಚಿವ ಜೋಶಿ ಮಾಹಿತಿ

ನವದೆಹಲಿ (ಪಿಟಿಐ): ಅಕ್ಟೋಬರ್‌ನಿಂದ ಆರಂಭವಾಗಿರುವ ಪ್ರಸ್ತಕ ವರ್ಷದ ಸಕ್ಕರೆ ಮಾರುಕಟ್ಟೆ ವರ್ಷದಲ್ಲಿ 15 ಲಕ್ಷ ಟನ್ ಸಕ್ಕರೆ ರಫ್ತಿಗೆ ಕೇಂದ್ರ ಸರ್ಕಾರ ಅನುಮತಿ ನೀಡಿದೆ ಎಂದು ಕೇಂದ್ರ ಆಹಾರ ಸಚಿವ ಪ್ರಲ್ಹಾದ ಜೋಶಿ ಹೇಳಿದ್ದಾರೆ.



ಕಾಕಂಬಿ (ಮೊಲಾಸಿಸ್) ರಫ್ತು ಮೇಲಿನ ಶೇಕಡ 50ರಷ್ಟು ಸುಂಕವನ್ನು ತೆಗೆಯಲು ಕೇಂದ್ರ ನಿರ್ಧರಿಸಿದೆ ಎಂದು ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ನವೆಂಬರ್ 7ರಂದು ಬರೆದ ಪತ್ರದಲ್ಲಿ ಜೋಶಿ ತಿಳಿಸಿದ್ದಾರೆ.

ದೇಶದಲ್ಲಿನ ಕಬ್ಬು ಬೆಳೆಗಾರರ ಹಿತಾಸಕ್ತಿ ಕಾಪಾಡಲು ಕೇಂದ್ರ ಸರ್ಕಾರ ತೆಗೆದುಕೊಂಡಿರುವ ಕ್ರಮದ ಬಗ್ಗೆ ಪತ್ರದಲ್ಲಿ ವಿವರಿಸಿದ್ದಾರೆ.

2024–25ರ ಸಕ್ಕರೆ ಮಾರುಕಟ್ಟೆ ವರ್ಷದಲ್ಲಿ (ಅಕ್ಟೋಬರ್‌ನಿಂದ ಸೆಪ್ಟೆಂಬರ್) 10 ಲಕ್ಷ ಟನ್ ಸಕ್ಕರೆ ರಫ್ತಿಗೆ ಕೇಂದ್ರ ಅನುಮತಿ ನೀಡಿತ್ತು. ಈ ಪೈಕಿ 8 ಲಕ್ಷ ಟನ್ ಸಕ್ಕರೆ ಮಾತ್ರ ರಫ್ತಾಗಿತ್ತು.

ಈ ಬಾರಿ ಉದ್ಯಮವು 20 ಲಕ್ಷ ಟನ್ ಸಕ್ಕರೆ ರಫ್ತಿಗೆ ಬೇಡಿಕೆ ಇಟ್ಟಿತ್ತು. ಆದರೆ, 15 ಲಕ್ಷ ಟನ್ ರಫ್ತಿಗೆ ಅನುಮತಿ ನೀಡಿದೆ.

ಸಕ್ಕರೆ ದಾಸ್ತಾನು ಹೆಚ್ಚಳದಿಂದಾಗಿ ಸಕ್ಕರೆ ರಫ್ತಿಗೆ ಅನುಮತಿ ನೀಡಲು ಕೇಂದ್ರ ಚಿಂತನೆ ನಡೆಸುತ್ತಿದೆ ಎಂದು ಇತ್ತೀಚೆಗೆ ಕೇಂದ್ರ ಆಹಾರ ಕಾರ್ಯದರ್ಶಿ ಸಂಜೀವ್ ಚೋಪ್ರಾ ಅವರು ಹೇಳಿದ್ದರು.

ಕಳೆದ ಸಕ್ಕರೆ ಮಾರುಕಟ್ಟೆ ವರ್ಷದಲ್ಲಿ 34 ಲಕ್ಷ ಟನ್ ಸಕ್ಕರೆಯನ್ನು ಎಥೆನಾಲ್ ತಯಾರಿಕೆಗೆ ಕೈಗಾರಿಕೆಗಳು ಬಳಕೆ ಮಾಡಿವೆ. ಇದು ಅಂದಾಜು ಮಾಡಿದ್ದ 45 ಲಕ್ಷ ಟನ್‌ಗಿಂತ ಕಡಿಮೆ. ಇದರ ಪರಿಣಾಮವಾಗಿ ಹೆಚ್ಚಿನ ದಾಸ್ತಾನು ಇದೆ ಎಂದು ಚೋಪ್ರಾ ತಿಳಿಸಿದ್ದರು.

ಪ್ರಸಕ್ತ ಋತುವಿನಲ್ಲಿ 3.4 ಕೋಟಿ ಟನ್ ಸಕ್ಕರೆ ಉತ್ಪಾದನೆ ಆಗಲಿದೆ. ಈ ಪೈಕಿ 2.85 ಕೋಟಿ ಟನ್ ಸಕ್ಕರೆಗೆ ದೇಶದ ಮಾರುಕಟ್ಟೆಯಲ್ಲಿ ಬೇಡಿಕೆ ಇದೆ ಎಂದು ಹೇಳಿದ್ದರು.

‘ಅತಿದೊಡ್ಡ ಸ್ಕಾಚ್ ವಿಸ್ಕಿ ಮಾರುಕಟ್ಟೆಯಾಗುವತ್ತ ಭಾರತ’

ನವದೆಹಲಿ (ಪಿಟಿಐ): ಸ್ಕಾಚ್ ವಿಸ್ಕಿಗಳ ಪಾಲಿಗೆ ಜಾಗತಿಕ ಮಟ್ಟದಲ್ಲಿ ಭಾರತವೇ ಅತಿದೊಡ್ಡ ಮಾರುಕಟ್ಟೆಯಾಗಲಿದೆ ಎಂದು ಸ್ಕಾಚ್ ವಿಸ್ಕಿ ಅಸೋಸಿಯೇಷನ್‌ನ ಮುಖ್ಯ ಕಾರ್ಯನಿರ್ವಾಹಕ ಮಾರ್ಕ್ ಕೆಂಟ್ ಹೇಳಿದ್ದಾರೆ.

ಭಾರತದ ಸಿಂಗಲ್ ಮಾಲ್ಟ್ ವಿಸ್ಕಿಗೆ ಬೇಡಿಕೆ ಹೆಚ್ಚಿರುವುದನ್ನು ಮಾರ್ಕ್ ಕೆಂಟ್ ಅವರು ಶ್ಲಾಘಿಸಿದ್ದಾರೆ.

ಸ್ಕಾಚ್ ವಿಸ್ಕಿಗಳು 180 ದೇಶಗಳ ಮಾರುಕಟ್ಟೆಗಳಿಗೆ ರಫ್ತಾಗುತ್ತವೆ. ಈ ಪೈಕಿ ಭಾರತದ ಮಾರುಕಟ್ಟೆಯು ಸ್ಕಾಚ್ ವಿಸ್ಕಿಗಳ ಪಾಲಿಗೆ ಪ್ರಮಾಣದ ಲೆಕ್ಕದಲ್ಲಿ ಈಗಾಗಲೇ ಅತಿದೊಡ್ಡದು. ಆದರೆ ಮೌಲ್ಯದ ಲೆಕ್ಕದಲ್ಲಿ ಭಾರತದ ಮಾರುಕಟ್ಟೆಯು ಮೊದಲ ಐದು ಮಾರುಕಟ್ಟೆಗಳ ಪೈಕಿ ಒಂದಾಗಿದೆ



ಎಂದು ಕೆಂಟ್ ಹೇಳಿದ್ದಾರೆ.

ಭಾರತ ಮತ್ತು ಬ್ರಿಟನ್ ನಡುವಿನ ಮುಕ್ತ ವ್ಯಾಪಾರ ಒಪ್ಪಂದವು (ಎಫ್‌ಟಿಎ) ಅನುಷ್ಠಾನಕ್ಕೆ ಬಂದ ನಂತರದಲ್ಲಿ, ಹಲವು ವಿಧದ ಸ್ಕಾಚ್ ವಿಸ್ಕಿಗಳು ಭಾರತಕ್ಕೆ ಬರಲಿವೆ. ಅದರಲ್ಲೂ ಮುಖ್ಯವಾಗಿ, ಸ್ಕಾಟ್ಲೆಂಡಿನ ಸಣ್ಣ ಕಂಪನಿಗಳ ಸ್ಕಾಚ್ ವಿಸ್ಕಿಗಳು ಕೂಡ ಭಾರತದಲ್ಲಿ ಲಭ್ಯವಾಗಲಿವೆ ಎಂದು ಮಾರ್ಕ್ ಕೆಂಟ್ ಹೇಳಿದ್ದಾರೆ.

ಜಪಾನ್: ಪ್ರಬಲ ಭೂಕಂಪನ, ಸುನಾಮಿ ಎಚ್ಚರಿಕೆ

ಟೋಕಿಯೊ (ಎಪಿ): ಉತ್ತರ ಜಪಾನ್‌ನಲ್ಲಿ ಭಾನುವಾರ ಸಂಜೆ ಪ್ರಬಲ ಭೂಕಂಪನ ಸಂಭವಿಸಿದ್ದು, ಬಳಿಕ ಹಲವು ಬಾರಿ ಭೂಮಿ ಕಂಪಿಸಿದೆ ಎಂದು ಜಪಾನ್ ಹವಾಮಾನ ಇಲಾಖೆ ತಿಳಿಸಿದೆ. ಸುನಾಮಿ ಸಂಭವಿಸುವ ಸಾಧ್ಯತೆ ಇದೆ ಎಂದು ಅದು ಎಚ್ಚರಿಸಿದೆ.

ಮೊದಲಿಗೆ 6.7 ತೀವ್ರತೆಯ ಭೂಕಂಪನ ಸಂಭವಿಸಿದ್ದು, ಇವಾಟೆ ಕರಾವಳಿಯ 10 ಕಿ.ಮೀ. ಆಳದಲ್ಲಿ ಭೂಕಂಪನ ಕೇಂದ್ರಬಿಂದು ಪತ್ತೆಯಾಗಿದೆ ಎಂದು ತಿಳಿಸಿದೆ.

ಸುನಾಮಿ ಕಾರಣ ಕರಾವಳಿ ಪ್ರದೇಶಗಳಿಂದ ದೂರ ಇರುವಂತೆ ಜನರಿಗೆ ಮುನ್ಸೂಚನೆ ನೀಡಲಾಗಿದೆ. ಈ ಪ್ರದೇಶಗಳಲ್ಲಿ ಮತ್ತೆ ಭೂಮಿ ಕಂಪಿಸುವ ಸಾಧ್ಯತೆ ಇದೆ ಎಂದೂ ಎಚ್ಚರಿಸಲಾಗಿದೆ. ಭೂಕಂಪನದಿಂದ ಉಂಟಾದ ಹಾನಿಯ ಬಗ್ಗೆ ಸದ್ಯಕ್ಕೆ ಯಾವುದೇ ವರದಿಯಾಗಿಲ್ಲ.

ಜೇಬಿಗೆ ಕತ್ತರಿ ಹಾಕುವ ‘ಶ್ರಿಂಕ್‌ಫ್ಲೇಷನ್’

ಹಣಕಾಸು ಸಾಕ್ಷರತೆ



ರಾಜೇಶ್ ಕುಮಾರ್ ಟಿ.ಆರ್

ಚಾರ್ಟರ್ಡ್ ಅಕೌಂಟೆಂಟ್

ನೀವು ಬಿಸ್ಕತ್, ಕುರುಕಲು ತಿಂಡಿ ಪೊಟ್ಟಣವನ್ನು ತೆಗೆದಾಗ ಮೊದಲಿಗಿಂತ ಇದರಲ್ಲಿರುವ ಪ್ರಮಾಣ ಈಗ ಕಡಿಮೆ ಅಂತ ಅನಿಸಿದೆಯಾ? ಉತ್ಪನ್ನದ ಪೊಟ್ಟಣದ ಗಾತ್ರವನ್ನು ಕಡಿಮೆ ಮಾಡಿದ್ದಾರೆ ಎಂಬ ಅನುಮಾನ ನಿಮ್ಮಲ್ಲಿ ಮೂಡಿದೆಯಾ? ಹಾಗಾದರೆ ನಿಮಗೆ ‘ಶ್ರಿಂಕ್‌ಫ್ಲೇಷನ್’ನ ಅನುಭವ ಆಗಿದೆ. ಕಂಪನಿಗಳು ನಿರ್ದಿಷ್ಟ ಉತ್ಪನ್ನವೊಂದರ ಪ್ರಮಾಣ ಅಥವಾ ಗಾತ್ರವನ್ನು ಕಡಿಮೆ ಮಾಡಿ ಅದರ ಬೆಲೆಯನ್ನು ಯಥಾವತ್ತಾಗಿ ಕಾಯ್ದುಕೊಳ್ಳುವುದನ್ನು ‘ಶ್ರಿಂಕ್‌ಫ್ಲೇಷನ್’ ಎನ್ನುತ್ತಾರೆ. ಅಂದರೆ ನೀವು ಕೊಳ್ಳುವ ವಸ್ತುವಿನ ಬೆಲೆ ಹೆಚ್ಚಳವಾಗುವುದಿಲ್ಲ; ಅದರ ಗಾತ್ರ, ಪ್ರಮಾಣ ತಗ್ಗಿರುತ್ತದೆ. ಎಷ್ಟೋ ಸಂದರ್ಭಗಳಲ್ಲಿ ಈ ‘ಶ್ರಿಂಕ್‌ಫ್ಲೇಷನ್’ ನಿಮ್ಮ ಗಮನಕ್ಕೆ ಬರುವುದೇ ಇಲ್ಲ. ‘ಶ್ರಿಂಕ್‌ಫ್ಲೇಷನ್’ ಅಂದರೆ ಏನು, ಅದನ್ನು ಕಂಪನಿಗಳು ಹೇಗೆ ಅಳವಡಿಸಿಕೊಳ್ಳುತ್ತವೆ, ಗ್ರಾಹಕರಿಗೆ ಈ ಬಗ್ಗೆ ಏಕೆ ಗೊತ್ತಿರಬೇಕು ಎಂಬಿತ್ಯಾದಿ ವಿಷಯಗಳ ಅರಿವು ಅಗತ್ಯ.

‘ಶ್ರಿಂಕ್‌ಫ್ಲೇಷನ್’ ಅಂದರೆ ಏನು?: ‘ಶ್ರಿಂಕ್‌ಫ್ಲೇಷನ್’ ಎನ್ನುವುದು ಬೆಲೆ ಏರಿಕೆಯ ಮತ್ತೊಂದು ರೂಪ. ಸದ್ದಿಲ್ಲದ ಬೆಲೆ ಏರಿಕೆಯನ್ನು ‘ಶ್ರಿಂಕ್‌ಫ್ಲೇಷನ್’ ಎಂದು ಕರೆಯಬಹುದು. ಕಂಪನಿಗಳು ಇಲ್ಲಿ ಉತ್ಪನ್ನಗಳ ಗರಿಷ್ಠ ಮಾರಾಟ ದರ (ಎಂಆರ್‌ಪಿ) ಹೆಚ್ಚಿಸುವುದಿಲ್ಲ. ಬದಲಿಗೆ, ನಿರ್ದಿಷ್ಟ ಉತ್ಪನ್ನವೊಂದರ ತೂಕ, ಪ್ರಮಾಣ ಅಥವಾ ಗಾತ್ರವನ್ನು ಗ್ರಾಹಕನ ಗಮನಕ್ಕೆ ಬರದಂತೆ ತಗ್ಗಿಸಿಬಿಡುತ್ತಾರೆ. ಉದಾಹರಣೆಗೆ, ಈ ಮೊದಲು ₹10ಕ್ಕೆ ನಿಮಗೆ 100 ಗ್ರಾಂ ಬಟ್ಟೆ ತೊಳೆಯುವ ಸೋಪು ಸಿಗುತ್ತಿತ್ತು ಎಂದುಕೊಳ್ಳಿ. ಈಗ ಅದೇ ₹10ಕ್ಕೆ 80 ಗ್ರಾಂ ಸೋಪು ಸಿಗುವುದನ್ನು ‘ಶ್ರಿಂಕ್‌ಫ್ಲೇಷನ್’ ಎನ್ನುತ್ತಾರೆ. ಅಂದರೆ ಮೊದಲು ₹10ಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಸಿಗುತ್ತಿದ್ದ ವಸ್ತುವೊಂದು ಈಗ ಕಡಿಮೆ ಪ್ರಮಾಣದಲ್ಲಿ ಸಿಗುತ್ತದೆ. ಎಷ್ಟೋ ಸಂದರ್ಭಗಳಲ್ಲಿ ಉತ್ಪನ್ನ ಖರೀದಿಸುವಾಗ ‘ಶ್ರಿಂಕ್‌ಫ್ಲೇಷನ್’ ವಿಚಾರ ಗ್ರಾಹಕನಿಗೆ ಗೊತ್ತೇ ಆಗುವುದಿಲ್ಲ. ಆದರೆ, ಆ ಉತ್ಪನ್ನವನ್ನು ಬಳಸುವ ಪ್ರಕ್ರಿಯೆಯಲ್ಲಿ ಇದು ಗಮನಕ್ಕೆ ಬರುತ್ತದೆ.

ಕಂಪನಿಗಳೇಕೆ ‘ಶ್ರಿಂಕ್‌ಫ್ಲೇಷನ್’ ಆಶ್ರಯಿಸುತ್ತವೆ?: ನಿರ್ದಿಷ್ಟ ಉತ್ಪನ್ನವೊಂದರ ಕಚ್ಚಾವಸ್ತುಗಳ ಬೆಲೆ, ಸಾಗಣೆ ವೆಚ್ಚ ಮುಂತಾದವುಗಳ ಹೆಚ್ಚಳದಿಂದ ತಯಾರಿಕಾ ವೆಚ್ಚ ಹೆಚ್ಚಳವಾಗುತ್ತದೆ. ಇಂತಹ ಸಂದರ್ಭದಲ್ಲಿ ಕಂಪನಿಗಳಿಗೆ ಎರಡು ಆಯ್ಕೆಗಳಿರುತ್ತವೆ. ಒಂದನೆಯದ್ದು, ಉತ್ಪನ್ನದ ಬೆಲೆ ಹೆಚ್ಚಳ ಮಾಡುವುದು. ಎರಡನೆಯದ್ದು, ಉತ್ಪನ್ನದ ಪ್ರಮಾಣ ತಗ್ಗಿಸುವುದು. ಬೆಲೆ ಏರಿಕೆ ಮಾಡಿದರೆ ಗ್ರಾಹಕರ ಕೆಂಗಣ್ಣಿಗೆ ಗುರಿಯಾಗಬೇಕಾಗುತ್ತದೆ. ಆದರೆ ಉತ್ಪನ್ನದ ಪ್ರಮಾಣ ತಗ್ಗಿಸಿದರೆ ಹೆಚ್ಚಿನ ಗ್ರಾಹಕರಿಗೆ ಅದು ಗಮನಕ್ಕೆ ಬರುವುದಿಲ್ಲ. ಹಾಗಾಗಿ ಕಂಪನಿಗಳು ಈ ದಾರಿ ಹಿಡಿಯುತ್ತವೆ.

ಭಾರತದಲ್ಲಿ ‘ಶ್ರಿಂಕ್‌ಫ್ಲೇಷನ್’: ಭಾರತದಲ್ಲಿ ‘ಶ್ರಿಂಕ್‌ಫ್ಲೇಷನ್’ ಸರ್ವವ್ಯಾಪಿ ಎನ್ನಬಹುದು. ಬಿಸ್ಕತ್ತಿನ ಪೊಟ್ಟಣ, ಕುರುಕಲು ತಿಂಡಿ ಪೊಟ್ಟಣ, ಸಾಬೂನು, ಪೇಸ್ಟ್, ಶಾಂಪೂ, ಮಸಾಲೆ ಪದಾರ್ಥಗಳು, ಚಹಾ ಮತ್ತು ಕಾಫಿ ಪುಡಿ ಪೊಟ್ಟಣಗಳು, ಚಾಕೊಲೇಟ್, ಸಿಹಿ ಪದಾರ್ಥಗಳು, ಬೇಕರಿ ಪದಾರ್ಥಗಳು ಹೀಗೆ ಎಲ್ಲಾ ಕಡೆ ‘ಶ್ರಿಂಕ್‌ಫ್ಲೇಷನ್’ನ ಪ್ರಭಾವ ಇದೆ. ನಿರ್ದಿಷ್ಟ ವಸ್ತುವಿನ ತೂಕವನ್ನು ಗಮನಿಸಿದಾಗ ‘ಶ್ರಿಂಕ್‌ಫ್ಲೇಷನ್’ ಹೇಗೆ ಸದ್ದಿಲ್ಲದೆ ನಿಮ್ಮ ಜೇಬಿಗೆ ಕತ್ತರಿ ಹಾಕುತ್ತಿದೆ ಎನ್ನುವುದು ಅರಿವಿಗೆ ಬರುತ್ತದೆ.

‘ಶ್ರಿಂಕ್‌ಫ್ಲೇಷನ್’ ಹಿಂದಿನ ಲೆಕ್ಕಾಚಾರ: ಉತ್ಪನ್ನದ ಬೆಲೆ ₹10 ಇದ್ದಿದ್ದು ₹12 ಆದರೆ ಅದಕ್ಕೆ ನಾವು ತೀಕ್ಷ್ಣವಾಗಿ ಪ್ರತಿಕ್ರಿಯೆ ನೀಡುತ್ತೇವೆ. ₹10 ಇದ್ದ ಉತ್ಪನ್ನದ ಬೆಲೆಯನ್ನು ಒಂದೇ ಸಲಕ್ಕೆ ₹12ಕ್ಕೆ ಏರಿಕೆ ಮಾಡಿದ್ದಾರೆ ಎಂದು ಹೌಹಾರುತ್ತೇವೆ. ಆದರೆ ಬೆಲೆ ಏರಿಕೆ ಮಾಡದೆ 100 ಗ್ರಾಂನ ಪೊಟ್ಟಣವನ್ನು ಅನ್ನು 85 ಗ್ರಾಂಗೆ ಇಳಿಕೆ ಮಾಡಿದರೆ ನಮಗೆ ಅಷ್ಟಾಗಿ ಗೊತ್ತಾಗುವುದಿಲ್ಲ. ಏಕೆಂದರೆ ಕಂಪನಿಗಳು ಪ್ಯಾಕಿಂಗ್ ಅನ್ನು ಹಳೆಯ ಗಾತ್ರಕ್ಕೆ ಮಾಡಿರುತ್ತವೆ. ಇದು, ಅಷ್ಟೇ ಪ್ರಮಾಣದ ಉತ್ಪನ್ನ ಸಿಕ್ಕಿದೆ ಎಂಬ ಭಾವನೆಯನ್ನು ಗ್ರಾಹಕನಲ್ಲಿ ಮೂಡಿಸುತ್ತದೆ. ಹಾಗಾಗಿ ಕಂಪನಿಗಳು ಇದನ್ನು ಪ್ರಬಲ ಅಸ್ತ್ರವನ್ನಾಗಿ ಬಳಸಿಕೊಳ್ಳುತ್ತವೆ.

ಸ್ಕಿಂಪ್‌ಫ್ಲೇಷನ್ ಕೂಡ ಇದೆ: ‘ಸ್ಕಿಂಪ್‌ಫ್ಲೇಷನ್’ ಎನ್ನುವುದು ಮತ್ತೊಂದು ಮಾರುಕಟ್ಟೆ ತಂತ್ರ. ಇಲ್ಲಿ ಕಂಪನಿಗಳು ಉತ್ಪನ್ನದ ಗಾತ್ರ ಅಥವಾ ಪ್ರಮಾಣವನ್ನು ಕಡಿಮೆ ಮಾಡುವುದಿಲ್ಲ. ಬದಲಿಗೆ ಬೆಲೆ ಏರಿಕೆಯನ್ನು ಹೊಂದಿಸಿಕೊಳ್ಳಲು ಕಡಿಮೆ ಗುಣಮಟ್ಟದ ಕಚ್ಚಾ ವಸ್ತು ಬಳಸಿ ಉತ್ಪನ್ನ ತಯಾರಿಸುತ್ತವೆ. ಅಂದರೆ, ನಿಮಗೆ ಬೇಕಾದ ಉತ್ಪನ್ನವು ಬೇಕಾದ ಬೆಲೆಗೇ ಸಿಗುತ್ತದೆ. ಆದರೆ ಗುಣಮಟ್ಟದಲ್ಲಿ ರಾಜಿ ಮಾಡಿಕೊಳ್ಳಲಾಗಿರುತ್ತದೆ.

ರಕ್ಷಣೆ ಹೇಗೆ?: ಯಾವುದೇ ಉತ್ಪನ್ನದ ಖರೀದಿಸುವಾಗ ಕೇವಲ ಎಂಆರ್‌ಪಿ ನೋಡಿ ಖರೀದಿಸಬೇಡಿ. ಬದಲಿಗೆ, ಯೂನಿಟ್ ಬೆಲೆ ಆಧರಿಸಿ ಕೊಳ್ಳಿರಿ. ಉದಾಹರಣೆಗೆ ಪ್ರತಿ 10 ಗ್ರಾಂನ ಬೆಲೆ, ಪ್ರತಿ 100 ಗ್ರಾಂ ಬೆಲೆ ಎಂಬ ಬರಹ ಪ್ಯಾಕೆಟ್‌ಗಳಲ್ಲಿ ನಮೂದಾಗಿರುವುದನ್ನು ಗಮನಿಸಿ. ಪ್ಯಾಕೆಟ್ ಗಾತ್ರ ನೋಡಿ ಕೊಳ್ಳಬೇಡಿ. ಹಲವು ಸಲ ಪ್ಯಾಕೆಟ್ ವಿನ್ಯಾಸವನ್ನು ಹಾಗೇ ಇಟ್ಟು ಉತ್ಪನ್ನದ ಪ್ರಮಾಣ ಇಳಿಸಿರುತ್ತಾರೆ ಎನ್ನುವುದನ್ನು ಮರೆಯದಿರಿ.

ಏಕೆ ಜಾಗೃತಿ ಅಗತ್ಯ?: ವಿವಿಧ ಉತ್ಪನ್ನಗಳನ್ನು ತಯಾರಿಸುವ ಕಂಪನಿಗಳು ನಿಮ್ಮ ಮನೆ ಬಾಗಿಲಿಗೆ ಬಂದು ಯಾವ ವಸ್ತುವಿನ ಬೆಲೆ ಏರಿಕೆ ಮಾಡಿದ್ದೇವೆ ಎಂಬುದನ್ನು ಪಾರದರ್ಶಕವಾಗಿ ಹೇಳುವುದಿಲ್ಲ. ಸದ್ದಿಲ್ಲದೆ ಅದು ನಿಮ್ಮ ಅಡುಗೆ ಮನೆ ಪ್ರವೇಶಿಸಿರುತ್ತದೆ. ಮಾರುಕಟ್ಟೆ ತಂತ್ರಗಾರಿಕೆಯ ಭಾಗವಾಗಿ ಕಂಪನಿಗಳು ‘ಶ್ರಿಂಕ್‌ಫ್ಲೇಷನ್’ ಬಳಸುವುದನ್ನು ಮುಂದುವರಿಸುತ್ತವೆ. ಹಾಗಾಗಿ ನೀವು ಎಷ್ಟು ಜಾಗರೂಕರಾಗಿ ಇರುತ್ತೀರೋ ಅಷ್ಟು ಅನುಕೂಲವಾಗುತ್ತದೆ. ಉತ್ಪನ್ನಗಳನ್ನು ಅಳೆದು–ತೂಗಿ ಖರೀದಿಸಿದಾಗ ‘ಶ್ರಿಂಕ್‌ಫ್ಲೇಷನ್’ನ ಬಲೆಯಿಂದ ತಪ್ಪಿಸಿಕೊಳ್ಳಲು ಅಲ್ಪಸ್ವಲ್ಪ ಪ್ರಯತ್ನವನ್ನಾದರೂ ಮಾಡಬಹುದು.

ನವೆಂಬರ್ 7ರವರೆಗೆ ₹12,569 ಕೋಟಿ ಬಂಡವಾಳ ಹೊರಹರಿವು

ಎಫ್‌ಪಿಐ: ಮತ್ತೆ ಹೂಡಿಕೆ ಹಿಂತೆಗೆತ

ನವದೆಹಲಿ (ಪಿಟಿಐ): ಅಕ್ಟೋಬರ್ ತಿಂಗಳಲ್ಲಿ ಷೇರುಗಳ ಖರೀದಿಗೆ ಆದ್ಯತೆ ನೀಡಿದ್ದ ವಿದೇಶಿ ಹೂಡಿಕೆದಾರರು (ಎಫ್‌ಪಿಐ) ನವೆಂಬರ್‌ನಲ್ಲಿ ದೇಶದ ಷೇರುಪೇಟೆಯಿಂದ ಹಣ ಹಿಂಪಡೆಯುವ ಕಾರ್ಯವನ್ನು ಮತ್ತೆ ಆರಂಭಿಸಿದ್ದಾರೆ. ಎಫ್‌ಪಿಐಗಳು ನವೆಂಬರ್‌ನಲ್ಲಿ ಇದುವರೆಗೆ ಒಟ್ಟು ₹12,569 ಕೋಟಿ ಬಂಡವಾಳವನ್ನು ಹಿಂಪಡೆದಿದ್ದಾರೆ.

ಎಫ್‌ಪಿಐಗಳು ಅಕ್ಟೋಬರ್‌ನಲ್ಲಿ ಒಟ್ಟು ₹14,610 ಕೋಟಿ ಹೂಡಿಕೆ ಮಾಡಿದ್ದರು. ವಿದೇಶಿ ಹೂಡಿಕೆದಾರರು (ಎಫ್‌ಪಿಐ) ಸೆಪ್ಟೆಂಬರ್‌ನಲ್ಲಿ ₹23,885 ಕೋಟಿ, ಆಗಸ್ಟ್‌ನಲ್ಲಿ ₹34,990 ಕೋಟಿ ಹಾಗೂ ಜುಲೈನಲ್ಲಿ ₹17,700 ಕೋಟಿ



ಹೂಡಿಕೆಯನ್ನು ಹಿಂಪಡೆದಿದ್ದರು.

ನವೆಂಬರ್‌ನಲ್ಲಿ ಅವರು ಮತ್ತೆ ಷೇರು ಮಾರಾಟಕ್ಕೆ ಆದ್ಯತೆ ನೀಡಿದ್ದಾರೆ. ನವೆಂಬರ್ ತಿಂಗಳ ಪ್ರತಿ ವಹಿವಾಟಿನ ದಿನವೂ ಅವರು ಷೇರುಗಳ ಮಾರಾಟಕ್ಕೆ ಗಮನ ನೀಡುತ್ತಿದ್ದಾರೆ. ಕೆಲವು ಹೂಡಿಕೆದಾರರು ಭಾರತದ ಮಾರುಕಟ್ಟೆಗಳಿಂದ ಹಣವನ್ನು ಹಿಂಪಡೆದು, ಕೃತಕ ಬುದ್ಧಿಮತ್ತೆ ಆಧಾರಿತ ಕಂಪನಿಗಳ ಷೇರುಗಳು ಹೆಚ್ಚಿನ ಮೌಲ್ಯವರ್ಧನೆ ಕಾಣುತ್ತಿರುವ ಮಾರುಕಟ್ಟೆಗಳಲ್ಲಿ ಹಣ ತೊಡಗಿಸುತ್ತಿದ್ದಾರೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್ ಕಂಪನಿಯ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದ್ದಾರೆ.

‘ಎ.ಐ ವಿಚಾರದಲ್ಲಿ ಭಾರತವು ಈಗ ಹೆಚ್ಚೇನೂ ಸಾಧನೆ ತೋರಿಲ್ಲ ಎಂಬಂತೆ ಕಾಣಲಾಗುತ್ತಿದೆ. ಅದು ಎಫ್‌ಪಿಐ ಚಟುವಟಿಕೆಯ ಮೇಲೆ ಪ್ರಭಾವ ಬೀರುತ್ತಿದೆ’ ಎಂದು ಅವರು ವಿವರಿಸಿದ್ದಾರೆ. ಆದರೆ ಎ.ಐ. ಸಂಬಂಧಿತ ಷೇರುಗಳ ಮೌಲ್ಯವು ಈಗ ಬಹಳ ಹೆಚ್ಚಾಗಿದೆ ಎಂದು ಕೂಡ ಅವರು ಹೇಳಿದ್ದಾರೆ.

ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಭಾರತದ ಕಂಪನಿಗಳ ಹಣಕಾಸು ಫಲಿತಾಂಶವು ನಿರೀಕ್ಷೆಗಿಂತ ತುಸು ಚೆನ್ನಾಗಿ ಇದೆ. ಅದರಲ್ಲೂ ಮುಖ್ಯವಾಗಿ, ಮಿಡ್‌ಕ್ಯಾಪ್ ವಲಯದ ಕಂಪನಿಗಳ ಫಲಿತಾಂಶವು ಚೆನ್ನಾಗಿ ಆಗಿದೆ. ಆದರೆ ಜಾಗತಿಕ ಮಟ್ಟದಲ್ಲಿನ ಕೆಲವು ಸವಾಲುಗಳು ವಿದೇಶಿ ಹೂಡಿಕೆದಾರರು ಎಚ್ಚರಿಕೆಯ ಹೆಜ್ಜೆ ಇರಿಸುವಂತೆ ಮಾಡಬಹುದು ಎಂದು ಏಂಜೆಲ್ ಒನ್ ಕಂಪನಿಯ ಹಿರಿಯ ವಿಶ್ಲೇಷಕ ವಕಾರ್ ಜಾವೇದ್ ಖಾನ್ ಹೇಳಿದ್ದಾರೆ. 2025ರ ಇದುವರೆಗೆ ಎಫ್‌ಪಿಐಗಳು ₹1.5 ಲಕ್ಷ ಕೋಟಿಗಿಂತ ಹೆಚ್ಚಿನ ಮೊತ್ತವನ್ನು ದೇಶದ ಷೇರುಪೇಟೆಯಿಂದ ಹಿಂಪಡೆದಿದ್ದಾರೆ.

ಕ್ವಾತ್ರಾ–ಇಂಟೆಲ್ ಸಿಇಒ ಸಂವಾದ

ನ್ಯೂಯಾರ್ಕ್ (ಪಿಟಿಐ): ಅಮೆರಿಕದಲ್ಲಿನ ಭಾರತದ ರಾಯಭಾರಿ ವಿನಯ್ ಮೋಹನ್ ಕ್ವಾತ್ರಾ ಅವರು ಇಂಟೆಲ್ ಸಿಇಒ ಲಿಪ್ ಬು ಟಾನ್ ಅವರೊಂದಿಗೆ ಕಂಪನಿಯ ಸೆಮಿಕಂಡಕ್ಟರ್, ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಬಳಕೆ ಮತ್ತು ಭಾರತದಲ್ಲಿನ ಯೋಜನೆಗಳ ಬಗ್ಗೆ ಚರ್ಚೆ ನಡೆಸಿದರು.

ಕೇಂದ್ರ ಸರ್ಕಾರವು ಸೆಮಿಕಂಡಕ್ಟರ್ ಮತ್ತು ಎಐ ಕೈಗಾರಿಕೆಗಳಿಗೆ ವಿಶೇಷ ಪ್ರೋತ್ಸಾಹ ಕ್ರಮಗಳನ್ನು ಕೈಗೊಂಡಿರುವಾಗಲೇ ಉಭಯ ನಾಯಕರು ಶನಿವಾರ ಆನ್‌ಲೈನ್ ಮೂಲಕ ಸಂವಾದ ನಡೆಸಿದರು. ಭಾರತವು ಮುಂದಿನ ವರ್ಷ ಫೆಬ್ರುವರಿಯಲ್ಲಿ ‘ಕೃತಕ ಬುದ್ಧಿಮತ್ತೆ ಶೃಂಗ’ ಸಭೆಯ ಆತಿಥ್ಯ ವಹಿಸಲು ಸಿದ್ಧತೆ ನಡೆಸುತ್ತಿರುವಾಗಲೇ ಈ ಚರ್ಚೆ ನಡೆದಿದೆ.

579 ಮದ್ಯದಂಗಡಿ ‘ಇ– ಹರಾಜು’

ಒಂದನೇ ಪುಟದಿಂದ...

ಸದ್ಯದ ಮಾರುಕಟ್ಟೆ ಮೌಲ್ಯದ ಅಂದಾಜು ಪ್ರಕಾರ ಒಂದು ಮದ್ಯದಂಗಡಿಯ ಪರವಾನಗಿ ಬಿಡ್ಡಿಂಗ್‌ನಲ್ಲಿ ಕನಿಷ್ಠ ₹3 ಕೋಟಿಯಿಂದ ₹4 ಕೋಟಿಯವರೆಗೆ ಖರೀದಿ ಆಗಬಹುದು. ಆ ಮೂಲಕ, ಸರ್ಕಾರಕ್ಕೆ ಸುಮಾರು ₹1,500 ಕೋಟಿ ಸಂಪನ್ಮೂಲ ಕ್ರೋಡೀಕರಣವಾಗುವ ಅಂದಾಜು ಇದೆ ಎಂದೂ ಇಲಾಖೆ ಲೆಕ್ಕಾಚಾರ ಹಾಕಿದೆ.

ಸಿಎಲ್ 2ಎ: ಸ್ಥಗಿತಗೊಂಡಿರುವ ಮತ್ತು 1987ರ ಕೋಟಾದಡಿ ಇನ್ನೂ ಮಂಜೂರು ಮಾಡಲು ಬಾಕಿ ಇರುವ ಎಲ್ಲ ಸಿಎಲ್ 2 ಪರವಾನಗಿಗಳು, ಸ್ಥಗಿತಗೊಂಡಿರುವ ಮತ್ತು ಅಬಕಾರಿ ಆಯುಕ್ತರಿಂದ ಪೂರ್ವಾನುಮೋದನೆ ಪಡೆದ, ಆದರೆ ಇನ್ನೂ ತೆರೆಯದ ಹಾಗೂ ಎಂಎಸ್‌ಐಎಲ್‌ಗೆ 2009 ಮತ್ತು 2016ರ ಆದೇಶದಲ್ಲಿ ಹಂಚಿಕೆ ಮಾಡಿ ಇನ್ನೂ ಮಂಜೂರು ಮಾಡಬೇಕಾದ ಸಿಎಲ್–11ಸಿ (ಎಂಎಸ್‌ಐಎಲ್) ಮದ್ಯದಂಗಡಿಗಳ ಪರವಾನಗಿಗಳನ್ನು ಯಶಸ್ವಿ ಬಿಡ್ಡರ್‌ಗಳಿಗೆ ‘ಸಿಎಲ್ 2ಎ’ ನಮೂನೆಯಡಿ ಅಡಿ ನೀಡಲಾಗುವುದು.

ಸಿಎಲ್ 9ಎ: ಸ್ಥಗಿತಗೊಂಡಿರುವ ಸಿಎಲ್–9 (ಬಾರ್ ಆ್ಯಂಡ್ ರೆಸ್ಟೋರೆಂಟ್) ಪರವಾನಗಿಗಳನ್ನು ಯಶಸ್ವಿ ಬಿಡ್ಡರ್‌ಗಳಿಗೆ ಇ- ಹರಾಜು ಮೂಲಕ ಬಿಡ್ಡಿಂಗ್ ಪ್ರಕ್ರಿಯೆ ನಡೆಸಿ ‘ಸಿಎಲ್ 9ಎ’ ಅಡಿ ಮಂಜೂರು ಮಾಡಲಾಗುವುದು. ಅಲ್ಲದೆ, ಸರ್ಕಾರ ಕಾಲ ಕಾಲಕ್ಕೆ ನಿಗದಿಪಡಿಸುವ ಪರವಾನಗಿ ಶುಲ್ಕ ಮತ್ತು ಹೆಚ್ಚುವರಿ ಶುಲ್ಕವನ್ನು ಸಿಎಲ್ 2ಎ ಮತ್ತು ಸಿಎಲ್ 9ಎ ಪರವಾನಗಿ ಹೊಂದಿವರು ಪಾವತಿಸಬೇಕೆಂದು ನಿಯಮದಲ್ಲಿಯೇ ತಿಳಿಸಲಾಗಿದೆ ಇಲಾಖೆಯ ಮೂಲಗಳು ಹೇಳಿವೆ.

ರಾಜ್ಯದಲ್ಲಿರುವ ಮದ್ಯದಂಗಡಿಗಳು (2025ರ ಸೆ.30ರವರೆಗೆ)

ಮಾದರಿ	ಸಂಖ್ಯೆ
ಸಿಎಲ್ –2 (ಚಿಲ್ಲರೆ ಮದ್ಯದಂಗಡಿ)	4004
ಸಿಎಲ್–4 (ಕ್ಲಬ್‌ಗಳು)	323
ಸಿಎಲ್– 6ಎ (ಸ್ಟಾರ್ ಹೋಟೆಲ್‌ಗಳು)	95
ಸಿಎಲ್–7 (ಹೋಟೆಲ್ಸ್ ಆ್ಯಂಡ್ ಬೋರ್ಡಿಂಗ್ ಹೌಸಸ್)	3,373
ಸಿಎಲ್ 14 ಮತ್ತು 15 (ಟಿಡಿಸಿ, ಐಎಂಎಫ್‌ಎಲ್ ಆ್ಯಂಡ್ ಬಿಯರ್)	24
ಸಿಎಲ್ 8,8ಎ,8ಬಿ (ಮಿಲಿಟರಿ ಕ್ಯಾಂಟೀನ್ ಸ್ಟೋರ್ಸ್)	71
ಸಿಎಲ್–9 (ಬಾರ್ ಆ್ಯಂಡ್ ರೆಸ್ಟೋರೆಂಟ್)	3,652
ಸಿಎಲ್–11ಸಿ (ಎಂಎಸ್‌ಐಎಲ್)	1,076
ಸಿಎಲ್–16,17,18 (ಏರ್‌ಪೋರ್ಟ್ ಪರವಾನಗಿ)	30
ರಿಟೇಲ್ ವೆಂಡರ್ ಆಫ್ ಬಿಯರ್ (ಆರ್‌ವಿಬಿ) ಸ್ವತಂತ್ರ	64
ರಿಟೇಲ್ ವೆಂಡರ್ ಆಫ್ ಬಿಯರ್ (ಆರ್‌ವಿಬಿ) ಅಟ್ಯಾಚ್ಡ್	904
ವೈನ್ ಟಾವರ್ನ್	195
ವೈನ್ ಬುಟಿಕ್	77
ಮೈಕ್ರೊ ಬ್ರುವರಿ	84
ಒಟ್ಟು	13,972

ರಾಜ್ಯ ಸರ್ಕಾರ 1987ರ ಜೂನ್ 30ರಂದು ಹೊರಡಿಸಿದ್ದ ಆದೇಶದಲ್ಲಿ 4,206 ಮದ್ಯದಂಗಡಿಗಳಿಗೆ ಪರವಾನಗಿ ನೀಡಲು ನಿರ್ಧರಿಸಿತ್ತು. ಈ ಕೋಟಾದಡಿ 133 ಮದ್ಯಂಗಡಿಗಳನ್ನು ತೆರೆಯಲು ಪರವಾನಗಿ ಕೊಡಲು ಇನ್ನೂ ಬಾಕಿ ಇದೆ. ನಾನಾ ಕಾರಣಗಳಿಂದ 102 ಪರವಾನಗಿಗಳು ಸ್ಥಗಿತಗೊಂಡಿವೆ. ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಲಿಮಿಟೆಡ್‌ಗೆ (ಎಂಎಸ್‌ಐಎಲ್) 2009ರ ಜುಲೈ 3 ಮತ್ತು 2016ರ ಸೆ. 23ರ ಆದೇಶದ ಅನ್ವಯ ಒಟ್ಟು 1,363 ಮದ್ಯದಂಗಡಿಗಳನ್ನು ತೆರೆಯಲು ಪರವಾನಗಿ ನೀಡಲಾಗಿತ್ತು. ಈ ಪೈಕಿ, 1,133 ಮದ್ಯದಂಗಡಿಗಳಿಗೆ ಮಂಜೂರಾತಿ ನೀಡಲಾಗಿದೆ. ಮಂಜೂರಾತಿ ನೀಡಿರುವುದರಲ್ಲಿ 41 ಸ್ಥಗಿತಗೊಂಡಿವೆ. ಇನ್ನೂ 230 ಮದ್ಯದಂಗಡಿಗಳಿಗೆ ಮಂಜೂರಾತಿ ನೀಡಲು ಬಾಕಿ ಇದೆ. ಈ ಮದ್ಯಂಗಡಿಗಳು ಹರಾಜು ಪಟ್ಟಿಯಲ್ಲಿ ಸೇರಲಿವೆ ಎಂದು ಅಬಕಾರಿ ಇಲಾಖೆಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

‘ಪರವಾನಗಿ ಹೊಂದಿದವರು ಮೃತಪಟ್ಟ ನಂತರ ಯಾರ ಹೆಸರಿಗೆ ಸನ್ನದು ಬದಲಿಸಬೇಕೆಂಬ ವಿವಾದ, ಕುಟುಂಬದೊಳಗಿನ ಸಂಘರ್ಷ, ಶುಲ್ಕ ಕಟ್ಟಲು ಹಣ ಇಲ್ಲದಿರುವುದು ಸೇರಿದಂತೆ ವಿವಿಧ ಕಾರಣಗಳಿಗೆ ಮದ್ಯದಂಗಡಿಗಳು ನವೀಕರಣಗೊಳ್ಳದೆ ಸ್ಥಗಿತಗೊಂಡಿವೆ. ಈ ಪೈಕಿ, ಕೆಲವು ಮದ್ಯದಂಗಡಿಗಳ ಪರವಾನಗಿ 1979ರಿಂದಲೂ ನವೀಕರಣ ಆಗಿಲ್ಲ’ ಎಂದೂ ಅವರು ಹೇಳಿದರು.

50 ಸಂಸ್ಥೆ ಜೊತೆ ಡಿಪಿಐಐಟಿ ಒಪ್ಪಂದ

ನವದೆಹಲಿ (ಪಿಟಿಐ): ತಯಾರಿಕೆಗೆ ಉತ್ತೇಜನ ನೀಡಲು ಮತ್ತು ನವೋದ್ಯಮಗಳಿಗೆ ಪೂರಕವಾದ ನಾವೀನ್ಯ ಪರಿಸರದ ವ್ಯವಸ್ಥೆ ರೂಪಿಸಲು ಐಟಿಸಿ, ಫ್ಲಿಪ್‌ಕಾರ್ಟ್, ಮರ್ಸಿಡಿಸ್ ಬೆಂಜ್ ಸೇರಿದಂತೆ 50ಕ್ಕೂ ಹೆಚ್ಚು ಕಂಪನಿಗಳೊಂದಿಗೆ ಕೈಗಾರಿಕೆ ಮತ್ತು ಆಂತರಿಕ ವ್ಯಾಪಾರ ಉತ್ತೇಜನಾ ಇಲಾಖೆ (ಡಿಪಿಐಐಟಿ) ಒಪ್ಪಂದ ಮಾಡಿಕೊಂಡಿದೆ.



ಈ ಕುರಿತ ತಿಳಿವಳಿಕೆ ಪತ್ರಕ್ಕೆ ಸಹಿ ಹಾಕಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಬೋಟ್, ಎಚ್‌ಡಿಎಫ್‌ಸಿ ಕ್ಯಾಪಿಟಲ್ ಅಡ್ವೈಸರ್ಸ್, ಹೀರೊ ಮೋಟೊ, ಜೆಪ್ಟೊ, ಕೋಟಕ್ ಮಹೀಂದ್ರ ಬ್ಯಾಂಕ್, ಯೆಸ್ ಬ್ಯಾಂಕ್, ಪೇಟಿಎಂ, ವಾಲ್‌ಮಾರ್ಟ್ ಮತ್ತು ಏಥರ್ ಎನರ್ಜಿ ಒಪ್ಪಂದ ಮಾಡಿಕೊಂಡ ಕಂಪನಿಗಳ ಪಟ್ಟಿಯಲ್ಲಿವೆ.

ಈ ಒಪ್ಪಂದದ ಭಾಗವಾಗಿ ನವೋದ್ಯಮಗಳಿಗೆ ಪೂರಕವಾದ ವ್ಯವಸ್ಥೆಗೆ ಉತ್ತೇಜನ ನೀಡಲಾಗುವುದು. ನವೋದ್ಯಮಗಳ ಆರಂಭಿಕ ಹಂತದಲ್ಲಿ ಅಗತ್ಯವಾಗಿ ಬೇಕಿರುವ ಎಲ್ಲ ನೆರವು ಒದಗಿಸುವ ತಯಾರಿಕಾ ವಲಯದ ಇನ್‌ಕ್ಯುಬೇಟರ್‌ಗಳನ್ನು ಅಭಿವೃದ್ಧಿಪಡಿಸುವ ಮೂಲಕ ಉತ್ಪಾದನೆಯಲ್ಲಿ ನಾವೀನ್ಯವನ್ನು ಹೆಚ್ಚಿಸುವ ಉದ್ದೇಶ ಇದೆ ಎಂದು ಅಧಿಕಾರಿ ಹೇಳಿದ್ದಾರೆ.

ಆಸ್ಪತ್ರೆ ನಿರ್ಮಾಣಕ್ಕೆ ಅಂಬಾನಿ ₹15 ಕೋಟಿ ದೇಣಿಗೆ

ತ್ರಿಶ್ಶೂರ್ (ಪಿಟಿಐ): ರಿಲಯನ್ಸ್ ಇಂಡಸ್ಟ್ರೀಸ್‌ನ ಮುಖ್ಯಸ್ಥ ಮುಕೇಶ್ ಅಂಬಾನಿ ಅವರು ಕೇರಳದ ಗುರುವಾಯೂರು ಶ್ರೀಕೃಷ್ಣ ದೇವಾಲಯಕ್ಕೆ ಭಾನುವಾರ ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸಿದರು.



ಮುಕೇಶ್ ಅಂಬಾನಿ

ಇಲ್ಲಿ ನಿರ್ಮಾಣ ಮಾಡಲು ಯೋಜಿಸಲಾಗಿರುವ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಹಾಗೂ ದೇವಸ್ಥಾನದ ಆನೆಗಳಿಗೆ ಆಧುನಿಕ ಪಶು ಆಸ್ಪತ್ರೆ ನಿರ್ಮಾಣಕ್ಕಾಗಿ ₹15 ಕೋಟಿ ದೇಣಿಗೆಯನ್ನೂ ನೀಡಿದರು.

ಮುಕೇಶ್ ಅವರು ದೇವಸ್ಥಾನಕ್ಕೆ ಭೇಟಿ ನೀಡಿರುವ ಚಿತ್ರಗಳನ್ನು ಗುರುವಾಯೂರು ದೇವಸ್ವಂ ಮಂಡಳಿಯು ತನ್ನ ಫೇಸ್‌ಬುಕ್ ಖಾತೆಯಲ್ಲಿ ಹಂಚಿಕೊಂಡಿದೆ.

ಹೆಲಿಕಾಪ್ಟರ್‌ನಲ್ಲಿ ಮುಂಜಾನೆ 7.30ಕ್ಕೆ ಬಂದಿಳಿದ ಮುಕೇಶ್ ಅವರು ನಂತರ ರಸ್ತೆ ಮಾರ್ಗವಾಗಿ ದೇವಸ್ಥಾನಕ್ಕೆ ತೆರಳಿದರು. ಅಲ್ಲಿ ದೇವಸ್ವಂ ಮಂಡಳಿ ಅಧ್ಯಕ್ಷ ಡಾ ವಿ.ಕೆ ವಿಜಯನ್ ಹಾಗೂ ಇತರರು ಅವರನ್ನು ಬರಮಾಡಿಕೊಂಡರು. ಬಳಿಕ ಪ್ರಾರ್ಥನೆ ಸಲ್ಲಿಸಿ, ಪ್ರಸಾದ ಸ್ವೀಕರಿಸಿದರು.

ಆಸ್ಪತ್ರೆಗಳ ನಿರ್ಮಾಣದ ಯೋಜನೆ ಕುರಿತು ದೇವಸ್ವಂ ಅಧಿಕಾರಿಗಳು ಮುಕೇಶ್ ಅವರಿಗೆ ಮಾಹಿತಿ ನೀಡಿದರು. ಎರಡೂ ಯೋಜನೆಗಳಿಗೆ ಸಂಪೂರ್ಣ ಬೆಂಬಲ ನೀಡುವುದಾಗಿ ಭರವಸೆ ನೀಡಿದ ಅವರು, ಮೊದಲ ಹಂತದಲ್ಲಿ ₹15 ಕೋಟಿ ನೀಡಿದ್ದಾರೆ.

ಗುರುವಾಯೂರು ಆನೆಗಳ ಆರೈಕೆ ಹಾಗೂ ನಿರ್ವಹಣೆಗಾಗಿ, ಗುಜರಾತ್‌ನಲ್ಲಿರುವ ರಿಲಯನ್ಸ್ ವನ್ಯಜೀವಿ ಸಂರಕ್ಷಣಾ ಕೇಂದ್ರದ ಮಾದರಿಯಲ್ಲಿ ಪಶು ಆಸ್ಪತ್ರೆ ನಿರ್ಮಿಸಲು ತಾಂತ್ರಿಕ ನೆರವು ನೀಡುವುದಾಗಿಯೂ ಹೇಳಿದ್ದಾರೆ.

ತಿರುಪತಿಗೂ ಭೇಟಿ: ಮುಕೇಶ್ ಅಂಬಾನಿ ಅವರು ಆಂಧ್ರ ಪ್ರದೇಶದಲ್ಲಿರುವ ತಿರುಮಲ ವೆಂಕಟೇಶ್ವರ ದೇವಸ್ಥಾನಕ್ಕೆ ತೆರಳಿ ಪ್ರಾರ್ಥನೆ ಸಲ್ಲಿಸಿದರು. ಮುಂಜಾನೆ ಸುಪ್ರಭಾತದ ಸೇವೆ ವೇಳೆಗೆ ದೇವಸ್ಥಾನಕ್ಕೆ ಆಗಮಿಸಿದರು. ಟಿಟಿಡಿ ಅಧಿಕಾರಿಗಳು ಮುಕೇಶ್ ಅವರನ್ನು ಬರಮಾಡಿಕೊಂಡರು.

ಕವಾಯತು

ಪಿಟಿಐ ಚಿತ್ರ



ವಾಯುಪಡೆಯ 93ನೇ ವಾರ್ಷಿಕೋತ್ಸವದ ಅಂಗವಾಗಿ ಅಸ್ಸಾಂನ ಗುವಾಹಟಿಯ ಬ್ರಹ್ಮಪುತ್ರ ನದಿ ತಟದ ಲಚಿತ್ ಘಾಟ್‌ನಲ್ಲಿ ಭಾನುವಾರ ಕವಾಯತು ನಡೆಸಿದ ವಾಯುಪಡೆ ಸಿಬ್ಬಂದಿ

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು		ಮೈಸೂರು:	
100 ಕ್ಕೆ	₹625	100 ಕ್ಕೆ	₹627
12 ಕ್ಕೆ	₹80		

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹422-676
ದ್ವಿತಳಿ (ಬಿ.ವಿ)	₹590-796

ಹಿಟ್ಟಿನ ಗಿರಣಿಯಲ್ಲಿ ಸ್ಫೋಟ: ಬಾಲಕ ಸಾವು

ಕಾನ್ಪುರ ದೆಹಾತ್ (ಉತ್ತರ ಪ್ರದೇಶ) (ಪಿಟಿಐ): ಇಲ್ಲಿನ ಹಿಟ್ಟಿನ ಗಿರಣಿಯಲ್ಲಿ ಯಂತ್ರವೊಂದು ಸ್ಫೋಟಗೊಂಡು, ಅದರಲ್ಲಿನ ಭಾರವಾದ ಕಲ್ಲು ಹಾರಿ ಬಾಲಕನೊಬ್ಬ ಮೃತಪಟ್ಟಿದ್ದಾನೆ ಎಂದು ಪೊಲೀಸರು ಭಾನುವಾರ ಹೇಳಿದ್ದಾರೆ.

ಘಟನೆಯು ಕಾನ್ಪುರದ ದೆಹಾತ್ ಜಿಲ್ಲೆಯ ಸರ್ಗಾವ್ ಬುಜುರ್ಗ್ ಗ್ರಾಮದಲ್ಲಿ ಶನಿವಾರ ನಡೆದಿದೆ. ಮೋಹಿತ್ (15) ಮೃತ ಬಾಲಕ.

ಯಂತ್ರ ಸ್ಫೋಟಗೊಂಡಾಗ ಸ್ಥಳದಲ್ಲಿ ಐವರು ಜನರಿರುವುದು ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ದಾಖಲಾಗಿದೆ. ಸ್ಫೋಟವಾಗುತ್ತಿದ್ದಂತೆ ಕೋಣೆಯು ಹಿಟ್ಟಿನಿಂದ ತುಂಬಿತ್ತು ಮತ್ತು ಎಲ್ಲರೂ ರಕ್ಷಣೆಗಾಗಿ ಓಡಿದ್ದರು. ಆಗ ಮೋಹಿತ್ ಕುಸಿದುಬಿದ್ದರು.

ಅಕ್ಬರ್‌ಪುರ ವೃತ್ತ ನಿರೀಕ್ಷಕ ಸಂಜಯ್ ವರ್ಮಾ ಮಾತನಾಡಿ, ‘ಜೋಳದ ಹಿಟ್ಟು ಮಾಡಿಸಲು ಹತ್ತನೇ ತರಗತಿಯಲ್ಲಿ ಓದುತ್ತಿದ್ದ ಮೋಹಿತ್ ಗಿರಣಿಗೆ ಹೋಗಿದ್ದರು. ಹಠಾತ್ ಆಗಿ ಯಂತ್ರ ಸ್ಫೋಟಗೊಂಡು ಅದರಲ್ಲಿನ ಬೃಹತ್ ಕಲ್ಲು ಅವರ ತಲೆಯ ಹಿಂಬಾಗಕ್ಕೆ ತೀವ್ರವಾಗಿ ಬಡಿಯಿತು ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ’ ಎಂದು ತಿಳಿಸಿದ್ದಾರೆ.



ಉತ್ತರಾಖಂಡ ಸಂಸ್ಥಾಪನಾ ದಿನದ ಅಂಗವಾಗಿ ಡೆಹ್ರಾಡೂನ್‌ನಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಪ್ರಧಾನಿ ನರೇಂದ್ರ ಮೋದಿ ಚಾಲನೆ ನೀಡಿದರು. ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ, ರಾಜ್ಯಪಾಲ ಲೆಫ್ಟಿನೆಂಟ್ ಜನರಲ್ (ನಿವೃತ್ತ) ಗುರ್ಮೀತ್ ಸಿಂಗ್, ವಿವಿಧ ಸಚಿವರು ಜೊತೆಗಿದ್ದರು –ಪಿಟಿಐ ಚಿತ್ರ

₹8,260 ಕೋಟಿ ವೆಚ್ಚದ ವಿವಿಧ ಯೋಜನೆಗೆ ಚಾಲನೆ

ಡೆಹ್ರಾಡೂನ್ (ಉತ್ತರಾಖಂಡ) (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಉತ್ತರಾಖಂಡದಲ್ಲಿ ₹8,260 ಕೋಟಿ ವೆಚ್ಚದ ಯೋಜನೆಗಳ ಉದ್ಘಾಟನೆ, ಶಂಕುಸ್ಥಾಪನೆಯನ್ನು ಭಾನುವಾರ ನೆರವೇರಿಸಿದರು.

ರಾಜ್ಯ ಸ್ಥಾಪನೆಗೊಂಡು 25 ವರ್ಷ ಪೂರೈಸಿದ ಸಂದರ್ಭದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಿದ ಅವರು, ಕುಡಿಯುವ ನೀರು, ನೀರಾವರಿ, ತಾಂತ್ರಿಕ ಶಿಕ್ಷಣ, ಇಂಧನ, ನಗರಾಭಿವೃದ್ಧಿ ಹಾಗೂ ಕ್ರೀಡೆ ಹಾಗೂ ಕೌಶಲ ಅಭಿವೃದ್ಧಿಗೆ ಸಂಬಂಧಿಸಿದ ಯೋಜನೆಗಳಿಗೆ ಚಾಲನೆ ನೀಡಿದರು.

ಇದೇ ವೇಳೆ ‘ಅಮೃತ್ ಯೋಜನೆ’ ಅಡಿಯಲ್ಲಿ ಡೆಹ್ರಾಡೂನ್‌ನ 23 ವಲಯಗಳಿಗೆ ಕುಡಿಯುವ ನೀರು ಪೂರೈಕೆ ಯೋಜನೆ, ಪಿಥೋರಗಢದಲ್ಲಿ ಇಲೆಕ್ಟ್ರಿಕಲ್ ಸಬ್ ಸ್ಟೇಷನ್, ಸರ್ಕಾರಿ ಕಚೇರಿಗಳಲ್ಲಿ ಸೌರ ವಿದ್ಯುತ್ ಯೋಜನೆ, ನೈನಿತಾಲ್‌ನ ಹಲ್ದ್ವಾನಿ ಕ್ರೀಡಾಂಗಣದಲ್ಲಿ ಹಾಕಿ ಮೈದಾನವನ್ನು ಉದ್ಘಾಟಿಸಿದರು.

ಮುರಿದುಬಿದ್ದ ಪಾಕ್, ಅಫ್ಗನ್ ಶಾಂತಿ ಮಾತುಕತೆ

ಇಸ್ಲಾಮಾಬಾದ್ (ಎಪಿ): ಇಸ್ತಾಂಬುಲ್‌ನಲ್ಲಿ ನಡೆಯುತ್ತಿದ್ದ ಪಾಕಿಸ್ತಾನ–ಅಫ್ಗಾನಿಸ್ತಾನ ನಡುವಣ ಶಾಂತಿ ಒಪ್ಪಂದ ಮಾತುಕತೆಯು ಮುರಿದುಬಿದ್ದಿದೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದರು.

ಒಪ್ಪಂದದ ನಿಯಮಗಳನ್ನು ಉಲ್ಲಂಘಿಸಲಾಗಿದೆ ಎಂದು ಎರಡೂ ದೇಶಗಳು ಪರಸ್ಪರ ಆರೋಪಿಸಿದ ಕಾರಣ ಮಾತುಕತೆ ಅರ್ಧಕ್ಕೇ ಮೊಟಕುಗೊಂಡಿದೆ. ಇದು ಉಭಯ ದೇಶಗಳ ನಡುವಣ ಗಡಿ ಉದ್ವಿಗ್ನತೆಯನ್ನು ತೀವ್ರಗೊಳಿಸಿದೆ.

ಎರಡೂ ದೇಶಗಳು ಗಡಿಯಲ್ಲಿ ನಡೆಸಿದ ಸಂಘರ್ಷದಿಂದ ಹಲವು ಸೈನಿಕರು ಮತ್ತು ನಾಗರಿಕರು ಮೃತಪಟ್ಟಿದ್ದಾರೆ. ಅಕ್ಟೋಬರ್ 19ರಂದು ಕತಾರ್ ಮಧ್ಯಸ್ಥಿಕೆಯಲ್ಲಿ ತಾತ್ಕಾಲಿಕ ಕದನ ವಿರಾಮ ಘೋಷಣೆಯಾಗಿದೆ. ಶಾಶ್ವತ ಕದನ ವಿರಾಮ ಘೋಷಿಸುವ ನಿಟ್ಟಿನಲ್ಲಿ ಇಸ್ತಾಂಬುಲ್‌ನಲ್ಲಿ ಮೂರನೇ ಸುತ್ತಿನ ಮಾತುಕತೆಯನ್ನು ನಡೆಸಲಾಗುತ್ತಿತ್ತು.

‘ಮಾತುಕತೆ ಮುರಿದು ಬೀಳಲು ಪಾಕಿಸ್ತಾನವೇ ಕಾರಣ. ಅದರ ಬೇಡಿಕೆಗಳು ಸೂಕ್ತವಾಗಿಲ್ಲ’ ಎಂದು ಅಫ್ಗಾನಿಸ್ತಾನ ಸರ್ಕಾರದ ವಕ್ತಾರ ಜಬಿವುಲ್ಲಾ ಮುಜಾಹಿದ್ ಆರೋಪಿಸಿದ್ದಾರೆ.

‘ಯುದ್ಧ ನಮ್ಮ ಮೊದಲ ಆಯ್ಕೆ ಅಲ್ಲ. ಆದರೆ ಯುದ್ಧ ಆರಂಭಿಸಿದರೆ ಎದುರಿಸಲು ಸಿದ್ಧ’ ಎಂದು ಹೇಳಿದ್ದಾರೆ.

ಭಾರತ– ಪಾಕ್ ಸಂಘರ್ಷ ಶಮನ ಟ್ರಂಪ್‌ಗೆ ಧನ್ಯವಾದ ಹೇಳಿದ ಶರೀಫ್

ಇಸ್ಲಾಮಾಬಾದ್ (ಪಿಟಿಐ): ‘ಭಾರತ–ಪಾಕಿಸ್ತಾನ ಸಂಘರ್ಷವನ್ನು ಶಮನ ಮಾಡಿದ್ದಕ್ಕಾಗಿ ಧನ್ಯವಾದಗಳು’ ಎಂದು ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಶರೀಫ್ ಅವರು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಮತ್ತೊಮ್ಮೆ ಹೇಳಿದ್ದಾರೆ.

ನಾಲ್ಕು ದಿನಗಳ ಕಾಲ ನಿರಂತರವಾಗಿ ನಡೆದ ಡ್ರೋನ್ ಮತ್ತು ಕ್ಷಿಪಣಿ ದಾಳಿಗಳ ಬಳಿಕ ಭಾರತ– ಪಾಕಿಸ್ತಾನ ಸಂಘರ್ಷ ಕೊನೆಗಳಿಸಿ ಮೇ 10ರಂದು ಒಪ್ಪಂದ ಮಾಡಿಕೊಂಡವು. ಇದರಲ್ಲಿ ಮೂರನೆಯ ಯಾವ ವ್ಯಕ್ತಿಯೂ ಭಾಗಿಯಾಗಿಲ್ಲ ಎಂದು ಭಾರತ ಪದೇ ಪದೇ ಹೇಳುತ್ತಿದೆ. ಆದರೂ ಈ ಸಂಘರ್ಷವನ್ನು ಕೊನೆಗೊಳಿಸಿದ್ದು ತಾವೇ ಎಂದು ಡೊನಾಲ್ಡ್ ಟ್ರಂಪ್ ಹಲವು ಬಾರಿ ಹೇಳಿದ್ದಾರೆ.

ಬಾಕುದಲ್ಲಿ ಅಜರ್‌ಬೈಜಾನ್‌ನ ವಿಜಯ ದಿನದ ಪರೇಡ್‌ನಲ್ಲಿ ಶನಿವಾರ ಶರೀಫ್ ಮಾತನಾಡಿದರು. ‘ಟ್ರಂಪ್ ಅವರ ದಿಟ್ಟ ಮತ್ತು ನಿರ್ಣಾಯಕ ನಾಯಕತ್ವದಿಂದ ಭಾರತ–ಪಾಕಿಸ್ತಾನ ನಡುವೆ ಕದನ ವಿರಾಮ ಘೋಷಣೆಯಾಯಿತು. ಇದು ದೊಡ್ಡ ಯುದ್ಧವೊಂದನ್ನು ತಪ್ಪಿಸಿ, ಲಕ್ಷಾಂತರ ಜನರ ಜೀವ ಉಳಿಸಿತು. ದಕ್ಷಿಣ ಏಷ್ಯಾದಲ್ಲಿ ಶಾಂತಿಯನ್ನು ಪುನರ್‌ಸ್ಥಾಪಿಸಿತು’ ಎಂದು ಹೇಳಿದರು.

ಏ.22ರಂದು ಪಹಲ್ಗಾಮ್‌ನಲ್ಲಿ ದಾಳಿ ಮಾಡಿದ ಉಗ್ರರು 22 ಮಂದಿ ಭಾರತೀಯರನ್ನು ಹತ್ಯೆ ಮಾಡಿದ್ದರು. ಇದಕ್ಕೆ ಪ್ರತೀಕಾರವಾಗಿ ಭಾರತೀಯ ಸೇನೆಯು ‘ಸಿಂಧೂರ’ ಕಾರ್ಯಾಚರಣೆ ನಡೆಸಿ, ಪಾಕಿಸ್ತಾನದಲ್ಲಿದ್ದ ಉಗ್ರರ ನೆಲೆಗಳನ್ನು ಧ್ವಂಸ ಮಾಡಿತು.

ಸಂಕ್ಷಿಪ್ತ ಸುದ್ದಿ

ದೊಡ್ಡ ಬಜೆಟ್ ಸಿನಿಮಾ ಆದಾಯ ಹಂಚಿಕೆಗೆ ಟಿಎಫ್‌ಟಿಸಿ ನಿರ್ಣಯ

ಚೆನ್ನೈ (ಪಿಟಿಐ): ದೊಡ್ಡ ಬಜೆಟ್ ಸಿನಿಮಾಗಳು ಆದಾಯ ಹಂಚಿಕೆ ಆಧಾರದಲ್ಲಿ ನಿರ್ಮಾಣವಾಗಬೇಕು. ಚಿತ್ರದ ಲಾಭ, ನಷ್ಟಗಳೆರಡೂ ನಟರು ಹಾಗೂ ತಂತ್ರಜ್ಞರ ನಡುವೆ ಹಂಚಿಕೆಯಾಗಬೇಕು ಎಂದು ತಮಿಳು ಚಿತ್ರ ನಿರ್ಮಾಪಕರ ಸಂಘವು (ಟಿಎಫ್‌ಟಿಸಿ) ಭಾನುವಾರ ನಿರ್ಧರಿಸಿದೆ.

ಚೆನ್ನೈನಲ್ಲಿ ನಡೆದ ಸಂಘದ ಸಭೆಯಲ್ಲಿ ನಿರ್ಧಾರ ಕೈಗೊಂಡಿದ್ದು, ಈ ಬಗ್ಗೆ ಅದು ಪ್ರಕಟಣೆ ಹೊರಡಿಸಿದೆ.

ಚಿತ್ರಮಂದಿರಗಳಿಂದ ಬರುವ ಆದಾಯ ಕಡಿಮೆಯಾಗುತ್ತಿದೆ. ಒಟಿಟಿ (ಓವರ್ ದಿ ಟಾಪ್) ಹಾಗೂ ಸ್ಯಾಟಲೈಟ್ ವ್ಯವಹಾರಗಳಿಂದಲೂ ದೊಡ್ಡ ಮೊತ್ತ ಬರುತ್ತಿಲ್ಲ. ಹೀಗಾಗಿ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಪ್ರಕಟಣೆ ಹೇಳಿದೆ.

ಚಿತ್ರಮಂದಿರಗಳಿಂದ ಬರುವ ಆದಾಯವನ್ನು ಉಳಿಸಿಕೊಳ್ಳಲು ಒಟಿಟಿಯಲ್ಲಿ ಸಿನಿಮಾಗಳನ್ನು ಬಿಡುಗಡೆ ಮಾಡಲು ಕಾಲಾವಧಿಯನ್ನು ನಿಗದಿಪಡಿಸಲೂ ನಿರ್ಧರಿಸಲಾಗಿದೆ.

ಖ್ಯಾತ ನಟ–ನಟಿಯರು ನಟಿಸಿರುವ ಸಿನಿಮಾಗಳು ಬಿಡುಗಡೆಯಾದ 8 ವಾರಗಳ ನಂತರ ಒಟಿಟಿಯಲ್ಲಿ ಬಿಡುಗಡೆಯಾಗಬೇಕು. ಹಾಗೆಯೇ, ಸಾಧಾರಣ ಜನಪ್ರಿಯತೆ ಇರುವ ನಟ–ನಟಿಯರ ಸಿನಿಮಾಗಳು ತೆರೆಕಂಡ 6 ವಾರಗಳ ನಂತರ ಹಾಗೂ ಕಡಿಮೆ ಬಜೆಟ್ ಸಿನಿಮಾಗಳನ್ನು ಬಿಡುಗಡೆಯಾದ 4 ವಾರಗಳ ನಂತರ ಒಟಿಟಿಯಲ್ಲಿ ಪ್ರಸಾರ ಮಾಡಬೇಕು ಎಂದು ಪ್ರಕಟಣೆ ತಿಳಿಸಿದೆ.

ಶಾಂಘೈ–ದೆಹಲಿ ವಿಮಾನ ಸಂಚಾರ ಪುನರಾರಂಭ

ಬೀಜಿಂಗ್ (ಪಿಟಿಐ): ‘ಚೀನಾ ಈಸ್ಟರ್ನ್ ಏರ್‌ಲೈನ್ಸ್’ ಶಾಂಘೈ–ದೆಹಲಿ ನಡುವಿನ ಸಂಚಾರ ಸೇವೆಯನ್ನು ಭಾನುವಾರದಿಂದ ಪುನರಾರಂಭಿಸಿದ್ದು, ಶೇ 95ಕ್ಕಿಂತ ಹೆಚ್ಚು ಆಸನಗಳು ಭರ್ತಿಯಾಗಿದ್ದವು. ಐದು ವರ್ಷಗಳ ಬಳಿಕ ಭಾರತದ ಜತೆ ನೇರ ವಿಮಾನಯಾನ ಸೇವೆ ಪುನರಾರಂಭಿಸಿದ ಚೀನಾದ ಮೊದಲ ವಿಮಾನಯಾನ ಸಂಸ್ಥೆ ಇದಾಗಿದೆ.

248 ಪ್ರಯಾಣಿಕರನ್ನು ಹೊತ್ತ ಎಂಯು 563 ವಿಮಾನವು ಶಾಂಘೈನ ಪುಡಾಂಗ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ದೆಹಲಿಗೆ ಹೊರಟಿತು ಎಂದು ಸರ್ಕಾರಿ ಸ್ವಾಮ್ಯದ ‘ಗ್ಲೋಬಲ್ ಟೈಮ್ಸ್’ ವರದಿ ಮಾಡಿದೆ.

ಸಿಗದ ಎಸ್‌ಐಆರ್ ಅರ್ಜಿ ಭಯದಿಂದ ಆತ್ಮಹತ್ಯೆಗೆ ಯತ್ನ

ಕೋಲ್ಕತ್ತ (ಪಿಟಿಐ): ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ (ಎಸ್‌ಐಆರ್) ಅರ್ಜಿ ನಮೂನೆ ಸಿಗದ ಕಾರಣ ಭಯಗೊಂಡು ಪಶ್ಚಿಮ ಬಂಗಾಳದ ಹೂಗ್ಲಿ ಜಿಲ್ಲೆಯ 27 ವರ್ಷದ ಮಹಿಳೆಯೊಬ್ಬರು ತಮ್ಮ ಮಗಳೊಂದಿಗೆ ಆತ್ಮಹತ್ಯೆಗೆ ಯತ್ನಿಸಿದ್ದಾರೆ ಎಂದು ಆಕೆಯ ಕುಟುಂಬವು ಆರೋಪಿಸಿದೆ. ‘ಶನಿವಾರ ಆತ್ಮಹತ್ಯೆಗೆ ಯತ್ನಿಸಿದ್ದು, ತಾಯಿ ಮತ್ತು ಮಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಇಬ್ಬರ ದೇಹ ಸ್ಥಿತಿ ಗಂಭೀರವಾಗಿದೆ. ಪ್ರಕರಣದ ಕುರಿತು ತನಿಖೆ ಪ್ರಗತಿಯಲ್ಲಿದೆ’ ಎಂದು ಪೊಲೀಸರು ತಿಳಿಸಿದರು.

ಮಾರ್ಕ್‌ನಲ್ಲಿ ಸುದೀಪ್ ಮಿಂಚು

ನಟ ಸುದೀಪ್ ನಟನೆಯ 47ನೇ ಸಿನಿಮಾ 'ಮಾರ್ಕ್' ಡಿ.25ರಂದು ತೆರೆಕಾಣಲಿದೆ. 'ಮ್ಯಾಕ್ಸ್' ಚಿತ್ರದ ನಿರ್ದೇಶಕ ವಿಜಯ್ ಕಾರ್ತಿಕೇಯ ಆ್ಯಕ್ಷನ್ ಕಟ್ ಹೇಳಿರುವ ಈ ಸಿನಿಮಾದ ಟೀಸರ್ ಬಿಡುಗಡೆಯಾಗಿದ್ದು, 'ಮಾರ್ಕ್' ಆಗಿ ಮಿಂಚಿದ್ದಾರೆ ಸುದೀಪ್.

ಚಿತ್ರದಲ್ಲಿ ಅಜಯ್ ಮಾರ್ಕಂಡೆ ಎಂಬ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ ಸುದೀಪ್. 'ಮಾರ್ಕ್ ಬಗ್ಗೆ ಮಾತನಾಡುವಾಗ ಮನಸ್ಸಿನೊಳಗೆ ಮಾತಾಡ್ಬೇಕು' ಎಂಬ ಡೈಲಾಗ್ ಮೂಲಕ ಅವರ ಪಾತ್ರವನ್ನು ಪರಿಚಯಿಸಿದೆ ಚಿತ್ರತಂಡ.

ಟೀಸರ್ ತುಂಬಾ ಆ್ಯಕ್ಷನ್ ದೃಶ್ಯಗಳೇ ತುಂಬಿಕೊಂಡಿದ್ದು, ಇದು ಇಡೀ ಸಿನಿಮಾ ಹೇಗಿರಲಿದೆ ಎನ್ನುವುದರ ಸುಳಿವು ನೀಡಿದೆ. ಭರ್ಜರಿ ಆ್ಯಕ್ಷನ್ ಮೂಲಕ ಕಿಚ್ಚ ಖದರ್ ತೋರಿಸಿದ್ದು, ಅಭಿಮಾನಿಗಳಲ್ಲಿ ನಿರೀಕ್ಷೆ ಇಮ್ಮಡಿಯಾಗಿದೆ. ಈಗಾಗಲೇ ಸ್ಟೈಲೊ ಸ್ಟೈಲ್ ಹಾಡಿನ ಮೂಲಕ ಸುದೀಪ್ ಅವರ ಪಾತ್ರವನ್ನು ಚಿತ್ರತಂಡ ವಿವರಿಸಿತ್ತು. ತಮಿಳು ನಿರ್ದೇಶಕ ವಿಜಯ್ ಕಾರ್ತಿಕೇಯ ನಿರ್ದೇಶನದ ಈ ಚಿತ್ರದಲ್ಲಿ ಸುದೀಪ್ ಮತ್ತೊಮ್ಮೆ ಪೊಲೀಸ್ ಅಧಿಕಾರಿಯಾಗಿ ಬಣ್ಣ ಹಚ್ಚಿದ್ದಾರೆ. 'ಮ್ಯಾಕ್ಸ್'ನಲ್ಲಿ ಒಂದು ರಾತ್ರಿಯಲ್ಲಿ ನಡೆಯುವ ಕಥೆಯನ್ನು ಹೇಳಿದ್ದ ವಿಜಯ್, ಮತ್ತೊಮ್ಮೆ ಅದೇ ಮಾದರಿಯ ಕಥೆಯನ್ನು ತೆರೆಗೆ ತರಲಿದ್ದಾರೆ. ಈ ಸಿನಿಮಾವೂ ರೋಚಕತೆಯಿಂದ ಕೂಡಿರಲಿದೆ ಎನ್ನುವುದಕ್ಕೆ ಸಾಕ್ಷ್ಯದಂತಿದೆ ಟೀಸರ್. 'ಇದು 'ಮ್ಯಾಕ್ಸ್'–2 ಅಲ್ಲ' ಎನ್ನುವ ಸ್ಪಷ್ಟನೆಯನ್ನು ಈಗಾಗಲೇ ಸುದೀಪ್ ನೀಡಿದ್ದು, 'ಪಾತ್ರದಲ್ಲಿ ಅನಿಮಲ್ ಇನ್‌ಸ್ಟಿಂಕ್ಟ್ ಇದೆ' ಎಂದಿದ್ದರು.

ಸುದೀಪ್ ಮತ್ತು ವಿಜಯ್ ಕಾರ್ತಿಕೇಯ ಕಾಂಬಿನೇಷನ್‌ನಲ್ಲಿ ಬರುತ್ತಿರುವ ಎರಡನೇ ಸಿನಿಮಾ ಇದಾಗಿದ್ದು, 'ಸತ್ಯಜ್ಯೋತಿ ಫಿಲ್ಮ್ಸ್' ಮತ್ತು 'ಕಿಚ್ಚ ಕ್ರಿಯೇಷನ್ಸ್' ಬ್ಯಾನರ್‌ಗಳು ಜೊತೆಯಾಗಿ ಸಿನಿಮಾವನ್ನು ನಿರ್ಮಿಸುತ್ತಿವೆ. ಶೇಖರ್‌ಚಂದ್ರ ಛಾಯಾಚಿತ್ರಗ್ರಹಣ, ಗಣೇಶ್ ಬಾಬು ಸಂಕಲನ ಚಿತ್ರಕ್ಕಿದೆ. ಸ್ಟಂಟ್ ಸಿಲ್ವಾ, ಸುಪ್ರೀಂ ಸುಂದರ್, ವಿಕ್ರಮ್ ಮೋರ್, ಕೆವಿನ್ ಕುಮಾರ್ ಸಾಹಸ ದೃಶ್ಯಗಳನ್ನು ಸಂಯೋಜಿಸಿದ್ದಾರೆ. ಈ ಸಿನಿಮಾದ ಶೂಟಿಂಗ್ ಪೂರ್ಣಗೊಂಡ ಬೆನ್ನಲ್ಲೇ ಸುದೀಪ್ ಮತ್ತೆ 'ಬಿಲ್ಲ ರಂಗ ಬಾಷಾ' ಪ್ರಾಜೆಕ್ಟ್ ಕೈಗೆತ್ತಿಕೊಳ್ಳಲಿದ್ದಾರೆ.


ಸುದೀಪ್

'ರೈ ರೈ ರೈ' ಎಂದ ಮೇಘಾ ಶೆಟ್ಟಿ



ಮೇಘಾ ಶೆಟ್ಟಿ

ಇದೇ ನ.28ಕ್ಕೆ ಕನ್ನಡ, ಮರಾಠಿ ಹಾಗೂ ಹಿಂದಿ ಭಾಷೆಗಳಲ್ಲಿ ಬಿಡುಗಡೆಯಾಗಲಿರುವ 'ಆಪರೇಷನ್ ಲಂಡನ್ ಕೆಫೆ' ಸಿನಿಮಾದ ಹಾಡೊಂದು ಇತ್ತೀಚೆಗೆ ಬಿಡುಗಡೆಯಾಗಿದೆ.


'ಜೊತೆ ಜೊತೆಯಲಿ' ಧಾರಾವಾಹಿ ಮೂಲಕ ಗುರುತಿಸಿಕೊಂಡು, ಬಳಿಕ 'ತ್ರಿಬಲ್ ರೈಡಿಂಗ್', 'ದಿಲ್‌ಪಸಂದ್', 'ಕೈವ' ಸಿನಿಮಾಗಳ ಮೂಲಕ ಚಂದನವನದಲ್ಲಿ ಸದ್ದು ಮಾಡಿದ ನಟಿ ಮೇಘಾ ಶೆಟ್ಟಿ, ಈ ಹಾಡಿನಲ್ಲಿ ಲಂಗದಾವಣಿ ತೊಟ್ಟು ಅಪ್ಪಟ ಹಳ್ಳಿ ಹುಡುಗಿಯಾಗಿ ಕಾಣಿಸಿಕೊಂಡಿದ್ದಾರೆ. 'ರೈ ರೈ ರೈ ಈ ಪ್ರೀತಿ ಶ್ಯಾನೆ ಮಜವಾಗುತ್ತೈತೆ' ಎನ್ನುತ್ತಾ ಮೇಘಾ ಹೆಜ್ಜೆ ಹಾಕಿದ್ದಾರೆ. 'ಜಿಲ್ಕಾ' ಸಿನಿಮಾದಲ್ಲಿ ನಟಿಸಿದ್ದ ಕವೀಶ್ ಶೆಟ್ಟಿ ಈ ಸಿನಿಮಾದಲ್ಲಿ ನಟಿಸಿದ್ದಾರೆ. ಕನ್ನಡ ಮತ್ತು ಮರಾಠಿ ಎರಡೂ ಭಾಷೆಯಲ್ಲಿ ನೇರವಾಗಿ ಚಿತ್ರೀಕರಣಗೊಂಡಿರುವ ಈ ಚಿತ್ರವನ್ನು ಸಡಗರ ರಾಘವೇಂದ್ರ ನಿರ್ದೇಶಿಸಿ ಈ ಹಾಡಿಗೆ ಸಾಹಿತ್ಯವನ್ನೂ ಬರೆದಿದ್ದಾರೆ. ಛಾಯಾಚಿತ್ರಗ್ರಾಹಕ ಆರ್.ಡಿ.ನಾಗಾರ್ಜುನ್ ಹಾಡಿಗೆ ತಕ್ಕ ಹಾಗೆ ಪ್ರಕೃತಿಯ ಸುಂದರ ದೃಶ್ಯಗಳನ್ನು ಕ್ಯಾಮೆರಾದಲ್ಲಿ ಸೆರೆ ಹಿಡಿದಿದ್ದಾರೆ. ಐಶ್ವರ್ಯ ರಂಗರಾಜನ್ ದನಿಯಲ್ಲಿ ಈ ಹಾಡು ಮೂಡಿಬಂದಿದೆ.

'ಇಂಡಿಯನ್ ಫಿಲ್ಮ್ ಫ್ಯಾಕ್ಟರಿ ಮತ್ತು ದೀಪಕ್ ರಾಣೆ ಫಿಲಂಸ್ ಸಂಸ್ಥೆಯಿಂದ ನಿರ್ಮಾಣವಾಗಿರುವ ಈ ಚಿತ್ರವನ್ನು ವಿಜಯ್ ಕುಮಾರ್ ಶೆಟ್ಟಿ, ರಮೇಶ್ ಕೊಠಾರಿ, ದೀಪಕ್ ರಾಣೆ ಮತ್ತು ವಿಜಯ್ ಪ್ರಕಾಶ್ ನಿರ್ಮಾಣ ಮಾಡಿದ್ದಾರೆ.

'ಲವ್ ಕೇಸ್'ಗೆ ಚಾಲನೆ


ವಂಶಿ

"ನಿಷ್ಕಲ್ಮಶವಾದ ಪ್ರೇಮಕಥೆ ಇದಾಗಿದ್ದು, ನ.18ರಿಂದ ನಾನು ಚಿತ್ರೀಕರಣದಲ್ಲಿ ಭಾಗವಹಿಸಲಿದ್ದೇನೆ. ಐದು ತಿಂಗಳೊಳಗಾಗಿ ಈ ಸಿನಿಮಾವನ್ನು ತೆರೆಗೆ ತರುವ ಯೋಜನೆಯಿದೆ.
ಶ್ರೀನಗರ ಕಿಟ್ಟಿ, ನಟ


ಚಿತ್ರದ ಮುಹೂರ್ತ ಸಮಾರಂಭ

ಎಂ.ಬಿ ಕ್ರಿಯೇಷನ್ಸ್ ಬ್ಯಾನರ್‌ನಡಿಯಲ್ಲಿ ಮೋಹನ್ ಬಾಬು ನಿರ್ಮಾಣ ಮಾಡುತ್ತಿರುವ, ಜೈಶ್ ನಿರ್ದೇಶನದ 'ಲವ್ ಕೇಸ್' ಸಿನಿಮಾ ಇತ್ತೀಚೆಗೆ ಸೆಟ್ಟೇರಿತು.

ಶ್ರೀನಗರ ಕಿಟ್ಟಿ, 'ಟಗರುಪಲ್ಯ' ಖ್ಯಾತಿಯ ನಾಗಭೂಷಣ್, ಸಾಯಿಕುಮಾರ್, ಸುಧಾರಾಣಿ, ಪ್ರಮೋದ್ ಶೆಟ್ಟಿ, 'ಮಹಾನಟಿ' ಖ್ಯಾತಿಯ ವಂಶಿ, 'ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ..' ಖ್ಯಾತಿಯ ರಂಜನ್ ಈ ಸಿನಿಮಾದಲ್ಲಿ ಮುಖ್ಯಭೂಮಿಕೆಯಲ್ಲಿದ್ದಾರೆ. 'ಪ್ಯೂರ್ ಲವ್ ಸ್ಟೋರಿ' ಎನ್ನುವ ಅಡಿ ಬರಹವಿರುವ ಈ ಚಿತ್ರಕ್ಕೆ ವಿ.ಹರಿಕೃಷ್ಣ ಅವರ ಪುತ್ರ ಆದಿ ಹರಿಕೃಷ್ಣ ಸಂಗೀತ ಸಂಯೋಜಿಸುತ್ತಿದ್ದಾರೆ. ಮಾಸ್ತಿ ಸಂಭಾಷಣೆ 'ಲವ್ ಕೇಸ್' ಚಿತ್ರಕ್ಕಿದ್ದು, ಕೆ.ಎಸ್ ಚಂದ್ರಶೇಖರ್ ಛಾಯಾಚಿತ್ರಗ್ರಹಣ, ಅನುಕೃಷ್ಣ ಸಂಕಲನ ಚಿತ್ರಕ್ಕಿದೆ.

ಜೀ ಕನ್ನಡದಲ್ಲಿ ಆರು ವರ್ಷ ರಿಯಾಲಿಟಿ ಶೋಗಳಲ್ಲಿ ಕೆಲಸ ಮಾಡಿದ ಅನುಭವವಿರುವ ಜೈಶ್ ನಿರ್ದೇಶನದ ಚೊಚ್ಚಲ ಸಿನಿಮಾವಿದು. ಈ ಸಿನಿಮಾ ಮೂಲಕ ವಂಶಿ ಚಿತ್ರರಂಗಕ್ಕೆ ಕಾಲಿಡುತ್ತಿದ್ದು, ನಟ ಪ್ರಮೋದ್ ಶೆಟ್ಟಿ ಈ ಸಿನಿಮಾದಲ್ಲಿ ವಕೀಲನ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ಶ್ರೇಯಸ್ ಆಲ್‌ರೌಂಡ್ ಆಟದ ಸೊಬಗು

ರಣಜಿ ಟ್ರೋಫಿ: ಪೃಥ್ವಿ ಶಾ ಅರ್ಧಶತಕ • ಇನಿಂಗ್ಸ್ ಮುನ್ನಡೆಯತ್ತ ಕರ್ನಾಟಕ ಹೆಜ್ಜೆ

ಪ್ರಜಾವಾಣಿ ವಾರ್ತೆ


ಕರ್ನಾಟಕ ತಂಡದ ಅಭಿನವ್ ಮನೋಹರ್

ಪುಣೆ: ಶ್ರೇಯಸ್ ಗೋಪಾಲ್ ಆಲ್‌ರೌಂಡ್ ಆಟದ ಬಲದಿಂದ ಕರ್ನಾಟಕ ತಂಡವು ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಮಹಾರಾಷ್ಟ್ರದ ಎದುರು ಇನಿಂಗ್ಸ್ ಮುನ್ನಡೆಯ ಸನಿಹಕ್ಕೆ ಬಂದು ನಿಂತಿದೆ.

ಎಂ.ಸಿ.ಎ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಎಲೀಟ್ ಬಿ ಗುಂಪಿನ ಪಂದ್ಯದಲ್ಲಿ ಶ್ರೇಯಸ್ (71; 162ಎ, 4X9) ಅರ್ಧಶತಕದ ಬಲದಿಂದ ಕರ್ನಾಟಕವು 313 ರನ್ ಗಳಿಸಿತು. ಇದಕ್ಕುತ್ತರವಾಗಿ ಬ್ಯಾಟಿಂಗ್ ಆರಂಭಿಸಿದ ಮಹಾರಾಷ್ಟ್ರ ತಂಡಕ್ಕೆ ಮತ್ತೆ ಶ್ರೇಯಸ್ (23-3-46-4) ಅವರೇ ಬಿಸಿ ಮುಟ್ಟಿಸಿದರು. ಇದರಿಂದಾಗಿ ಆತಿಥೇಯ ತಂಡವು ದಿನದಾಟದ ಮುಕ್ತಾಯಕ್ಕೆ 66 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 200 ರನ್ ಗಳಿಸಿತು. ಜಲಜ್ ಸಕ್ಸೆನಾ (ಬ್ಯಾಟಿಂಗ್ 34) ಮತ್ತು ವಿಕ್ಕಿ ಓಸ್ವಾಲ್ (ಬ್ಯಾಟಿಂಗ್ 4) ಕ್ರೀಸ್‌ನಲ್ಲಿದ್ದಾರೆ.

ಪಂದ್ಯದ ಮೊದಲ ದಿನವಾದ ಶನಿವಾರ ಕರ್ನಾಟಕ ತಂಡವು ಮಯಂಕ್ ಅಗರವಾಲ್ ಮತ್ತು ಆರ್. ಸ್ಮರಣ್ ಅವರ ಅರ್ಧಶತಕಗಳ ಬಲದಿಂದ 5 ವಿಕೆಟ್‌ಗಳಿಗೆ 257 ರನ್ ಗಳಿಸಿತ್ತು. ಕ್ರೀಸ್‌ನಲ್ಲಿದ್ದ ಶ್ರೇಯಸ್ (32 ರನ್) ಮತ್ತು ಅಭಿನವ್ ಮನೋಹರ್ (31 ರನ್) ಭಾನುವಾರ ಬ್ಯಾಟಿಂಗ್ ಮುಂದುವರಿಸಿದರು. ಅಭಿನವ್ (47; 129ಎ, 4X3, 6X2) ಅರ್ಧಶತಕದ ಸನಿಹದಲ್ಲಿದ್ದಾಗ ಮುಕೇಶ್ ಚೌಧರಿ ಎಸೆತದಲ್ಲಿ ಕ್ಲೀನ್‌ಬೌಲ್ಡ್ ಆದರು. ಏಕಾಂಗಿ ಹೋರಾಟ ತೋರಿದ ಶ್ರೇಯಸ್ ಟೂರ್ನಿಯಲ್ಲಿ ಮೂರನೇ ಅರ್ಧ ಶತಕ ದಾಖಲಿಸಿದರು. ವಿಕ್ಕಿ ಓಸ್ವಾಲ್ ಬೌಲಿಂಗ್‌ನಲ್ಲಿ ದಾಸ್ ಪಡೆದ ಕ್ಯಾಚ್‌ಗೆ ಶ್ರೇಯಸ್ ಮತ್ತು ಕರ್ನಾಟಕದ ಇನಿಂಗ್ಸ್‌ಗೆ ತೆರೆಬಿತ್ತು.

ಮಹಾರಾಷ್ಟ್ರ ತಂಡಕ್ಕೆ ಪೃಥ್ವಿ ಶಾ (71; 92ಎಸೆತ, 4X9) ಮತ್ತು ಅರ್ಷಿನ್ ಕುಲಕರ್ಣಿ (34; 48ಎ) ಅವರು ಉತ್ತಮ ಅರಂಭ ನೀಡಿದರು. ಮೊದಲ ವಿಕೆಟ್ ಜೊತೆಯಾಟದಲ್ಲಿ 98 ರನ್ ಸೇರಿಸಿದರು. 19ನೇ ಓವರ್‌ನಲ್ಲಿ ಶ್ರೇಯಸ್ ಎಸೆತವನ್ನು ಹೊಡೆಯುವ ಯತ್ನದಲ್ಲಿ ವಿಫಲರಾದ ಕುಲಕರ್ಣಿ ಅವರನ್ನು ಕೆ.ಎಲ್. ಶ್ರೀಜಿತ್ ಸ್ಟಂಪಿಂಗ್ ಮಾಡಿದರು. ತಮ್ಮ ಇನ್ನೊಂದು ಓವರ್‌ನಲ್ಲಿ ಶ್ರೇಯಸ್ ಅವರು ಸಿದ್ದೇಶ್ ವೀರ್ ಅವರನ್ನು ಪೆವಿಲಿಯನ್‌ಗೆ ಕಳಿಸಿದರು. ನಾಯಕ ಅಂಕಿತ್ ಭಾವ್ನೆ (6) ಹಾಗೂ ಸೌರಭ್ ನವಲೆ (26; 98ಎ) ಅವರ ವಿಕೆಟ್ ಕೂಡ ಶ್ರೇಯಸ್ ಪಾಲಾದವು. ಪೃಥ್ವಿ ಶಾ ಮತ್ತು ದಾಸ್ ಅವರ ವಿಕೆಟ್ ಕಬಳಿಸುವಲ್ಲಿ ಮೊಹ್ಸಿನ್ ಖಾನ್ ಸಫಲರಾದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಕರ್ನಾಟಕ: 111 ಓವರ್‌ಗಳಲ್ಲಿ 313 (ಆರ್. ಸ್ಮರಣ್ 54, ಅಭಿನವ್ ಮನೋಹರ್ 47, ಶ್ರೇಯಸ್ ಗೋಪಾಲ್ 71, ಎಂ.ಜಿ. ಚೌಧರಿ 66ಕ್ಕೆ3, ವಿಕಿ ಓಸ್ವಾಲ್ 53ಕ್ಕೆ2, ಜಲಜ್ ಸಕ್ಸೆನಾ 94ಕ್ಕೆ4) ಮಹಾರಾಷ್ಟ್ರ: 66 ಓವರ್‌ಗಳಲ್ಲಿ 6ಕ್ಕೆ200 (ಪೃಥ್ವಿ ಶಾ 71, ಅರ್ಷಿನ್ ಕುಲಕರ್ಣಿ 34, ಸಚಿನ್ ದಾಸ್ 21, ಸೌರಭ್ ನವಲೆ 26, ಜಲಜ್ ಸಕ್ಸೆನಾ ಔಟಾಗದೇ 34, ವಿಕಿ ಓಸ್ವಾಲ್ ಔಟಾಗದೇ 4, ಶ್ರೇಯಸ್ ಗೋಪಾಲ್ 46ಕ್ಕೆ4, ಮೊಹ್ಸಿನ್ ಖಾನ್ 56ಕ್ಕೆ2)

ಆಕಾಶ್ ಸತತ ಎಂಟು ಸಿಕ್ಸರ್ ದಾಖಲೆ

ಸೂರತ್ (ಪಿಟಿಐ): ಮೇಘಾಲಯ ತಂಡದ ಆಕಾಶ್ ಕುಮಾರ್ ಸತತ ಎಂಟು ಸಿಕ್ಸರ್‌ಗಳನ್ನು ಹೊಡೆದು ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ದಾಖಲೆ ಬರೆದರು. ಅಷ್ಟೇ ಅಲ್ಲ; 11 ಎಸೆತಗಳಲ್ಲಿ ಅರ್ಧಶತಕ ಗಳಿಸಿ 'ಶರವೇಗದ ಸರದಾರ'ನಾದರು.



ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಪ್ಲೇಟ್ ಗುಂಪಿನಲ್ಲಿ ನಡೆದ ಅರುಣಾಚಲ ಪ್ರದೇಶ ಎದುರು ನಡೆದ ಪಂದ್ಯದಲ್ಲಿ ಅವರು ಈ ಸಾಧನೆ ಮಾಡಿದರು. ಎಂಟನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಿದ 25 ವರ್ಷದ ಚೌಧರಿ ಅವರು ಪಂದ್ಯದ ಎರಡನೇ ದಿನದಾಟದಲ್ಲಿ ಈ ಸಾಧನೆ ಮಾಡಿದರು. ಮೇಘಾಲಯ ತಂಡವು ಮೊದಲ ಇನಿಂಗ್ಸ್‌ನಲ್ಲಿ 6 ವಿಕೆಟ್‌ಗಳಿಗೆ 628 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು.

2012ರಲ್ಲಿ ಲಿಸ್ಟರ್‌ಶೈರ್ ತಂಡದ ವೇಯ್ನ್ ವೈಟ್ ಅವರು ಎಸ್ಸೆಕ್ಸ್ ತಂಡದ ವಿರುದ್ಧ 12 ಎಸೆತಗಳಲ್ಲಿ ಅರ್ಧಶತಕ ಗಳಿಸಿದ್ದು ಇದುವರೆಗಿನ ದಾಖಲೆಯಾಗಿತ್ತು.

ಪ್ರಥಮ ದರ್ಜೆ ಕ್ರಿಕೆಟ್ ನಲ್ಲಿ ಸತತ ಆರು ಸಿಕ್ಸರ್ ಹೊಡೆದ ಮೂರನೇ ಆಟಗಾರನೆಂಬ ಹೆಗ್ಗಳಿಕೆಯೂ ಅವರದ್ದಾಯಿತು. ವೆಸ್ಟ್ ಇಂಡೀಸ್‌ನ ಸರ್ ಗ್ಯಾರ್‌ಫೀಲ್ಡ್ ಸೋಬರ್ಸ್ ಮತ್ತು ಭಾರತದ ರವಿಶಾಸ್ತ್ರಿ ಈ ಮೊದಲು ಇಂತಹ ದಾಖಲೆ ಬರೆದಿದ್ದರು.

ಚೌಧರಿ ಅವರು ಕ್ರೀಸ್‌ಗೆ ಬಂದು ಎದುರಿಸಿದ ಮೊದಲ ಎಸೆತವು ಡಾಟ್ ಆಗಿತ್ತು. ನಂತರ ಎರಡು ಸಿಂಗಲ್ಸ್ ಗಳಿಸಿದರು. ಬಲಗೈ ಬ್ಯಾಟರ್ ಚೌಧರಿ ಅವರು ಲಿಮರ್ ದಾಬಿ ಅವರು ಹಾಕಿದ 126ನೇ ಓವರ್‌ನ ಎಲ್ಲ ಎಸೆತಗಳಲ್ಲಿಯೂ ಸಿಕ್ಸರ್ ಹೊಡೆದರು. ಇನ್ನೊಂದು ಓವರ್‌ನಲ್ಲಿ ಮತ್ತೆ ತಾವು ಕ್ರೀಸ್‌ಗೆ ಬಂದಾಗ ಎದುರಿಸಿದ ಎರಡು ಎಸೆತಗಳನ್ನು ಬೌಂಡರಿ ಹಗ್ಗದಾಚೆ ಕಳಿಸಿದರು. ತಮ್ಮ 31ನೇ ಪ್ರಥಮ ದರ್ಜೆ ಪಂದ್ಯ ಆಡುತ್ತಿರುವ ಆಕಾಶ್ ಹೊಸ ದಾಖಲೆ ಮಾಡಿದರು.

ಇನಿಂಗ್ಸ್ ಆರಂಭಿಸಿರುವ ಅರುಣಾಚಲ ತಂಡವು ಮೊದಲ ಇನಿಂಗ್ಸ್‌ನಲ್ಲಿ 73 ರನ್‌ಗಳಿಗೆ ಆಲೌಟ್ ಆಯಿತು. ಫಾಲೋ ಆನ್ ಪಡೆದು ಎರಡನೇ ಇನಿಂಗ್ಸ್‌ನಲ್ಲಿ 29 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡಿದೆ.

ಕ್ವೀನ್ಸ್ ಪ್ರೀಮಿಯರ್ ಲೀಗ್ ಎರಡನೇ ಆವೃತ್ತಿ ಇಂದಿನಿಂದ

ಬೆಂಗಳೂರು: ಕೆಎನ್‌ಎಸ್ ಇನ್‌ಫ್ರಾ ಪ್ರಸ್ತುತಪಡಿಸುತ್ತಿರುವ ಕ್ವೀನ್ಸ್ ಪ್ರೀಮಿಯರ್ ಲೀಗ್ 2 (ಕ್ಯೂಪಿಎಲ್) ಕ್ರೀಡೋತ್ಸವ ಸೋಮವಾರ ಆರಂಭವಾಗಲಿದೆ. ಎಂಕೆಜೆ ಎಂಟರ್‌ಟೇನ್‌ಮೆಂಟ್ ಆಯೋಜಿಸುತ್ತಿರುವ ಕ್ಯೂಪಿಎಲ್‌ನಲ್ಲಿ ಸೆಲೆಬ್ರಿಟಿ ನಾಯಕಿಯರೊಂದಿಗೆ 10 ತಂಡ ಭಾಗವಹಿಸಲಿವೆ.

ನವೆಂಬರ್ 10ರಂದು ಸೆಂಟ್ರಲ್ ಕಾಲೇಜಿನ ಬೇಸ್ ಕ್ಯಾಂಪ್‌ನಲ್ಲಿ, 11ರಂದು ಮಾರತ್ತಹಳ್ಳಿಯ ಇ–ಝೋನ್‌ನಲ್ಲಿ ಪೂರ್ವಭಾವಿ ಸುತ್ತುಗಳೊಂದಿಗೆ ಈ ಲೀಗ್ ಆರಂಭವಾಗಲಿದೆ. ನ.12 ರಿಂದ 15ರವರೆಗೆ ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ಮುಖ್ಯ ಸುತ್ತಿನ ಲೀಗ್ ನಡೆಯಲಿದೆ. ಸಾರ್ವಜನಿಕರಿಗೆ ಪ್ರವೇಶ ಉಚಿತವಾಗಿದ್ದು ನೆಚ್ಚಿನ ಸಿನಿ ತಾರೆಯನ್ನು ಹುರಿದುಂಬಿಸಲು ಅವಕಾಶವಿದೆ ಎಂದು ಪ್ರಕಟಣೆ ತಿಳಿಸಿದೆ. 12 ವಿವಿಧ ಆಟಗಳಿವೆ.

ಎರಡನೇ ಆವೃತ್ತಿಗೆ ಸಿನಿಮಾ ತಾರೆ ರಮ್ಯಾ ಪ್ರಚಾರ ರಾಯಭಾರಿಯಾಗಿದ್ದಾರೆ. ಮಹೇಶ್ ಕುಮಾರ್ ಈ ಲೀಗ್ ಸ್ಥಾಪಿಸಿದ್ದು, ಪ್ರಮೋದ್ ಶೆಟ್ಟಿ, ಚೇತನ್ ಪಾರೀಕ್, ಸಂತೋಷ್ ಬಿಲ್ಲವ ಮತ್ತು ಪ್ರೇಮ್ ಸಾಗರ್ ಸಹ ಸ್ಥಾಪಕರಾಗಿದ್ದಾರೆ. ಕ್ರೀಡೆಯಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ಆಚರಿಸುವುದು ಇದರ ಉದ್ದೇಶವಾಗಿದೆ.

ಪಾಲ್ಗೊಳ್ಳುವ ತಂಡಗಳು: ಚಿತ್ರದುರ್ಗ ಕ್ವೀನ್ಸ್ (ಸ್ಟಾರ್ ಕ್ಯಾಪ್ಟನ್: ರಾಧಿಕಾ ನಾರಾಯಣ್), ಶಿವಮೊಗ್ಗ ಕ್ವೀನ್ಸ್ (ಸ್ಟಾರ್ ಕ್ಯಾಪ್ಟನ್: ಭಾವನಾ ರಾವ್), ಮಂಗಳೂರು ಕ್ವೀನ್ಸ್ (ಸ್ಟಾರ್ ಕ್ಯಾಪ್ಟನ್: ಪಾರ್ವತಿ ನಾಯರ್), ಬೆಳಗಾವಿ ಕ್ವೀನ್ಸ್ (ಸ್ಟಾರ್ ಕ್ಯಾಪ್ಟನ್: ನಿಧಿ ಸುಬ್ಬಯ್ಯ), ಮೈಸೂರು ಕ್ವೀನ್ಸ್ (ಸ್ಟಾರ್ ಕ್ಯಾಪ್ಟನ್: ರಚನಾ ಇಂದರ್), ಹುಬ್ಬಳ್ಳಿ ಕ್ವೀನ್ಸ್ (ಸ್ಟಾರ್ ಕ್ಯಾಪ್ಟನ್: ನೇಹಾ ಸಕ್ಸೇನಾ).

ಬಳ್ಳಾರಿ ಕ್ವೀನ್ಸ್ (ಸ್ಟಾರ್ ಕ್ಯಾಪ್ಟನ್: ಧನ್ಯಾ ರಾಮಕುಮಾರ್), ಬೆಂಗಳೂರು ಕ್ವೀನ್ಸ್ (ಸ್ಟಾರ್ ಕ್ಯಾಪ್ಟನ್: ಸಪ್ತಮಿ ಗೌಡ), ಹಾಸನ ಕ್ವೀನ್ಸ್ (ಸ್ಟಾರ್ ಕ್ಯಾಪ್ಟನ್: ಶಾನ್ವಿ ಶ್ರೀವಾಸ್ತವ), ಕೋಲಾರ ಕ್ವೀನ್ಸ್ (ಸ್ಟಾರ್ ಕ್ಯಾಪ್ಟನ್: ಆಶಾ ಭಟ್).


ಎರಡನೇ ಆವೃತ್ತಿಯ ಕ್ವೀನ್ಸ್ ಪ್ರೀಮಿಯರ್ ಲೀಗ್‌ನ ಟ್ರೋಫಿ ಅನಾವರಣ ಕಾರ್ಯಕ್ರಮ ಭಾನುವಾರ ನಡೆಯಿತು. ನಟಿಯರು ಪಾಲ್ಗೊಂಡಿದ್ದರು

ಶೂಟಿಂಗ್ ವಿಶ್ವಕಪ್: ಅನೀಶ್‌ಗೆ ಬೆಳ್ಳಿ

ಕೈರೊ (ಪಿಟಿಐ): ಭಾರತದ ಅನೀಶ್ ಭಾನವಾಲಾ ಅವರು ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ವಿಶ್ವ ಶೂಟಿಂಗ್ ಚಾಂಪಿಯನ್‌ಷಿಪ್‌ನ ಪುರುಷರ 25 ಮೀ. ರ‍್ಯಾಪಿಡ್ ಫೈಯರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಭಾನುವಾರ ಬೆಳ್ಳಿ ಪದಕ ಜಯಿಸಿದರು.

23 ವರ್ಷ ವಯಸ್ಸಿನ ಹರಿಯಾಣದ ಶೂಟರ್ ಫೈನಲ್ ಸುತ್ತಿನಲ್ಲಿ 28 ಪಾಯಿಂಟ್ಸ್ ಕಲೆಹಾಕಿದರು. ಫ್ರಾನ್ಸ್‌ನ ಕ್ಲೆಮೆಂಟ್ ಬೆಸಾಗೆಟ್ (31) ಸ್ವರ್ಣ ಗೆದ್ದರೆ, ಉಕ್ರೇನ್‌ನ ಮಾಕ್ಸಿಮ್ ಹರೊಡಿನೆಟ್ಸ್ (25) ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಮ್ಯಾರಥಾನ್: ನಜೀಂ, ಶ್ರೇಯಾ ಚಾಂಪಿಯನ್

ಮಂಗಳೂರು: ತಮಿಳುನಾಡಿನ ನಜೀಮ್ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಶ್ರೇಯಾ ಎಂ. ಅವರು ನಗರದಲ್ಲಿ ಭಾನುವಾರ ನಡೆದ ಮಂಗಳೂರು ಮ್ಯಾರಥಾನ್‌ನಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವಿಭಾಗದ ಚಾಂಪಿಯನ್ ಆದರು. ಮಂಗಳೂರು ರನ್ನರ್ಸ್ ಕ್ಲಬ್ ಆಯೋಜಿಸಿದ್ದ ಸ್ಪರ್ಧೆಯ ಫುಲ್ ಮ್ಯಾರಥಾನ್‌ನಲ್ಲಿ ನಜೀಮ್ 2 ಗಂಟೆ 42 ನಿ. 15 ಸೆ.ಗಳಲ್ಲಿ ಹಾಗೂ ಮಹಿಳೆಯರ ವಿಭಾಗದಲ್ಲಿ ಶ್ರೇಯಾ 3 ಗಂಟೆ 22:08 ನಿಮಿಷಗಳಲ್ಲಿ ಗುರಿ ಮುಟ್ಟಿದರು.

ಫಲಿತಾಂಶಗಳು: ಪುರುಷರು: ಫುಲ್ ಮ್ಯಾರಥಾನ್: ನಜೀಮ್–1. ಕಾಲ: 2:42:15, ಮನೋಜ್ ರಾಣೆ (ಮುಂಬೈ)–2, ಪಂಡ್ರು ರಾಮ್ (ಜಗದಾಳಪುರ್)–3; ಹಾಫ್ ಮ್ಯಾರಥಾನ್: ಸಿದ್ದೇಶ್ ಪಾಂಡುರಂಗ–1. ಕಾಲ: 1:08:44, ಗುರ್ಮೇಸಾ ನಿಗೂಸೆ–2, ಶಿವಾನಂದ ಚಿಗರಿ–3; 32 ಕಿ.ಮೀ: ಕಾರ್ತಿಕ್ ಕರ್ಕೇರ–1. ಕಾಲ: 1:45:46, ಸಚಿನ್ ಪೂಜಾರಿ–2, ಪ್ರಥಮೇಶ್–3; 10ಕೆ: ಶ್ರೀಧರ–1. ಕಾಲ: 32 ನಿ.22ಸೆ., ರಂಗಣ್ಣ–2, ರಮೇಶ್ ತಲಕೇರಿ–3. ಮಹಿಳೆಯರು: ಫುಲ್ ಮ್ಯಾರಥಾನ್: ಶ್ರೇಯಾ ಎಂ (ಸುಳ್ಯ)–1. ಕಾಲ: 3:22:08, ಫಾಲೇಶ್ವರಿ (ಸುಜಾಪುರ್)–2, ಬಿಜೋಯ ಬರ್ಮನ್ (ಬೆಂಗಳೂರು)–3. ಹಾಫ್ ಮ್ಯಾರಥಾನ್: ಲೆಸಾರ್ಗೆ ಕೆನಯ್ಟ್–1. ಕಾಲ: 1:28:30, ನಂದಿನಿ ಜಿ–2, ಸಾಕ್ಷಿ–3; 32 ಕಿಮೀ: ಕವಿತಾ ರೆಡ್ಡಿ–1. ಕಾಲ: 2:52:31, ವಾಣಿ–2; 10ಕೆ: ಸೌಮ್ಯಾ–1. ಕಾಲ: 43ನಿ 23ಸೆ, ರಶೀನಾ–2, ಪ್ರಜ್ಞಾ ಪ್ರಸಾದ್–3.

ಹಮ್ಜಾ, ಕಾನರ್ ಬೀಸಾಟ • ಪಂತ್ ಬಳಗಕ್ಕೆ ಆಘಾತ

ದಕ್ಷಿಣ ಆಫ್ರಿಕಾ 'ಎ' ತಂಡಕ್ಕೆ 'ದೊಡ್ಡ' ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಿಷಭ್ ಪಂತ್ ನಾಯಕತ್ವದ ಭಾರತ ಎ ತಂಡಕ್ಕೆ ಭಾನುವಾರ ಮುಕ್ತಾಯವಾದ 'ಟೆಸ್ಟ್'ನಲ್ಲಿ ದಕ್ಷಿಣ ಆಫ್ರಿಕಾ ಎ ತಂಡದ ಬ್ಯಾಟರ್‌ಗಳು ಆಘಾತ ನೀಡಿದರು.

417 ರನ್‌ಗಳ ಗುರಿಯನ್ನು ಶಿಸ್ತುಬದ್ಧ ಆಟದ ಮೂಲಕ ಸಾಧಿಸಿದ ಪ್ರವಾಸಿ ಬಳಗವು ಜಯದ ಕೇಕೆ ಹಾಕಿತು. ಬಿಸಿಸಿಐ ಶ್ರೇಷ್ಠತಾ ಕೇಂದ್ರದ ಕ್ರೀಡಾಂಗಣದಲ್ಲಿ ನಡೆದ ಪಂದ್ಯದ ಕೊನೆ ದಿನದಾಟದಲ್ಲಿ ಕಾನರ್ ಎಸ್ತರಹುಯ್ಜೇನ್ (ಔಟಾಗದೇ 52; 54ಎ, 4X8, 6X1) ಮತ್ತು ಟಿಯಾನ್ ವ್ಯಾನ್ ವುರೆನ್ (ಔಟಾಗದೇ 20) ಅವರ ಜೊತೆಯಾಟದಿಂದ ದಕ್ಷಿಣ ಆಫ್ರಿಕಾ ಎ ತಂಡ ಜಯಿಸಿತು. ಪಂದ್ಯ ಸಂಜೆ 5.24ಕ್ಕೆ ಮುಕ್ತಾಯವಾಯಿತು.

ಪಂದ್ಯದ ಮೂರನೇ ದಿನವಾದ ಶನಿವಾರ ಭಾರತ ಎ ತಂಡವು ಎರಡನೇ ಇನಿಂಗ್ಸ್‌ನಲ್ಲಿ 7ವಿಕೆಟ್‌ಗಳಿಗೆ 382 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತ್ತು. ಒಟ್ಟು 416 ರನ್‌ಗಳ ಮುನ್ನಡೆ ಪಡೆದಿದ್ದ ರಿಷಭ್ ಪಂತ್ ಬಳಗವು ಅಪಾರ ಆತ್ಮವಿಶ್ವಾಸದಲ್ಲಿತ್ತು. ಗುರಿ ಬೆನ್ನಟ್ಟಿದ್ದ ಪ್ರವಾಸಿ ಬಳಗವು ವಿಕೆಟ್ ನಷ್ಟವಿಲ್ಲದೇ 24 ರನ್ ಗಳಿಸಿ ದಿನದಾಟ ಮುಗಿಸಿತ್ತು.

ಕೊನೆಯ ದಿನದಾಟದಲ್ಲಿ ದಕ್ಷಿಣ ಅಫ್ರಿಕಾ ಎ ಮುಂದೆ 392 ರನ್‌ಗಳನ್ನು ಗಳಿಸಿ ಗೆಲ್ಲುವ ಅಥವಾ 90 ಓವರ್‌ಗಳನ್ನು ಆಡಿ ಡ್ರಾ ಮಾಡಿಕೊಳ್ಳುವ ಸವಾಲು ಇತ್ತು. ಇನ್ನೊಂದೆಡೆ ಒಂದಿಡೀ ದಿನದಲ್ಲಿ 10 ವಿಕೆಟ್ ಉರುಳಿಸಿ ಜಯದ ಸಂಭ್ರಮ ಆಚರಿಸುವ ಹುಮ್ಮಸ್ಸು ಪಂತ್ ಬಳಗಕ್ಕೆ ಇತ್ತು. ಆದರೆ ಜೋರ್ಡಾನ್ ಹರ್ಮನ್ ಮತ್ತು ಲೆಸೆಗೊ ಸೆನೊಕವಾನೆ ಭಾನುವಾರ ಬೆಳಿಗ್ಗೆ ಮೊದಲ ವಿಕೆಟ್ ಜೊತೆಯಾಟದಲ್ಲಿ 156 ರನ್ ಸೇರಿಸುವ ಮೂಲಕ ತಮ್ಮ ತಂಡ ಗೆಲುವಿಗಾಗಿ ಆಡಲಿದೆ ಎಂಬ ಸಂದೇಶ ರವಾನಿಸಿದರು. ಇವರಿಬ್ಬರೂ 43 ಓವರ್ ಆಡಿದರು. ಈ ಅಡಿಪಾಯದ ಮೇಲೆ, ನಂತರ ಬಂದ ಬ್ಯಾಟರ್‌ಗಳು ಗೆಲುವಿನ ಸೌಧ ಕಟ್ಟಿದರು.

ಜುಬೇರ್ ಹಮ್ಜಾ (77; 88ಎ, 4X9, 6X3) ಮತ್ತು ತೆಂಬಾ ಬವುಮಾ (59; 101ಎ, 4X7) ಮೂರನೇ ವಿಕೆಟ್ ಜೊತೆಯಾಟದಲ್ಲಿ 107 ರನ್ ಸೇರಿಸಿದರು. ಜುಬೇರ್ ಅವರು ಕುಲದೀಪ್ ಯಾದವ್ ಮತ್ತು ಹರ್ಷ ದುಬೆಯವರ ದಾಳಿಯನ್ನು ಪುಡಿ ಗಟ್ಟಿದರು. ನಾಯಕ ಏಕರ್ಮನ್ ಜೊತೆಗೆ ಬವುಮಾ 37 ರನ್ ಸೇರಿಸಿ, ಹೋರಾಟವನ್ನು ಜೀವಂತವಾಗಿಟ್ಟರು. ಆರನೇ ವಿಕೆಟ್ ಜೊತೆಯಾಟದಲ್ಲಿ ಕಾನರ್ ಮತ್ತು ಟಿಯಾನ್ 65 ರನ್ ಸೇರಿಸಿ ಗೆಲುವಿನತ್ತ ದಿಟ್ಟ ಹೆಜ್ಜೆ ಇಟ್ಟರು.


ಆಫ್ರಿಕಾ 'ಎ' ತಂಡದ ಜುಬೇರ್ ಹಮ್ಜಾ ಹಾಗೂ ತೆಂಬಾ ಬವುಮಾ ಜೊತೆಯಾಟ ಚಿತ್ರ: ಕೃಷ್ಣ ಕುಮಾರ್ ಪಿ.ಎಸ್

ಭಾರತ ಟೆಸ್ಟ್ ತಂಡದಲ್ಲಿ ಹಲವು ಪಂದ್ಯಗಳನ್ನು ಆಡಿರುವ ನಾಲ್ವರು ಅನುಭವಿ ಬೌಲರ್‌ಗಳ ತಂತ್ರಗಳು ಫಲಿಸಲಿಲ್ಲ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಭಾರತ ಎ–255. ದಕ್ಷಿಣ ಆಫ್ರಿಕಾ ಎ: 221; ಎರಡನೇ ಇನಿಂಗ್ಸ್: ಭಾರತ ಎ: 89.2 ಓವರ್‌ಗಳಲ್ಲಿ 7ಕ್ಕೆ382 ಡಿಕ್ಲೇರ್ಡ್. ದಕ್ಷಿಣ ಆಫ್ರಿಕಾ ಎ: 98 ಓವರ್‌ಗಳಲ್ಲಿ 5ಕ್ಕೆ417 (ಜೋರ್ಡಾನ್ ಹರ್ಮನ್ 91, ಲೆಸೆಗೊ ಸೆಂಕೊವಾನೆ 77, ಜುಬೇರ್ ಹಮ್ಜಾ 77, ತೆಂಬಾ ಬವುಮಾ 59, ಕಾನರ್ ಎಸ್ತರಹುಯ್ಜೇನ್ 52, ಟಿಯಾನ್ ವ್ಯಾನ್ ವುರೆನ್ ಔಟಾಗದೇ 20, ಪ್ರಸಿದ್ಧಕೃಷ್ಣ 49ಕ್ಕೆ2) ಫಲಿತಾಂಶ: ದಕ್ಷಿಣ ಆಫ್ರಿಕಾ ಎ ತಂಡಕ್ಕೆ 5 ವಿಕೆಟ್ ಜಯ.

ಚಿಟಿಕೆ ಸುದ್ದಿ

ದಾವಣಗೆರೆ, ಉತ್ತರ ಕನ್ನಡಕ್ಕೆ ಸಮಗ್ರ ಪ್ರಶಸ್ತಿ

ಮರಿಯಮ್ಮನಹಳ್ಳಿ (ವಿಜಯನಗರ ಜಿಲ್ಲೆ): ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ನಡೆದ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ 14 ಮತ್ತು 17ವರ್ಷ ವಯೋಮಿತಿಯ ರಾಜ್ಯಮಟ್ಟದ ಕುಸ್ತಿ ಟೂರ್ನಿಯಲ್ಲಿ ದಾವಣಗೆರೆ, ಉತ್ತರ ಕನ್ನಡ ಜಿಲ್ಲೆಗಳು ಕ್ರಮವಾಗಿ ಬಾಲಕ, ಬಾಲಕಿಯರ ವಿಭಾಗದಲ್ಲಿ ಸಮಗ್ರ ಪ್ರಶಸ್ತಿ ಪಡೆದವು. ಟೂರ್ನಿಯು ಭಾನುವಾರ ಸಂಪನ್ನಗೊಂಡಿತು.

ಬಾಲಕರ ವಿಭಾಗದಲ್ಲಿ ದಾವಣಗೆರೆ ಜಿಲ್ಲೆಯ 19 ವಿದ್ಯಾರ್ಥಿಗಳು ವಿವಿಧ ವಿಭಾಗಗಳಲ್ಲಿ ಪದಕಗಳನ್ನು ಪಡೆದರೆ, ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದ 15 ಬಾಲಕಿಯರು ವಿವಿಧ ಪದಕಗಳನ್ನು ಗೆದ್ದುಕೊಂಡರು.

ಅಮರ್, ಬಸವರಾಜಗೆ 'ಡಬಲ್ಸ್' ಪ್ರಶಸ್ತಿ



ಬಸವರಾಜ ಮತ್ತು ಅಮರ್ ಧರೆಣ್ಣವರ

ಧಾರವಾಡ: ಧಾರವಾಡದ ಅಮರ್ ಧರೆಣ್ಣವರ್ ಇಲ್ಲಿ ಭಾನುವಾರ ಮುಕ್ತಾಯವಾದ ರಾಜ್ಯಮಟ್ಟದ ಓಪನ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದರು.

ಜಿಲ್ಲಾ ಲಾನ್ ಟೆನಿಸ್ ಅಸೋಸಿಯೇಷನ್‌ನಿಂದ ನಗರದ ರಾಜಾಧ್ಯಕ್ಷ ಪೆವಿಲಿಯನ್ ಕೋರ್ಟ್‌ನಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಅಮರ್ ಧರೆಣ್ಣವರ್ 8-2ರಿಂದ ಬೆಂಗಳೂರಿನ ವೇದಾಂಶ್ ಅವರನ್ನು ಮಣಿಸಿದರು.

ಡಬಲ್ಸ್ ವಿಭಾಗದಲ್ಲಿ ಅಮರ್ ಧರೆಣ್ಣವರ್ ಹಾಗೂ ದಾವಣಗೆರೆಯ ಬಸವರಾಜ ಜೋಡಿ ಪ್ರಶಸ್ತಿ ಗೆದ್ದುಕೊಂಡಿತು. ಅಮರ್ ಮತ್ತು ಬಸವರಾಜ 8-0ರಿಂದ ಧಾರವಾಡದ ಸಚಿನ್ ಕ್ಯಾರೆ ಹಾಗೂ ಶಿವರಾಜ ಪಾಟೀಲ ಅವರನ್ನು ಸೋಲಿಸಿದರು.

70 + ವಯಸ್ಸಿನವರು: ಧಾರವಾಡದ ಅರವಿಂದ್ ಯೆರಿ ಮತ್ತು ಆನಂದ್ ಯೆರಿ 6-3ರಿಂದ ಗದಗಿನ ಗಂಗಾಧರ್ ಥಡಿ ಮತ್ತು ಬಳ್ಳಾರಿಯ ಜೋಸೆಫ್ ಅವರನ್ನು ಮಣಿಸಿದರು.

65 + ವಯಸ್ಸಿನವರು: ಅರವಿಂದ್ ಯೆರಿ ಮತ್ತು ನಾಗರಾಜ ಅಂಬ್ಲಿ 6-1ರಿಂದ ಬೈಲಹೊಂಗಲದ ಚಂದ್ರಕಾಂತ ಹೊಸಮಠ ಹಾಗೂ ವಿಜಯಪುರದ ಶಶಿಧರ ಕಲಮಡಿ ಜೋಡಿಯನ್ನು ಸೋಲಿಸಿದರು.

ಧೀನಿಧಿ ದೇಸಿಂಗು ಚಿನ್ನ ಡಬಲ್

'ನೆಟ್ಟಕಲ್ಲಪ್ಪ ಈಜು ಸ್ಪರ್ಧೆ': ವಿದಿತ್ ಮಿಂಚು

• ಶ್ರೀಹರಿ ಮೌಲ್ಯಯುತ ಈಜುಗಾರ



ಗುರಿಯತ್ತ ಮುನ್ನುಗ್ಗಿದ ಆಕಾಶ್ ಮಣಿ ಚಿತ್ರ: ವಿ. ಪುಷ್ಕರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಲಿಂಪಿಯನ್ ಶ್ರೀಹರಿ ನಟರಾಜ್, ಧೀನಿಧಿ ದೇಸಿಂಗು ಹಾಗೂ ತ್ರಿಷಾ ಎಸ್. ಸಿಂಧು ಅವರು ಭಾನುವಾರ ಮುಕ್ತಾಯಗೊಂಡ 'ನೆಟ್ಟಕಲ್ಲಪ್ಪ ಈಜು ಸ್ಪರ್ಧೆ'ಯಲ್ಲಿ 'ಮೌಲ್ಯಯುತ ಈಜುಪಟುಗಳು' ಗೌರವಕ್ಕೆ ಪಾತ್ರರಾದರು.

ನೆಟ್ಟಕಲ್ಲಪ್ಪ ಈಜು ಕೇಂದ್ರ (ಎನ್‌ಎಸಿ)ದಲ್ಲಿ ನಡೆದ ನಾಲ್ಕನೇ ಆವೃತ್ತಿಯ ಸ್ಪರ್ಧೆಯಲ್ಲಿ ಶ್ರೀಹರಿ ಸ್ಕಿನ್ಸ್ 50 ಮೀ. ಫ್ರೀಸ್ಟೈಲ್ ವಿಭಾಗದಲ್ಲಿ ಚಿನ್ನ ಜಯಿಸಿದರು. ಬಿಎಸಿಯ ಆಕಾಶ್ ಮಣಿ ಮತ್ತು ಲಕ್ಷ್ಯನ್ ಅಕಾಡೆಮಿಯ ಚಿಂತನ್ ಶೆಟ್ಟಿ ಕ್ರಮವಾಗಿ ಬೆಳ್ಳಿಮತ್ತು ಕಂಚು ಪಡೆದರು.

ಮಹಿಳೆಯರ ವಿಭಾಗದಲ್ಲಿ ಧೀನಿದಿ (27.12ಸೆ) ಅವರು ಚಿನ್ನದ ಪದಕಕ್ಕೆ ಕೊರಳೊಡ್ಡಿದರು. ಅವರು ನೀನಾ ವೆಂಕಟೇಶ್ ಹಾಗೂ ವಿಹಿತಾ ನಯನಾ ಅವರನ್ನು ಹಿಂದಿಕ್ಕಿದರು. ಸ್ಕಿನ್ಸ್ 50 ಮೀ ಫ್ರೀಸ್ಟೈಲ್‌ನಲ್ಲಿಯೂ ಧೀನಿಧಿ ಗೆದ್ದರು.

ಕೂಟದಲ್ಲಿ ತಲಾ ನಾಲ್ಕು ಚಿನ್ನ ಗೆದ್ದ ಧೀನಿಧಿ ಮತ್ತು ತ್ರಿಷಾ ಎಸ್. ಸಿಂಧು ಅವರು 'ಮೌಲ್ಯಯುತ ಈಜುಪಟುಗಳು' ಪ್ರಶಸ್ತಿಯನ್ನು ಹಂಚಿಕೊಂಡರು.

ಫಲಿತಾಂಶಗಳು: ಪುರುಷರು: 100 ಮೀ ಫ್ರೀಸ್ಟೈಲ್: ಆಕಾಶ್ ಮಣಿ (ಬಸವನಗುಡಿ ಈಜುಕೇಂದ್ರ -ಬಿಎಸಿ)-1, ಚಿಂತನ್ ಎಸ್. ಶೆಟ್ಟಿ (ಲಕ್ಷ್ಯನ್)-2, ಧೋನಿಶ್ ಎನ್. (ವಿಜಯನಗರ,ಎಸಿ)-3 ಕಾಲ: 52.16ಸೆ.

100 ಮೀ ಬ್ರೆಸ್ಟ್‌ಸ್ಟ್ರೋಕ್: ವಿದಿತ್ ಎಸ್. ಶಂಕರ್ (ಡಾಲ್ಫಿನ್ ಅಕ್ವಾಟಿಕ್ಸ್)-1, ಸೂರ್ಯ ಜೋಯಪ್ಪ (ಬಿಎಸಿ)-2, ಎಸ್. ಸುನೀಶ್ (ಗ್ಲೋಬಲ್)-3 ಕಾಲ: 1ನಿ,06.34ಸೆ.

ಗುಂಪು 1: 100 ಮೀ ಫ್ರೀಸ್ಟೈಲ್: ಎಸ್. ದಕ್ಷಣ್ -1, ಮೋನಿಷ್ ಪಿ.ವಿ. -2, ಎಸ್. ದರ್ಶನ್ -3 (ಮೂವರೂ ಬಸವನಗುಡಿ ಈಜು ಕೇಂದ್ರ) ಕಾಲ: 53.73ಸೆ.

100 ಮೀ ಬ್ರೆಸ್ಟ್‌ಸ್ಟ್ರೋಕ್: ವಿಶಾಗನ ಸರವಣನ್ -1, ಯಶ್ ಎಚ್. ಪಾಲ್ -2 (ಇಬ್ಬರೂ ಬಿಎಸಿ), ಆಯುಷ್ ಶಿವರಾಜು ಮಾಗನಹಳ್ಳಿ (ಡಾಲ್ಫಿನ್)-3 ಕಾಲ: 1ನಿ,07.65ಸೆ.

400ಮೀ ಫ್ರೀಸ್ಟೈಲ್: ಎಸ್. ದಕ್ಷಣ್ -1, ಎಸ್. ದರ್ಶನ್ -2, ಪಿ.ವಿ. ಮೋನಿಷ್ -3 (ಮೂವರು ಬಿಎಸಿ) ಕಾಲ: 4ನಿ,13.30ಸೆ.

ಗುಂಪು 2: 100 ಮೀ ಫ್ರೀಸ್ಟೈಲ್: ಎಸ್. ಶರಣ್ (ಬಿಎಸಿ)-1, ಟಿ. ಕಬಿಲನ್ (ಮತ್ಸ್ಯಾ)-2, ಜೀವಾಂಶ್ ಸುಬ್ರಮಣ್ಯ (ಮತ್ಸ್ಯಾ)-3 ಕಾಲ: 55.22ಸೆ.

100 ಮೀ ಬ್ರೆಸ್ಟ್‌ಸ್ಟ್ರೋಕ್: ಚೇತನ್ ನಾಗರಾಜ ಗಣಪ (ನೆಟ್ಟಕಲ್ಲಪ್ಪ ಅಕ್ವಾಟಿಕ್ ಸೆಂಟರ್)-1, ಸಿದ್ಧಾರ್ಥ್ ಬಿ. ಸಿಂಗ್ (ಪಿಎಂ ಈಜುಕೇಂದ್ರ)-2, ರೆಯಾಂಶ್ ಕಾಂತಿ ವೈ. (ಬಿಎಸಿ)-3 ಕಾಲ: 1ನಿ,12.72ಸೆ.

100 ಮೀ ಮೆಡ್ಲೆ: ಎಸ್. ಶರಣ್ (ಬಿಎಸಿ)-1, ಟಿ. ಕಬಿಲನ್ (ಮತ್ಸ್ಯಾ)-2, ಜೀವಾಂಶ್ ಸುಬ್ರಮಣ್ಯ(ಮತ್ಸ್ಯಾ)-3 ಕಾಲ: 1ನಿ.03.01ಸೆ.

ಗುಂಪು 3: 100 ಮೀ ಫ್ರೀಸ್ಟೈಲ್ : ಎಂ. ಚಿಂತನ್ (ರೇ ಸೆಂಟರ್; 1ನಿ,04.63ಸೆ)-1, ಲೋಹಿತಾಶ್ವ ಎಸ್ ನಾಗೇಶ್ (ಲಕ್ಷ್ಯನ್ ಅಕಾಡೆಮಿ)-2, ಆರತಿ ಚಂದ್ರಶೇಖರ್ (ಮತ್ಸ್ಯಾ)-3 ಕಾಲ: 1ನಿ.04.63ಸೆ.

100 ಮೀ ಬ್ರೆಸ್ಟ್‌ಸ್ಟ್ರೋಕ್: ತನುಷ್ ಟಿ ಮೂರ್ತಿ (ಬಿಎಸಿ)-1, ಅವ್ಯಕ್ತ ಮೋಹನ್ (ಬಿಎಸಿ)-2, ಸಮರ್ಥ್ ಭಾರದ್ವಾಜ್ (ನೆಟ್ಟಕಲ್ಲಪ್ಪ ಅಕ್ವಾಟಿಕ್ ಸೆಂಟರ್)-3 ಕಾಲ: 1ನಿ,23.12ಸೆ.

100 ಮೀ ಮೆಡ್ಲೆ: ರಕ್ಷಿತ್ ಎ. ಕೋರೆ (ಬಿಎಸಿ)-1, ಲೋಹಿತಾಶ್ವ ಎಸ್. ನಾಗೇಶ್ (ಲಕ್ಷ್ಯನ್)-2, ಅವ್ಯಕ್ತ ಮೋಹನ್ (ಬಿಎಸಿ)-3 ಕಾಲ:

ಸ್ಕಿನ್ಸ್: 50 ಮೀ ಬ್ರೆಸ್ಟ್‌ಸ್ಟ್ರೋಕ್: ವಿದಿತ್ ಎಸ್. ಶಂಕರ್ (ಡಾಲ್ಫಿನ್)-1, ಸೂರ್ಯ ಜೋಯಪ್ಪ (ಬಿಎಸಿ)-2, ಎಸ್. ಸುನೀಶ್ (ಜಿಎಸ್‌ಸಿ)-3 ಕಾಲ: 28.46ಸೆ.

ಸ್ಕಿನ್ಸ್ 50 ಮೀ ಫ್ರೀಸ್ಟೈಲ್: ಶ್ರೀಹರಿ ನಟರಾಜ್ (ಡಾಲ್ಫಿನ್)-1, ಆಕಾಶ್ ಮಣಿ (ಬಿಎಸಿ)-2, ಚಿಂತನ್ ಎಸ್. ಶೆಟ್ಟಿ (ಲಕ್ಷ್ಯನ್)-3 ಕಾಲ: 23.26ಸೆ.

ಮಹಿಳೆಯರು: 100 ಮೀ ಫ್ರೀಸ್ಟೈಲ್: ಶಾಲಿನಿ ಆರ್. ದೀಕ್ಷಿತ್ (ಬಿಎಸಿ)-1, ಶಿರಿನ್ (ಬಿಎಸಿ)-2, ಶೃಂಗಿ ರಾಜೇಶ್ ಬಾಂದೇಕರ್ (ಜೈನ್ ಕಾಲೇಜು)-3 ಕಾಲ: 52.16ಸೆ.

100 ಮೀ ಬ್ರೆಸ್ಟ್‌ಸ್ಟ್ರೋಕ್: ಲಕ್ಷ್ಯಾ ಶಿವಾನಂದ (ಬಿಎಸಿ)-1, ಲಿನೇಶಾ ಎ.ಕೆ. (ಡಾಲ್ಫಿನ್)-2, ಯಶ್ವಿ ಕಾರಟ್ (ಗ್ಲೋಬಲ್)-3 ಕಾಲ: 1ನಿ.17.27ಸೆ.

ಗುಂಪು 1: 100 ಮೀ ಫ್ರೀಸ್ಟೈಲ್: ಧೀನಿಧಿ ದೇಸಿಂಗು (ಡಾಲ್ಫಿನ್)-1, ರುಜುಲಾ ಎಸ್. (ಡಾಲ್ಫಿನ್)-2, ಪ್ರಿಯಾಂಶಿ ಮಿಶ್ರಾ (ಬಿಎಸಿ)-3 ಕಾಲ: 57.42ಸೆ.

100 ಮೀ ಬ್ರೆಸ್ಟ್‌ಸ್ಟ್ರೋಕ್: ಮಾನವಿ ವರ್ಮಾ (ಡಾಲ್ಫಿನ್)-1, ಹಿಯಾ ಮನಚಂದಾ (ಬುಲ್‌ಬ್ಲಾಸ್ಟಿ)-2, ತಿಸ್ಯಾ ಸೋನಾರ್ (ಬಿಎಸಿ)-3 ಕಾಲ: 1ನಿ,18.52ಸೆ.

400 ಮೀ ಫ್ರೀಸ್ಟೈಲ್: ಧೀನಿಧಿ ದೇಸಿಂಗು (ಡಾಲ್ಫಿನ್)-1, ಶಿರಿನ್ (ಬಿಎಸಿ)-2, ಅದಿತಿ ವಿನಾಯಕ ರೆಲೇಕರ್ (ಬಿಎಸಿ)-3 ಕಾಲ: 4ನಿ,29.22ಸೆ.

ಗುಂಪು ಎರಡು: 100 ಮೀ ಫ್ರೀಸ್ಟೈಲ್: ತ್ರಿಷಾ ಎಸ್. ಸಿಂಧು (ಲಕ್ಷ್ಯನ್)-1, ಐದಿಕಾ ಭಟ್ (ಝೀ ಸ್ವಿಮ್ ಅಕಾಡೆಮಿ)-2, ಇರಾ ಭಟ್ (ಝೀ ಸ್ವಿಮ್ ಅಕಾಡೆಮಿ)-3 ಕಾಲ: 1ನಿ.01.97ಸೆ.

100 ಮೀ ಬ್ರೆಸ್ಟ್‌ಸ್ಟ್ರೋಕ್: ಸಿರಿ ಪ್ರೀತಂ (ಏಕಲವ್ಯ)-1, ಇಂಚರಾ (ಲಕ್ಷ್ಯನ್)-2, ಮಾನ್ಯಾ ಆರ್. ವಾಧ್ವಾ (ಡಾಲ್ಫಿನ್)-3 ಕಾಲ: 1ನಿ,21.84ಸೆ.

100 ಮೀ ಮೆಡ್ಲೆ: ತ್ರಿಷಾ ಎಸ್. ಸಿಂಧು (ಲಕ್ಷ್ಯನ್)-1, ಮಾನ್ಯ ಆರ್. ವಾಧ್ವಾ (ಡಾಲ್ಫಿನ್)-2, ಐದಿಕಾ ಭಟ್ (ಝೀ ಸ್ವಿಮ್)-3 ಕಾಲ: 1ನಿ.09.96ಸೆ.

ಗುಂಪು ಮೂರು: 100 ಮೀ ಫ್ರೀಸ್ಟೈಲ್: ಸ್ತುತಿ ಸಿಂಗ್ (ಬಿಎಸ್‌ಎ)-1, ಶ್ರೇಯಾ ಸುರೇಶ್ ಪೂಜಾರ (ಬಿಎಸ್‌ಎ)-2, ಆರ್. ವಿದುಲಾ (ಎನ್‌ಎಸಿ)-3 ಕಾಲ: 1ನಿ, 05.05ಸೆ.

100 ಮೀ ಬ್ರೆಸ್ಟ್‌ಸ್ಟ್ರೋಕ್: ಧೃತಿ ಅಭಿಲಾಶ್ (ಬಿಎಸಿ)-1, ಶ್ರೇಯಾ ಸುರೇಶ್ ಪೂಜಾರ್ (ಬಿಎಸ್‌ಎ)-2, ರಿಧಿ ಮಹೇಶ್ವರಿ (ಪಿಎಂ ಸ್ವಿಮ್ ಸೆಂಟರ್)-3 ಕಾಲ: 1ನಿ,27.08ಸೆ.

100 ಮೀ ಮೆಡ್ಲೆ: ಸ್ತುತಿ ಸಿಂಗ್ (ಬಿಎಸ್‌ಎ)-1, ಶ್ರೇಯಾ ಪೂಜಾರ್ (ಬಿಎಸ್‌ಎ)-2, ಝರ್ನಾ ಸಿಸೊಡಿಯಾ (ಏಕಲವ್ಯ)-3 ಕಾಲ: 1ನಿ.14.86ಸೆ.

ಸ್ಕಿನ್ಸ್ 50 ಮೀ ಬ್ರೆಸ್ಟ್‌ಸ್ಟ್ರೋಕ್: ಲಕ್ಷ್ಯಾ ಶಿವಾನಂದ (ಬಿಎಸಿ)-1, ಎ.ಕೆ. ಲಿನೇಶಾ (ಡಾಲ್ಫಿನ್)-2, ಯಶ್ವಿ ಕರಾಟ್ (ಜಿಎಸ್‌ಸಿ)-3 ಕಾಲ: 34.12ಸೆ.

ಸ್ಕಿನ್ಸ್: 50 ಮೀ ಫ್ರೀಸ್ಟಲ್: ಧೀನಿಧಿ ದೇಸಿಂಗು (ಡಾಲ್ಫಿನ್)-1, ನೀನಾ ವೆಂಕಟೇಶ್ (ಡಾಲ್ಫಿನ್)-2, ವಿಹಿತಾನಯನಾ (ಬಿಎಸಿ)-3 ಕಾಲ: 27.12ಸೆ.


ರಾಜ್ಯ, ರಾಷ್ಟ್ರ ಸ್ಪರ್ಧೆಗಳಲ್ಲಿ ಪ್ರೋತ್ಸಾಹಧನ ನೀಡಲಿ

ಬೆಂಗಳೂರು: 'ದೇಶದಲ್ಲಿ ನೆಟ್ಟಕಲ್ಲಪ್ಪ ಈಜು ಸ್ಪರ್ಧೆಯಲ್ಲಿ ಮಾತ್ರ ನಗದು ಪ್ರಶಸ್ತಿಯನ್ನು ನೀಡಲಾಗುತ್ತಿದೆ. ಇದು ಬಹಳ ಪ್ರೋತ್ಸಾಹದಾಯಕ ಕಾರ್ಯ' ಎಂದು ಒಲಿಂಪಿಯನ್ ಈಜುಪಟು ಶ್ರೀಹರಿ ನಟರಾಜ್ ಶ್ಲಾಘಿಸಿದರು.

ಭಾನುವಾರ ಮುಕ್ತಾಯವಾದ ನೆಟ್ಟಕಲ್ಲಪ್ಪ ಈಜು ಸ್ಪರ್ಧೆಯಲ್ಲಿ 'ಮೌಲ್ಯಯುತ ಈಜುಪಟು' ಗೌರವ ಗಳಿಸಿದ ಅವರು ಮಾತನಾಡಿದರು.

'ನಾನು ರಾಷ್ಟ್ರೀಯ ಈಜು ಕೂಟಗಳಲ್ಲಿ ಸ್ಪರ್ಧಿಸುತ್ತೇನೆ. ಆದರೆ ಈ ಸ್ಪರ್ಧೆಯಲ್ಲಿ ಗಳಿಸಿದಷ್ಟು ಹಣವನ್ನು ಎಲ್ಲಿಯೂ ಪಡೆಯಲು ಸಾಧ್ಯವಿಲ್ಲ. ಇದು ನಮಗೆ ಬೋನಸ್ ಇದ್ದಂತೆ. ಇದು ಬಹಳ ಉತ್ತೇಜನಕಾರಿ' ಎಂದರು.

'ನಮ್ಮಲ್ಲಿ ಬಹಳಷ್ಟು ಜನರು ಖಾಸಗಿ ಕ್ಲಬ್‌ಗಳಲ್ಲಿ ಪ್ರಾಯೋಜಕತ್ವದ ನೆರವಿನಿಂದ ತರಬೇತಿ ಪಡೆಯುತ್ತೇವೆ. ರಾಜ್ಯ ಮತ್ತು ರಾಷ್ಟ್ರ ಮಟ್ಟದ ಕೂಟಗಳಲ್ಲಿಯೂ ಪ್ರೋತ್ಸಾಹ ಧನ ನೀಡಬೇಕು. ನೆಟ್ಟಕಲ್ಲಪ್ಪ ಈಜು ಸ್ಪರ್ಧೆಯ ಕ್ರಮ ಮಾದರಿಯಾಗಿದೆ' ಎಂದು ಶ್ರೀಹರಿ ಹೇಳಿದರು.



ನೆಟ್ಟಕಲ್ಲಪ್ಪ ಈಜು ಸ್ಪರ್ಧೆಯಲ್ಲಿ 'ಮೌಲ್ಯಯುತ ಈಜುಗಾರರು' ಗೌರವ ಗಳಿಸಿದವರು (ಎಡದಿಂದ), ತ್ರಿಷಾ ಎಸ್ ಸಿಂಧು, ಧೀನಿಧಿ ದೇಸಿಂಗು ಹಾಗೂ ಶ್ರೀಹರಿ ನಟರಾಜ್

ಮಿನಿ ಗೇಮ್ಸ್: ಬೆಂಗಳೂರಿಗೆ ಸಮಗ್ರ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೂಟದುದ್ದಕ್ಕೂ ಅಮೋಘ ಪ್ರದರ್ಶನ ನೀಡಿದ ಬೆಂಗಳೂರು ತಂಡವು ಭಾನುವಾರ ಮುಕ್ತಾಯಗೊಂಡ 4ನೇ 'ರಾಜ್ಯ ಮಿನಿ ಗೇಮ್ಸ್'ನಲ್ಲಿ ಸಮಗ್ರ ಪ್ರಶಸ್ತಿ ಗೆದ್ದುಕೊಂಡಿತು.

ಬೆಂಗಳೂರು ತಂಡವು ಒಟ್ಟು 404 ಪದಕ (135 ಚಿನ್ನ, 128 ಬೆಳ್ಳಿ, 141 ಕಂಚು) ಜಯಿಸಿ ಪಾರಮ್ಯ ಮೆರೆದರೆ, ಬೆಳಗಾವಿ ಜಿಲ್ಲಾ ತಂಡವು 100 ಪದಕಗಳೊಂದಿಗೆ (28 ಚಿನ್ನ, 34 ಬೆಳ್ಳಿ, 38 ಕಂಚು) ಒಟ್ಟಾರೆ ಎರಡನೇ ಸ್ಥಾನ ಪಡೆಯಿತು. ಮೈಸೂರು ಜಿಲ್ಲಾ ತಂಡವು ಒಟ್ಟಾರೆ 57 ಪದಕಗಳನ್ನು (18 ಚಿನ್ನ, 12 ಬೆಳ್ಳಿ, 27 ಕಂಚು) ಗಳಿಸಿ ಮೂರನೇ ಸ್ಥಾನ ತನ್ನದಾಗಿಸಿಕೊಂಡಿತು.

ಅಂತಿಮ ದಿನ ನಡೆದ ಬಾಲಕರ ಕೊಕ್ಕೊ ಸ್ಪರ್ಧೆಯಲ್ಲಿ ಬೆಂಗಳೂರು ತಂಡ 16-6ರಿಂದ ಬಾಗಲಕೋಟೆ ತಂಡವನ್ನು ಮಣಿಸಿ ಚಿನ್ನ ತನ್ನದಾಗಿಸಿಕೊಂಡಿತು. ರೋಚಕವಾಗಿ ನಡೆದ ಬಾಲಕಿಯರ ಫೈನಲ್‌ನಲ್ಲಿ ಮೈಸೂರು ತಂಡವು 14-10ರಿಂದ ಬೆಳಗಾವಿ ತಂಡವನ್ನು ಸೋಲಿಸಿ, ಪ್ರಶಸ್ತಿ ಎತ್ತಿ ಹಿಡಿಯಿತು.

ಹಾಕಿ ಸ್ಪರ್ಧೆಯಲ್ಲಿ ಹಾಸನ ಜಿಲ್ಲಾ ತಂಡವು ಬಾಲಕ ಮತ್ತು ಬಾಲಕಿಯರ ವಿಭಾಗಗಳಲ್ಲಿ ಪ್ರಶಸ್ತಿ ಗೆದ್ದುಕೊಂಡಿತು.

ಶ್ರೇಷ್ಠ ಅಥ್ಲೀಟ್: ಬಾಲಕರು: ಪ್ರಕುಲ್ ಆರ್. ಕುಂದರ್ (783 ಅಂಕ, ಉಡುಪಿ), ಬಾಲಕಿಯರು: ಪೂರ್ವಿ ಟಿ.ಎಚ್. (822 ಅಂಕ, ಉತ್ತರಕನ್ನಡ).



ಬಾಲಕಿಯರ ಕೊಕ್ಕೊ ಸ್ಪರ್ಧೆಯಲ್ಲಿ ಪ್ರಶಸ್ತಿ ಗೆದ್ದ ಮೈಸೂರು ತಂಡಕ್ಕೆ ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಸಮಾರೋಪ ಸಮಾರಂಭದಲ್ಲಿ ಟ್ರೋಫಿ ಹಸ್ತಾಂತರಿಸಲಾಯಿತು. (ಎಡದಿಂದ, ನಿಂತಿರುವವರು) ರಾಜ್ಯ ಒಲಿಂಪಿಕ್ ಸಂಸ್ಥೆಯ(ಕೆಒಎ) ಪ್ರಧಾನ ಕಾರ್ಯದರ್ಶಿ ಟಿ. ಅನಂತರಾಜು, ಮಾಜಿ ಅಂತರರಾಷ್ಟ್ರೀಯ ಅಥ್ಲೀಟ್ ಪ್ರಮೀಳಾ ಅಯ್ಯಪ್ಪ, ಕೆಒಎ ಅಧ್ಯಕ್ಷ ಕೆ.ಗೋವಿಂದರಾಜ್, ಸಚಿವರಾದ ಡಾ. ಜಿ.ಪರಮೇಶ್ವರ, ದಿನೇಶ್ ಗುಂಡೂರಾವ್ ಹಾಗೂ ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷ ಸಿ.ಎಸ್.ಅರುಣ್ ಮಾಚಯ್ಯ ಇದ್ದಾರೆ

ಚೆಸ್ ವಿಶ್ವಕಪ್: 32ರ ಸುತ್ತಿಗೆ ಕಾರ್ತಿಕ್

ಪಣಜಿ (ಪಿಟಿಐ): ಭಾರತದ ಗ್ರ್ಯಾಂಡ್ ಮಾಸ್ಟರ್ ಕಾರ್ತಿಕ್ ವೆಂಕಟರಾಮನ್ ಅವರು ವಿಶ್ವಕಪ್ ಚೆಸ್ ಟೂರ್ನಿಯ ಮೂರನೇ ಸುತ್ತಿನ ಟೈಬ್ರೇಕರ್‌ನಲ್ಲಿ ರುಮೇನಿಯಾದ ಡೇನಿಯಲ್ ಡೀಕ್ ಬೊಗ್ದಾನ್ ಅವರನ್ನು 2.5-1.5 ರಿಂದ ಸೋಲಿಸಿ ಅಂತಿಮ 32ರ ಹಂತಕ್ಕೆ ಮುನ್ನಡೆದರು. ಆದರೆ ಭಾರತದ ಇನ್ನಿಬ್ಬರು ಗ್ರ್ಯಾಂಡ್‌ಮಾಸ್ಟರ್‌ಗಳಾದ ವಿದಿತ್ ಗುಜರಾತಿ ಮತ್ತು ಎಸ್.ನಾರಾಯಣನ್ ಅವರ ಸವಾಲು ಅಂತ್ಯಗೊಂಡಿತು.

ಕ್ಲಾಸಿಕಲ್ ಸುತ್ತಿನ ಪಂದ್ಯ 1-1 ಡ್ರಾ ಮಾಡಿಕೊಂಡಿದ್ದ ಆಟಗಾರರು ಭಾನುವಾರ ಟೈಬ್ರೇಕರ್ ಪಂದ್ಯಗಳನ್ನು ಆಡಿದರು. ಕಾರ್ತಿಕ್ ಮೊದಲ ಆಟ ಡ್ರಾ ಮಾಡಿಕೊಂಡರೆ, ಎರಡನೇ ಆಟದಲ್ಲಿ ಬೊಗ್ದಾನ್ ಅವರನ್ನು ಮಣಿಸಿದರು.

ಇದರೊಂದಿಗೆ ಭಾರತದ ಐವರು ಆಟಗಾರರು ಅಂತಿಮ 32ರ ಸುತ್ತನ್ನು ತಲುಪಿದಂತಾಗಿದೆ. ಎರಡನೇ ಶ್ರೇಯಾಂಕದ ಅರ್ಜುನ್ ಇರಿಗೇಶಿ, ಮೂರನೇ ಶ್ರೇಯಾಂಕದ ಆರ್.ಪ್ರಜ್ಞಾನಂದ, ಪಿ. ಹರಿಕೃಷ್ಣ ಮತ್ತು ವಿಶ್ವ ಜೂನಿಯರ್ ಚಾಂಪಿಯನ್ ವಿ.ಪ್ರಣವ್ ಶನಿವಾರವೇ (ಕ್ಲಾಸಿಕಲ್ ಸುತ್ತಿನ ಬಳಿಕ) ಅಂತಿಮ 32ರ ಸುತ್ತು ಖಚಿತಪಡಿಸಿಕೊಂಡಿದ್ದರು.

ಅಮೆರಿಕದ ಸ್ಯಾಮ್ ಶಂಕ್ಲಾಂಡ್ ಅವರು ಎರಡನೇ ಸುತ್ತಿನ ಟೈಬ್ರೇಕರ್ ವರೆಗೆ ಆಡಿ 3.5-2.5 ರಿಂದ ವಿದಿತ್ ಗುಜರಾತಿ ಅವರನ್ನು ಸೋಲಿಸಿದರು. ಮೊದಲ ಸುತ್ತಿನ ಟೈಬ್ರೇಕರ್‌ನಲ್ಲಿ ಇಬ್ಬರೂ ಒಂದೊಂದು ಆಟ ಗೆದ್ದರು. ಎರಡನೇ ಸುತ್ತಿನ ಟೈಬ್ರೇಕರ್‌ನ ಮೊದಲ ಆಟ ಡ್ರಾ ಆದರೆ, ಎರಡನೇ ಆಟದಲ್ಲಿ ಶಂಕ್ಲಾಂಡ್ ಜಯಗಳಿಸಿದರು.